f prajavani.net prajavani
ಬುಧವಾರ, ಮೇ 20, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 139 | ಪುಟ 16
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಮಾರ್ಷ್ ಮಿಂಚು



ಲಖನೌ ಸೂಪರ್ ಜೈಂಟ್ಸ್ ತಂಡದ ಬ್ಯಾಟರ್ ಮಿಚೆಲ್ ಮಾರ್ಷ್ (96;57ಎ, 4x11, 6x5) ಜೈಪುರದಲ್ಲಿ ಮಂಗಳವಾರ ನಡೆದ ರಾಜಸ್ಥಾನ ರಾಯಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಮಿಂಚಿನ ಆಟವಾಡಿದರು

ಸೆನ್ಸೆಕ್ಸ್ 75,200 | ನಿಫ್ಟಿ 23,618 | $/₹ 96.70 | ಚಿನ್ನ (Std. 10g) ₹1,61,750 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,85,300 (ಬೆಂಗಳೂರು)

ವರ್ಷ ಮೂರು, ಹರ್ಷ ಜೋರು

ರಾಜ್ಯ ಸರ್ಕಾರದ ಮೂರು ವರ್ಷದ ‘ಸಾರ್ಥಕ ಸೇವೆಯ ಸಮರ್ಪಣೆ’

ಪ್ರಮುಖ ಅಂಶಗಳು
- 2028ರ ಚುನಾವಣೆಯ ಪ್ರಚಾರಕ್ಕೂ ಮುನ್ನುಡಿ
- ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯ ಸರ್ಕಾರದ ಮೂರು ವರ್ಷಗಳ ಸಾಧನೆಗಳನ್ನು ಮೆಲುಕು ಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಿನ ಎರಡು ವರ್ಷಗಳ ಪ್ರಗತಿಯ ಕನಸು ಬಿತ್ತುವ ಜೊತೆಗೆ 2028ರ ಚುನಾವಣೆಯ ಪ್ರಚಾರಕ್ಕೂ ಮಂಗಳವಾರ ತುಮಕೂರಿನಲ್ಲಿ ಮುನ್ನುಡಿ ಬರೆದರು.

ಅಭಿವೃದ್ಧಿಗಾಗಿ ‘ಕರ್ನಾಟಕ ಮಾದರಿ’ ಎಂಬ ಸಂದೇಶ ರವಾನಿಸುತ್ತಲೇ ‘ಗುಜರಾತ್ ಮಾದರಿ’ಯನ್ನು ಟೀಕಿಸಿದರು. ಜೊತೆಗೆ ಭಾಷಣದ ಉದ್ದಕ್ಕೂ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ಕುಟುಕುತ್ತಲೇ ಸಾಗಿದರು.

ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಿದ ಸಲುವಾಗಿ ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಸಾರ್ಥಕ ಸೇವೆಯ ಸಮರ್ಪಣೆ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸುವ ಜೊತೆಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ ಅವರು, ‘ನುಡಿದಂತೆ ನಡೆದಿದ್ದೇವೆ. ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ ಪ್ರಮುಖ ಭರವಸೆಗಳನ್ನು ಈಡೇರಿಸಿದ್ದೇವೆ’ ಎಂದು ಕಾಂಗ್ರೆಸ್ ಸರ್ಕಾರದ ಸಾಧನೆಗಳ ಪಟ್ಟಿ ಅನಾವರಣಗೊಳಿಸಿದರು.

▶8



ತುಮಕೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ‘ಸಾರ್ಥಕ ಸೇವೆಯ ಸಮರ್ಪಣೆ’ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಜಿ.ಪರಮೇಶ್ವರ, ಕೃಷ್ಣ ಬೈರೇಗೌಡ, ರಹೀಂ ಖಾನ್ ಇತರರು ಹಾಜರಿದ್ದರು

ಹಕ್ಕುಪತ್ರ: ಗಿನ್ನಿಸ್ ದಾಖಲೆ

ಜಿಲ್ಲೆಯಲ್ಲಿ ಈವರೆಗೆ 1,52,492 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗಿದ್ದು, ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದೆ.

ಹಕ್ಕುಪತ್ರ ವಿತರಣೆಯಲ್ಲಿ ಜಿಲ್ಲಾ ಆಡಳಿತ ‘ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್’ ದಾಖಲೆ ನಿರ್ಮಿಸಿದ್ದು, ಸಾಧನಾ ಸಮಾವೇಶದಲ್ಲಿ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ರಾಜ್ಯದಾದ್ಯಂತ ಇದುವರೆಗೆ 13.5 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗಿದೆ.

ಕೊಟ್ಟ ಕುದುರೆ ಏರದ ಎಚ್‌ಡಿಕೆ

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಇದರಲ್ಲಿ ಯಾವುದೇ ಸಂಶಯ ಇಲ್ಲ. ಬಿಜೆಪಿ, ಜೆಡಿಎಸ್ ಅಧಿಕಾರಕ್ಕೆ ಬರುವುದು ಕನಸಿನ ಮಾತು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಕೊಟ್ಟ ಕುದುರೆ ಏರಲು ಆಗದವನು ವೀರನೂ ಅಲ್ಲ, ಶೂರನೂ ಅಲ್ಲ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇದೇ ವರ್ಗಕ್ಕೆ ಸೇರಿದವರು ಎಂದರು.

▶8

ವ್ಯಗ್ರ ನಾಯಿ ಕೊಲ್ಲಿ: ‘ಸುಪ್ರೀಂ’

ಆದೇಶ ಮಾರ್ಪಾಡು ಮಾಡಲು ಕೋರಿದ್ದ ಅರ್ಜಿಗಳ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಬೀದಿನಾಯಿಗಳ ಕಡಿತ ಪ್ರಕರಣಗಳು ಏರಿಕೆ ಆಗುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಆಕ್ರಮಣಕಾರಿ ನಾಯಿಗಳನ್ನು ಕೊಲ್ಲಬಹುದು ಎಂದು ಮಹತ್ವದ ತೀರ್ಪು ನೀಡಿದೆ.

ಆಸ್ಪತ್ರೆಗಳು, ಶಾಲೆಗಳು, ಬಸ್ ಹಾಗೂ ರೈಲು ನಿಲ್ದಾಣಗಳು, ಕ್ರೀಡಾ ಸಂಕೀರ್ಣಗಳಂತಹ ಸಾರ್ವಜನಿಕ ಸ್ಥಳಗಳಿಂದ ತೆರವುಗೊಳಿಸಿದ ಬೀದಿನಾಯಿಗಳನ್ನು ಆಶ್ರಯತಾಣಗಳಿಗೆ ಸ್ಥಳಾಂತರಿಸಬೇಕೆಂದು 2025ರ ನವೆಂಬರ್ 7ರಂದು ನೀಡಿದ್ದ ಆದೇಶ ಮಾರ್ಪಡಿಸಲು ನ್ಯಾಯಪೀಠ ಮಂಗಳವಾರ ನಿರಾಕರಿಸಿತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ.ಅಂಜಾರಿಯಾ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠವು, ನ್ಯಾಯಾಲಯದ ಆದೇಶ ಮಾರ್ಪಾಡು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ವಜಾಗೊಳಿಸಿತು. ಅಪಾಯಕಾರಿ ನಾಯಿಗಳ ಕೊಲ್ಲುವ ಪ್ರಕ್ರಿಯೆಯನ್ನು ನಿಯಮಾನುಸಾರ ನಡೆಸಲು ಅಧಿಕಾರಿಗಳಿಗೆ ನ್ಯಾಯಪೀಠ ಅನುಮತಿ ನೀಡಿತು.

ಬೀದಿನಾಯಿಗಳ ಸಂಖ್ಯೆ ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚಿರುವ, ನಾಯಿ ಕಡಿತದ ಘಟನೆಗಳು ಹೆಚ್ಚು ವರದಿಯಾಗುವ ಮತ್ತು ಜನರ ಸುರಕ್ಷತೆಗೆ ಅಪಾಯ ಇರುವ ಸ್ಥಳಗಳಲ್ಲಿ 1960ರ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ ಮತ್ತು 2023ರ ಪ್ರಾಣಿ ಜನನ ನಿಯಂತ್ರಣ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮತ್ತು ಪರಿಣತ ಪಶು ತಜ್ಞರ ಅಭಿಪ್ರಾಯಗಳ ಆಧಾರದ ಮೇಲೆ ಈ ಪ್ರಕ್ರಿಯೆ ನಡೆಸಬಹುದು ಎಂದು ನ್ಯಾಯಪೀಠ ತಿಳಿಸಿತು.

▶9

ದೀರ್ಘಕಾಲದ ನಿಷ್ಕ್ರಿಯತೆ ಸಮಸ್ಯೆಗೆ ಕಾರಣ



ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಬಿಸಿ ನಿಯಮಗಳನ್ನು ಆರಂಭದಿಂದಲೇ ಶಿಸ್ತಿನಿಂದ ಜಾರಿಗೊಳಿಸಿದ್ದಲ್ಲಿ, ಸಕಾಲಿಕ ಮತ್ತು ಹಂತಹಂತದ ಸಂತಾನಶಕ್ತಿ ಹರಣ ಪ್ರಕ್ರಿಯೆ, ಲಸಿಕೆ ನೀಡುವಿಕೆ ಮತ್ತು ಸೂಕ್ತ ಸಾಂಸ್ಥಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದಲ್ಲಿ, ಇಂದು ಪರಿಸ್ಥಿತಿ ಇಷ್ಟೊಂದು ಗಂಭೀರವಾಗುತ್ತಿರಲಿಲ್ಲ. ದೀರ್ಘಕಾಲದ ನಿಷ್ಕ್ರಿಯತೆ ಮತ್ತು ಎಬಿಸಿ ನಿಯಮಗಳ ಪರಿಣಾಮಕಾರಿ ಜಾರಿಗೆ ಬದ್ಧತೆಯ ಕೊರತೆಯು ಸಮಸ್ಯೆ ಬಿಗಡಾಯಿಸುವಲ್ಲಿ ಕೊಡುಗೆ ನೀಡಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸಾರಿಗೆ ನೌಕರರ ಮುಷ್ಕರ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯು ಇದೇ 20ರಿಂದ ಅನಿರ್ದಿಷ್ಟ ಅವಧಿ ಮುಷ್ಕರ ನಡೆಸಲು ನೀಡಿದ್ದ ಕರೆಯನ್ನು, ಹೈಕೋರ್ಟ್ ವಿಧಿಸಿದ ನಿರ್ಬಂಧದ ಕಾರಣಕ್ಕೆ ವಾಪಸ್ ಪಡೆದಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಕ್ರಿಯಾ ಸಮಿತಿಯ ಸಂಚಾಲಕ ಬಿ.ಜಯದೇವರಾಜೇ ಅರಸು, ‘ಮುಷ್ಕರದ ವಿರುದ್ಧ ಹೈಕೋರ್ಟ್‌ನಲ್ಲಿ ಕೆಲವರು ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಯುತ್ತಿದ್ದು, ತಕ್ಷಣಕ್ಕೆ ಮುಷ್ಕರ ನಡೆಸಲು ಹೈಕೋರ್ಟ್ ನಿರ್ಬಂಧ ಹೇರಿದೆ. ಹೀಗಾಗಿ ತಕ್ಷಣಕ್ಕೆ ಮುಷ್ಕರವನ್ನು ವಾಪಸ್ ಪಡೆಯುತ್ತಿದ್ದೇವೆ. ಜಂಟಿ ಕ್ರಿಯಾ ಸಮಿತಿಯ ಅಡಿಯಲ್ಲಿ ಇರುವ ಎಲ್ಲ ಕಾರ್ಮಿಕ ಸಂಘಟನೆಗಳು ತಾತ್ಕಾಲಿಕವಾಗಿ ಮುಷ್ಕರದಿಂದ ಹಿಂದೆ ಸರಿಯಲಿವೆ’ ಎಂದು ತಿಳಿಸಿದರು.

▶7

ಪೆಟ್ರೋಲ್, ಡೀಸೆಲ್ ಬೆಲೆ ಮತ್ತೆ ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಮಂಗಳವಾರ ಬೆಳಿಗ್ಗೆ ಮತ್ತೆ ಹೆಚ್ಚಿಸಲಾಗಿದೆ. ಇದು ವಾರವೊಂದರ ಅವಧಿಯಲ್ಲಿ ಎರಡನೆಯ ಬೆಲೆ ಹೆಚ್ಚಳ.

ಈ ಹೆಚ್ಚಳದ ನಂತರ ಪೆಟ್ರೋಲ್ ಬೆಲೆಯು ಲೀಟರಿಗೆ 87 ಪೈಸೆಯಷ್ಟು, ಡೀಸೆಲ್ ಬೆಲೆ 91 ಪೈಸೆಯಷ್ಟು ಜಾಸ್ತಿಯಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಬೆಲೆಯಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಇರುತ್ತದೆ.

ಫೆಬ್ರುವರಿಯ ಕೊನೆಯಲ್ಲಿ ಅಮೆರಿಕ ಮತ್ತು ಇರಾನ್ ನಡುವೆ ಸಂಘರ್ಷ ಶುರುವಾದ ನಂತರದಲ್ಲಿ ಕಚ್ಚಾ ತೈಲದ ಬೆಲೆಯು ಶೇ 50ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜಾಸ್ತಿ ಆಗಿದೆ.

ಈ ದರ ಹೆಚ್ಚಳದ ನಂತರವೂ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಪೆಟ್ರೋಲ್, ಡೀಸೆಲ್ ಮಾರಾಟದಿಂದ ನಷ್ಟ ಆಗುತ್ತಿದೆ.

ಶುಕ್ರವಾರ ಇಂಧನ ಬೆಲೆಯನ್ನು ಲೀಟರಿಗೆ ₹3ರಷ್ಟು ಜಾಸ್ತಿ ಮಾಡಲಾಗಿತ್ತು.

▶12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆ ಸಾಧ್ಯತೆ ಇದೆ

ಕೈದಿ ಬಯಸಿದ ಜೈಲಿಗೆ ವರ್ಗ ಸಾಧ್ಯವಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶೇಷ ಸಂದರ್ಭಗಳನ್ನು ಬಿಟ್ಟು, ಸೆರೆವಾಸದಲ್ಲಿರುವ ವ್ಯಕ್ತಿ ತಾನು ಇಂತಹುದೇ ಜೈಲಿನಲ್ಲಿ ಇರುತ್ತೇನೆ ಎಂದು ಕೋರಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿರುವ ಆರೋಪಿ ಇರ್ಫಾನ್ ಪಾಷ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ನಾನು ಮೈಸೂರಿನ ನಿವಾಸಿಯಾಗಿದ್ದು ನನ್ನನ್ನು ಬಳ್ಳಾರಿಯಿಂದ ಕೆ.ಆರ್. ನಗರ ಅಥವಾ ನಂಜನಗೂಡು ಕಾರಾಗೃಹಕ್ಕೆ ವರ್ಗಾಯಿಸಲು ಕಾರಾಗೃಹ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಆರೋಪಿ ದೀರ್ಘ ಕಾಲದಿಂದ ಮಾದಕ ವಸ್ತುಗಳ ಮಾರಾಟ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ. ಹೀಗಾಗಿ, ಅವರನ್ನು ದುಷ್ಕೃತ್ಯ ಚಟುವಟಿಕೆಗಳ ಕೇಂದ್ರ ಪ್ರದೇಶದಿಂದ ದೂರದ ಜೈಲಿನಲ್ಲಿ ಇರಿಸಿರುವ ಉದ್ದೇಶ ಸೂಕ್ತವಾಗಿದೆ' ಎಂದು ಅಭಿಪ್ರಾಯಪಟ್ಟಿದೆ.

ಅರ್ಜಿದಾರರನ್ನು, ಮಾದಕ ದ್ರವ್ಯಗಳು ಮತ್ತು ಉದ್ದೀಪನ ವಸ್ತುಗಳ ಅಕ್ರಮ ಸಾಗಣೆ ತಡೆ ಕಾಯ್ದೆ ಅಡಿಯಲ್ಲಿ ಮುನ್ನೆಚ್ಚರಿಕೆ ಬಂಧನದಲ್ಲಿ ಇರಿಸುವಂತೆ ಕಾನೂನು ಮತ್ತು ಸುವ್ಯವಸ್ಥೆಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಆದೇಶಿಸಿದ್ದರು.

ದಶಪಥ ರಸ್ತೆ ಕಾಮಗಾರಿ ಪೂರ್ಣ

ಹದಿನೈದು ದಿನದಲ್ಲಿ ಸಂಚಾರಕ್ಕೆ ಮುಕ್ತ ಮೈಸೂರು ರಸ್ತೆ–ಮಾಗಡಿ ರಸ್ತೆ ಸಂಪರ್ಕ

● ಕೆ.ಎಸ್.ಸುನಿಲ್

ಮುಖ್ಯಾಂಶಗಳು

- ₹631 ಕೋಟಿ ವೆಚ್ಚದ ಕಾಮಗಾರಿ
- 10.7 ಕಿಲೋ ಮೀಟರ್ ಉದ್ದದ ರಸ್ತೆ
- 2018ರಲ್ಲಿ ಯೋಜನೆ ಆರಂಭ



ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಮುಖ್ಯರಸ್ತೆ (ಮೇಜರ್ ಆರ್ಟೀರಿಯರ್ ರೋಡ್–ಎಂಎಆರ್)

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವತಿಯಿಂದ ನಿರ್ಮಿಸುತ್ತಿರುವ ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ 10.7 ಕಿಲೋ ಮೀಟರ್ ಉದ್ದದ ಪ್ರಮುಖ ಮುಖ್ಯರಸ್ತೆ (ಮೇಜರ್ ಆರ್ಟೀರಿಯರ್ ರೋಡ್–ಎಂಎಆರ್) ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಹದಿನೈದು ದಿನಗಳಲ್ಲಿ ಸಂಚಾರಕ್ಕೆ ಮುಕ್ತಗೊಳ್ಳಲಿದೆ.

ಪ್ರಾಧಿಕಾರವು 2018ರಲ್ಲಿ ಯೋಜನೆ ಆರಂಭಿಸಿದ್ದು, 300 ಅಡಿ ಅಗಲದ ದಶಪಥ ರಸ್ತೆಯಾಗಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲ 9 ಬ್ಲಾಕ್‌ಗಳಿಗೆ ಈ ರಸ್ತೆ ಸಂಪರ್ಕ ಕಲ್ಪಿಸಲಿದೆ. ಅಲ್ಲದೇ ಮಾಗಡಿ ರಸ್ತೆ (ಕಡಬಗೆರೆ ಕ್ರಾಸ್) ಮತ್ತು ಮೈಸೂರು ರಸ್ತೆ (ಚಲ್ಲಘಟ್ಟ ಮೆಟ್ರೊ ಡಿಪೊ) ಸಂಪರ್ಕ ಕೂಡ ಸುಲಭವಾಗಲಿದೆ.

ಎಂಎಆರ್‌ನಲ್ಲಿ 2.90 ಕಿ.ಮೀ, 5.10 ಕಿ.ಮೀ. ಹಾಗೂ 9.70 ಕಿ.ಮೀನಲ್ಲಿ ಅಂಡರ್‌ಪಾಸ್ ನಿರ್ಮಾಣವಾಗಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಎಂಎಆರ್‌ನಲ್ಲಿ 64 ಕಿರು ಸೇತುವೆ, ಚಲ್ಲಘಟ್ಟದ ಬಳಿ 250 ಮೀಟರ್ ಉದ್ದದ ಸುರಂಗ ರಸ್ತೆ ನಿರ್ಮಾಣದ ಜೊತೆಗೆ ರೈಲು ಕೆಳಸೇತುವೆ ಸಹ ಒಳಗೊಂಡಿದೆ.

ಈ ರಸ್ತೆ ನಿರ್ಮಾಣಕ್ಕೆ 321.21 ಎಕರೆ ಸ್ವಾಧೀನ ಪಡಿಸಿಕೊಂಡಿದ್ದು, ಆರಂಭಿಕ ವೆಚ್ಚ ₹465 ಕೋಟಿ ಎಂದು ಯೋಜಿಸಲಾಗಿತ್ತು. ಈ ವರೆಗೆ ₹631 ಕೋಟಿ ವೆಚ್ಚ ಮಾಡಲಾಗಿದೆ.

ಈ ರಸ್ತೆಯು ಕಂಬಿಪುರ, ಕೆ.ಕೃಷ್ಣಸಾಗರ, ಭೀಮನ ಕುಪ್ಪೆ, ಕೊಮ್ಮಘಟ್ಟ, ಕಂಚನಪುರ ಮತ್ತು ಸುಳಿಕೆರೆ ಗ್ರಾಮಗಳ ಮೂಲಕ ಹಾದು ಹೋಗುತ್ತದೆ. ಈ ರಸ್ತೆಯಲ್ಲಿ ವಾಹನ ಚಾಲಕರಿಗೆ ಉಚಿತ ಪ್ರವೇಶವಿದೆ.

ಪ್ರಸ್ತುತ ಕೆಲ ರಸ್ತೆಗಳಿಗೆ ಡಾಂಬರೀಕರಣ, ಮಾರ್ಕಿಂಗ್ ಹಾಗೂ ಪೇಯಿಂಟ್ ಕೆಲಸ ನಡೆಯುತ್ತಿದ್ದು, ವಾರದಲ್ಲಿ ಮುಕ್ತಾಯಗೊಳ್ಳಲಿದೆ. ಈ ರಸ್ತೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹೆಸರಿಡಲಾಗಿದೆ.

'ಎಂಎಆರ್ ರಸ್ತೆಗೆ ಎರಡು ಕಿಲೋ ಮೀಟರ್ ದೂರದಲ್ಲಿ ನೈಸ್ ರಸ್ತೆಯು ಹಾದು ಹೋಗಿದೆ. ಹಾಸನ ಮತ್ತು ಕುಣಿಗಲ್‌ನಿಂದ ಮಾಗಡಿ ಮೂಲಕ ಬೆಂಗಳೂರಿಗೆ ಬರುವ ಪ್ರಯಾಣಿಕರಿಗೆ ಹಾಗೂ ಮಂಡ್ಯ ಮತ್ತು ರಾಮನಗರ ಕಡೆಯಿಂದ ಬಿಡದಿ ಮೂಲಕ ಬರುವ ಪ್ರಯಾಣಿಕರಿಗೆ ಎಂಎಆರ್ ಪ್ರಯೋಜನವಾಗಲಿದೆ. ಈ ಯೋಜನೆ ಅನುಷ್ಠಾನದಿಂದ ದಕ್ಷಿಣ ಬೆಂಗಳೂರು–ಪಶ್ಚಿಮ ಬೆಂಗಳೂರು ನಡುವಿನ ಸಂಚಾರದ ಅಂತರ ಕಡಿಮೆಯಾಗಲಿದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

'ಜನವರಿಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ನಿರಂತರ ಮಳೆಯ ಪರಿಣಾಮ ಚಲ್ಲಘಟ್ಟ ಬಳಿಯ ರೈಲ್ವೆ ಅಂಡರ್ ಪಾಸ್‌ನಲ್ಲಿ ಕಾಮಗಾರಿ ಸಾಧ್ಯವಾಗಿರಲಿಲ್ಲ. ಅಲ್ಲದೇ ಗರ್ಡರ್‌ಗೆ ಸಂಬಂಧಿಸಿದ ಕೆಲಸ ಪ್ರಾರಂಭಿಸಲು ರೈಲ್ವೆ ಇಲಾಖೆಯು ಅನುಮತಿ ನೀಡುವುದು ವಿಳಂಬವಾಗಿತ್ತು. ಹಲವು ತಾಂತ್ರಿಕ ಅಡಚಣೆ ಎದುರಾಗಿತ್ತು. ಹೆಚ್ಚುವರಿ ಕೆಲಸಗಾರರನ್ನು ನಿಯೋಜಿಸಿ, ನಿರಂತರವಾಗಿ ಕಾಮಗಾರಿ ಕೈಗೊಳ್ಳಲಾಯಿತು. 17 ಕಡೆ ಸರ್ವಿಸ್ ರಸ್ತೆಗಳಿಗೆ ಸಂಪರ್ಕ ನೀಡಲಾಗಿದ್ದು, ಡಕ್ಟ್ ಮತ್ತು ಯುಟಿಲಿಟಿ ಸೌಲಭ್ಯ ಕಲ್ಪಿಸಲಾಗಿದೆ' ಎಂದು ಹೇಳಿದರು.

'ಪಿಎಆರ್‌ಆರ್–2 ಅಂತಿಮವಾಗಿ ಹೊಸೂರು ರಸ್ತೆಯನ್ನು ಬೆಂಗಳೂರು–ಮೈಸೂರು ರಸ್ತೆ ಮತ್ತು ಎಂಎಆರ್ ಸಂಪರ್ಕಿಸುತ್ತದೆ. ಇದರಿಂದ ನಗರದ ಹೊರ ಸಾರಿಗೆ ಜಾಲದಲ್ಲಿನ ದಟ್ಟಣೆ ಕಡಿಮೆಯಾಗಲಿದೆ' ಎಂದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು

ಬೆಂಗಳೂರು: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಎನ್. ಶಿವಪ್ಪ ಮಾತನಾಡಿ, 'ಪ್ರಶ್ನೆ ಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಅನೇಕ ವಿದ್ಯಾರ್ಥಿಗಳು ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ಒಂದು ದೇಶ–ಒಂದು ಪರೀಕ್ಷೆ' ಎಂಬ ಹೆಸರಿನಲ್ಲಿ ಜಾರಿಯಾಗಿರುವ ನೀಟ್ ಇಂದು ಬಡ, ಗ್ರಾಮೀಣ ಮತ್ತು ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಮೇಲೆ ಅನ್ಯಾಯ ಮಾಡುವ ವ್ಯವಸ್ಥೆಯಾಗಿ ಮಾರ್ಪಟ್ಟಿದೆ' ಎಂದು ಆರೋಪಿಸಿದರು

ರಾಜ್ಯ ಕಾರ್ಯದರ್ಶಿ ವಿಜಯ್ ಕುಮಾರ್ ಮಾತನಾಡಿ, 'ಕೇಂದ್ರಿಕೃತ ಪರೀಕ್ಷೆಯಿಂದ ವಿದ್ಯಾರ್ಥಿಯ ಪ್ರತಿಭೆಯನ್ನು ಅಳೆಯಲು ಸಾಧ್ಯವಿಲ್ಲ. ಶಿಕ್ಷಣ ಹಣ ಇದ್ದವರಿಗೆ ಮಾತ್ರ ಎಂಬಂತಾಗಿದೆ. ಇದರಲ್ಲಿಯೂ ಕೆಲವು ಪೋಷಕರು ಮಕ್ಕಳ ಭವಿಷ್ಯಕ್ಕಾಗಿ ಪ್ರಶ್ನೆ ಪತ್ರಿಕೆಯನ್ನು ಲಕ್ಷಾಂತರ ರೂಪಾಯಿ ಕೊಟ್ಟು ಖರೀದಿಸಿ ಸಿಕ್ಕಿಬಿದ್ದಿದ್ದಾರೆ' ಎಂದರು.

ರಾಜ್ಯ ಉಪಾಧ್ಯಕ್ಷ ದೊಡ್ಡಬಸವರಾಜ್ ಮಾತನಾಡಿ, 'ವೈದ್ಯಕೀಯ ಸೀಟುಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕೊಡಬೇಕು ಹಾಗೂ ರಾಜ್ಯಕ್ಕೆ ಕೋಟಾ ನೀಡಬೇಕು. ಇಲ್ಲದಿದ್ದರೆ ಕೆಲವೇ ರಾಜ್ಯದ ವಿದ್ಯಾರ್ಥಿಗಳು ಆಯ್ಕೆಯಾಗುವ ಸಂಭವ ಹೆಚ್ಚು ಇದೆ. ವೈದ್ಯಕೀಯ ಪರೀಕ್ಷೆಗಳನ್ನು ರಾಜ್ಯ ಸರ್ಕಾರವೇ ನಡೆಸಿ ಆಯ್ಕೆ ಮಾಡುವ ಪ್ರಕ್ರಿಯೆ ಆರಂಭಿಸಬೇಕು. ಎಲ್ಲ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತ ನೀಟ್ ತರಬೇತಿ ನೀಡಬೇಕು. ಶಾಲೆ ಹಾಗೂ ಕಾಲೇಜುಗಳಲ್ಲಿ ಮಾನಸಿಕ ಆರೋಗ್ಯ ಸಲಹಾ ಕೇಂದ್ರ ಸ್ಥಾಪಿಸಬೇಕು' ಎಂದು ಆಗ್ರಹಿಸಿದರು.

ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್, ಜಿಲ್ಲಾ ಉಪಾಧ್ಯಕ್ಷರಾದ ಕಾವ್ಯ, ಪ್ರಧಾನ್, ಸಹ ಕಾರ್ಯದರ್ಶಿ ಮಣಿಭಾರಥಿ, ರಾಜಿ ಫಫೂರ್, ಎನ್. ಪರಿವರ್ತನಾ, ಪದಾಧಿಕಾರಿಗಳಾದ ಸೌಮ್ಯಾ. ಕೀರ್ತನಾ, ಸಂಜೀವ್ ಸಿಂಗ್ ಪಾಲ್ಗೊಂಡಿದ್ದರು.

ಪುನರುಜ್ಜೀವಗೊಳ್ಳುತ್ತಿದೆ ನಾಗವಾರ ಕೆರೆ

₹20 ಕೋಟಿ ವೆಚ್ಚದಲ್ಲಿ ಕೆರೆಯ ಅಭಿವೃದ್ಧಿ ನವೆಂಬರ್ ಒಳಗೆ ಕಾಮಗಾರಿ ಪೂರ್ಣ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಗರದಲ್ಲಿ ಅಂತರ್ಜಲವನ್ನು ಹೆಚ್ಚಿಸುವ ಪ್ರಮುಖ ಕೆರೆಗಳಲ್ಲಿ ಒಂದಾಗಿರುವ ನಾಗವಾರ ಕೆರೆಯಲ್ಲಿ ಹೂಳು ತೆಗೆದು, ಅಭಿವೃದ್ಧಿಪಡಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಕೆರೆಯ ಮಧ್ಯೆ ದ್ವೀಪ ನಿರ್ಮಾಣಗೊಳ್ಳುತ್ತಿದ್ದು, ನವೆಂಬರ್ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ.

ರಾಷ್ಟ್ರೀಯ ವಿಪತ್ತು ತಗ್ಗಿಸುವ ನಿಧಿಯಡಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಯೋಜನಾ ಅನುಷ್ಠಾನ ಘಟಕದ (ಪಿಸಿಯು) ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಡೆಯುತ್ತಿದೆ.

ಮಳೆಗಾಲದಲ್ಲಿ ಉಂಟಾಗುವ ಪ್ರವಾಹವನ್ನು ತಗ್ಗಿಸಲು, ಪರಿಸರವನ್ನು ಕಾಪಾಡಿಕೊಳ್ಳಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸುಮಾರು ₹20 ಕೋಟಿ ವೆಚ್ಚದಲ್ಲಿ ಈ ಕೆರೆಯ ಪುನರುಜ್ಜೀವನಕ್ಕೆ ಯೋಜನೆ ರೂಪಿಸಿತ್ತು. ಹೂಳು ತೆಗೆಯುವುದು, ಕಟ್ಟೆಗಳನ್ನು ಬಲಪಡಿಸುವುದು ಮತ್ತು ಜೌಗು ಪ್ರದೇಶ ಹೆಚ್ಚಿಸುವುದು. ನೀರಿನ ಒಳಹರಿವು, ಹೊರಹರಿವು ನಾಲೆಗಳನ್ನು ನವೀಕರಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಕೆರೆಯ ಅಲೆಗಳನ್ನು ಬಳಸಿ ಬೋಟಿಂಗ್ ನಡೆಸಲಾಗುತ್ತಿತ್ತು. ಲುಂಬಿನಿ ಗಾರ್ಡನ್ಸ್‌ನವರು ಡಾ. ರಾಜ್‌ಕುಮಾರ್ ದೋಣಿ ವಿಹಾರ ಕೇಂದ್ರವನ್ನು ನಡೆಸುತ್ತಿದ್ದರು. ಪಕ್ಕದಲ್ಲಿ ಲುಂಬಿನಿ ಉದ್ಯಾನ ನಿರ್ಮಿಸಲಾಗಿತ್ತು. ನವೀಕರಣದ ವೇಳೆ ಇವೆಲ್ಲವನ್ನು ತೆರವುಗೊಳಿಸಲಾಗಿದೆ.

ಈ ವರ್ಷದ ಜನವರಿ ಮೊದಲ ವಾರ ಕಾಮಗಾರಿ ಆರಂಭವಾಗಿದೆ. ಒಂದು ಲಕ್ಷ ಘನ ಮೀಟರ್ ಹೂಳು ತೆಗೆಯುತ್ತಿದ್ದು, ಹೂಳೆತ್ತುವ ಕಾರ್ಯ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ. ಕೆರೆಯ ಮಧ್ಯದಲ್ಲಿ ದ್ವೀಪ ನಿರ್ಮಿಸಲಾಗುತ್ತಿದೆ. ನೈಸರ್ಗಿಕ ನೀರಿನ ಸೆಲೆಗಳನ್ನು ಸುಧಾರಿಸಲು 90 ಎಕರೆಗಳನ್ನು ಒಳಗೊಂಡ ಎರಡು ಪ್ರಮುಖ ಜೌಗು ಪ್ರದೇಶಗಳನ್ನು ಪುನಃಸ್ಥಾಪಿಸಲಾಗುತ್ತಿದೆ ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ಅಧಿಕಾರಿಗಳು ತಿಳಿಸಿದರು.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 36 ಜೀವಂತ ಕೆರೆಗಳಿವೆ. ಅದರಲ್ಲಿ 30 ಕೆರೆಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. ಹೆಬ್ಬಾಳ, ನಾಗವಾರದಂಥ ಪ್ರಮುಖ ಕೆರೆಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ. ಉಳಿದ ಜಲಮೂಲಗಳಲ್ಲಿ ಶ್ರೀನಿವಾಸಪುರ ಕೆರೆ ಮತ್ತು ಮಲ್ಲಸಂದ್ರ ಗುಡ್ಡೆ ಕೆರೆಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ನೀಲನಕ್ಷೆ ತಯಾರಿಸಲಾಗಿದೆ. ಉಳಿದ ಕೆರೆಗಳ ಅಭಿವೃದ್ಧಿಗೆ ಈ ಬಾರಿಯ ಬಜೆಟ್‌ನಲ್ಲಿ ₹40 ಕೋಟಿ ಮೀಸಲಿಡಲಾಗಿದೆ. ಜೊತೆಗೆ ಬಾಣಸವಾಡಿ, ಲಿಂಗರಾಜಪುರ, ಬಟ್ಟಗುಂಟೆಪಾಳ್ಯ, ರಾಮಚಂದ್ರಾಪುರ ಮೊದಲಾದ ಕೆರೆಗಳ ಪುನರುಜ್ಜೀವನಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಾಗವಾರ ಕೆರೆಯಿಂದ ತೆಗೆದ ಹೂಳನ್ನು 15 ಕಿ.ಮೀ. ದೂರದಲ್ಲಿರುವ ಮಿಟಗಾನಹಳ್ಳಿಗೆ ಸಾಗಿಸಲು ಯೋಜಿಸಲಾಗಿತ್ತು. ಅದನ್ನು ಬದಲಾಯಿಸಿ ಕೆರೆಯ ಮಧ್ಯೆ ದ್ವೀಪ ನಿರ್ಮಾಣಕ್ಕೆ ಇದೇ ಹೂಳನ್ನು ಬಳಸುವ ಮೂಲಕ ವೆಚ್ಚ ಕಡಿಮೆ ಮಾಡಲಾಯಿತು. ದ್ವೀಪವನ್ನು ಸುರುಳಿ ಆಕಾರದಲ್ಲಿ ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

11 ಎಕರೆ ಸ್ವಾಧೀನ: ನಾಗವಾರ ಕೆರೆಯಲ್ಲಿ ಅತಿಕ್ರಮಣಗೊಂಡಿದ್ದ 11 ಎಕರೆಗೂ ಹೆಚ್ಚು ಜಮೀನನ್ನು ದೀರ್ಘಕಾಲದ ಕಾನೂನು ಹೋರಾಟದ ಬಳಿಕ ವಶಪಡಿಸಿಕೊಳ್ಳಲಾಗಿದೆ ಎಂದು ಜಿಬಿಎ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ನಡಿಗೆಗೆ ಮಾತ್ರ ಅವಕಾಶ

ನಾಗವಾರ ಕೆರೆಯಲ್ಲಿದ್ದ ನೀರನ್ನು ಬೇರೆಡೆಗೆ ಹರಿಸಿ, ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಬೆಂಗಳೂರು ಉತ್ತರ ನಗರ ಪಾಲಿಕೆಯ ಕಾರ್ಯಪಾಲಕ ಎಂಜಿನಿಯರ್ ಶಿಲ್ಪಾ ಮಾಹಿತಿ ನೀಡಿದರು.

ನಾಗವಾರ ಕೆರೆಯಲ್ಲಿ ಹಿಂದೆ ಬೋಟಿಂಗ್ ನಡೆಯುತ್ತಿತ್ತು. ಕೆರೆ ಅಭಿವೃದ್ಧಿಯಾದ ಬಳಿಕ ಅಂಥ ಮನರಂಜನಾ ಕಾರ್ಯಗಳು, ಪ್ರವಾಸಿಗರನ್ನು ಸೆಳೆಯಲು ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಿಲ್ಲ. ಕೆರೆಯಲ್ಲಿ ನೀರು ಉಳಿಸುವ ಮೂಲಕ ಅಂತರ್ಜಲ ಹೆಚ್ಚಿಸುವುದು, ಮಳೆಗಾಲದಲ್ಲಿ ಪ್ರವಾಹ ತಡೆಯುವುದು ಆದ್ಯತೆಯಾಗಿದೆ. ಕೆರೆಯ ಸುತ್ತ ವಾಯುವಿಹಾರಿಗಳಿಗಾಗಿ ನಡಿಗೆ ಪಥ ನಿರ್ಮಿಸಲಾಗುವುದು ಎಂದು ತಿಳಿಸಿದರು.



ನಾಗವಾರ ಕೆರೆಯಲ್ಲಿ ದ್ವೀಪ ನಿರ್ಮಿಸುವ ಕಾಮಗಾರಿ ನಡೆದಿದೆ ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

‘ಕೊಳಚೆ ನೀರು ಬಾರದಂತೆ ನಿರ್ವಹಿಸಿ’



ವಿಶ್ವಾಸ್

ಕೆರೆಗಳ ನಗರವಾಗಿದ್ದ ಬೆಂಗಳೂರಿನಲ್ಲಿ ಈಗ ಬಹುತೇಕ ಕೆರೆಗಳು ನಾಶವಾಗಿವೆ. ಈಗ ಉಳಿದಿರುವ ಕೆರೆಗಳು ಮುಚ್ಚಿ ಹೋಗದಂತೆ ಕಾಪಾಡಿಕೊಳ್ಳಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ನಾಗವಾರ ಕೆರೆಯನ್ನು ಅಭಿವೃದ್ಧಿ ಮಾಡುತ್ತಿರುವುದು ಒಳ್ಳೆಯ ಕ್ರಮ. ಆದರೆ, ಅದಕ್ಕೆ ಕೊಳಚೆ ನೀರು ಸೇರದಂತೆ ಎಚ್ಚರ ವಹಿಸಬೇಕು ಎಂದು ಖಾಸಗಿ ಕಂಪನಿ ಉದ್ಯೋಗಿ ವಿಶ್ವಾಸ್ ಅಭಿಪ್ರಾಯಪಟ್ಟರು.

ಬ್ರ್ಯಾಂಡ್ ಬೆಂಗಳೂರು


ಅಂಕಿ ಅಂಶಗಳು

89 ಎಕರೆ **28** ಗುಂಟೆ — ಆರ್‌ಟಿಸಿ ಪ್ರಕಾರ ನಾಗವಾರ ಕೆರೆಯ ಒಟ್ಟು ವಿಸ್ತೀರ್ಣ

88 ಎಕರೆ **33** ಗುಂಟೆ — ಸ್ಥಳಾಕೃತಿ (ಟೊಪೊಗ್ರಾಫಿಕ್) ಸಮೀಕ್ಷೆಯಲ್ಲಿ ಕಂಡು ಬಂದ ವಿಸ್ತೀರ್ಣ

68 ಎಕರೆ **20** ಗುಂಟೆ — ನೀರು ನಿಲ್ಲುವ ಪ್ರದೇಶ

61.31 ಕೋಟಿ ಲೀಟರ್ — ನೀರಿನ ಸಂಗ್ರಹದ ಸಾಮರ್ಥ್ಯ



ನಾಗವಾರ ಕೆರೆಯ ನಕ್ಷೆ



ಆಸ್ಪತ್ರೆಯನ್ನು ನಟ ಸುದೀಪ್ ಉದ್ಘಾಟಿಸಿದರು. ಡಾ.ಬಿ.ಎಸ್. ಅಜಯ್‌ಕುಮಾರ್, ಡಾ. ಮನೀಶ್ ಮಟ್ಟು, ಮನಿಷಾ ಕುಮಾರ್, ಸಚಿನ್ ಎಸ್.ಇ. ಉಪಸ್ಥಿತರಿದ್ದರು.

ಕುಟುಂಬವನ್ನೇ ತಲ್ಲಣಗೊಳಿಸಲಿದೆ ಕ್ಯಾನ್ಸರ್: ಸುದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಯಾನ್ಸರ್ ಎಂಬುದು ರೋಗಿಯನ್ನಷ್ಟೇ ಅಲ್ಲದೆ, ಇಡೀ ಕುಟುಂಬವನ್ನೇ ತಲ್ಲಣಗೊಳಿಸುವ ಒಂದು ಕಠಿಣ ಪ್ರಯಾಣ’ ಎಂದು ನಟ ಸುದೀಪ್ ಅಭಿಪ್ರಾಯಪಟ್ಟರು.

ಹೆಬ್ಬಾಳದಲ್ಲಿ ನಿರ್ಮಾಣಗೊಂಡಿರುವ 132 ಹಾಸಿಗೆಗಳ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯನ್ನು ಉದ್ಘಾಟಿಸಿ ಮಾತನಾಡಿದರು. ‘ಸಕಾಲಿಕ ರೋಗನಿರ್ಣಯ, ವ್ಯಾಪಕ ಜಾಗೃತಿ ಮತ್ತು ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆಯು ರೋಗಿಯ ಜೀವನದಲ್ಲಿ ಬದಲಾವಣೆ ತರಲಿದೆ. ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪರಿಣಿತ ವೈದ್ಯಕೀಯ ಪಡೆಯ ನೆರವಿನಿಂದ ಎಚ್‌ಸಿಜಿಯ ನೂತನ ಆಸ್ಪತ್ರೆಯು ವಿಶ್ವದರ್ಜೆಯ ಚಿಕಿತ್ಸೆ ಒದಗಿಸಲಿದೆ’ ಎಂದು ಹೇಳಿದರು.

ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಚ್‌ಸಿಜಿ) ಸಂಸ್ಥಾಪನಾಧ್ಯಕ್ಷ ಡಾ.ಬಿ.ಎಸ್. ಅಜಯ್ 5ಕುಮಾರ್, ‘ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಚಿಕಿತ್ಸೆಯು ತಂತ್ರಜ್ಞಾನದ ಕಡೆಗೆ ಮುಖ ಮಾಡಿದೆ. ದೀರ್ಘಕಾಲಿನ ಚಿಕಿತ್ಸಾ ಫಲಿತಾಂಶಗಳನ್ನು ಸುಧಾರಿಸುವತ್ತ ಗಮನ ಹರಿಸಿದೆ. ಈ ನಿಟ್ಟಿನಲ್ಲಿ ‘ಎಂಆರ್-ಲಿನಾಕ್’ ತಂತ್ರಜ್ಞಾನವನ್ನು ಪರಿಚಯಿಸಲಾಗಿದೆ. ಇದು ಕ್ಯಾನ್ಸರ್ ಚಿಕಿತ್ಸೆಗಾಗಿ ಬಳಸಲಾಗುವ ಅತ್ಯಾಧುನಿಕ ರೇಡಿಯೊಥೆರಪಿ ತಂತ್ರಜ್ಞಾನವಾಗಿದೆ’ ಎಂದು ವಿವರಿಸಿದರು.

ಎಚ್‌ಸಿಜಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಮನೀಶ್ ಮಟ್ಟು, ‘ನೂತನ ಆಸ್ಪತ್ರೆಯು ರೋಗಿ ಕೇಂದ್ರಿತ ಆರೈಕೆ, ಬಹುಶಿಸ್ತೀಯ ಪರಿಣತಿ, ಮುನ್ನೆಚ್ಚರಿಕಾ ದೃಷ್ಟಿಕೋನ ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಸಮ್ಮಿಲನವಾಗಿದೆ’ ಎಂದು ಅಭಿಪ್ರಾಯಪಟ್ಟರು.

ಎಚ್‌ಸಿಜಿ ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ) ಮನಿಷಾ ಕುಮಾರ್, ಹೆಬ್ಬಾಳದ (ಬ್ಯಾಟರಾಯನಪುರ) ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯ ಸಿಒಒ ಸಚಿನ್ ಎಸ್.ಇ. ಉಪಸ್ಥಿತರಿದ್ದರು.

ಗೌತಮ ಎಫ್‌ಸಿ ಶುಭಾರಂಭ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಾಗರಾಜ್ ಹಾಗೂ ಸಂತೋಷ್ ಅವರು ಗಳಿಸಿದ ತಲಾ ಒಂದು ಗೋಲಿನ ಬಲದಿಂದ ಗೌತಮ ಎಫ್‌ಸಿ ತಂಡವು ಮಂಗಳವಾರ ಆರಂಭಗೊಂಡ ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–1ರಿಂದ ಮಿಸಾಕಾ ಯುನೈಟೆಡ್ ಎಫ್‌ಸಿ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮೊದಲ ಗುಂಪಿನ ಪಂದ್ಯದಲ್ಲಿ ಗೌತಮ ತಂಡದ ನಾಗರಾಜ್ ಅವರು 16ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶವನ್ನು ಗೋಲನ್ನಾಗಿ ಪರಿವರ್ತಿಸಿ, ಆರಂಭಿಕ ಮುನ್ನಡೆ ತಂದುಕೊಟ್ಟರು. ಮಿಸಾಕಾ ತಂಡದ ವುಂಗಜಲೀನ್ 53ನೇ ನಿಮಿಷದಲ್ಲಿ ಗೋಲು ಹೊಡೆದು ಸಮಬಲ ಸಾಧಿಸಿದರು. ಸಂತೋಷ್ (60 + 2ನೇ ನಿ.) ನಿರ್ಣಾಯಕ ಗೋಲು ಗಳಿಸಿ, ಗೌತಮ ತಂಡಕ್ಕೆ ಗೆಲುವು ತಂದಿತ್ತರು.

ಇನ್ನೊಂದು ಪಂದ್ಯದಲ್ಲಿ ಇಂದಿರಾನಗರ ಎಫ್‌ಸಿ ತಂಡವು 3–0ಯಿಂದ ಮಹಾರಾಜ ಸೋಷಿಯಲ್ಸ್ ತಂಡವನ್ನು ಸುಲಭವಾಗಿ ಮಣಿಸಿತು.

ಎರಡನೇ ಗುಂಪಿನ ಪಂದ್ಯಗಳಲ್ಲಿ ಜೆ ಸ್ಪೋರ್ಟ್ಸ್ ಎಫ್‌ಸಿ ತಂಡವು 2–1ಯಿಂದ ಟೌನ್‌ಕ್ಲಬ್ ಹೊಸಕೋಟೆ ಎಫ್‌ಸಿ ವಿರುದ್ಧ ಹಾಗೂ ಜೈಭಾರತ್‌ನಗರ ಎಫ್‌ಸಿ ತಂಡವು 5–0ಯಿಂದ ಬೆಂಗಳೂರು ಮುಸ್ಲಿಮ್ಸ್ ಎಫ್‌ಸಿ ವಿರುದ್ಧ ಜಯ ಸಾಧಿಸಿದವು.

ಮೂರನೇ ಗುಂಪಿನ ಪಂದ್ಯದಲ್ಲಿ ರೋವರ್ಸ್ ಎಫ್‌ಸಿ ತಂಡವು 2–0ಯಿಂದ ಕ್ವೀನ್ಸ್ ಎಫ್‌ಸಿ ವಿರುದ್ಧ ಮತ್ತು 515 ಆರ್ಮಿ ಬೇಸ್ ವರ್ಕ್‌ಶಾಪ್ ಎಫ್‌ಸಿ ತಂಡವು 1–0ಯಿಂದ ಓರಿಯಂಟಲ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಎಸ್‌ಐಆರ್: ಎಆರ್‌ಒಗಳಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಭಾಗವಾಗಿ ಮತದಾರರ ನೋಂದಣಾಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ತರಬೇತಿ ಕಾರ್ಯ ಮಂಗಳವಾರದಿಂದ ಆರಂಭವಾಗಿದೆ.

ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ತರಬೇತಿ ಆಯೋಜಿಸಿದೆ. ಬೆಂಗಳೂರು ವಿಭಾಗದ ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಕೋಲಾರ, ಚಿಕ್ಕಬಳ್ಳಾಪುರ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳ ಅಧಿಕಾರಿಗಳು ತರಬೇತಿಯಲ್ಲಿ ಭಾಗಿಯಾಗಿದ್ದರು.

ಬೆಳಗಾವಿ ವಿಭಾಗದ ಮಟ್ಟದ ಪ್ರತ್ಯೇಕ ತರಬೇತಿ ಕಾರ್ಯಾಗಾರವನ್ನು ಅಲ್ಲಿಯೇ ಆಯೋಜಿಸಲಾಗಿತ್ತು.

ಕ್ರಿಕೆಟ್ ಸ್ಟೇಡಿಯಂಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಅನತಿ ದೂರದಲ್ಲಿರುವ ಸೂರ್ಯನಗರದ ನಾಲ್ಕನೇ ಹಂತದಲ್ಲಿ (ಇಂಡ್ಲವಾಡಿ) 80 ಸಾವಿರ ಆಸನಗಳ ಸಾಮರ್ಥ್ಯವಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷ ಖಂಡಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷ ರಘು ಜಾಣಗೆರೆ, ಜಂಟಿ ಕಾರ್ಯದರ್ಶಿ ಎಲ್. ಜೀವನ್, ‘ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವು ಜೀವವೈವಿಧ್ಯ ತಾಣವಾಗಿದ್ದು, ಕಾವೇರಿ ವನ್ಯಜೀವಿ ಧಾಮ, ಮಲೆಮಹದೇಶ್ವರ ಬೆಟ್ಟ ಅರಣ್ಯ ಪ್ರದೇಶವನ್ನು ಸಂಪರ್ಕಿಸುವ ಪ್ರಮುಖ ಕೊಂಡಿಯಾಗಿದೆ. ಇಂತಹ ಸೂಕ್ಷ್ಮ ಪ್ರದೇಶದಲ್ಲಿ ಬೃಹತ್ ಕ್ರೀಡಾಂಗಣ ಮಾಡುವುದು ಸೂಕ್ತವಲ್ಲ’ ಎಂದು ತಿಳಿಸಿದರು.

‘ಇಲ್ಲಿ ಕ್ರೀಡಾಂಗಣ ನಿರ್ಮಾಣವಾದರೆ ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಕ್ರೀಡಾಂಗಣದ ಫ್ಲಡ್ ಲೈಟ್, ಪ್ರೇಕ್ಷಕರ ಕಿರುಚಾಟ, ಸಂಚಾರ ದಟ್ಟಣೆಯಿಂದ ಕಾಡಿನಲ್ಲಿರುವ ಪ್ರಾಣಿ–ಪಕ್ಷಿಗಳ ಮೇಲೆ ದುಷ್ಪರಿಣಾಮ ಆಗಲಿದೆ. ಈ ಪ್ರದೇಶವು ನಗರೀಕರಣ ಹಾಗೂ ವಾಣಿಜ್ಯಮಯ ಆಗುವುದರಲ್ಲಿ ಯಾವುದೇ ಸಂಶಯವಿಲ್ಲ. ಆದ್ದರಿಂದ ಈ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಬಾರದು’ ಎಂದು ಆಗ್ರಹಿಸಿದರು.

‘ರಾಜ್ಯದಲ್ಲಿನ ಲಕ್ಷಾಂತರ ಮಂದಿಗೆ ಸೂರು ಕಲ್ಪಿಸಲು ಸಾಧ್ಯವಾಗದ ಕರ್ನಾಟಕ ಗೃಹ ಮಂಡಳಿಯು ಇಲ್ಲಿ ಕ್ರೀಡಾಂಗಣವನ್ನು ನಿರ್ಮಿಸುತ್ತಿದೆ. ಪರಿಸರಕ್ಕೆ ಮಾರಕವಾಗುವ ಈ ಯೋಜನೆಯನ್ನು ಕೈಬಿಡಬೇಕು. ಬೆಂಗಳೂರು ಉತ್ತರ ತಾಲ್ಲೂಕಿನ ಆಲೂರಿನಲ್ಲಿ ಕೆಎಸ್‌ಸಿಎ ಮೈದಾನ ಹಾಗೂ ಯಲಹಂಕ ಬಳಿ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಸೆಂಟರ್ ಆಫ್ ಎಕ್ಸಲೆನ್ಸ್ ಮೈದಾನಗಳಿವೆ. ಅಲ್ಲಿಯೇ ಕ್ರೀಡಾಂಗಣಕ್ಕೆ ಬೇಕಾಗಿರುವ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಬೇಕು’ ಎಂದು ಒತ್ತಾಯಿಸಿದರು.

‘ಕೆಲಸ ಮಾಡುವವರಿಗಷ್ಟೇ ಪಕ್ಷದ ಹುದ್ದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷಕ್ಕೆ ಲೆಟರ್‌ಹೆಡ್, ವಿಸಿಟಿಂಗ್ ಕಾರ್ಡ್ ಜಿಲ್ಲಾ ಘಟಕದ ಅಧ್ಯಕ್ಷರ ಅವಶ್ಯಕತೆ ಇಲ್ಲ. ಪಕ್ಷಕ್ಕಾಗಿ ನಿಷ್ಠೆಯಿಂದ ಕೆಲಸ ಮಾಡುವವರಿಗಷ್ಟೇ ಆ ಹುದ್ದೆಗಳನ್ನು ನೀಡುತ್ತೇವೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಎಚ್ಚರಿಕೆ ನೀಡಿದ್ದಾರೆ.

ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷರ ಸಭೆಯನ್ನು ಪಕ್ಷದ ಕಚೇರಿಯಲ್ಲಿ ಮಂಗಳವಾರ ಆಯೋಜಿಸಲಾಗಿತ್ತು. ಸಭೆಯಲ್ಲಿ ಅವರು ಕೆಲ ಪದಾಧಿಕಾರಿಗಳನ್ನು ಅವರು ತರಾಟೆಗೆ ತೆಗೆದುಕೊಂಡರು ಎಂದು ಮೂಲಗಳು ಹೇಳಿವೆ.

‘ಕೆಲವು ಜಿಲ್ಲೆಗಳಲ್ಲಿ ಕಾರ್ಯಕರ್ತರು ಕೆಲಸ ಮಾಡುತ್ತಿದ್ದರೂ, ಮುಖಂಡರ ವರ್ತನೆಯ ಕಾರಣಕ್ಕೆ ಪಕ್ಷಕ್ಕೆ ಹಿನ್ನಡೆ ಆಗುತ್ತಿದೆ. ಈ ಬಗ್ಗೆ ಹಲವು ದೂರುಗಳು ಬಂದಿವೆ. ಪಕ್ಷದ ಪ್ರಮುಖರ ಸಮಿತಿಯ ಸಭೆಗೆ ಕೆಲವು ಜಿಲ್ಲಾ ಘಟಕದ ಅಧ್ಯಕ್ಷರು ಹಾಜರಾಗುತ್ತಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಯಾರೇ ಆಗಿದ್ದರೂ ಎರಡು–ಮೂರು ಸಭೆಗಳಿಗೆ ಗೈರು ಹಾಜರಾದರೆ, ಅವರನ್ನು ಹುದ್ದೆಯಿಂದ ತೆರವು ಮಾಡಲಾಗುವುದು ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ’ ಎಂದಿವೆ.

‘ರಾಜ್ಯ ರಾಜಕಾರಣದಲ್ಲಿ ಮುಂದಿನ ಎರಡು ವರ್ಷ ಅತ್ಯಂತ ಮಹತ್ವದ್ದಾಗಿದೆ. ಮುಂದಿನ ವಿಧಾನಸಭಾ ಚುನಾವಣೆಗಾಗಿ ಪಕ್ಷವನ್ನು ಸಜ್ಜುಗೊಳಿಸಬೇಕಿದೆ. ಪಕ್ಷದ ಹುದ್ದೆಯ ಹೆಸರಿನಲ್ಲಿ ಶೋಕಿ ಮಾಡುವವರಿಂದ ಈ ಕೆಲಸ ಸಾಧ್ಯವಿಲ್ಲ. ಅಂತಹವರು ಪಕ್ಷಕ್ಕೆ ಬೇಕಾಗಿಯೂ ಇಲ್ಲ. ಸಕ್ರಿಯವಾಗಿ ಮತ್ತು ನಿಷ್ಠೆಯಿಂದ ಪಕ್ಷ ಸಂಘಟನೆ ಮಾಡುವವರಷ್ಟೇ ಪಕ್ಷದಲ್ಲಿ ಉಳಿಯುತ್ತಾರೆ ಎಂದೂ ಎಚ್ಚರಿಸಿದರು’ ಎಂದು ಮೂಲಗಳು ಹೇಳಿವೆ.

ಡಿಕೆಶಿ ಪಂಥಾಹ್ವಾನ ಸ್ವೀಕರಿಸಿದ ಎಚ್.ಡಿ. ಕುಮಾರಸ್ವಾಮಿ

‘ಬಿಡದಿ ಉಪನಗರ ಯೋಜನೆ ಕುರಿತು ಚರ್ಚಿಸಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಂಥಾಹ್ವಾನ ಸ್ವೀಕರಿಸಿದ್ದು, ಬಹಿರಂಗ ಚರ್ಚೆಗೆ ಸಿದ್ಧ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬಿಡದಿ ಉಪನಗರ ಯೋಜನೆ ವಿರೋಧಿಸಿ ಮೂರೂವರೆ ಸಾವಿರ ರೈತರು ತಕರಾರು ಅರ್ಜಿ ಸಲ್ಲಿಸಿದ್ದಾರೆ. ರೌಡಿಗಳು ಮತ್ತು ಪೊಲೀಸರ ಮೂಲಕ ರೈತರನ್ನು ಬೆದರಿಸುವ ಕೆಲಸ ಮಾಡಲಾಗುತ್ತಿದೆ. ಯೋಜನೆ ತಮಗೆ ಒಳಿತು ಮಾಡುವಂತಿದ್ದರೆ ರೈತರು ಸಂತೋಷವಾಗಿ ಭೂಮಿ ನೀಡುತ್ತಿದ್ದರು. ರೈತರು ಬಿಟ್ಟುಕೊಡಲು ಬಯಸುತ್ತಿಲ್ಲವೆಂದರೆ ಯೋಜನೆಗೆ ಒಲವಿಲ್ಲ ಎಂದೇ ಅರ್ಥ. ಅವರ ಹಿತಾಸಕ್ತಿಗೆ ತಕ್ಕಂತೆ ಸರ್ಕಾರ ನಿರ್ಧಾರ ಮಾಡಬೇಕು. ಈ ಕುರಿತು ಬಹಿರಂಗ ಚರ್ಚೆಯನ್ನು ಎಲ್ಲಿ ಬೇಕಾದರೂ ಹಮ್ಮಿಕೊಳ್ಳಲಿ, ಭಾಗವಹಿಸುತ್ತೇನೆ’ ಎಂದರು.

ಜೆಡಿಎಸ್‌ಗೆ ಅಖಂಡ ಶ್ರೀನಿವಾಸ ಮೂರ್ತಿ: ‘ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಮಂಗಳವಾರ ಬೆಳಿಗ್ಗೆ ಭೇಟಿ ನೀಡಿ, ಚರ್ಚಿಸಿದ್ದೇನೆ. ಜೆಡಿಎಸ್ ಸೇರಲು ಅವರು ಆಸಕ್ತಿ ತೋರಿದ್ದಾರೆ. ಸದ್ಯದಲ್ಲೇ ದಿನಾಂಕ ನಿಗದಿ ಮಾಡಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತೇವೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಪಕ್ಷದ ಬಲವರ್ಧನೆಗೆ ನಾವು ಆದ್ಯತೆ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಪಕ್ಷಕ್ಕೆ ಶಕ್ತಿ ತುಂಬುತ್ತಿದ್ದೇವೆ. ಅದರ ಭಾಗವಾಗಿ ಶ್ರೀನಿವಾಸ ಮೂರ್ತಿ ಅವರು ಜೆಡಿಎಸ್ ಸೇರುತ್ತಿದ್ದಾರೆ’ ಎಂದರು.



ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ಬಿ.ನಾಗೇಶಂ ಹಾಗೂ ಎಸ್.ಪುಟ್ಟಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಎಸ್.ಆರ್. ವಿಶ್ವನಾಥ್, ಎಸ್.ಕನ್ನಮ್ಮ ಮತ್ತಿತರರು ಇದ್ದರು

ಗುರು ಸ್ಮರಣೆ ಜೀವನದ ಅಮೂಲ್ಯ ಕ್ಷಣ: ವಿಶ್ವನಾಥ್

ಯಲಹಂಕ: ವಿದ್ಯಾರ್ಥಿ ಜೀವನದ ನೆನಪು ಸದಾ ಮಧುರ. ವಿದ್ಯೆ ಕಲಿಸಿದ ಗುರುಗಳು ಹಾಗೂ ಶಾಲಾ ದಿನಗಳನ್ನು ಸ್ಮರಿಸಿಕೊಂಡಾಗ ರೋಮಾಂಚನಕಾರಿ ಅನುಭವ ಉಂಟಾಗುತ್ತದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.


ಸರ್ಕಾರಿ ಪ್ರೌಢಶಾಲೆಯ ‘ಅಪೂರ್ವ ಸಂಗಮ’ ಹಳೆಯ ವಿದ್ಯಾರ್ಥಿಗಳ ಒಕ್ಕೂಟದ ಸುವರ್ಣ ಮಹೋತ್ಸವ ಅಂಗವಾಗಿ ಯಲಹಂಕ ಹಳೇನಗರದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘1977ರಲ್ಲಿ ಇದೇ ಶಾಲೆಯಲ್ಲಿ ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡಿದ್ದೆ. ಶಾಸಕನಾಗಿ ಆಯ್ಕೆಯಾದ ಬಳಿಕ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಆದ್ಯತೆ ನೀಡಿದ್ದೇನೆ. ಪದವಿಪೂರ್ವ ಕಾಲೇಜು, ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣವನ್ನು ಒಂದೇ ಆವರಣದಲ್ಲಿ ಒದಗಿಸಲಾಗಿದ್ದು, ಸುಮಾರು 9,400 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

ನಿವೃತ್ತ ಶಿಕ್ಷಕರಾದ ಬಿ.ನಾಗೇಶಂ ಹಾಗೂ ಎಸ್.ಪುಟ್ಟಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ಎಸ್. ಕನ್ನಮ್ಮ, ಅಪೂರ್ವ ಸಂಗಮ ಹಳೆಯ ವಿದ್ಯಾರ್ಥಿಗಳ ಒಕ್ಕೂಟದ ಪದಾಧಿಕಾರಿಗಳಾದ ಎ.ವಿ.ಲಕ್ಷ್ಮೀಶ್, ಕೆ.ಚಿನ್ನಯ್ಯ, ಎನ್. ಆದಿರಾಮು, ವೈ.ಸಿ.ನರಸಿಂಹಮೂರ್ತಿ, ವೈ.ಆರ್.ಸುಬ್ರಮಣಿ, ಎಂ.ಗೋಪಾಲಪ್ಪ, ಶಂಕರಮೂರ್ತಿ, ಗೋಪಿ, ವೈ.ಕೆ.ಸುರೇಶ್, ವೈ.ಆರ್.ನಾರಾಯಣ ಭಾಗವಹಿಸಿದ್ದರು.

ನಗರದಲ್ಲಿ ಇಂದು

ದೃಶ್ಯ ನಾಟಕೋತ್ಸವ–2026: ಉದ್ಘಾಟನೆ: ಎಲ್.ಎನ್. ಮುಕುಂದರಾಜ್, ‘ಶೇಕ್ಸ್‌ಪಿಯರ್’ ಗೋಷ್ಠಿ: ಲಕ್ಷ್ಮೀ ಚಂದ್ರಶೇಖರ್, ಜೋಸೆಫ್ ಜಾನ್, ಎನ್.ಸಿ. ಮಹೇಶ್, ‘ಭಾಸ’ ಗೋಷ್ಠಿ: ಶೋಭಾ, ಲಕ್ಷ್ಮೀ ಜಿ. ಪ್ರಸಾದ್, ಪ್ರಭುರಾಜ್, ಅತಿಥಿಗಳು: ಕಾ.ತ. ಚಿಕ್ಕಣ್ಣ, ಅಶೋಕ್ ಛಲವಾದಿ, ಬಿ. ನೀಲಮ್ಮ, ಸುನೇತ್ರ ಪಂಡಿತ್, ರಂಗ ಗೌರವ ಸ್ವೀಕರಿಸುವವರು: ಎಂ. ಸುರೇಶ್, ಎಂ.ಡಿ. ದೇವರಾಜ್, ಕೆ.ಪಿ. ಅಶ್ವತ್ಥನಾರಾಯಣ, ಆಯೋಜನೆ: ದೃಶ್ಯ ರಂಗತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10ರಿಂದ



ಎಲ್.ಎನ್. ಮುಕುಂದರಾಜ್

ವಿಶ್ವ ಜೇನು ದಿನಾಚರಣೆ: ಉದ್ಘಾಟನೆ: ಎಸ್.ವಿ. ಸುರೇಶ, ಅತಿಥಿಗಳು: ಎ.ಎಚ್. ರಾಜಸಾಬ್, ಸಚಿನ್ ಎಸ್. ಸುರೋಶೆ, ಮೂಡಲಗಿರಿಯಪ್ಪ, ಮೋಹನ್ ಐ. ನಾಯ್ಕ, ಅಧ್ಯಕ್ಷತೆ: ಎನ್.ಬಿ. ಪ್ರಕಾಶ್, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ನಾರ್ಥ್ ಬ್ಲಾಕ್‌ನ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10.30

ಕಾಲೇಜು ವಾರ್ಷಿಕೋತ್ಸವ, ಪದವಿ ಪ್ರದಾನ ಸಮಾರಂಭ: ಅಧ್ಯಕ್ಷತೆ: ಸಿ. ದೇವರಾಜು, ಉಪಸ್ಥಿತಿ: ಎಲ್. ಶ್ರೀನಿವಾಸ್, ಬಿ. ಕೆಂಚಪ್ಪಗೌಡ, ಎಲುವಳ್ಳಿ ಎನ್. ರಮೇಶ್, ಕೆ.ವಿ. ರೇಣುಕಾ ಪ್ರಸಾದ್, ಎಂ. ಪುಟ್ಟಸ್ವಾಮಿ, ಸಿ.ಜಿ. ಗಂಗಾಧರ್, ಡಿ.ಕೆ. ರಮೇಶ್, ಕೆ.ವಿ. ಶ್ರೀಧರ್, ಭರತ್ ಡಿಂಗ್ರಿ, ವೈ.ಜಿ. ಲಕ್ಷ್ಮಣ, ಆಯೋಜನೆ: ವಿಶ್ವೇಶ್ವರಪುರ ಕಲಾ ಮತ್ತು ವಾಣಿಜ್ಯ ಸಂಜೆ ಪದವಿ ಕಾಲೇಜು, ಸ್ಥಳ: ವಿಜ್ಞಾನ ಕಾಲೇಜಿನ ಸಭಾಂಗಣ, ವಿ.ವಿ. ಪುರ, ಸಂಜೆ 5

‘ಯಶೋಧರಾ ದಾಸಪ್ಪ’ ಪ್ರಶಸ್ತಿ ಪ್ರದಾನ: ವಿ.ಆರ್. ಸುದರ್ಶನ್, ಪ್ರಶಸ್ತಿ ಸ್ವೀಕರಿಸುವವರು: ಮಲ್ಲಿಕಾ ಎಸ್. ಘಂಟಿ, ಅತಿಥಿ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.15

ಸಂಗೀತ ಕಛೇರಿ: ಕೊಳಲು ವಾದನ: ಬಿ.ಕೆ. ಅನಂತರಾಮ್, ಪಿಟೀಲು: ವೆಂಕಟೇಶ್ ಜೆ., ಮೃದಂಗ: ಬಿ.ಎಸ್. ಆನಂದ್, ಘಟ: ಡಿ. ಸಚಿನ್, ಮೋರ್ಸಿಂಗ್: ಅಭಿಜಿತ್, ಆಯೋಜನೆ: ಭಾರತೀಯ ವಿಜ್ಞಾನ ಸಂಸ್ಥೆ, ಅಡಿಲೇಡ್ ವಿಶ್ವವಿದ್ಯಾಲಯ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಸಂಜಯನಗರ, ಸಂಜೆ 6.30

‘ರಂಗ ವೈವಿಧ್ಯ’ ವಿಭಿನ್ನ ನಾಟಕಗಳ ಉತ್ಸವ: ‘ಮಂಟೇಸ್ವಾಮಿ ಕಥಾ ಪ್ರಸಂಗ’ ಪ್ರದರ್ಶನ: ರಚನೆ: ಎಚ್. ಎಸ್. ಶಿವಪ್ರಕಾಶ, ನಿರ್ದೇಶನ: ಕೆ. ರಾಮಕೃಷ್ಣಯ್ಯ, ತಂಡ: ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲೆಗಳ ವಿಭಾಗ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ನಿರಾಕ್ಷೇಪಣಾ ಪತ್ರ ನೀಡುವ ನಿಯಮಗಳ ಸಮಗ್ರ ಪರಿಷ್ಕರಣೆಗೆ ಬಿಳಿಮಲೆ ಆಗ್ರಹ

‘ಕಡ್ಡಾಯ ಕನ್ನಡ ಕಲಿಕೆಗೆ ಸಿಬಿಎಸ್‌ಇ ಅಡ್ಡಗಾಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿಬಿಎಸ್‌ಇ ಶಾಲೆಗಳಿಗೆ ನೀಡುವ ನಿರಾಕ್ಷೇಪಣಾ ಪತ್ರದ (ಎನ್.ಒ.ಸಿ.) ನಿಯಮಗಳನ್ನು ಕನ್ನಡ ಪರವಾಗಿ ಮತ್ತಷ್ಟು ಕಠಿಣಗೊಳಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ‘ಕನ್ನಡ ಭಾಷಾ ಕಲಿಕಾ ಕಾಯ್ದೆಗೆ ವಿರುದ್ಧವಾಗುವ ರೀತಿಯಲ್ಲಿ ಸಿಬಿಎಸ್‌ಇ ಇತ್ತೀಚೆಗೆ ಆದೇಶ ಹೊರಡಿಸಿದೆ. ಶಿಕ್ಷಣವು ಭಾರತೀಯ ಸಂವಿಧಾನದ ಸಮವರ್ತಿ ಪಟ್ಟಿಗೆ ಸೇರಿರುವ ವಿಷಯವಾಗಿರುವುದರಿಂದ, ಈ ವಿಷಯದಲ್ಲಿ ರಾಜ್ಯ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮಂಡಳಿ ಏಕಪಕ್ಷೀಯವಾಗಿ ನಿರ್ಣಯ ಕೈಗೊಂಡಿರುವುದು ಸರಿಯಲ್ಲ. ರಾಜ್ಯವು ಜಾರಿಗೊಳಿಸಿರುವ ಭಾಷಾ ಕಾನೂನುಗಳನ್ನು ದುರ್ಬಲಗೊಳಿಸುವ ಅಥವಾ ಅದರ ವಿರುದ್ಧ ಆದೇಶಗಳನ್ನು ಹೊರಡಿಸಿರುವ ಈ ಕ್ರಮ ಸ್ವೀಕಾರಾರ್ಹವಲ್ಲ’ ಎಂದಿದ್ದಾರೆ.



ಪುರುಷೋತ್ತಮ ಬಿಳಿಮಲೆ

‘ಕನ್ನಡ ಭಾಷಾ ಕಲಿಕಾ ಕಾಯ್ದೆಯು ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡದ ಕಲಿಕೆಯನ್ನು ಕಡ್ಡಾಯಗೊಳಿಸಿದೆ. ಕನ್ನಡವನ್ನು ಮೊದಲ ಅಥವಾ ಎರಡನೆಯ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳುವ ಅನಿವಾರ್ಯ ಪ್ರತಿ ವಿದ್ಯಾರ್ಥಿಗೆ ಇದ್ದು, ನಾಡಿನಲ್ಲಿ ಕನ್ನಡ ಉಳಿಯುವ ಉದ್ದೇಶದಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುವ ಸಿಬಿಎಸ್‌ಇ ಶಾಲೆಗಳು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕನ್ನಡವನ್ನು ಬದಿಗಿಡುವ ವ್ಯವಸ್ಥೆಗೆ ಕೂಡಲೇ ಕಡಿವಾಣ ಹಾಕಬೇಕು’ ಎಂದು ಒತ್ತಾಯಿಸಿದ್ದಾರೆ.

ರದ್ದುಪಡಿಸುವ ಅಧಿಕಾರ: ‘ರಾಜ್ಯ ಸರ್ಕಾರ ನೀಡುವ ಎನ್.ಒ.ಸಿ. ವ್ಯವಸ್ಥೆಯನ್ನು ವಾರ್ಷಿಕ ನವೀಕರಣಕ್ಕೆ ಒಳಪಡಿಸಬೇಕು. ಕನ್ನಡ ಬೋಧನೆ, ವಿದ್ಯಾರ್ಥಿಗಳ ಕನ್ನಡ ಆಯ್ಕೆ, ಕನ್ನಡ ಶಿಕ್ಷಕರ ನೇಮಕಾತಿ ಮತ್ತು ಭಾಷಾ ಅನುಷ್ಠಾನದ ಸಮಗ್ರ ವರದಿಯನ್ನು ಆಧರಿಸಿ ಎನ್.ಒ.ಸಿ. ನವೀಕರಣ ವ್ಯವಸ್ಥೆಯನ್ನು ಜಾರಿ ಮಾಡಬೇಕು’ ಎಂದು ಸಲಹೆ ನೀಡಿದ್ದಾರೆ.


‘ಕನ್ನಡ ಅನುಷ್ಠಾನದಲ್ಲಿ ಲೋಪ ಕಂಡುಬಂದಲ್ಲಿ ನಿರಾಕ್ಷೇಪಣಾ ಪತ್ರವನ್ನು ರದ್ದುಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿರಬೇಕು. ಎಲ್ಲ ಸಿಬಿಎಸ್‌ಇ ಶಾಲೆಗಳಲ್ಲಿ ಅರ್ಹ ಕನ್ನಡ ಶಿಕ್ಷಕರ ನೇಮಕಾತಿಯನ್ನು ಕಡ್ಡಾಯಗೊಳಿಸಬೇಕು. ಕನ್ನಡ ವಿಷಯವನ್ನು ಕೇವಲ ಪಠ್ಯಕ್ರಮದಲ್ಲಿ ಸೇರಿಸದೆ, ಸಮರ್ಪಕ ಬೋಧನಾ ವ್ಯವಸ್ಥೆ ಜಾರಿಯಾಗಬೇಕು’ ಎಂದು ಹೇಳಿದ್ದಾರೆ.

‘ರಾಜ್ಯದ ಭಾಷಾ ನೀತಿಯನ್ನು ಉಲ್ಲಂಘಿಸುವ ಶಿಕ್ಷಣ ಸಂಸ್ಥೆಗಳ ವಿರುದ್ಧ ಕಾನೂನುಬದ್ಧ ನಿಯಂತ್ರಣ ಕ್ರಮಗಳನ್ನು ರೂಪಿಸುವ ಅಗತ್ಯವಿದ್ದು, ಈ ಬಗ್ಗೆ ಸದನ ಸಮಿತಿ ಅಥವಾ ತಜ್ಞರ ಸಮಿತಿಯೊಂದನ್ನು ರಚಿಸಿ ಶಿಫಾರಸುಗಳನ್ನು ಜಾರಿಮಾಡಬೇಕು’ ಎಂದಿದ್ದಾರೆ.

‘ಬಿ’ಯಿಂದ ‘ಎ’ ಖಾತಾ: ₹1,015 ಕೋಟಿ ಖೋತಾ

ನಾಲ್ಕು ನಗರ ಪಾಲಿಕೆಗಳ ಬಜೆಟ್ ನಿರೀಕ್ಷೆಗೆ ತಣ್ಣೀರು; ಕೊರತೆ ಆದಾಯದ ಮೇಲೆ ಮತ್ತೊಂದು ಹೊಡೆತ

• ಆರ್. ಮಂಜುನಾಥ್



ಬೆಂಗಳೂರು: ಬಿ–ಖಾತಾದಿಂದ ಎ–ಖಾತಾಗೆ ಪರಿವರ್ತನೆ ಮಾಡುವ ಶುಲ್ಕದಲ್ಲಿ ಶೇ 3ರಷ್ಟು ಕಡಿತವಾಗಿರುವುದರಿಂದ, ಕೇಂದ್ರ ನಗರ ಪಾಲಿಕೆ ಹೊರತುಪಡಿಸಿ ಉಳಿದ ನಾಲ್ಕು ನಗರ ಪಾಲಿಕೆಗಳಿಗೆ ಈ ವರ್ಷ ₹1,015 ಕೋಟಿ ಆದಾಯ ಖೋತಾ ಆಗಲಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ‘ಭೂ ಗ್ಯಾರಂಟಿ’ ಯೋಜನೆಯಡಿ ‘ನನ್ನ ಖಾತಾ ನನ್ನ ಹಕ್ಕು ಅಭಿಯಾನ’ ಮೇ 16ರರಿಂದ ಆರಂಭವಾಗಿದೆ. ಬಿ–ಖಾತಾದಿಂದ ಎ–ಖಾತಾಗೆ ಪರಿವರ್ತನೆ ಮಾಡಿಕೊಳ್ಳಲು ನಾಗರಿಕರಿಗೆ 100 ದಿನಗಳ ಅವಕಾಶ ನೀಡಿದ್ದು, ಶುಲ್ಕವನ್ನು ಕಡಿಮೆ ಮಾಡಲಾಗಿದೆ. ಇದರಿಂದ ನಗರ ಪಾಲಿಕೆಗಳು ಮಂಡಿಸಿದ್ದ ಮೊದಲ ಬಜೆಟ್‌ನಲ್ಲಿ ನಿರೀಕ್ಷೆ ಮಾಡಿದ್ದ ಆದಾಯದಲ್ಲಿ ಕಡಿಮೆಯಾಗಲಿದೆ.


2025ರ ನವೆಂಬರ್ 1ರಿಂದ ಬಿ–ಖಾತಾದಿಂದ ಎ–ಖಾತಾ ನೀಡುವ ಅಭಿಯಾನ ಆರಂಭವಾಗಿತ್ತು. ನೂರು ದಿನಗಳವರೆಗೆ, ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕ ಪಾವತಿಸಿ, ಪ್ರತಿ ಚದರ ಮೀಟರ್‌ಗೆ ₹30 ಅಭಿವೃದ್ಧಿ ಶುಲ್ಕ ಸೇರಿದಂತೆ ಇತರೆ ಶುಲ್ಕಗಳನ್ನು ಕಟ್ಟಿ ಎ–ಖಾತಾ ಪಡೆಯುವ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಆರು ತಿಂಗಳಾದರೂ ಹೆಚ್ಚಿನ ಜನ ಇದಕ್ಕೆ ಆಸಕ್ತಿ ತೋರಲಿಲ್ಲ. ಹೀಗಾಗಿ ‘ನನ್ನ ಖಾತಾ ನನ್ನ ಹಕ್ಕು ಅಭಿಯಾನ’ವನ್ನು ಮೇ 15ರಿಂದ ಆರಂಭಿಸಲಾಗಿದೆ.

ಈ ಅಭಿಯಾನದಡಿ 100 ದಿನಗಳ ಅವಕಾಶ ನೀಡಿದ್ದು, ಮಾರ್ಗಸೂಚಿ ದರದ ಶುಲ್ಕವನ್ನು ಶೇ 5ರಿಂದ ಶೇ 2ಕ್ಕೆ ಇಳಿಸಲಾಗಿದೆ. ಬಿ–ಖಾತಾದಿಂದ ಎ–ಖಾತಾಗೆ ಪರಿವರ್ತನೆಗಾಗಿ ಮೇ 15ರಿಂದ ಆಗಸ್ಟ್ 23ರವರೆಗೆ ಅರ್ಜಿ ಸಲ್ಲಿಸುವವರಿಗೆ ಈ ವಿನಾಯಿತಿ ಸಿಗಲಿದೆ. ಈಗಾಗಲೇ, ಅರ್ಜಿ ಸಲ್ಲಿಸಿದವರು, ಮೊತ್ತ ಪಾವತಿಸದಿದ್ದರೆ ಅವರೂ ಇದರ ಪ್ರಯೋಜನ ಪಡೆಯಬಹುದು. ಸಾರ್ವಜನಿಕರಿಗೆ ಇದರಿಂದ ಲಕ್ಷಾಂತರ ರೂಪಾಯಿ ಉಳಿಯುತ್ತದೆ ಎಂದು ಹೇಳಲಾಗಿದೆ. ಆದರೆ, ನಗರ ಪಾಲಿಕೆಗಳಿಗೆ ಆದಾಯದಲ್ಲಿ ನೂರಾರು ಕೋಟಿ ಖೋತಾ ಆಗಲಿದೆ.

ಬಿ–ಖಾತಾದಿಂದ ಎ–ಖಾತಾಗೆ ಪರಿವರ್ತನೆ ಆಗಬೇಕಾದ ಸುಮಾರು 7 ಲಕ್ಷ ಆಸ್ತಿಗಳು ನಗರದಲ್ಲಿ ಇವೆ. ಇವುಗಳೆಲ್ಲವೂ ಈ ಪ್ರಕ್ರಿಯೆಗೆ ಒಳಪಡುವುದರಿಂದ ಕೇಂದ್ರ ನಗರ ಪಾಲಿಕೆ (ಇಲ್ಲಿ ಬಿ–ಖಾತಾ ಪ್ರಕರಣಗಳಿಲ್ಲ) ಹೊರತು ಪಡಿಸಿ, ಉಳಿದ ನಾಲ್ಕೂ ನಗರ ಪಾಲಿಕೆಗಳು ನೂರಾರು ಕೋಟಿ ರೂಪಾಯಿ ಆದಾಯ ಬರುತ್ತದೆ ಎಂದು ನಿರೀಕ್ಷಿಸಿ, ಅದರಂತೆ 2026–27ನೇ ಬಜೆಟ್‌ನಲ್ಲಿ ಯೋಜನೆ ರೂಪಿಸಿವೆ. 2025ರಲ್ಲಿ ಆರಂಭಿಸಲಾಗಿದ್ದ ಈ ಅಭಿಯಾನ 2026ರ ಫೆಬ್ರುವರಿಗೇ 100 ದಿನಗಳ ಅವಕಾಶವನ್ನು ಮೀರಿತ್ತು. ಆದರೂ, ಏಪ್ರಿಲ್‌ನಿಂದ ಆರಂಭವಾಗುವ ಬಜೆಟ್‌ನಲ್ಲಿ ಅದರಂತೆಯೇ ನಿರೀಕ್ಷೆ ಮುಂದುವರಿಸಲಾಗಿತ್ತು.

‘ಮೇ 15ರಿಂದ ಮಾರ್ಗಸೂಚಿ ದರದ ಶುಲ್ಕ ಶೇ 2ಕ್ಕೆ ಇಳಿಸಿರುವುದರಿಂದ ನಗರ ಪಾಲಿಕೆಗಳ ಬಜೆಟ್‌ನಲ್ಲಿ ಖೋತಾ ಆಗಲಿದೆ. ಪಶ್ಚಿಮ ನಗರ ಪಾಲಿಕೆಯಲ್ಲಿ ಸಿಬ್ಬಂದಿಗೆ ವೇತನ ನೀಡಲೂ ಹಣವಿಲ್ಲ. ಉಳಿದ ನಗರ ಪಾಲಿಕೆಗಳಲ್ಲೂ ಇದೇ ಸ್ಥಿತಿ. ಬಿ–ಸ್ಮೈಲ್ ಯೋಜನೆ, ಘನತ್ಯಾಜ್ಯ ನಿರ್ವಹಣೆಗೆ ಕಡ್ಡಾಯವಾಗಿ ನೂರಾರು ಕೋಟಿ ನೀಡಲೇಬೇಕಿದೆ. ಇಂತಹ ಸಂದರ್ಭದಲ್ಲಿ ಖಾತಾ ಬಾಬ್ತಿನಲ್ಲಿ ನೂರಾರು ಕೋಟಿ ಕಡಿತವಾದರೆ ಆರ್ಥಿಕ ಸ್ಥಿತಿ ಸಂಕಷ್ಟಕ್ಕೆ ಸಿಲುಕಲಿದೆ’ ಎಂದು ನಗರ ಪಾಲಿಕೆ ಅಧಿಕಾರಿಗಳು ಹೇಳಿದರು.

7 ಲಕ್ಷ	12,169	6,000	1,500
ಜಿಬಿಎ ವ್ಯಾಪ್ತಿಯಲ್ಲಿರುವ ಬಿ–ಖಾತಾ ಆಸ್ತಿಗಳು	ಎ–ಖಾತಾ ಪರಿವರ್ತನೆಗೆ ಸಲ್ಲಿಕೆಯಾದ ಅರ್ಜಿಗಳು (2025ರ ನವೆಂಬರ್ 1ರಿಂದ 2026ರ ಮೇ 15)	ಅನುಮೋದನೆಯಾಗಿರುವ ಅರ್ಜಿಗಳು	ಶುಲ್ಕ ಪಾವತಿಸಿ, ಎ–ಖಾತಾ ಪಡೆದವರು



30 x 40 ಅಡಿ ನಿವೇಶನಕ್ಕೆ ₹1 ಲಕ್ಷ

ಜಿಬಿಎ ವ್ಯಾಪ್ತಿಯಲ್ಲಿನ 30 x 40 ಅಡಿ ಬಿ ಖಾತಾ ನಿವೇಶನಕ್ಕೆ ಎ ಖಾತಾ ಪಡೆಯಲು ಸುಮಾರು ₹1 ಲಕ್ಷ ವೆಚ್ಚವಾಗುತ್ತದೆ. ಮಾರ್ಗಸೂಚಿ ದರ ಪ್ರತಿ ಚದರಡಿಗೆ ₹3,000 ಇದ್ದರೆ, ₹72 ಸಾವಿರ ಶುಲ್ಕ ಪಾವತಿಸಬೇಕಾಗುತ್ತದೆ. ಇದರ ಜೊತೆಗೆ, ಪರಿವರ್ತನಾ ಶುಲ್ಕ, ಕೆರೆ ಪುನರುಜ್ಜೀವನ ಶುಲ್ಕ, ನೀರು ಸರಬರಾಜು ಯೋಜನೆ ಸೆಸ್, ವರ್ತುಲ ರಸ್ತೆ ನಿರ್ಮಾಣದ ಸರ್‌ಚಾರ್ಜ್, ಕೊಳೆಗೇರಿ ಅಭಿವೃದ್ಧಿ ಸೆಸ್, ಮಾಸ್ ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಸರ್‌ಚಾರ್ಜ್, ಅಭಿವೃದ್ಧಿ ಶುಲ್ಕ, ಡಿಸಿ ಪರಿವರ್ತನೆ ಶುಲ್ಕಗಳು ಇರುತ್ತವೆ. ಮಾರ್ಗಸೂಚಿ ದರದ ಅನ್ವಯ ಶುಲ್ಕಗಳು ಬದಲಾಗುತ್ತವೆ.

ಸುದ್ದಿ 2 ನಿಮಿಷ

ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ ಆರೋಪಿ ಬಂಧಿಸಿದ ಪೊಲೀಸರು

ಬೆಂಗಳೂರು: ದಾರಿ ಬಿಡಲಿಲ್ಲ ಎನ್ನುವ ಕಾರಣಕ್ಕೆ ಬಿಎಂಟಿಸಿ ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಆರೋಪಿಗಳ ಪೈಕಿ, ಒಬ್ಬನನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟ ರಸ್ತೆಯ ವೀವರ್ಸ್ ಕಾಲೊನಿ ನಿವಾಸಿ ಅಬ್ದುಲ್ ಶೊಹೇಬ್ (26) ಬಂಧಿತ. ಇನ್ನೂ ಇಬ್ಬರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬಿಎಂಟಿಸಿ 4ನೇ ಡಿಪೊದ ಬಸ್ ಚಾಲಕ ವಿಜಯ್‌ಕುಮಾರ್ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೇ 12ರಂದು ಆರೋಪಿಗಳು ಒಂದೇ ಬೈಕ್‌ನಲ್ಲಿ ತೆರಳುತ್ತಿದ್ದರು. ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಬಳಿ ಬಸ್ ಅನ್ನು ಹಿಂದಿಕ್ಕಿ ಮುಂದಕ್ಕೆ ಸಾಗಲು ಪ್ರಯತ್ನಿಸಿದ್ದರು. ಅದು ಸಾಧ್ಯವಾಗಿರಲಿಲ್ಲ. ಹೀಗಾಗಿ, ಕೆಲ ಸಮಯದ ಬಳಿಕ ಬಸ್ ಅನ್ನು ಅಡ್ಡಗಟ್ಟಿ ಚಾಲಕನ ಮೇಲೆ ಹಲ್ಲೆ ನಡೆಸಿದ್ದರು. ಈ ಸಂಬಂಧ ಚಾಲಕ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಇತರೆ ಇಬ್ಬರು ಆರೋಪಿಗಳ ಪತ್ತೆಗಾಗಿ ಮೂರು ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕ್ಯಾಮೆರಾದಲ್ಲಿ ದೃಶ್ಯ ಸೆರೆ: ಬಸ್‌ನ ಕ್ಯಾಮೆರಾದಲ್ಲಿ ಆರೋಪಿಗಳು ಹಲ್ಲೆ ನಡೆಸುತ್ತಿರುವ ದೃಶ್ಯವು ಸೆರೆಯಾಗಿತ್ತು. ಆ ದೃಶ್ಯಾವಳಿ ಸಾಮಾಜಿಕ ಜಾಲತಾಣದಲ್ಲೂ ಹರಿದಾಡಿತ್ತು. ಈ ಸುಳಿವು ಆಧರಿಸಿ ಅಬ್ದುಲ್‌ನನ್ನು ಬಂಧಿಸಲಾಗಿದೆ. ಅಬ್ದುಲ್ ಮತ್ತು ಸಹಚರರು ಬೈಕ್ ಮೆಕ್ಯಾನಿಕ್‌ಗಳಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಪಾರ್ಕಿಂಗ್ ಸ್ಥಳದಲ್ಲಿದ್ದ ಕಾರಿನಲ್ಲಿ ಮೃತದೇಹ ಪತ್ತೆ

ಬೆಂಗಳೂರು: ನೆಲಗದರನಹಳ್ಳಿ ಮುಖ್ಯರಸ್ತೆ ಬದಿಯ ಪಾರ್ಕಿಂಗ್ ಸ್ಥಳದಲ್ಲಿದ್ದ ಕಾರಿನಲ್ಲಿ ಮೃತದೇಹ ಪತ್ತೆಯಾಗಿದ್ದು, ಪೀಣ್ಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಹಾಸನ ಜಿಲ್ಲೆಯ ಸುನಿತ್ (36) ಮೃತಪಟ್ಟವರು. ನಗರದ ಎಚ್‌ಎಂಟಿ ಲೇಔಟ್‌ನಲ್ಲಿ ಅಣ್ಣನ ಜತೆ ಸುನಿತ್ ವಾಸವಾಗಿದ್ದರು. ಉಬರ್ ಕಂಪನಿಯಲ್ಲಿ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದರು.

ಸುನಿತ್ ಸೋಮವಾರ ಬೆಳಿಗ್ಗೆ ಮುಖ್ಯರಸ್ತೆ ಬದಿಯಲ್ಲಿ ಕಾರು ನಿಲ್ಲಿಸಿ ಬಾಗಿಲು ಮತ್ತು ಕಿಟಕಿ ಬಂದ್ ಮಾಡಿ ಎ.ಸಿ ಹಾಕಿಕೊಂಡು ವಾಹನದೊಳಗೆ ಮಲಗಿದ್ದರು. ಸಾಕಷ್ಟು ಸಮಯ ಕಳೆದರೂ ಕಾರು ಅಲ್ಲಿಯೇ ನಿಂತಿರುವುದನ್ನು ಗಮನಿಸಿದ್ದ ಸ್ಥಳೀಯರು, ಮಧ್ಯಾಹ್ನ ವಾಹನದ ಬಳಿ ಹೋಗಿ ಬಾಗಿಲು ಬಡಿದು ಚಾಲಕನನ್ನು ಎಳಿಸಲು ಪ್ರಯತ್ನಿಸಿದ್ದರು. ಆದರೂ ಸುನಿತ್ ಅವರು ಬಾಗಿಲು ತೆರೆದಿರಲಿಲ್ಲ. ಇದರಿಂದ ಅನುಮಾನಗೊಂಡ ಸ್ಥಳೀಯರು ಕಾರಿನ ಕಿಟಕಿ ಗಾಜು ಒಡೆದು ಬಾಗಿಲು ತೆರೆದು ನೋಡಿದಾಗ ಸುನಿತ್ ಮೃತಪಟ್ಟಿರುವುದು ಪತ್ತೆಯಾಗಿತ್ತು ಎಂದು ಪೊಲೀಸರು ಹೇಳಿದರು.

‘ಸ್ಥಳೀಯರು ನೀಡಿದ ಮಾಹಿತಿ ಮೇಲೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ಹೃದಯಾಘಾತದಿಂದ ಚಾಲಕ ಮೃತಪಟ್ಟಿರುವ ಶಂಕೆಯಿದೆ. ವೈದ್ಯರು ವರದಿ ನೀಡಿದ ಬಳಿಕ ಸುನಿತ್ ಅವರ ಸಾವಿಗೆ ನಿಖರವಾದ ಕಾರಣ ಗೊತ್ತಾಗಲಿದೆ’ ಎಂದು ಪೊಲೀಸರು ತಿಳಿಸಿದರು.

‘ಚೋದ್ಯ’ ಕಥಾ ಸಂಕಲನಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಅನುಪಮಾ ಪ್ರಸಾದ್

ಮೈಸೂರು: ಇಲ್ಲಿನ ಸಮತಾ ಅಧ್ಯಯನ ಕೇಂದ್ರ ನೀಡುವ 2026ನೇ ಸಾಲಿನ ‘ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ’ಗೆ ಲೇಖಕಿ ಅನುಪಮಾ ಪ್ರಸಾದ್ ಅವರ ‘ಚೋದ್ಯ’ ಕಥಾ ಸಂಕಲನ ಆಯ್ಕೆಯಾಗಿದೆ. ಬೆಂಗಳೂರಿನ ‘ಅಮೂಲ್ಯ ಪುಸ್ತಕ’ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಿದೆ. ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

2022–25ರಲ್ಲಿ ಪ್ರಕಟವಾದ 63 ಸಂಕಲನಗಳು ಸಲ್ಲಿಕೆಯಾಗಿದ್ದವು. ಸಬಿತಾ ಬನ್ನಾಡಿ, ಸ್ವಾಮಿ ಪೊನ್ನಾಚಿ, ಎಂ.ಎಸ್.ವೇದಾ ತೀರ್ಪುಗಾರರಾಗಿದ್ದರು. ನಗರದಲ್ಲಿ ಜೂನ್ 1ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕೇಂದ್ರದ ಅಧ್ಯಕ್ಷೆ ಸಬಿಹಾ ಭೂಮಿಗೌಡ ತಿಳಿಸಿದ್ದಾರೆ.

ಜೆ.ಸಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು • ಅಮೆರಿಕದಲ್ಲಿ ಉದ್ಯೋಗದಲ್ಲಿದ್ದ ವ್ಯಕ್ತಿ

ಹೋಟೆಲ್‌ನಲ್ಲಿ ಗುಂಡು ಪತ್ತೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಇಲ್ಲಿನ ಜಯಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಜೀವಂತ ಗುಂಡುಗಳು ಪತ್ತೆಯಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಿವಾಸಿ ಭಾರತೀಯ ಪ್ರಜೆಯನ್ನು ಜೆ.ಸಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅರ್ಮಾನ್ ಮುತಾಹರ್ (34) ಬಂಧಿತ. ಆರೋಪಿಯನ್ನು ಬಂಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಹೋಟೆಲ್‌ನಲ್ಲಿದ್ದ ಏಳು ಜೀವಂತ ಗುಂಡುಗಳಿರುವ ರೂಗರ್ ಕಂಪನಿಯ ಮ್ಯಾಗ್ಜಿನ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಹೋಟೆಲ್ ವ್ಯವಸ್ಥಾಪಕ ನೀಡಿದ ದೂರಿನ ಮೇಲೆ ಪ್ರಕರಣದ ತನಿಖೆ ನಡೆಸಲಾಗುತ್ತಿದೆ.

ಕೆಲವು ವರ್ಷಗಳ ಹಿಂದೆ ಉದ್ಯೋಗದ ನಿಮಿತ್ತ ಅರ್ಮಾನ್ ಅಮೆರಿಕಕ್ಕೆ ತೆರಳಿದ್ದರು. ಆರಂಭದಲ್ಲಿ ಅಲ್ಲಿನ ವಿಮಾನ ನಿಲ್ದಾಣದಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಬಳಿಕ, ಆ ಕೆಲಸ ಬಿಟ್ಟು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದರು. ಆಗಾಗ್ಗೆ ಆರ್.ಟಿ.ನಗರಕ್ಕೆ ಬಂದು ತಾಯಿ, ಸಹೋದರಿಯನ್ನು ಭೇಟಿಯಾಗಿ ಯೋಗಕ್ಷೇಮ ವಿಚಾರಿಸುತ್ತಿದ್ದರು. ಅಲ್ಲದೇ ಹೋಟೆಲ್‌ನಲ್ಲಿ ಸ್ನೇಹಿತರ ಜತೆಗೂ ಪಾರ್ಟಿ ನಡೆಸಿ ಅಮೆರಿಕಕ್ಕೆ ತೆರಳುತ್ತಿದ್ದರು ಎಂದು ಪೊಲೀಸರು ಹೇಳಿದರು.


ಅರ್ಮಾನ್ ಮುತಾಹರ್

ಅದೇ ರೀತಿ ಕಳೆದ ಏಪ್ರಿಲ್‌ನಲ್ಲೂ ಬೆಂಗಳೂರಿಗೆ ಬಂದಿದ್ದ ಆರೋಪಿ, ಏ.27ರಂದು ಜೆ.ಸಿ ನಗರದ ಜಯಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಕೊಠಡಿಯೊಂದನ್ನು ಬಾಡಿಗೆ ಪಡೆದುಕೊಂಡು ಏ.28ರ ಬೆಳಿಗ್ಗೆ ಖಾಲಿ ಮಾಡಿದ್ದರು. ಕೊಠಡಿಯಲ್ಲೇ ಏಳು ಜೀವಂತ ಗುಂಡು ಇರುವ ಮ್ಯಾಗ್ಜಿನ್ ಬಿಟ್ಟು ಹೋಗಿದ್ದರು. ಕೆಲ ಹೊತ್ತಿನ ಬಳಿಕ ಹೋಟೆಲ್‌ಗೆ ಕರೆ ಮಾಡಿ, ‘ತನ್ನ ಕೋಣೆಯಲ್ಲಿ ಗುಂಡುಗಳನ್ನು ಬಿಟ್ಟು ಬಂದಿದ್ದು, ಸುರಕ್ಷಿತವಾಗಿ ತೆಗೆದು ಇಟ್ಟಿರಿ. ವಾಪಸ್ ಬಂದು ತೆಗೆದುಕೊಂಡು ಹೋಗುತ್ತೇನೆ’ ಎಂಬುದಾಗಿ ಹೇಳಿದ್ದರು. ಅದರಂತೆ ಹೋಟೆಲ್ ಸಿಬ್ಬಂದಿ ಜೀವಂತ ಗುಂಡುಗಳನ್ನು ಹೋಟೆಲ್ ವ್ಯವಸ್ಥಾಪಕರಿಗೆ ಹಸ್ತಾಂತರಿಸಿದ್ದರು. ಆ ನಂತರ ಹೋಟೆಲ್‌ಗೂ ಬಾರದೆ, ವ್ಯವಸ್ಥಾಪಕ ಕರೆ ಮಾಡಿದರೂ ಅರ್ಮಾನ್ ಮುತಾಹರ್ ನಿರ್ಲಕ್ಷ್ಯ ವಹಿಸಿದ್ದರು. ಅದಾದ ಮೇಲೆ ಹೋಟೆಲ್ ವ್ಯವಸ್ಥಾಪಕರು ದೂರು ನೀಡಿದ್ದರು ಎಂದು ಮೂಲಗಳು ಹೇಳಿದರು.

ಎಲ್ಲಾ ತನಿಖಾ ಸಂಸ್ಥೆಗಳಿಂದಲೂ ವಿಚಾರಣೆ

ಜೆ.ಸಿ ನಗರ ಠಾಣೆಯ ಪೊಲೀಸರು ಆರೋಪಿಯನ್ನು 10 ದಿನ ವಿಚಾರಣೆ ನಡೆಸಿದ್ದಾರೆ. ಜತೆಗೆ ರಾಜ್ಯದ ಬೇರೆ ಬೇರೆ ತನಿಖಾ ಸಂಸ್ಥೆಗಳೂ ಆರೋಪಿಯನ್ನು ವಿಚಾರಣೆ ನಡೆಸಿವೆ. ಸದ್ಯ ಉದ್ದೇಶ ಪೂರ್ವಕವಾಗಿ ತಂದಿಲ್ಲ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು. ಜೆ.ಸಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಗದ ಸುಳಿವು

ಎರಡು ದೇಶದ ವಿಮಾನ ನಿಲ್ದಾಣದಲ್ಲೂ ಅರ್ಮಾನ್ ಮುತಾಹರ್ ಅವರನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಜೀವಂತ ಗುಂಡುಗಳನ್ನು ಬಟ್ಟೆಯಲ್ಲಿ ಸುತ್ತಿದ್ದರಿಂದ ಮೆಟಲ್ ಡಿಟೆಕ್ಟರ್‌ನಲ್ಲೂ ಅವುಗಳು ಪತ್ತೆ ಆಗಿರಲಿಲ್ಲ ಎಂದು ಮೂಲಗಳು ಹೇಳಿವೆ.

ಪಂಜಾಬ್ ಮಹಿಳೆ ಜತೆಗೆ ಮದುವೆ

‘ಅಮೆರಿಕದಲ್ಲಿ ಇರುವಾಗಲೇ ರೂಗರ್ ಎಂಬ ಪಿಸ್ತೂಲ್ ಖರೀದಿಸಿದ್ದೆ. ಅದಕ್ಕೆ ನಾಲ್ಕು ಮ್ಯಾಗ್ಜಿನ್ ಪಡೆದುಕೊಂಡಿದ್ದೆ. ಕೌಟುಂಬಿಕ ವಿಚಾರವಾಗಿ ಪತಿಯಿಂದ ದೂರವಾಗಿದ್ದ ಪಂಜಾಬ್‌ನ ಮಹಿಳೆಯನ್ನು ಮದುವೆಯಾಗಿದ್ದೆ. ಆದರೆ, ಆಕೆ ಇತ್ತೀಚೆಗೆ ತನ್ನ ಮೊದಲ ಪತಿ ಜತೆಗೆ ಮತ್ತೆ ಆತ್ಮೀಯವಾಗುತ್ತಿದ್ದಳು. ಇದರಿಂದ ಬೇಸರವಾಗಿತ್ತು ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಮಹಿಳೆಯ ಮೊದಲ ಪತಿಗೂ ಒಮ್ಮೆ ಪಿಸ್ತೂಲ್ ತೋರಿಸಿ ಆರೋಪಿ ಬೆದರಿಸಿದ್ದರು. ಆಗ ಅವರು ಪಿಸ್ತೂಲ್ ಕಸಿದುಕೊಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಅರ್ಮಾನ್ ಮುತಾಹರ್ ಅವರು ತಮ್ಮ ಮನೆಯ ಬೀರುವಿನಲ್ಲಿ ಬಟ್ಟೆಯಲ್ಲಿ ಸುತ್ತಿ ಜೀವಂತ ಗುಂಡುಗಳನ್ನು ಇಟ್ಟಿದ್ದರು. ಭಾರತಕ್ಕೆ ಬರುವಾಗ ಬಟ್ಟೆಯ ಜತೆಗೆ ಜೀವಂತ ಗುಂಡುಗಳನ್ನೂ ತಂದಿದ್ದರು ಎಂಬುದು ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಮೀಟರ್ ಬಡ್ಡಿ: ಚಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಟರ್ ಬಡ್ಡಿ ದಂಧೆಯಿಂದ ನೊಂದು ಕಾರು ಚಾಲಕ, ಕಮಲಾನಗರದ ನಿವಾಸಿ ಬಸವರಾಜು ಎಂಬುವವರು ಮನೆಯಲ್ಲಿ ನೇಣು ಹಾಕಿಕೊಂಡು ಸೋಮವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಸವರಾಜ್ ಅವರ ಪುತ್ರ ಪವನ್ ನೀಡಿದ ದೂರಿನ ಮೇಲೆ ಮಹೇಂದ್ರ ವಿರುದ್ಧ ಬಸವೇಶ್ವರ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು ತನಿಖೆ ಮುಂದುವರೆದಿದೆ.

ಪವನ್ ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದರೆ, ಬಸವರಾಜ್ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಕಳೆದ ಎರಡು ದಿನಗಳಿಂದ ಕೆಲಸಕ್ಕೆ ತೆರಳದೇ ಬಸವರಾಜ್ ಮನೆಯಲ್ಲೇ ಇದ್ದರು. ಸೋಮವಾರ ರಾತ್ರಿ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಬಸವರಾಜ್

‘ತಂದೆಯ ಸಾವಿಗೆ ಮಹೇಂದ್ರ ಅವರೇ ಕಾರಣ. ಈ ಸಂಬಂಧ ತಂದೆ ಬರೆದಿರುವ ಮರಣ ಪತ್ರವೂ ಸಿಕ್ಕಿದೆ. ಅದರಲ್ಲಿ ಮಹೇಂದ್ರ ಹೆಸರು ಉಲ್ಲೇಖಿಸಿದ್ದಾರೆ. ಆತ್ಮಹತ್ಯೆಗೂ ಮುನ್ನ ವಿಡಿಯೊ ರೆಕಾರ್ಡ್ ಸಹ ಮಾಡಿದ್ದಾರೆ. ಹೆಚ್ಚಿನ ಬಡ್ಡಿ ನೀಡುವಂತೆ ಕಿರುಕುಳ ನೀಡುತ್ತಿದ್ದ ಬಗ್ಗೆಯೂ ಆ ವಿಡಿಯೊದಲ್ಲಿ ಪ್ರಸ್ತಾಪಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ಮಹೇಂದ್ರ ಅವರ ಬಳಿ ಬಸವರಾಜ್ ₹50 ಸಾವಿರ ಸಾಲ ಪಡೆದಿದ್ದರು. ಸಾಲಕ್ಕೆ ಹೆಚ್ಚಿನ ಬಡ್ಡಿ ಕಟ್ಟುವಂತೆ ಕಿರುಕುಳ ನೀಡುತ್ತಿದ್ದರು. ಅದೇ ಕಾರಣಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ವಿಡಿಯೊ ಹಾಗೂ ಮರಣ ಪತ್ರದ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಯಾವ ದೇಶದಿಂದ ಹಣ ತಂದಿದ್ದಾರೆ’

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ‘ಪ್ರಧಾನಿ ಮೋದಿ ಸರ್ಕಾರ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ದರವನ್ನು ಸತತವಾಗಿ ಹೆಚ್ಚಿಸುತ್ತಿದ್ದು, ಇದರಿಂದ ಬಡ, ಮಧ್ಯಮ ವರ್ಗದವರ ಬದುಕು ದುಸ್ತರವಾಗಿದೆ. ಮಾತೆತ್ತಿದರೆ ವಿದೇಶ ಪ್ರವಾಸ ಮಾಡುವ ಮೋದಿ, ಯಾವ ದೇಶದಿಂದ ಎಷ್ಟು ಹಣ ತಂದಿದ್ದಾರೆ ಎಂದು ಹೇಳಲಿ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸವಾಲು ಹಾಕಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿ, ‘ದೇಶದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಹಣದುಬ್ಬರ ಕಡಿಮೆಯಾಗಿಲ್ಲ. ಇದರ ನಡುವೆ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಸಿಎನ್‌ಜಿ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗುತ್ತಲೇ ಇದೆ. ಇದರಿಂದಾಗಿ ದೇಶದ ಆರ್ಥಿಕತೆ ನಾಶವಾಗಿದ್ದು, ಜನ ಹೈರಾಣಾಗಿದ್ದಾರೆ’ ಎಂದರು.

ಚಿತ್ರಾವಳಿ



ಎಲ್ ಆ್ಯಂಡ್ ಟಿ ಟೆಕ್ನಾಲಜಿ ಸರ್ವೀಸಸ್ (ಎಲ್‌ಟಿಟಿಎಸ್) ಆಯೋಜಿಸಿದ್ದ ರಾಷ್ಟ್ರೀಯ ನಾವೀನ್ಯತೆ ಸ್ಪರ್ಧೆಯಲ್ಲಿ ‘ಪೀಪಲ್ಸ್ ಚಾಯ್ಸ್ ಅವಾರ್ಡ್’ಗೆ ಪಾತ್ರವಾದ ಒಡಿಶಾದ ಭುವನೇಶ್ವರದ ‘ಶಿಕ್ಷಾ ಒ ಅನುಸಂಧಾನ’ ಡೀಮ್ಡ್ ವಿಶ್ವವಿದ್ಯಾಲಯದ ತಾಂತ್ರಿಕ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ತಂಡವನ್ನು ಅಭಿನಂದಿಸಲಾಯಿತು.


ಕರ್ನಾಟಕ ನಾಟಕ ಅಕಾಡೆಮಿಯು ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿರುವ ‘ರಂಗ ವೈವಿಧ್ಯ’ ವಿಭಿನ್ನ ನಾಟಕಗಳ ಉತ್ಸವದ ಎರಡನೇ ದಿನವಾದ ಮಂಗಳವಾರ ದಕ್ಷತರಂಗ ತಂಡದ ಕಲಾವಿದರು ‘ಜ್ಞಾತಪರ್ವ’ ನಾಟಕ ಪ್ರಸ್ತುತಪಡಿಸಿದರು.



ಎಪಿಎಸ್ ಕಲೆ ಮತ್ತು ವಿಜ್ಞಾನ ಕಾಲೇಜು ಇತ್ತೀಚೆಗೆ ಹಮ್ಮಿಕೊಂಡಿದ್ದ ವಾರ್ಷಿಕ ಕ್ರೀಡಾ ಕೂಟದಲ್ಲಿ ವಿ.ವಿ.ಪುರ ಉಪ ವಿಭಾಗದ ಎಸಿಪಿ ಶಾಮಿದ್ ಬಾಷಾ ಅವರನ್ನು ಗೌರವಿಸಲಾಯಿತು. ಎಪಿಎಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಿಷ್ಣು ಭರತ್ ಎ.ಎಸ್., ಪ್ರಧಾನ ಕಾರ್ಯದರ್ಶಿ ಎ.ಪ್ರಕಾಶ್, ಸದಸ್ಯ ಟಿ.ವಿ.ಪ್ರಭು, ಸಂಸ್ಥೆಯ ಆಡಳಿತ ಮಂಡಳಿಯ ರಾಜೀವ್ ಮತ್ತು ಕಾಲೇಜಿನ ಪ್ರಾಂಶುಪಾಲೆ ಬಿ.ಜಯಶ್ರೀ ಉಪಸ್ಥಿತರಿದ್ದರು

ಚಿನ್ನದ ಗಟ್ಟಿ ಕದ್ದ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೌಚಾಲಯದ ಕಿಟಕಿಯಿಂದ ಒಳನುಗ್ಗಿ ಆಭರಣ ತಯಾರಿಸಲು ಸಂಗ್ರಹಿಸಿಟ್ಟಿದ್ದ 24 ಕ್ಯಾರೆಟ್‌ನ ಚಿನ್ನದ ಗಟ್ಟಿಗಳನ್ನು ಕಳವು ಮಾಡಿ, ಪರಾರಿಯಾಗಿದ್ದ ಮೂವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶ್ರೀರಾಂಪುರದ ಅರ್ಜುನ್ (28), ರಾಕ್ (26) ಮತ್ತು ನಾಗರಾಜು (26) ಬಂಧಿತರು. ಬಂಧಿತರಿಂದ ₹12 ಲಕ್ಷ ಮೌಲ್ಯದ 84 ಗ್ರಾಂ ಚಿನ್ನದ ಗಟ್ಟಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ನಗರ್ತಪೇಟೆ ಮುಖ್ಯರಸ್ತೆಯಲ್ಲಿ ಮೆಹದಿ ಹಸನ್ ಎಂಬುವವರು ಜ್ಯುವೆಲರಿ ಅಂಗಡಿಯನ್ನು ಇಟ್ಟುಕೊಂಡು ಚಿನ್ನದ ರಿಫೈನರಿ ಕೆಲಸ ಮಾಡುತ್ತಾರೆ. ಮೇ 6ರಂದು ರಾತ್ರಿ ಕಂಪನಿಯ ಕಟ್ಟಡದ 5ನೇ ಮಹಡಿಯ ಶೌಚಾಲಯದ ಕಿಟಕಿಯಿಂದ ಕಳ್ಳರು ಒಳನುಗ್ಗಿ ಚಿನ್ನದ ಗಟ್ಟಿಗಳನ್ನು ಕಳವು ಮಾಡಿಕೊಂಡು ಪರಾರಿ ಆಗಿದ್ದರು. ಮೆಹದಿ ಹಸನ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಶ್ರೀರಾಂಪುರದ ಸನ್‌ರೈಸ್ ಸರ್ಕಲ್ ಬಳಿ ಮೂವರನ್ನು ಬಂಧಿಸಲಾಯಿತು.

ಈ ಮೂವರನ್ನು ವಿಚಾರಣೆ ಒಳಪಡಿಸಿದಾಗ ಸುಲಭವಾಗಿ ಹಣ ಸಂಪಾದನೆ ಮಾಡುವ ಉದ್ದೇಶದಿಂದ ಚಿನ್ನದ ಗಟ್ಟಿಗಳನ್ನು ಕಳವು ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

‘ಮರುಮೌಲ್ಯಮಾಪನ ಪೋರ್ಟಲ್ ಸರಿಯಿದೆ’

ಸಿಬಿಎಸ್‌ಇ

ನವದೆಹಲಿ (ಪಿಟಿಐ): ಹಿಂದಿನ ದಿನದ ಕೆಲವು ಲಾಗಿನ್ ಸಂಬಂಧಿತ ಸಮಸ್ಯೆಗಳನ್ನು ಹೊರತುಪಡಿಸಿದರೆ, ಸಿಬಿಎಸ್‌ಇ 12ನೇ ತರಗತಿಯ ‘ಮರುಮೌಲ್ಯಮಾಪನ ಪೋರ್ಟಲ್’ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಮಂಡಳಿ ಮಂಗಳವಾರ ಸ್ಪಷ್ಟಪಡಿಸಿದೆ.

ಸಿಬಿಎಸ್‌ಇ 12ನೇ ತರಗತಿಯ ಮರುಮೌಲ್ಯಮಾಪನ ಪೋರ್ಟಲ್‌ನಲ್ಲಿ ತಾಂತ್ರಿಕ ದೋಷಗಳಿವೆ ಎಂದು ವಿದ್ಯಾರ್ಥಿಗಳು ದೂರಿದ್ದರು. ಈ ದೂರುಗಳ ನಡುವೆ ‘ಪೋರ್ಟಲ್ ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ’ ಎಂದು ಮಂಡಳಿ ಸಮರ್ಥಿಸಿಕೊಂಡಿದೆ.

ಈ ಕುರಿತು ಮಾತನಾಡಿದ ಸಿಬಿಎಸ್ ಪರೀಕ್ಷಾಂಗ ನಿಯಂತ್ರಕ ಸಂಯಮ್ ಭಾರದ್ವಾಜ್, ‘ಬೆಳಿಗ್ಗೆ ಕೆಲವು ವಿದ್ಯಾರ್ಥಿಗಳಿಂದ ಫೋನ್ ಕರೆಗಳು ಬಂದಿದ್ದವು. ಅದರಲ್ಲಿ ಕೆಲವರು ಲಾಗಿನ್ ಆಗಲು ಸಾಧ್ಯವಾಗಲಿಲ್ಲ ಎಂದು ಹೇಳಿದರು. ನಂತರ ಯಾವುದೇ ದೂರುಗಳು ಬಂದಿಲ್ಲ’ ಎಂದರು.

‘ಕೆಲವೊಮ್ಮೆ ಅಭ್ಯರ್ಥಿಗಳು ಪೋರ್ಟಲ್ ಪೇಜ್ ತೆರೆಯುವಾಗ, ಹಿಂದೆ ಉಳಿಸಿರುವ ಪುಟಗಳೇ ತೆರೆಯುತ್ತವೆ. ಆಗ ಕಂಪ್ಯೂಟರ್ ಅನ್ನು ರೀಸ್ಟಾರ್ಟ್ ಮಾಡಬೇಕು ಎಂದು ಅಂಥವರಿಗೆ ತಿಳಿಸಲಾಗಿದೆ. ನಂತರ, ನನಗೆ ಯಾವುದೇ ಫೋನ್ ಕರೆಗಳು ಬಂದಿಲ್ಲ’ ಎಂದು ಸ್ಪಷ್ಟನೆ ನೀಡಿದರು.

ದ್ವಿಚಕ್ರ ವಾಹನ ಕಳವು: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಕಡೆಗಳಲ್ಲಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿದ್ದ ಆರೋಪಿಯನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿ, ₹5.30 ಲಕ್ಷ ಮೌಲ್ಯದ 10 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಆಂಧ್ರಪ್ರದೇಶದ ಖಾದರ್ ಪಾಷ (29) ಬಂಧಿತ. ಮಂಗಮ್ಮನಪಾಳ್ಯದಲ್ಲಿ ವಾಸವಾಗಿದ್ದ ಆರೋಪಿ ಖಾದರ್ ಪಾಷ ನಗರದ ವಿವಿಧೆಡೆ ನಕಲಿ ಕೀ ಬಳಸಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಎಚ್‌ಎಸ್‌ಆರ್ ಲೇಔಟ್‌ನ ಸೆಕ್ಟರ್ 7ರ ನಿವಾಸಿ ಮಹೇಶ್, ರಾತ್ರಿ ವೇಳೆ ಮನೆಯ ಎದುರು ದ್ವಿಚಕ್ರ ವಾಹನವನ್ನು ನಿಲ್ಲಿಸಿದ್ದರು. ಬೆಳಿಗ್ಗೆ ಎದ್ದು ನೋಡಿದಾಗ ಸ್ಥಳದಲ್ಲಿ ದ್ವಿಚಕ್ರ ವಾಹನ ಇರಲಿಲ್ಲ. ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಲಂಚ: ಬೆಸ್ಕಾಂ ಎಇಇ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ಸಾಮರ್ಥ್ಯದ ವಿದ್ಯುತ್ ಸಂಪರ್ಕ ಮಂಜೂರು ಮಾಡಲು ₹50,000 ಲಂಚ ಪಡೆಯುತ್ತಿದ್ದ ವೇಳೆ ಬೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಮತ್ತು ವಿದ್ಯುತ್ ಗುತ್ತಿಗೆದಾರರೊಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ಹೆಗ್ಗನಹಳ್ಳಿಯ ಸಂಜೀವಿನಿನಗರದ ನಿವಾಸಿ ಕಟ್ಟಡ ನಿರ್ಮಾಣ ಗುತ್ತಿಗೆದಾರ ಎನ್.ರಘುರಾಜ್ ಅವರು, ಜೆಪಿ ನಗರ 7ನೇ ಹಂತದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಕಾಮಗಾರಿಗಾಗಿ 15 ಕಿಲೋವಾಟ್ ಸಾಮರ್ಥ್ಯದ ತಾತ್ಕಾಲಿಕ ವಿದ್ಯುತ್ ಮೀಟರ್ ಸಂಪರ್ಕ ಪಡೆದಿದ್ದರು. ಅದೇ ಮೀಟರ್‌ಗೆ ಹೆಚ್ಚುವರಿಯಾಗಿ 10 ಕಿಲೋವಾಟ್ ಸಾಮರ್ಥ್ಯದ ಸಂಪರ್ಕ ಮಂಜೂರಿ, 25 ಕಿಲೋವಾಟ್‌ಗೆ ಹೆಚ್ಚಿಸುವಂತೆ ಬೆಸ್ಕಾಂನ ಎಸ್12 ಉಪವಿಭಾಗದ ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಈ ಕೆಲಸಕ್ಕಾಗಿ ₹50,000 ಲಂಚ ನೀಡುವಂತೆ ಬೆಸ್ಕಾಂ ಎಸ್ 12 ಉಪವಿಭಾಗದ ಎಇಇ ಮನೋಜ್ ಕುಮಾರ್ ಬಿ. ಬೇಡಿಕೆ ಇಟ್ಟಿದ್ದರು. ಜತೆಗೆ, ಆ ಹಣವನ್ನು ಗುತ್ತಿಗೆದಾರ ಕಾಂತರಾಜು ಅವರ ಕೈಗೆ ನೀಡುವಂತೆ ಮನೋಜ್ ಅವರು ಸೂಚಿಸಿದ್ದರು. ಈ ಬಗ್ಗೆ ರಘುರಾಜ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು ಎಂದು ಪ್ರಕಟಣೆ ವಿವರಿಸಿದೆ.

ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜು ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಅದರಂತೆ ದೂರುದಾರರು, ಆರೋಪಿ ಕಾಂತರಾಜು ಅವರ ಕಚೇರಿಗೆ ತೆರಳಿ ಲಂಚದ ಹಣ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಅವರನ್ನು ಬಂಧಿಸಲಾಯಿತು. ಕಾಂತರಾಜು ಹೇಳಿಕೆ ಆಧಾರದಲ್ಲಿ ಮನೋಜ್ ಕುಮಾರ್ ಅವರನ್ನೂ ಬಂಧಿಸಲಾಯಿತು ಎಂದು ಮಾಹಿತಿ ನೀಡಿದೆ.


ಲೋಕಾಯುಕ್ತ ಡಿವೈಎಸ್‌ಪಿ ಸತೀಶ್ ಎಂ.ಎಚ್. ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪಿಐಗಳಾದ ಅಶೋಕ್ ಕುಮಾರ್.ಎಚ್, ಮಾರುತಿ ಜಿ.ನಾಯಕ್, ರಾಜಶೇಖರಯ್ಯ ಬಿ.ಸಿ. ಭಾಗಿಯಾಗಿದ್ದರು.

ಕೊಲೆ ಪ್ರಕರಣ: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ನಟ

ಪುತ್ರನ ಕಂಡು ದರ್ಶನ್ ಭಾವುಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ ಹಾಗೂ ಅವರ ಪುತ್ರ ಮಂಗಳವಾರ ಸಂಜೆ ಭೇಟಿ ಮಾಡಿ, ಕೆಲಕಾಲ ಮಾತುಕತೆ ನಡೆಸಿದರು.


ದರ್ಶನ್

ಪುತ್ರನನ್ನು ಕಂಡು ದರ್ಶನ್ ಭಾವುಕರಾದರು. ಮನೆಯಿಂದ ತಂದಿದ್ದ ಹಣ್ಣುಗಳನ್ನು ದರ್ಶನ್‌ಗೆ ಪತ್ನಿ ನೀಡಿದರು.

‘ದರ್ಶನ್ ಅವರನ್ನು ಮದುವೆಯಾಗಿ ಮೇ 19ಕ್ಕೆ 23 ವರ್ಷ ತುಂಬಲಿದೆ. ಹೀಗಾಗಿ, ಅವರನ್ನು ಹತ್ತಿರದಿಂದ ಭೇಟಿ ಮಾಡಲು ಅವಕಾಶ ಕಲ್ಪಿಸಿ’ ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್‌ಗೆ ವಿಜಯಲಕ್ಷ್ಮಿ ಪತ್ರ ಬರೆದಿದ್ದರು. ಆ ಪತ್ರವನ್ನು ಜೈಲಿನ ಮುಖ್ಯ ಅಧೀಕ್ಷಕ ಅಂಶುಕುಮಾರ್‌ಗೆ ಡಿಜಿಪಿ ಕಳುಹಿಸಿ, ನಿಯಮಾವಳಿಯಂತೆ ಕ್ರಮಕ್ಕೆ ಸೂಚಿಸಿದ್ದರು.

‘ಜೈಲಿನ ಕೈಪಿಡಿಯಂತೆ ಭೇಟಿಗೆ ಅವಕಾಶ ಕಲ್ಪಿಸಲಾಗಿತ್ತು. ದರ್ಶನ್ ಅವರು ಪತ್ನಿ ಹಾಗೂ ಪುತ್ರನ ಜತೆಗೆ ಕೆಲ ಸಮಯ ಮಾತುಕತೆ ನಡೆಸಿದರು. ವಿಜಯಲಕ್ಷ್ಮಿ ಅವರು ದರ್ಶನ್‌ಗೆ ಧೈರ್ಯ ಹೇಳಿ ಹೊರಟರು’ ಎಂದು ಮೂಲಗಳು ಹೇಳಿವೆ.

2024ರ ಜೂನ್ 8ರಂದು ರೇಣುಕಸ್ವಾಮಿ ಅವರ ಕೊಲೆ ನಡೆದಿತ್ತು. ಆ ಪ್ರಕರಣದಲ್ಲಿ ದರ್ಶನ್, ಪವಿತ್ರಾಗೌಡ ಸೇರಿದಂತೆ ಹಲವರನ್ನು ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು ಬಂಧಿಸಿದ್ದರು. ಅದಾದ ಮೇಲೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ದರ್ಶನ್ ಅವರು ಬಳ್ಳಾರಿ ಜೈಲಿನಿಂದ ಬಿಡುಗಡೆಯಾಗಿದ್ದರು. ಉಳಿದವರೂ ಸಹ ರಾಜ್ಯದ ಬೇರೆ ಬೇರೆ ಕಾರಾಗೃಹಗಳಿಂದ ಬಿಡುಗಡೆ ಆಗಿದ್ದರು. ನಂತರ, ಜಾಮೀನು ರದ್ದು ಮಾಡುವಂತೆ ಕೋರಿ ಸುಪ್ರಿಂ ಕೋರ್ಟ್‌ನಲ್ಲಿ ಬೆಂಗಳೂರು ಪೊಲೀಸರು ಮೇಲ್ಮನವಿ ಸಲ್ಲಿಸಿದ್ದರು.

ಕರ್ನಾಟಕ ಹೈಕೋರ್ಟ್ ಮಂಜೂರು ಮಾಡಿದ್ದ ಜಾಮೀನು ಆದೇಶವನ್ನು 2025ರ ಆಗಸ್ಟ್ 14ರಂದು ಸುಪ್ರೀಂ ಕೋರ್ಟ್ ರದ್ದುಗೊಳಿಸಿತ್ತು. ಅದರ ಬೆನ್ನಲ್ಲೇ ನಟ ದರ್ಶನ್, ಅವರ ಗೆಳತಿ ಪವಿತ್ರಾಗೌಡ ಸೇರಿ ಏಳು ಮಂದಿಯನ್ನು ನಗರ ಪೊಲೀಸರು ಬಂಧಿಸಿದ್ದರು.

‘ಈ ಬೆಳವಣಿಗೆಯ ಬಳಿಕ ದರ್ಶನ್ ಅವರನ್ನು ಭೇಟಿ ಮಾಡಲು ಕುಟುಂಬಸ್ಥರಿಗೆ ಪದೇ ಪದೇ ಅವಕಾಶ ಲಭಿಸುತ್ತಿಲ್ಲ. ಜೈಲಿನ ನಿಯಮಾವಳಿ ಪ್ರಕಾರವೇ ಭೇಟಿಗೆ ಅವಕಾಶ ಕಲ್ಪಿಸಲಾಗುತ್ತಿದೆ’ ಎಂದು ಜೈಲಿನ ಮೂಲಗಳು ತಿಳಿಸಿವೆ.

ಮನವಿ ಮಾಡಿದ್ದ ನಟ

‘ಮೇ 19ರಂದು ವಿವಾಹ ವಾರ್ಷಿಕೋತ್ಸವವಿದ್ದು, ಪತ್ನಿ ಮತ್ತು ಪುತ್ರನ ಭೇಟಿಗೆ ಅವಕಾಶ ನೀಡಬೇಕು. ಕುಟುಂಬಸ್ಥರು ಭೇಟಿಗೆ ಬಂದರೂ ಸರಿಯಾಗಿ ಮಾತನಾಡಲು ಸಾಧ್ಯವಾಗುತ್ತಿಲ್ಲ. ಜೈಲಿನಲ್ಲಿರುವ ಕಬ್ಬಿಣದ ಗ್ರಿಲ್ ಅಡ್ಡ ಬರುತ್ತಿದೆ. ಆದ್ದರಿಂದ ಈ ಬಾರಿ ಕೊಠಡಿ ಒಳಗೆ ಮಾತುಕತೆ ಮತ್ತು ಭೇಟಿಗೆ ಅವಕಾಶ ಮಾಡಿಕೊಡಿ’ ಎಂದು ದರ್ಶನ್ ಅವರೂ ಜೈಲಿನ ಅಧಿಕಾರಿಗಳಲ್ಲಿ ಮನವಿ ಮಾಡಿದ್ದರು.





ರಾಜ್ಯ ಸರ್ಕಾರದ ಮೂರು ವರ್ಷಗಳ 'ಸಾರ್ಥಕ ಪಯಣ', ಅಭಿವೃದ್ಧಿಯ 'ಜನಪರ ಆಡಳಿತ'ಕ್ಕೆ ಎಲ್ಲೆಡೆ ಅಭೂತಪೂರ್ವ ಮೆಚ್ಚುಗೆ, ರಾಷ್ಟ್ರಕ್ಕೆ ಮಾದರಿಯಾದ ಸರ್ಕಾರದ ಗ್ಯಾರಂಟಿ ಯೋಜನೆಗಳು, ಕಲ್ಪತರು ನಾಡಿನಲ್ಲಿ ಕಾಂಗ್ರೆಸ್ ಸರ್ಕಾರದ ವೈಭವ ಅನಾವರಣ

ಸರ್ಕಾರಕ್ಕೆ ವರ್ಷ ಮೂರು, ಸಾಧನೆಯ ಹರ್ಷ ನೂರಾರು!

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಕರ್ನಾಟಕದ ಕಾಂಗ್ರೆಸ್ ಸರ್ಕಾರವು ತನ್ನ ಆಡಳಿತಾವಧಿಯ ಯಶಸ್ವಿ ಮೂರು ವರ್ಷಗಳನ್ನು ಪೂರೈಸಿದೆ. ಭರ್ಜರಿ ಬಹುಮತದೊಂದಿಗೆ 2023ರಲ್ಲಿ ಅಧಿಕಾರ ಹಿಡಿದಿದ್ದ ಸರ್ಕಾರ, ಇದೀಗ ಮೂರು ವರ್ಷಗಳ ಮೈಲಿಗಲ್ಲನ್ನು ತಲುಪಿದೆ. ಈ ಅವಧಿಯನ್ನು ಸರ್ಕಾರ 'ಸಾರ್ಥಕ ಪಯಣ' ಮತ್ತು 'ಜನಪರ ಆಡಳಿತ' ಎಂದು ಬಣ್ಣಿಸುತ್ತಿದೆ. ಬಡತನ ನಿರ್ಮೂಲನೆ, ಸಾಮಾಜಿಕ ನ್ಯಾಯ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಆರ್ಥಿಕ ಶಕ್ತಿಯಾಗಿ ರಾಜ್ಯವನ್ನು ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಪ್ರಮುಖ ನಿರ್ಧಾರಗಳು, ಐದು ಐತಿಹಾಸಿಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ, ಕೈಗಾರಿಕಾ ಪ್ರಗತಿ ಯೋಜನೆಗಳು ಪ್ರಮುಖ ಸಾಕ್ಷಿಗಳಾಗಿ ಜಾರಿಗೊಂಡಿವೆ.

ಗ್ಯಾರಂಟಿಗಳ ಕ್ರಾಂತಿ: ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಆಡಳಿತದ ಅತಿ ದೊಡ್ಡ ಯಶಸ್ಸು ಎಂದರೆ ಚುನಾವಣೆಗೂ ಮುನ್ನ ಘೋಷಿಸಿದ್ದ ಐದು ಪ್ರಮುಖ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಚಾಲನೆಯಲ್ಲಿಟ್ಟಿರುವುದು. ವಾರ್ಷಿಕ ಸರಿಸುಮಾರು 50,000ಕೋಟಿ ರೂಪಾಯಿಗಳಿಗೂ ಅಧಿಕ ವೆಚ್ಚದಲ್ಲಿ ಅನುಷ್ಠಾನಗೊಳ್ಳುತ್ತಿರುವ ಈ ಯೋಜನೆಗಳು ಕೋಟ್ಯಂತರ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸಿವೆ. ರಾಜ್ಯದ ಸಾರಿಗೆ ಸಂಸ್ಥೆಗಳಾದ ಕೆಎಸ್ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ 'ಶಕ್ತಿ' ಯೋಜನೆ ಅತಿ ಹೆಚ್ಚು ಜನಪ್ರಿಯತೆ ಗಳಿಸಿದೆ. ಕಳೆದ ಮೂರು ವರ್ಷಗಳಲ್ಲಿ ಕೋಟ್ಯಂತರ ಮಹಿಳೆಯರು ಇದರ ಲಾಭ ಪಡೆದಿದ್ದಾರೆ. ಇದರಿಂದಾಗಿ ಧಾರ್ಮಿಕ ಕ್ಷೇತ್ರಗಳು, ಪ್ರವಾಸಿ ತಾಣಗಳು ಮತ್ತು ಗ್ರಾಮೀಣ ಭಾಗದ ಆರ್ಥಿಕ ಚಟುವಟಿಕೆಗಳು ಗಣನೀಯವಾಗಿ ಹೆಚ್ಚಿವೆ. ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರ ಸಾರಿಗೆ ವೆಚ್ಚ ಉಳಿತಾಯವಾಗಿದೆ.

ಜತೆಗೆ, ಕುಟುಂಬದ ಮಹಿಳಾ ಯಜಮಾನಿಗೆ ಪ್ರತಿ ತಿಂಗಳು 2000 ರೂಪಾಯಿ ನೀಡುವ 'ಗೃಹ ಲಕ್ಷ್ಮೀ' ಯೋಜನೆ ದೇಶದಲ್ಲೇ ಅತಿ ದೊಡ್ಡ ನಗದು ವರ್ಗಾವಣೆ ಯೋಜನೆಯಾಗಿದೆ. ಅಂದಾಜು 1.2ಕೋಟಿಗೂ ಅಧಿಕ ಮಹಿಳೆಯರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತಿದ್ದು, ಗ್ರಾಮೀಣ ಭಾಗದಲ್ಲಿ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಹಾಗೂ ಸ್ವಾಭಿಮಾನವನ್ನು ಇದು ಹೆಚ್ಚಿಸಿದೆ.

ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬದ ಪ್ರತಿ ಸದಸ್ಯನಿಗೆ ಮಾಸಿಕ 10 ಕೆಜಿ ಆಹಾರ ಧಾನ್ಯ ನೀಡುವ 'ಅನ್ನಭಾಗ್ಯ' ಯೋಜನೆ ಯಶಸ್ವಿಯಾಗಿ ಅನುಷ್ಠಾನಗೊಂಡಿದೆ. ಕೇಂದ್ರ ಸರ್ಕಾರದ ಪಾಲಿನ ಹೊರತಾಗಿ, ಉಳಿದ 5 ಕೆಜಿ ಅಕ್ಕಿಯ ಬದಲಾಗಿ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ವರ್ಗಾವಣೆ(ಡಿಬಿಟಿ), ನಂತರ ಯೋಜನೆಯಲ್ಲಿ ಕಾಲಕಾಲಕ್ಕೆ ಜನಪರ ಬದಲಾವಣೆ ಮಾಡುವ ಮೂಲಕ ಸರ್ಕಾರ ಬಡ ಕುಟುಂಬಗಳ ಹಸಿವು ನೀಗಿಸುವಲ್ಲಿ ಯಶಸ್ವಿಯಾಗಿದೆ. ಸದ್ಯದಲ್ಲೇ ಈ ಯೋಜನೆಗೆ ಪೌಷ್ಟಿಕಾಂಶ ವೃದ್ಧಿಗೆ ನೆರವಾಗುವ ಇಂದಿರಾಕಿಟ್ ಸಹ ಸೇರ್ಪಡೆಗೊಳ್ಳಲಿದೆ. ಮನೆಬಳಕೆಯ ವಿದ್ಯುತ್‌ನಲ್ಲಿ ಪ್ರತಿ ತಿಂಗಳು ಗರಿಷ್ಠ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ಮಧ್ಯಮ ವರ್ಗ ಮತ್ತು ಬಡ ಕುಟುಂಬಗಳ ಮಾಸಿಕ ಬಜೆಟ್‌ಗೆ ಸರ್ಕಾರ 'ಗೃಹಜ್ಯೋತಿ' ಮೂಲಕ ದೊಡ್ಡ ಆಸರೆ ನೀಡಿದೆ. ಕೋಟ್ಯಂತರ ಗ್ರಾಹಕರು ಇಂದು 'ಶೂನ್ಯ ವಿದ್ಯುತ್ ಬಿಲ್' ಪಡೆಯುತ್ತಿದ್ದಾರೆ. ಇದರೊಂದಿಗೆ, ಪದವಿ ಮತ್ತು ಡಿಪ್ಲೊಮಾ ಮುಗಿಸಿ ಉದ್ಯೋಗ ನಿರೀಕ್ಷೆಯಲ್ಲಿದ್ದ ಯುವಕ-ಯುವತಿಯರಿಗೆ ಆರ್ಥಿಕ ನೆರವು ನೀಡುವ ಯುವನಿಧಿ ಯೋಜನೆ ಸಹ ಯಶಸ್ಸಿನ ಹೆಜ್ಜೆಯನ್ನಿಟ್ಟಿದೆ. ಸರ್ಕಾರ ನೀಡಿದ್ದ ಭರವಸೆ ಅನ್ವಯ ಪಂಚ ಗ್ಯಾರಂಟಿಗಳ ಜಾರಿ ಬಳಿಕ, ಬೌನಸ್ ರೀತಿ ಆರನೇ ಗ್ಯಾರಂಟಿಯಾಗಿ 'ಭೂ ಗ್ಯಾರಂಟಿ' ಯೋಜನೆಗೂ ಚಾಲನೆ ನೀಡಿದೆ. ಸಾಧನಾ ಸಮಾವೇಶದ ಅಂಗವಾಗಿ ಹಾವೇರಿಯಲ್ಲಿ ಇತ್ತೀಚೆಗೆ ಮಹತ್ವಾಕಾಂಕ್ಷೆಯ 'ಭೂ ಗ್ಯಾರಂಟಿ' ಯೋಜನೆಯನ್ನು ರಾಜ್ಯಕ್ಕೆಅರ್ಪಿಸಿದೆ. ಭೂ ರಹಿತ ಬಡವರಿಗೆ ಭೂಮಿ ಒದಗಿಸುವ ಮತ್ತು ಭೂ ದಾಖಲೆಗಳ ಗೊಂದಲ ನಿವಾರಿಸುವ ನಿಟ್ಟಿನಲ್ಲಿ ಇದೊಂದು ಕ್ರಾಂತಿಕಾರಕ ಹೆಜ್ಜೆಯಾಗಿದೆ.

ರಾಜ್ಯದ ಅರ್ಥವ್ಯವಸ್ಥೆಗೆ ಶಕ್ತಿ: ಗ್ಯಾರಂಟಿ ಯೋಜನೆಗಳಿಂದಾಗಿ ರಾಜ್ಯದ ಬೊಕ್ಕಸ ಬರಿದಾಗಲಿದೆ ಎಂಬ ವಿರೋಧ ಪಕ್ಷಗಳ ಟೀಕೆಗೆ ಸರ್ಕಾರ ತನ್ನ ಆರ್ಥಿಕ ಶಿಸ್ತು ಮತ್ತು ಬಂಡವಾಳ ಆಕರ್ಷಣೆಯ ಮೂಲಕ ಉತ್ತರ ನೀಡಿದೆ. ಮೂರು ವರ್ಷಗಳಲ್ಲಿ ಕರ್ನಾಟಕವು ಕೈಗಾರಿಕೆ ಮತ್ತು ವಿದೇಶಿ ನೇರ ಹೂಡಿಕೆಯಲ್ಲಿ (ಎಫ್‌ಡಿಐ) ಮುಂಚೂಣಿ ಕಾಯ್ದುಕೊಂಡಿದೆ

ಕಂದಾಯ ಇಲಾಖೆಯ ಭೂಅಭಯ

ಕಂದಾಯ ಸಚಿವ ಕೃಷ್ಣ ಬೈರೇಗೌಡ ನೇತೃತ್ವದಲ್ಲಿ ಕಂದಾಯ ಇಲಾಖೆಯು ಸಂಪೂರ್ಣ ಡಿಜಿಟಲೀಕರಣದತ್ತ ಮುಖ ಮಾಡಿದೆ. ಭ್ರಷ್ಟಾಚಾರ ಮುಕ್ತ ಮತ್ತು ಪಾರದರ್ಶಕ ಆಡಳಿತಕ್ಕೆ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ. ಆ ಮೂಲಕ ಬಡವರಿಗೆ ಸರ್ಕಾರ ಧೈರ್ಯದ ಅಭಯ ನೀಡುತ್ತಿದೆ. ಭೂ ಸುರಕ್ಷಾ ಯೋಜನೆಯ ಮೂಲಕ ರಾಜ್ಯದ ಎಲ್ಲಾ ತಾಲ್ಲೂಕುಗಳ ಕೋಟ್ಯಾಂತರ ಕುಟುಂಬಗಳ ಭೂ ದಾಖಲೆಗಳಿಗೆ ಡಿಜಿಟಲ್ ಸ್ಪರ್ಶ ನೀಡುವಲ್ಲಿ ಕ್ರಾಂತಿಕಾರಕ ಹೆಜ್ಜೆಯನ್ನಿಡಲಾಗಿದೆ. ಜತೆಗೆ, ನನ್ನ ಆಸ್ತಿ ಮತ್ತು ಆರ್‌ಟಿಸಿ ಆಧಾರ್ ಜೋಡಣೆ ಮೂಲಕ ನಕಲಿ ದಾಖಲೆ ಸೃಷ್ಟಿಗೆ ಕಡಿವಾಣ ಹಾಕಲಾಗಿದೆ. ಲ್ಯಾಂಡ್ ಬೀಟ್, ಇ-ಪೌತಿ ಸೇರಿದಂತೆ ಕಂದಾಯ ಇಲಾಖೆಯಲ್ಲಿ ಸರ್ಕಾರದಿಂದ ಹೊಸದೊಂದು ಕ್ರಾಂತಿ ಶುರುವಾಗಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ನೇತೃತ್ವದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶವು ಅಭೂತಪೂರ್ವ ಯಶಸ್ಸು ಕಂಡಿದೆ. ವಿವಿಧ ವಲಯಗಳಲ್ಲಿ ಸುಮಾರು 10ಲಕ್ಷ ಕೋಟಿ ರೂಪಾಯಿಗಳಿಗೂ ಅಧಿಕ ಬಂಡವಾಳ ಹೂಡಿಕೆಯ ಒಪ್ಪಂದಗಳು ನಡೆದಿವೆ. ಇದರಿಂದ ಮುಂದಿನ ದಿನಗಳಲ್ಲಿ ಕನಿಷ್ಠ 6ಲಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ. ಸುಮಿಟೊಮೊ ಕಾರ್ಪೊರೇಷನ್, ಹೋಂಡಾ, ಜೆಎಫ್‌ಇ ಶೋಜಿ ಸೇರಿದಂತೆ ಪ್ರಮುಖ ಜಪಾನಿನ ಕಂಪನಿಗಳು ರಾಜ್ಯದಲ್ಲಿ ಸೆಮಿಕಂಡಕ್ಟರ್, ಎಲೆಕ್ಟ್ರಿಕ್ ವಾಹನ (ಇವಿ) ಮತ್ತು ಸ್ಟೀಲ್ ವಲಯದಲ್ಲಿ ಹೂಡಿಕೆ ಮಾಡಲು ಮುಂದೆ ಬಂದಿವೆ. ಇದರೊಂದಿಗೆ, ರಾಜ್ಯದ ಎರಡನೇ ಹಂತದ ನಗರಗಳ ಅಭಿವೃದ್ಧಿಗಾಗಿ 'ಕ್ವಿನ್ ಸಿಟಿ' ಮತ್ತು 'ಸ್ವಿಫ್ಟ್ ಸಿಟಿ' ನಂತಹ ವಿನೂತನ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಐಟಿ-ಬಿಟಿ ವಲಯವನ್ನು ಕೇವಲ ಬೆಂಗಳೂರಿಗೆ ಸೀಮಿತಗೊಳಿಸದೆ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಬೆಳಗಾವಿ ಭಾಗಗಳಿಗೂ ವಿಸ್ತರಿಸಲಾಗುತ್ತಿದೆ.

ರಾಜಧಾನಿಗೆ ಹೊಸಸ್ವರೂಪ: ಡಿಸಿಎಂ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್‌ರವರ ಕನಸಿನ ಯೋಜನೆಯಾದ 'ಬ್ರ್ಯಾಂಡ್ ಬೆಂಗಳೂರು' ಅಡಿಯಲ್ಲಿ ರಾಜಧಾನಿಯ ಮೂಲಸೌಕರ್ಯವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ಪ್ರಯತ್ನಗಳು ನಡೆದಿವೆ. ಬೆಂಗಳೂರಿನ ಅತಿ ದೊಡ್ಡ ಸಮಸ್ಯೆಯಾದ ಟ್ರಾಫಿಕ್‌ಗೆ ಮುಕ್ತಿ ನೀಡಲು ಜಾಗತಿಕ ತಂತ್ರಜ್ಞಾನ ಬಳಸಿ ಹೈ-ಸ್ಪೀಡ್ ಸುರಂಗ ಮಾರ್ಗ ನಿರ್ಮಾಣದ ಯೋಜನೆಗೆ ಚಾಲನೆ ನೀಡಲಾಗಿದೆ. ಜತೆಗೆ, ನಮ್ಮ ಮೆಟ್ರೋ ಜಾಲವನ್ನು ಬೆಂಗಳೂರಿನ ಹೊರವಲಯ ಮತ್ತು ಪ್ರಮುಖ ಐಟಿ ಹಬ್‌ಗಳಿಗೆ ಸಂಪರ್ಕಿಸುವ ಕಾಮಗಾರಿಗಳನ್ನು ವೇಗಗೊಳಿಸಲಾಗಿದೆ. ಹೊಸ ಮಾರ್ಗಗಳನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗಿದೆ. ಬಿಎಂಆರ್‌ಸಿಎಲ್ ನೆಟ್‌ವರ್ಕ್ ವಿಸ್ತರಣೆಯಿಂದ ಲಕ್ಷಾಂತರ ವಾಹನ ಸವಾರರಿಗೆ ಅನುಕೂಲವಾಗಿದೆ. ರಸ್ತೆ ಗುಂಡಿಗಳ ಮುಕ್ತಿಗೆ ಕಠಿಣ ಕ್ರಮ, ಹೈ-ಡೆನ್ಸಿಟಿ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ಪ್ರಮುಖ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಕಸ ವಿಲೇವಾರಿ ಸಮಸ್ಯೆಗೆ ವೈಜ್ಞಾನಿಕ ಪರಿಹಾರ ಕಂಡುಕೊಳ್ಳಲು ಹೊಸ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆ.

ಆರೋಗ್ಯ, ಶಿಕ್ಷಣಕ್ಕೂ ವಿಶೇಷ ನಿಗಾ: ರಾಜ್ಯದ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಭಾರಿ ಸುಧಾರಣೆ ತರಲಾಗಿದೆ. ಸರ್ಕಾರಿ ಆಸ್ಪತ್ರೆಗಳ ನವೀಕರಣ, ಔಷಧಗಳ ನಿರಂತರ ಪೂರೈಕೆ ಮತ್ತು ಖಾಲಿ ಇದ್ದ ಸಾವಿರಾರು ವೈದ್ಯಕೀಯ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಪಡಿಸಲು 'ಸಿಎಸ್ಆರ್' ನಿಧಿ ಬಳಸಿಕೊಳ್ಳಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಿಗೆ ವಿಶೇಷ ಅನುದಾನ ನೀಡಲಾಗಿದೆ. ಜತೆಗೆ, ಕರಾವಳಿ ಸೇರಿದಂತೆ ರಾಜ್ಯದ ಸೂಕ್ಷ್ಮ ಪ್ರದೇಶಗಳಲ್ಲಿ ಕೋಮು ಸಂಘರ್ಷಗಳಿಗೆ ಬ್ರೇಕ್ ಹಾಕುವಲ್ಲಿ ಗೃಹ ಇಲಾಖೆ ಯಶಸ್ವಿಯಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ದಕ್ಷ ಅಧಿಕಾರಿಗಳ ನೇಮಕ ಮಾಡಲಾಗಿದ್ದು, ಕೊಲೆ, ಸುಲಿಗೆಯಂತಹ ಅಪರಾಧ ಪ್ರಕರಣಗಳ ಸಂಖ್ಯೆಯಲ್ಲಿ ಸಾಕಷ್ಟು ಇಳಿಕೆಯಾಗಿದೆ. ಆ ಮೂಲಕ ಜನರಿಗೆ ಸುವ್ಯವಸ್ಥಿತ ಸಮಾಜ ರೂಪಿಸಿಕೊಡುವಲ್ಲಿ ಸರ್ಕಾರ ಯಶಸ್ವಿ ಹೆಜ್ಜೆಗಳನ್ನಿಡುತ್ತಿದೆ. ನೀರಾವರಿ, ಕೃಷಿ, ತೋಟಗಾರಿಕೆ, ಪ್ರವಾಸೋದ್ಯಮ, ಪಂಚಾಯತ್ ರಾಜ್ ಸೇರಿದಂತೆ ಎಲ್ಲಾ ವಲಯಗಳಲ್ಲೂ ಸರ್ಕಾರ ಅತ್ಯುತ್ತಮ ಸಾಧನೆ ಮಾಡುತ್ತಿದ್ದು, ಎಲ್ಲಾ ಯೋಜನೆಗಳಲ್ಲೂ ಜನಪರ ಕಾಳಜಿ ಮೆರೆಯುತ್ತಿದೆ.





ಯೋಜನೆಗಳ ಮಹಾಪೂರ

ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ದಿನದಿಂದ ಜನಸಾಮಾನ್ಯರು, ರೈತರು, ಮಹಿಳೆಯರು, ಯುವಕರು ಮತ್ತು ಶ್ರಮಿಕ ವರ್ಗದ ಕಲ್ಯಾಣಕ್ಕಾಗಿ ಹಲವಾರು ಪ್ರಮುಖ ನಿರ್ಧಾರಗಳನ್ನು ಹಾಗೂ ಯೋಜನೆಗಳನ್ನು ಜಾರಿಗೆ ತಂದಿದೆ. ಅತ್ಯಂತ ಪ್ರಮುಖ ನಿರ್ಧಾರಗಳು ಮತ್ತು ಯೋಜನೆಗಳ ಸಮಗ್ರ ಪಟ್ಟಿ ಇಲ್ಲಿದೆ

- **ಗ್ಯಾರಂಟಿ ಅನುಷ್ಠಾನ:** ರಾಜ್ಯದಲ್ಲಿ ಈವರೆಗೆ 1.30ಲಕ್ಷ ಕೋಟಿ ರೂ. ವೆಚ್ಚದಲ್ಲಿ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ, ಯುವನಿಧಿ ಗ್ಯಾರಂಟಿಗಳ ಅನುಷ್ಠಾನ.
- **ನೇಮಕಾತಿ:** ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿದ್ದ 54,432 ಹುದ್ದೆಗಳಿಗೆ ನೇರ ನೇಮಕಾತಿ.
- **ಸಾಮಾಜಿಕ ಸಮೀಕ್ಷೆ :** ಪ್ರಗತಿಗೆ ಪೂರಕವಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ
- **ಒಳಮೀಸಲಾತಿ:** ಸಮಾಜದಲ್ಲಿನ ಕೆಲ ಪ್ರಮುಖ ಉಪಜಾತಿಗಳಿಗೆ ಒಳಮೀಸಲಾತಿ ಜಾರಿ.
- **ಗಿಗ್ ಕಾರ್ಮಿಕರ ಕಲ್ಯಾಣ;** ದೇಶದಲ್ಲೇ ಮೊದಲ ಬಾರಿಗೆ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಸೂದೆಗೆ ಅನುಮೋದನೆ
- **ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ:** ಕೃಷಿ ಬೆಳೆಗಳ ಮೌಲ್ಯವರ್ಧನೆ ಹಾಗೂ ಕೃಷಿ ತ್ಯಾಜ್ಯ ಮರುಬಳಕೆ ಉತ್ತೇಜನೆಗೆ 100 ಕೋಟಿ.
- **ನಂದಿನಿಗೆ ಬ್ರ್ಯಾಂಡ್:** ಕೆಎಂಎಫ್ ಮೂಲಕ ನಂದಿನಿ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ವ್ಯವಸ್ಥೆಗೆ ಸಹಕಾರ.
- **ಮಿಲೆಟ್ ಹಬ್:** ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳನ್ನು ಉತ್ತೇಜಿಸಲು 'ಮಿಲೆಟ್ ಹಬ್' ಏಕಗವಾಕ್ಷಿ ವ್ಯವಸ್ಥೆ.
- **NABL ಮಾನ್ಯತೆ :** ಕೃಷಿಗೆ ಸದಾ ಸಹಕಾರ ನೀಡುವ ಸರ್ಕಾರ ಇಲಾಖೆಯ ಎಲ್ಲಾ ಪ್ರಯೋಗಾಲಯಗಳಿಗೆ NABL ವ್ಯವಸ್ಥೆ.
- **ವಸುಧಾಮೃತ ಕಾರ್ಯಕ್ರಮ:** ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ಪದ್ದತಿಗಳ ಉತ್ತೇಜನಕ್ಕೆ ಸೌಕರ್ಯ.
- **ಸಸ್ಯ ಸಂಜೀವಿನಿ ಯೋಜನೆ:** ಬೆಳೆಗಳಲ್ಲಿ ಕೀಟ ಹಾಗೂ ರೋಗ ನಿಯಂತ್ರಣಕ್ಕೆ ಸಸ್ಯ ಸಂಜೀವಿನಿ ಯೋಜನೆ.
- **ಎಐ ತಂತ್ರಜ್ಞಾನ ವ್ಯವಸ್ಥೆ:** ರೈತ ಕರೆ ಕೇಂದ್ರಕ್ಕೆ ಆಧುನಿಕ ಸ್ಪರ್ಶ ಒದಗಿಸುವ ನಿಟ್ಟಿನಲ್ಲಿ ಕೃತಕ ಬುದ್ಧಿಮತ್ತೆ(ಎಐ) ಅಳವಡಿಕೆ.
- **ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆ :** ಕೃಷಿಯಲ್ಲಿ ಉತ್ಪಾದನಾ ವೆಚ್ಚ ಕಡಿತಕ್ಕೆ ಪ್ರತ್ಯೇಕ ಬಿತ್ತನೆ ಮತ್ತು ನಾಟಿ ಯಂತ್ರಗಳ ಸೇರ್ಪಡೆ.
- **ತೋಟಗಾರಿಕಾ ಕೈಗಾರಿಕೆಗಳಿಗೆ ಯೋಜನೆ:** ಇಲಾಖೆಯ ನರ್ಸರಿಗಳಲ್ಲಿ ಪಿಪಿಪಿ ಮಾದರಿಯಲ್ಲಿ ತೋಟಗಾರಿಕೆ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಕ್ರಮ.
- **ಫಲಧಾರೆ ಕಾರ್ಯಕ್ರಮ:** ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆ ನಿವಾರಣೆಗೆ 1000 ಗ್ರಾಪಂಗಳಲ್ಲಿ 'ಫಲಧಾರೆ' ಶಿಬಿರ ವ್ಯವಸ್ಥೆ.
- **ಸೆಂಟರ್ ಆಫ್ ಎಕ್ಸಲೆನ್ಸ್ :** ರಾಜ್ಯದ ಮೀನುಗಾರಿಕೆಗೆ ನೆರವಾಗುವಂತೆ ಮಂಗಳೂರು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ.
- **30,000 ಕೋಟಿ ಕೃಷಿ ಸಾಲ:** ರಾಜ್ಯದ 38ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 30,000 ಕೋಟಿ ರೂ.ಗಳ ಕೃಷಿ ಸಾಲ ವಿತರಣೆ ಗುರಿ.
- **ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್:** ಪ್ರತಿಯೊಂದು ಜಿಲ್ಲೆಯಲ್ಲೂ ಪ್ರತ್ಯೇಕ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸ್ಥಾಪನೆಗೆ ಆರ್‌ಬಿಐಗೆ ಪ್ರಸ್ತಾವನೆ.
- **ಮೇಕೆದಾಟು ಯೋಜನೆ:** ಕೇಂದ್ರ ಪರಿಸರ ಸಚಿವಾಲಯದಿಂದ ಅರಣ್ಯ ತೀರುವಳಿ ಪಡೆದು ಮೇಕೆದಾಟು ಯೋಜನೆ ಅನುಷ್ಠಾನ.
- **490ಕೋಟಿ ಅನುದಾನ:** ಚಾಮರಾಜನಗರದ ಹನೂರು ತಾಲ್ಲೂಕಿನ 12ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸುವ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ರೂ. ಅನುದಾನ.
- **ಹೆಚ್.ಎನ್ ವ್ಯಾಲಿಗೆ 237 ಕೋಟಿ :** ಬೆಂಗಳೂರಿನ ಹೆಬ್ಬಾಳ-ನಾಗವಾರ ವ್ಯಾಲಿ 3ನೇ ಹಂತದ ಯೋಜನೆಗೆ ಅನುದಾನ.
- **ವೃಷಭಾವತಿ ವ್ಯಾಲಿಗೆ ಅನುದಾನ:** ಬೆಂಗಳೂರು ಸುತ್ತಲಿನ ತಾಲ್ಲೂಕುಗಳ ಕೆರೆಗಳ ತುಂಬಿಸುವ ವೃಷಭಾವತಿ ವ್ಯಾಲಿ ಯೋಜನೆಯ 2ನೇ ಹಂತಕ್ಕೆ 650 ಕೋಟಿ.
- **ಬಳಕೆದಾರರ ಸಂಘಗಳು:** ಕೆರೆಗಳನ್ನು ಸಂರಕ್ಷಿಸುವ ಉದ್ದೇಶದಿಂದ ಕೆರೆ ಬಳಕೆದಾರರ ಸಂಘಗಳ ಸ್ಥಾಪನೆ, ಬಲವರ್ಧನೆ.
- **ಕೆಪಿಎಸ್‌ಗೆ ಬಲ:** ರಾಜ್ಯದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾರಂಭಕ್ಕೆ 3,900 ಕೋಟಿ ನೆರವು.
- **ಹುದ್ದೆ ಭರ್ತಿಗೆ ಕ್ರಮ:** ಕೆಪಿಎಸ್ ಶಾಲೆಗಳಲ್ಲಿ ಬೋಧನಾ ಹುದ್ದೆಗಳಿಗೆ ಶೀಘ್ರ ನೇಮಕ.
- **ದುರಸ್ತಿಗೆ ಅನುದಾನ:** ರಾಜ್ಯದ ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ, ಶೌಚಾಲಯ ನಿರ್ಮಾಣ, ದುರಸ್ತಿಗೆ 640 ಕೋಟಿ ರೂ.
- **ಎಐ ಡಿಜಿಟಲ್ ಟ್ಯೂಟರ್ :** ರಾಜ್ಯದ 12.28ಲಕ್ಷ ವಿದ್ಯಾರ್ಥಿಗಳಿಗೆ ಐಐಟಿ ಧಾರವಾಡ ಸಹಯೋಗದಲ್ಲಿ ಎಐ ತಂತ್ರಜ್ಞಾನ ಅಳವಡಿಸಿಕೊಂಡು ಸ್ವಯಂ ಕಲಿಕಾ ಡಿಜಿಟಲ್ ಟ್ಯೂಟರ್ ಸೌಲಭ್ಯ.
- **ಶಿಕ್ಷಕರ ನೇಮಕಾತಿ:** ರಾಜ್ಯದಲ್ಲಿ ಖಾಲಿ ಇರುವ 15,000 ಶಿಕ್ಷಕರ ಹುದ್ದೆ ಭರ್ತಿ.
- **ಮಾನಸಿಕ ಸಲಹೆಗಾರರ ನೇಮಕ :** ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ನಿವಾರಿಸಲು 204 ಬಿಆರ್‌ಸಿ ಕೇಂದ್ರಗಳಿಗೆ ಒಬ್ಬರಂತೆ ಮಾನಸಿಕ ಆರೋಗ್ಯ ಸಲಹೆಗಾರರ ನೇಮಕ.
- **ಸೈನಿಕ ಶಾಲೆಗಳಿಗೆ ಅನುದಾನ:** ವಿಜಯಪುರದ ಸೈನಿಕ ಶಾಲೆಯ ಹಾಸ್ಟೆಲ್ ಮರು ನಿರ್ಮಾಣಕ್ಕೆ 10 ಕೋಟಿ ರೂ. ಅನುದಾನ.
- **ಮಕ್ಕಳ ರಕ್ಷಣೆಗೆ ಕ್ರಮ:** 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆ ನಿಷೇಧ.
- **ವಿವಿಗಳಿಗೆ ಸಿಬ್ಬಂದಿ:** ರಾಜ್ಯದ ನಾನಾ ವಿವಿಗಳಿಗೆ 1000 ಬೋಧಕ ಹುದ್ದೆಗಳ ಭರ್ತಿ.
- **ಕಾಲೇಜುಗಳ ಉನ್ನತೀಕರಣ:** ರಾಜ್ಯದಲ್ಲಿ 1ಸಾವಿರಕ್ಕೂ ಅಧಿಕ ದಾಖಲಾತಿ ಹೊಂದಿರುವ ಪದವಿ ಕಾಲೇಜುಗಳ ಉನ್ನತೀಕರಣಕ್ಕೆ ಕ್ರಮ.
- **ವಿಶ್ವೇಶ್ವರಯ್ಯ ವಿವಿಗೆ ಅನುದಾನ :** ಐಐಟಿ ಮಾದರಿಯಲ್ಲಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ವಿವಿ ಅಭಿವೃದ್ಧಿಗೆ 500 ಕೋಟಿ ರೂ. ಅನುದಾನ.
- **ಮಾತೃತ್ವ ರಜೆ :** ಪದವಿ, ಪಾಲಿಟೆಕ್ನಿಕ್, ಇಂಜಿನಿಯರಿಂಗ್ ಕಾಲೇಜು ಮಹಿಳಾ ಅತಿಥಿ ಉಪನ್ಯಾಸಕರಿಗೆ 90 ದಿನಗಳ ಮಾತೃತ್ವ ರಜೆ.
- **ಮೂಲಸೌಕರ್ಯಕ್ಕೆ ಅನುದಾನ:** ಆರೋಗ್ಯ ಇಲಾಖೆಯ ಮೂಲಸೌಕರ್ಯ ಅಭಿವೃದ್ಧಿಗೆ 900 ಕೋಟಿ.ರೂ.
- **ಆಸ್ಪತ್ರೆಗಳ ತುರ್ತು** ಚಿಕಿತ್ಸಾ ವಿಭಾಗ ಮೇಲ್ದರ್ಜೆಗೆ 45 ಕೋಟಿ ರೂ.
- **ಸಿಬ್ಬಂದಿ ನೇಮಕ:** ಆರೋಗ್ಯ ಇಲಾಖೆಯ 2,500 ಖಾಲಿ ಹುದ್ದೆ ಭರ್ತಿ.
- **ಐವಿಎಫ್ ಕೇಂದ್ರ ಸ್ಥಾಪನೆಗೆ ಕ್ರಮ:** ಬೆಂಗಳೂರು ಮತ್ತು ಕಲಬುರಗಿಯಲ್ಲಿ ಐವಿಎಫ್ ಕೇಂದ್ರ ಸ್ಥಾಪನೆಗೆ ತಲಾ ಒಂದು ಕೋಟಿ ಅನುದಾನ.
- **ಮರುನಾಮಕರಣ:** ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯನ್ನು ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯಾಗಿ ಮರುನಾಮಕರಣ.
- **ಮಾದಕ ವ್ಯಸನಿಗಳಿಗೆ ಪುನರ್ವಸತಿ:** ಮಾದಕ ವ್ಯಸನಕ್ಕೆ ಒಳಗಾದ 18 ವರ್ಷದೊಳಗಿನ ಮಕ್ಕಳಿಗಾಗಿ 'ಮಾದಕ ವ್ಯಸನಿಗಳ ಪುನರ್ವಸತಿ ಕೇಂದ್ರ' ಸ್ಥಾಪನೆ.
- **ಆರ್‌ಟಿಇ ವಿಸ್ತರಣೆ:** ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಆರ್‌ಟಿಇ ಅಡಿ 9 ಮತ್ತು 10ನೇ ತರಗತಿ ಮುಂದುವರೆಸಲು ಅವಕಾಶ.
- **ಕ್ರೈಸ್ ಶಾಲೆಗಳಿಗೆ 660 ಕೋಟಿ ರೂ. :** ನಿವೇಶನ ಲಭ್ಯವಿರುವ 30 ಕ್ರೈಸ್ ಶಾಲೆಗಳಿಗೆ 660 ಕೋಟಿ ರೂ. ವೆಚ್ಚದಲ್ಲಿ ಸ್ವಂತ ಕಟ್ಟಡ.
- **ಬೌದ್ಧರಿಗೆ ಅಭಯ:** ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ.
- **ಅನುದಾನದ ನೆರವು:** ಎಸ್ಸಿ, ಎಸ್ಟಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿಗಮಗಳಿಗೆ 1500 ಕೋಟಿ.ರೂ ಅನುದಾನ.
- **ಆದಿವಾಸಿಗಳಿಗೆ ನೆರವು:** ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ ಸ್ಥಾಪನೆ.
- ಆಯೋಗದ ಬಲ: ಪರಿಶಿಷ್ಟ ಪಂಗಡಗಳ ಆಯೋಗ ಸ್ಥಾಪನೆ.
- **ಸಮುದಾಯಗಳಿಗೆ ಅನುದಾನ:** ಜೈನ, ಬೌದ್ಧ, ಸಿಖ್ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ 100 ಕೋಟಿ ರೂ. ಅನುದಾನ.
- **ಕ್ರಿಕೆಟ್ ಸ್ಟೇಡಿಯಂ :** ಕೆಎಚ್‌ಬಿ ಸೂರ್ಯ ಕ್ರೀಡಾ ಗ್ರಾಮ ಹೆಸರಿನಲ್ಲಿ ಆನೇಕಲ್ ತಾಲೂಕಿನಲ್ಲಿ 80ಸಾವಿರ ಆಸನ ವ್ಯವಸ್ಥೆಯ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣ.
- **'ನಮ್ಮ ಮನೆ' ಯೋಜನೆ :** ರಾಜ್ಯದಲ್ಲಿ ನಮ್ಮ ಮನೆ ಯೋಜನೆಯಡಿ ರಿಯಾಯಿತಿ ದರದಲ್ಲಿ 50ಸಾವಿರ ನಿವೇಶನಗಳ ಹಂಚಿಕೆ.
- **ಸ್ಮಾರ್ಟ್ ಅನ್ನವಾಣಿ ಯೋಜನೆ :** ಆಹಾರ ಇಲಾಖೆಯ ಸಹಾಯವಾಣಿಯನ್ನು ಎಐ ನೆರವಿನೊಂದಿಗೆ ಸ್ಮಾರ್ಟ್ ಅನ್ನವಾಣಿಯಾಗಿ ಪರಿವರ್ತನೆ.
- **ಕಾಯಕ ಭಾಗ್ಯ ಯೋಜನೆ :** ಅಸಂಘಟಿತ ಕಾರ್ಮಿಕರಿಗೆ ಆನ್‌ಲೈನ್ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪನೆಗೆ 'ಕಾಯಕ ಭಾಗ್ಯ' ಯೋಜನೆ.
- **ಜಲಜೀವನ್ ಮಿಷನ್‌ಗೆ ರಾಜ್ಯದ ನೆರವು :** ಜಲಜೀವನ್ ಮಿಷನ್ ಯೋಜನೆಗೆ 38,600ಕೋಟಿ ರಾಜ್ಯದ ಪಾಲು, ಪ್ರಸಕ್ತ ಸಾಲಿನಲ್ಲಿ 10,433ಕೋಟಿ ರೂ. ಮೀಸಲು.
- **ಗ್ರಾಪಂಗಳಿಗೆ ನಾಮಕರಣ:** ರಾಜ್ಯದ ಪ್ರತಿಯೊಂದು ಗ್ರಾಪಂಗೆ 'ಮಹಾತ್ಮಗಾಂಧಿ ಗ್ರಾಮ ಪಂಚಾಯ್ತಿ' ಎಂದು ನಾಮಕರಣ.
- **ಅನಂತ ಯೋಜನೆ:** ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸೋಲಾರ್ ಮೈಕ್ರೋ ಗ್ರಿಡ್ ಸ್ಥಾಪಿಸುವ ಅನಂತ ಯೋಜನೆ ಅನುಷ್ಠಾನ.
- ರಾಜಧಾನಿಗೆ ಅನುದಾನ: ಬೆಂಗಳೂರು ಮೂಲಸೌಕರ್ಯಕ್ಕೆ 7,000 ಕೋಟಿ ರೂ. ಅನುದಾನ.

ಗ್ಯಾರಂಟಿಗಳಿಗೆ 1.34ಲಕ್ಷ ಕೋಟಿ ವಿನಿಯೋಗ

ರಾಷ್ಟ್ರ ರಾಜಕೀಯದಲ್ಲೇ ಮೊದಲ ಬಾರಿಗೆ ಗ್ಯಾರಂಟಿಗಳ ಮೂಲಕ ಸಂಚಲನ ಮೂಡಿಸಿದ್ದ ಕಾಂಗ್ರೆಸ್ ಸರ್ಕಾರ, ಈಗ ಯೋಜನೆಗಳ ಯಶಸ್ವೀ ಅನುಷ್ಠಾನದಲ್ಲೂ ಸೈ ಎನಿಸಿಕೊಂಡಿದೆ. ಜತೆಗೆ, ಆರಂಭದಲ್ಲಿ ವಿರೋಧಿಸಿದ್ದ ಕೇಂದ್ರ ಹಾಗೂ ಇತರೆ ರಾಜ್ಯ ಸರ್ಕಾರಗಳು ಸಹ ಯೋಜನೆಯನ್ನು ತಮ್ಮಲ್ಲೂ ಜಾರಿಗೊಳಿಸುತ್ತಿವೆ. ರಾಜ್ಯದಲ್ಲಿ ಈವರೆಗಿನ ಗ್ಯಾರಂಟಿ ಅನುಷ್ಠಾನದ ಇಣುಕುನೋಟ ಇಲ್ಲಿದೆ.

ಬೆಂಗಳೂರು: ಕರ್ನಾಟಕದ ಇತಿಹಾಸದಲ್ಲಿ ಮಾತ್ರವಲ್ಲದೆ ಇಡೀ ದೇಶದ ಕಲ್ಯಾಣ ಕಾರ್ಯಕ್ರಮಗಳ ಇತಿಹಾಸದಲ್ಲೇ ಅತ್ಯಂತ ಧೀಮಂತ ಹಾಗೂ ಬೃಹತ್ ಸಾಮಾಜಿಕ ಭದ್ರತಾ ಯೋಜನೆಗಳಾಗಿ ಹೊರಹೊಮ್ಮಿರುವ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನವು ಈಗ ಅಭೂತಪೂರ್ವ ಮೈಲಿಗಲ್ಲನ್ನು ತಲುಪಿದೆ. ಸರ್ಕಾರದ ಇತ್ತೀಚಿನ ಸಮಗ್ರ ಅಂಕಿ-ಅಂಶಗಳ ಪ್ರಕಾರ, ಈ ಐದು ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಇದುವರೆಗೆ ಬರೋಬ್ಬರಿ 1,34,688ಕೋಟಿ ರೂಪಾಯಿಗಳನ್ನು ನೇರವಾಗಿ ಜನಸಾಮಾನ್ಯರ ಕಲ್ಯಾಣಕ್ಕಾಗಿ ವಿನಿಯೋಗಿಸಿದೆ. ಕೇವಲ ಕಾಗದದ ಮೇಲಿನ ಘೋಷಣೆಗಳಾಗದೆ, ಅತ್ಯಂತ ಸುಧಾರಿತ ತಂತ್ರಜ್ಞಾನ ಹಾಗೂ ನೇರ ನಗದು ವರ್ಗಾವಣೆ (ಡಿಬಿಟಿ) ವ್ಯವಸ್ಥೆಯ ಮೂಲಕ ಅರ್ಹ ಫಲಾನುಭವಿಗಳ ಕೈಸೇರಿರುವ ಈ ಹಣವು ರಾಜ್ಯದ ಆರ್ಥಿಕತೆಯ ಚಲನಶೀಲತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಈ ಬೃಹತ್ ಆರ್ಥಿಕ ಪ್ಯಾಕೇಜ್ ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡ ಹಾಗೂ ಮಧ್ಯಮ ವರ್ಗದ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದ್ದು, ಕಲ್ಯಾಣ ರಾಜ್ಯದ ಪರಿಕಲ್ಪನೆಗೆ ಹೊಸ ಭಾಷ್ಯ ಬರೆದಿದೆ.

ಗೃಹಲಕ್ಷ್ಮಿ

01

ಮಹಿಳಾ ಸಬಲೀಕರಣದ ಬೃಹತ್ ಆರ್ಥಿಕ ಕ್ರಾಂತಿ

ರಾಜ್ಯದ ಕುಟುಂಬಗಳ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು 2,000 ರೂಪಾಯಿಗಳ ಆರ್ಥಿಕ ನೆರವು ನೀಡುವ 'ಗೃಹ ಲಕ್ಷ್ಮಿ' ಯೋಜನೆಯು ಇಡೀ ದೇಶದಲ್ಲೇ ಅತ್ಯಂತ ದೊಡ್ಡ ಮಹಿಳಾ ಕೇಂದ್ರಿತ ನಗದು ವರ್ಗಾವಣೆ ಯೋಜನೆಯಾಗಿ ಗುರುತಿಸಿಕೊಂಡಿದೆ. ಈ ಯೋಜನೆಯಡಿ ರಾಜ್ಯಾದ್ಯಂತ ಒಟ್ಟು 1.24 ಕೋಟಿ ಮಹಿಳಾ ಫಲಾನುಭವಿಗಳನ್ನು ಗುರುತಿಸಿ, ಅವರ ಖಾತೆಗಳಿಗೆ ನೇರವಾಗಿ ಹಣವನ್ನು ತಲುಪಿಸಲಾಗಿದೆ. ಈ ಯೋಜನೆಯೊಂದಕ್ಕೇ ಸರ್ಕಾರವು ಇದುವರೆಗೆ ಮಾಡಿರುವ ಒಟ್ಟು ಫಲಾನುಭವಿವಾರು ವೆಚ್ಚವು 69,783 ಕೋಟಿ ರೂಪಾಯಿಗಳಾಗಿದೆ. ಐದೂ ಗ್ಯಾರಂಟಿ ಯೋಜನೆಗಳ ಒಟ್ಟು ವೆಚ್ಚದಲ್ಲಿ ಸಿಂಹಪಾಲು ಈ ಯೋಜನೆಗೇ ಮುಡಿಪಾಗಿರುವುದು ಮಹಿಳೆಯರ ಆರ್ಥಿಕ ಸ್ವಾತಂತ್ರ್ಯಕ್ಕೆ ಸರ್ಕಾರ ನೀಡಿರುವ ಆದ್ಯತೆಯನ್ನು ಬಿಂಬಿಸುತ್ತದೆ.

ಕತ್ತಲನ್ನು ಕಳೆದು, ಉಚಿತ ಬೆಳಕು ನೀಡಿದ ಆಸರೆ!

ಗೃಹ ಜ್ಯೋತಿ

02

ರಾಜ್ಯದ ಪ್ರತಿಯೊಂದು ಮನೆಗೂ ನಿಗದಿತ ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ಜನಸಾಮಾನ್ಯರ ಮಾಸಿಕ ಬಜೆಟ್‌ಗೆ ಭಾರಿ ನಿರಾಳತೆ ತಂದಿಟ್ಟಿರುವ ಯೋಜನೆ 'ಗೃಹ ಜ್ಯೋತಿ'. ಏಪ್ರಿಲ್ 2026ರ ಅಂತ್ಯದವರೆಗೆ ರಾಜ್ಯದ ಒಟ್ಟು 1.64 ಕೋಟಿ ಗೃಹ ಬಳಕೆಯ ವಿದ್ಯುತ್ ಗ್ರಾಹಕರು ಈ ಯೋಜನೆಯ ನೇರ ಲಾಭವನ್ನು ಪಡೆಯುತ್ತಿದ್ದಾರೆ. ಮಧ್ಯಮ ಮತ್ತು ಕೆಳವರ್ಗದ ಕುಟುಂಬಗಳ ಜೀವನಮಟ್ಟವನ್ನು ಸುಧಾರಿಸುವಲ್ಲಿ ಮಹತ್ತರ ಪಾತ್ರ ವಹಿಸಿರುವ ಈ ಯೋಜನೆಗಾಗಿ ರಾಜ್ಯ ಸರ್ಕಾರವು ವಿದ್ಯುತ್ ಸರಬರಾಜು ಕಂಪನಿಗಳಿಗೆ ಇದುವರೆಗೆ ಒಟ್ಟು 26,115 ಕೋಟಿ ರೂಪಾಯಿಗಳ ಸಬ್ಸಿಡಿ ವೆಚ್ಚವನ್ನು ಭರಿಸಿದೆ.

ವಿದ್ಯುತ್ ಬಿಲ್‌ಗಳ ಆತಂಕದಿಂದ ಮುಕ್ತರಾಗಿರುವ ಕೋಟ್ಯಂತರ ಕುಟುಂಬಗಳು, ಆ ಮೂಲಕ ಉಳಿತಾಯವಾಗುವ ಹಣವನ್ನು ತಮ್ಮ ಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕಾಹಾರಕ್ಕಾಗಿ ವಿನಿಯೋಗಿಸುತ್ತಿರುವುದು ಈ ಯೋಜನೆಯ ಅತ್ಯಂತ ದೊಡ್ಡ ಸಾಮಾಜಿಕ ಯಶಸ್ಸಾಗಿದೆ. ಡಿಜಿಟಲ್ ನೋಂದಣಿ ಮತ್ತು ಸ್ವಯಂಚಾಲಿತ ಬಿಲ್ಲಿಂಗ್ ವ್ಯವಸ್ಥೆಯ ಮೂಲಕ ಅತ್ಯಂತ ಪಾರದರ್ಶಕವಾಗಿ ಅನುಷ್ಠಾನಗೊಳ್ಳುತ್ತಿರುವ ಗೃಹ ಜ್ಯೋತಿಯು, ಇಂಧನ ವಲಯದಲ್ಲಿ ಗ್ರಾಹಕರ ದತ್ತಾಂಶ ನಿರ್ವಹಣೆಯನ್ನು ಸಹ ಸುಧಾರಿಸಿದೆ. ಮುಂಬರುವ ದಿನಗಳಲ್ಲೂ ಈ ಯೋಜನೆಯು ಯಾವುದೇ ತಡೆಗಳಿಲ್ಲದೆ ಮುಂದುವರಿಯಲಿದ್ದು, ಕೈಗಾರಿಕಾ ವಲಯದಷ್ಟೇ ಪ್ರಾಮುಖ್ಯತೆಯನ್ನು ಗೃಹ ಬಳಕೆಯ ಇಂಧನ ಭದ್ರತೆಗೂ ನೀಡಲಾಗುತ್ತಿದೆ ಎಂಬುದನ್ನು ಈ ಅಂಕಿ-ಅಂಶಗಳು ಸಾಬೀತುಪಡಿಸುತ್ತವೆ.

ಮಹಿಳೆಯರ ಮುಕ್ತ ಸಂಚಾರದ ಹೊಸ ಭಾಷ್ಯ!

ಶಕ್ತಿ

03

ರಾಜ್ಯ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಿದ 'ಶಕ್ತಿ' ಯೋಜನೆಯು ಸಮಾಜದಲ್ಲಿ ಅಭೂತಪೂರ್ವ ಚಲನಶೀಲತೆಯನ್ನು ಸೃಷ್ಟಿಸಿದೆ. ಮಹಿಳೆಯರು ಶಿಕ್ಷಣ, ಉದ್ಯೋಗ, ಧಾರ್ಮಿಕ ಪ್ರವಾಸ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಈ ಯೋಜನೆ ರಾಜಮಾರ್ಗವನ್ನು ನಿರ್ಮಿಸಿಕೊಡುವ ಮೂಲಕ ಹೊಸ ಭಾಷ್ಯ ಬರೆಯುತ್ತಿದೆ. ಏಪ್ರಿಲ್ ಅಂತ್ಯಕ್ಕೆ ಯೋಜನೆಯು ಆರಂಭವಾದಾಗಿನಿಂದ ಇದುವರೆಗೆ ಮಹಿಳಾ ಪ್ರಯಾಣಿಕರು ಬರೋಬ್ಬರಿ 726 ಕೋಟಿ ಬಾರಿ ಉಚಿತವಾಗಿ ಪ್ರಯಾಣ ಮಾಡಿದ್ದಾರೆ. ಈ ಅಗಾಧ ಪ್ರಮಾಣದ ಪ್ರಯಾಣದ ವೆಚ್ಚವನ್ನು ಸಾರಿಗೆ ಸಂಸ್ಥೆಗಳಿಗೆ ಮರುಪಾವತಿಸಲು ಸರ್ಕಾರವು 18,943 ಕೋಟಿ ರೂಪಾಯಿಗಳನ್ನು ವ್ಯಯಿಸಿದೆ.

ಕೆಎಸ್ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯೂಕೆಆರ್‌ಟಿಸಿ ಮತ್ತು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಲು ಮತ್ತು ಸಾರ್ವಜನಿಕ ಸಾರಿಗೆಯನ್ನು ಜನಪ್ರಿಯಗೊಳಿಸಲು ಶಕ್ತಿ ಯೋಜನೆಯು ಪರೋಕ್ಷವಾಗಿ ಸಹಕಾರಿಯಾಗಿದೆ. ನಿರಂತರವಾಗಿ ಹೆಚ್ಚುತ್ತಿರುವ ಮಹಿಳಾ ಪ್ರಯಾಣಿಕರ ದಟ್ಟಣೆಯನ್ನು ನಿಭಾಯಿಸಲು ಸಾರಿಗೆ ಸಂಸ್ಥೆಗಳು ಹೊಸ ಬಸ್‌ಗಳ ಸೇರ್ಪಡೆ ಹಾಗೂ ಹೆಚ್ಚುವರಿ ಸಿಬ್ಬಂದಿಗಳ ನೇಮಕಾತಿಗೂ ಮುಂದಾಗಿವೆ. ಈ ಯೋಜನೆಯು ಕೇವಲ ಉಚಿತ ಪ್ರಯಾಣವಾಗಿ ಉಳಿಯದೆ, ಮಹಿಳೆಯರು ಮನೆಯ ನಾಲ್ಕು ಗೋಡೆಗಳಿಂದ ಹೊರಬಂದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮತ್ತು ಆರ್ಥಿಕ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರೇರಣೆಯಾಗಿದೆ. ದುಡಿಯುವ ಹೆಣ್ಣುಮಕ್ಕಳಿಗೆ ಈ ಯೋಜನೆಯು ದಿನನಿತ್ಯದ ಪ್ರಯಾಣದ ವೆಚ್ಚವನ್ನು ಉಳಿಸಿಕೊಡುವ ಮೂಲಕ ದೊಡ್ಡ ಆಸರೆಯಾಗಿದೆ.

ಹಸಿವು ಮುಕ್ತ ರಾಜ್ಯಕ್ಕಾಗಿ ನಗದು ಮತ್ತು ಆಹಾರ ಧಾನ್ಯಗಳ ಸಮನ್ವಯ

ಅನ್ನಭಾಗ್ಯ

04

ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳ ಆಹಾರ ಭದ್ರತೆಯನ್ನು ಖಾತರಿಪಡಿಸುವ 'ಅನ್ನ ಭಾಗ್ಯ' ಯೋಜನೆಯು ಎರಡು ವಿಭಿನ್ನ ಹಂತಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರದ ಕೋಟಾದ ಜೊತೆಗೆ ಹೆಚ್ಚುವರಿ ಆಹಾರ ಧಾನ್ಯವನ್ನು ನೀಡುವ ಬದ್ಧತೆಗೆ ಪೂರಕವಾಗಿ, ಧಾನ್ಯದ ಲಭ್ಯತೆಯ ಕೊರತೆಯ ಸಂದರ್ಭದಲ್ಲಿ ಸರ್ಕಾರವು ಜಾರಿಗೆ ತಂದ ನೇರ ನಗದು ವರ್ಗಾವಣೆ (ಡಿಬಿಟಿ) ವ್ಯವಸ್ಥೆ ಅತ್ಯಂತ ಜನಪ್ರಿಯವಾಗಿದೆ. ಡಿಸೆಂಬರ್ 2024ರವರೆಗಿನ ಅಂಕಿ-ಅಂಶಗಳ ಪ್ರಕಾರ, ಒಟ್ಟು 72.02 ಕೋಟಿ (ಫಲಾನುಭವಿವಾರು ಮಾಸಿಕ ಲೆಕ್ಕಾಚಾರದ ಒಟ್ಟು ಮೊತ್ತ) ಫಲಾನುಭವಿಗಳಿಗೆ ನಗದು ರೂಪದಲ್ಲಿ ನೆರವು ನೀಡಲಾಗಿದ್ದು, ಇದಕ್ಕಾಗಿ ಬರೋಬ್ಬರಿ 11,821.17 ಕೋಟಿ ರೂಪಾಯಿಗಳನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ. ಇದರೊಂದಿಗೆ, ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಲಭ್ಯತೆಯನ್ನು ಖಾತರಿಪಡಿಸಿಕೊಂಡ ನಂತರ, ಫೆಬ್ರವರಿ 2025 ರಿಂದ ಏಪ್ರಿಲ್ 2026ರವರೆಗಿನ ಅವಧಿಯಲ್ಲಿ ಬೃಹತ್ ಪ್ರಮಾಣದ ಭೌತಿಕ ಆಹಾರ ಧಾನ್ಯಗಳನ್ನು ವಿತರಿಸಲಾಗಿದೆ. ಈ ಅವಧಿಯಲ್ಲಿ ಒಟ್ಟು 30.88 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ರಾಜ್ಯದ ಜನತೆಗೆ ತಲುಪಿಸಲಾಗಿದೆ. ಈ ಬೃಹತ್ ಆಹಾರ ಧಾನ್ಯ ವಿತರಣೆಗಾಗಿ ಸರ್ಕಾರವು ಭರಿಸಿರುವ ಒಟ್ಟು ವೆಚ್ಚ 7,076.04 ಕೋಟಿ ರೂಪಾಯಿಗಳಾಗಿದೆ. ಹೀಗೆ, ನೇರ ನಗದು ವರ್ಗಾವಣೆಯ 11,821.17 ಕೋಟಿ ರೂ. ಹಾಗೂ ಆಹಾರ ಧಾನ್ಯ ವಿತರಣೆಯ 7,076.04 ಕೋಟಿ ರೂ. ಎರಡನ್ನೂ ಒಟ್ಟುಗೂಡಿಸಿದಾಗ, ಅನ್ನ ಭಾಗ್ಯ ಯೋಜನೆಯ ಒಟ್ಟು ವೆಚ್ಚವು 18,897.21 ಕೋಟಿ ರೂಪಾಯಿಗಳಿಗೆ ತಲುಪುತ್ತದೆ. ಈ ಯೋಜನೆಯು ರಾಜ್ಯದಲ್ಲಿ ಪೌಷ್ಟಿಕಾಂಶದ ಮಟ್ಟವನ್ನು ಹೆಚ್ಚಿಸಲು ಮತ್ತು ಯಾವುದೇ ಕುಟುಂಬವೂ ಹಸಿವಿನಿಂದ ಮಲಗದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಪಡಿತರ ವ್ಯವಸ್ಥೆಯಲ್ಲಿ ತಂತ್ರಜ್ಞಾನದ ಅಳವಡಿಕೆಯಿಂದಾಗಿ ಸೋರಿಕೆಯನ್ನು ತಡೆಗಟ್ಟಲಾಗಿದ್ದು, ಅರ್ಹರಿಗೆ ನಿಖರವಾಗಿ ಸೌಲಭ್ಯ ತಲುಪುತ್ತಿದೆ.

ನಿರುದ್ಯೋಗಿ ಯುವಜನತೆಗೆ ಆಸರೆಯಾದ ಆರ್ಥಿಕ ಹಸ್ತ!

ಯುವನಿಧಿ

05

ರಾಜ್ಯದ ಪದವಿ ಹಾಗೂ ಡಿಪ್ಲೊಮಾ ಮುಗಿಸಿ ಉದ್ಯೋಗದ ಹುಡುಕಾಟದಲ್ಲಿರುವ ಯುವ ಸಮೂಹಕ್ಕೆ ಮಾನಸಿಕ ಮತ್ತು ಆರ್ಥಿಕ ಧೈರ್ಯ ತುಂಬಲು ಜಾರಿಗೆ ತರಲಾದ 'ಯುವ ನಿಧಿ' ಯೋಜನೆಯು ನಿರಂತರವಾಗಿ ಮುನ್ನಡೆಯುತ್ತಿದೆ. ಡಿಸೆಂಬರ್ 2023ರಿಂದ ಪ್ರಾರಂಭವಾಗಿ ಮಾರ್ಚ್ 2026ರವರೆಗಿನ ಅವಧಿಯಲ್ಲಿ ರಾಜ್ಯದ ಒಟ್ಟು 3.38 ಲಕ್ಷ ಅರ್ಹ ಯುವ ನಿರುದ್ಯೋಗಿ ಪದವೀಧರರು ಮತ್ತು ಡಿಪ್ಲೊಮಾ ಹೊಂದಿರುವವರು ಈ ಯೋಜನೆಯಡಿ ನೋಂದಾಯಿಸಿಕೊಂಡು ಭತ್ಯೆ ಪಡೆಯುತ್ತಿದ್ದಾರೆ. ಈ ಅವಧಿಯಲ್ಲಿ ಯುವಜನರ ಉದ್ಯೋಗ ಆಕಾಂಕ್ಷೆಗಳಿಗೆ ಪೂರಕವಾಗಿ ಒಟ್ಟು 950 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಉಪಾಹಾರದ ನೆಪ: ಮುಖ್ಯಮಂತ್ರಿ ಆಪ್ತ ಸಚಿವರ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನಲ್ಲಿ ಮಂಗಳವಾರ ನಡೆದ ಸರ್ಕಾರದ ಮೂರು ವರ್ಷಗಳ ಸಾಧನಾ ಸಮಾವೇಶಕ್ಕೆ ತೆರಳುವ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಪ್ತರಾದ ಸಚಿವರು ಉಪಾಹಾರ ಸೇವಿಸುವ ನೆಪದಲ್ಲಿ ಒಂದೆಡೆ ಸೇರಿ ಚರ್ಚೆ ನಡೆಸಿರುವುದು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಆಂತರಿಕ ವಲಯದಲ್ಲಿ ನಾನಾ ಚರ್ಚೆಗೆ ಗ್ರಾಸವಾಗಿದೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಸರ್ಕಾರಿ ನಿವಾಸದಲ್ಲಿ ಸಚಿವರಾದ ಎಚ್.ಸಿ. ಮಹದೇವಪ್ಪ, ಬಿ.ಝಡ್. ಜಮೀರ್ ಅಹಮದ್ ಖಾನ್, ಕೆ. ವೆಂಕಟೇಶ್ ಒಟ್ಟಿಗೆ ಉಪಾಹಾರ ಸೇವಿಸುತ್ತಾ ಕೆಲಕಾಲ ಚರ್ಚೆ ನಡೆಸಿದರು. ಬಳಿಕ ಜೊತೆಯಾಗಿಯೇ ಸಮಾವೇಶಕ್ಕೆ ತೆರಳಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಮತ್ತು ಸಂಪುಟ ಪುನರ್ ರಚನೆ ವಿಚಾರ ಚರ್ಚೆಯಲ್ಲಿದೆ. ಈ ವೇಳೆ ತಮ್ಮ ನಡೆ ಏನಿರಬೇಕು ಎಂಬ ಬಗ್ಗೆ ಸಚಿವರು ವಿಚಾರ ವಿನಿಮಯ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಸಭೆಯ ಬಗ್ಗೆ ಪ್ರತಿಕ್ರಿಯಿಸಿದ ಜಮೀರ್ ಅಹಮದ್ ಖಾನ್, 'ನಾವು ಗೋಪ್ಯ ಸಭೆ ನಡೆಸಿಲ್ಲ. ಬದಲಾಗಿ, ಜೊತೆಯಲ್ಲಿ ತಿಂಡಿ ತಿಂದಿದ್ದೇವೆ. ಸಾಧನಾ ಸಮಾವೇಶಕ್ಕೆ ಜೊತೆಯಲ್ಲಿ ಹೋಗಬೇಕು ಎಂಬ ಉದ್ದೇಶದಿಂದ ಒಂದು ಕಡೆ ಸೇರಿದ್ದೇವೆ. ಎಲ್ಲಿಯಾದರೂ ಒಂದು ಕಡೆ ಸೇರಬೇಕಲ್ಲವೆ' ಎಂದು ಹೇಳಿದರು.

ಇದೇ ವಿಚಾರವಾಗಿ ಮಾತನಾಡಿದ ಸತೀಶ ಜಾರಕಿಹೊಳಿ, 'ಕನ್ನಡ ಶಾಲೆ ಹುಡುಗರು ಒಟ್ಟಾಗಿ ಸೇರಿ ಪ್ರವಾಸಕ್ಕೆ ಹೋಗುತ್ತಾರೆಯಲ್ಲವೇ, ಅದೇ ರೀತಿ ನಾವು ತುಮಕೂರಿಗೆ ಹೋಗಲು ಸೇರಿದ್ದೆವು' ಎಂದರು.

'ಇದೇ ರೀತಿ ದೆಹಲಿಗೆ ಪ್ರವಾಸ ಹೋಗುವ ವಿಚಾರ ಇದೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ದೆಹಲಿಗೆ ನಾವು ಹೋಗುವುದಿಲ್ಲ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರನ್ನು ಹೈಕಮಾಂಡ್ ನಾಯಕರು ಕರೆಯಬಹುದು, ನಮ್ಮನ್ನಲ್ಲ. ರಾಹುಲ್ ಗಾಂಧಿ ಒಂದು ವಾರದ ಬಳಿಕ ದೆಹಲಿಗೆ ಬರುತ್ತಾರೆ. ನಂತರ ಅವರು ರಾಜ್ಯದ ನಾಯಕರನ್ನು ಅಲ್ಲಿಗೆ ಕರೆದು ಚರ್ಚೆ ನಡೆಸಬಹುದು' ಎಂದು ಹೇಳಿದರು.

ಜಾರ್ಜ್ ನಿವಾಸದಲ್ಲಿ 'ಕೈ' ನಾಯಕರ ಭೋಜನ


ನಾಯಕತ್ವ ಬದಲಾವಣೆ, ಸಂಪುಟ ಪುನರ್ ರಚನೆಯ ಚರ್ಚೆ ನಡುವೆಯೇ ಇಂಧನ ಸಚಿವ ಕೆ.ಜೆ. ಜಾರ್ಜ್ ಅವರ ನಿವಾಸದಲ್ಲಿ 'ಕೈ' ನಾಯಕರು ಸೋಮವಾರ ಮಧ್ಯಾಹ್ನ ಭೋಜನ ಸವಿಯುವ ನೆಪದಲ್ಲಿ ಒಟ್ಟಾಗಿ ವಿಚಾರವಿನಿಮಯ ನಡೆಸಿರುವುದು ಸಾಕಷ್ಟು ಕುತೂಹಲ ಮೂಡಿಸಿದೆ.

ಸೋಮವಾರ ಬೆಳಿಗ್ಗೆ ಕೇರಳಂ ಮುಖ್ಯಮಂತ್ರಿಯಾಗಿ ವಿ.ಡಿ. ಸತೀಶನ್ ಅವರ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗಿಯಾಗಿ ಬೆಂಗಳೂರಿಗೆ ವಾಪಸಾಗಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವ ಕೆ.ಎಚ್. ಮುನಿಯಪ್ಪ ಮತ್ತಿತರರು ಜಾರ್ಜ್ ಅವರ ನಿವಾಸಕ್ಕೆ ತೆರಳಿದ್ದರು.

'ತಿರುವನಂತಪುರದಿಂದ ವಿಮಾನ ಮೂಲಕ ನೇರವಾಗಿ ಬೆಂಗಳೂರಿಗೆ ಬಂದ ನಾಯಕರು, ಜಾರ್ಜ್ ಆಹ್ವಾನ ನೀಡಿದ್ದರಿಂದ ಮಧ್ಯಾಹ್ನದ ಊಟಕ್ಕೆ ಅವರ ಮನೆಗೆ ತೆರಳಿದ್ದರು. ಅದನ್ನು ಹೊರತುಪಡಿಸಿ ರಾಜಕೀಯ ವಿಚಾರ ಚರ್ಚೆ ಆಗಿಲ್ಲ' ಎಂದು ಮೂಲಗಳು ಹೇಳಿವೆ.

ಸುರಂಗ ರಸ್ತೆ: ಅದಾನಿ ಸಂಸ್ಥೆ ಸರ್ವೆ

ಹೆಬ್ಬಾಳ–ಸಿಲ್ಕ್‌ಬೋರ್ಡ್ ನಡುವಿನ 16.75 ಕಿ.ಮೀ. ಉದ್ದದ ರಸ್ತೆ


ಸುರಂಗ ರಸ್ತೆ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ದೇಶಿತ ಉತ್ತರ–ದಕ್ಷಿಣ ಕಾರಿಡಾರ್ ಸುರಂಗ ರಸ್ತೆ ಯೋಜನೆಯ ಸ್ಥಳಗಳಲ್ಲಿ ಅದಾನಿ ಗ್ರೂಪ್‌ನ ಸಿಬ್ಬಂದಿ, ಸರ್ವೆ ಕಾರ್ಯವನ್ನು ಮುಂದುವರಿಸಿದ್ದಾರೆ.

ಹೆಬ್ಬಾಳ–ಸಿಲ್ಕ್‌ಬೋರ್ಡ್ ನಡುವಿನ 16.75 ಕಿ.ಮೀ. ಉದ್ದದ ಸುರಂಗ ರಸ್ತೆಗೆ ಕರೆಯಲಾಗಿದ್ದ ಟೆಂಡರ್‌ನಲ್ಲಿ ಅತ್ಯಂತ ಕಡಿಮೆ ಬಿಡ್ ಸಲ್ಲಿಸಿರುವ ಅದಾನಿ ಗ್ರೂಪ್ ಸಂಸ್ಥೆ, ಯೋಜನೆಯ ಸ್ಥಳಗಳಲ್ಲಿ ಸರ್ವೆ, ಮಣ್ಣು ಪರೀಕ್ಷೆ ಸೇರಿದಂತೆ ಹಲವು ತಪಾಸಣೆ ನಡೆಸುವುದನ್ನು ಮುಂದುವರಿಸಿದೆ.

ಉತ್ತರ–ದಕ್ಷಿಣ ಕಾರಿಡಾರ್ ಸುರಂಗ ರಸ್ತೆ ಯೋಜನೆಗೆ ಅಂದಾಜು ₹17,698 ಕೋಟಿ ವೆಚ್ಚಕ್ಕೆ ಸರ್ಕಾರ ಅನುಮೋದನೆ ನೀಡಿದೆ. ಆದರೆ, ಟೆಂಡರ್‌ನಲ್ಲಿ ಇದಕ್ಕೂ ಮೀರಿದ ಬಿಡ್ ದಾಖಲಾಗಿದೆ. ಅತ್ಯಂತ ಕಡಿಮೆ ಬಿಡ್ ಸಲ್ಲಿಸಿರುವ ಅದಾನಿ ಗ್ರೂಪ್ ₹22,267 ಕೋಟಿಯನ್ನು (ಶೇ 25.87) ನಮೂದಿಸಿದೆ. ಅದಾನಿ ಗ್ರೂಪ್ ಹಾಗೂ ಹೈದರಾಬಾದ್‌ನ ವಿಶ್ವ ಸಮುದ್ರ ಎಂಜಿನಿಯರಿಂಗ್ ಲಿಮಿಟೆಡ್ ಬಿಡ್‌ನಲ್ಲಿ ಅರ್ಹತೆ ಗಳಿಸಿವೆ. ದಿಲೀಪ್ ಬಿಲ್ಡ್‌ಕಾನ್ ಹಾಗೂ ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (ಆರ್‌ವಿಎನ್‌ಎಲ್) ತಾಂತ್ರಿಕ ಅರ್ಹತೆಯಲ್ಲಿ ವಿಫಲವಾಗಿವೆ.

'ಟೆಂಡರ್ ಆಹ್ವಾನದ ನಂತರ ಬಿಡ್ ಸಲ್ಲಿಸಿದ ನಾಲ್ಕು ಸಂಸ್ಥೆಗಳು ಸುರಂಗ ರಸ್ತೆ ಯೋಜನೆಗೆ ಸಂಬಂಧಿಸಿದಂತೆ, ಸರ್ವೆ ಹಾಗೂ ತಪಾಸಣೆ ಕಾರ್ಯಗಳನ್ನು ಕೈಗೊಂಡಿದ್ದವು. ಎರಡು ಸಂಸ್ಥೆಗಳು ಮಾತ್ರ ಅಂತಿಮ ಸುತ್ತಿನಲ್ಲಿ ಉಳಿದ ನಂತರ, ಎರಡು ಸಂಸ್ಥೆಗಳು ಸರ್ವೆ ಕೈಬಿಟ್ಟವು. ವಿಶ್ವಸಮುದ್ರ ಸಂಸ್ಥೆಯೂ ಸರ್ವೆ–ತಪಾಸಣೆಗಳನ್ನು ನಡೆಸಿದೆ. ಆದರೆ, ಅದಾನಿ ಸಂಸ್ಥೆ ಆರಂಭದಿಂದಲೂ ಸರ್ವೆ–ತಪಾಸಣೆ ಕಾರ್ಯವನ್ನು ಈಗಲೂ ಮುಂದುವರಿಸಿದೆ. ಇದಕ್ಕೆ ಟೆಂಡರ್‌ನಲ್ಲೇ ಅವಕಾಶವಿದೆ. ಆದರೆ, ಅವರೊಂದಿಗೆ ಯಾವುದೇ ರೀತಿಯ ಒಪ್ಪಂದ ಆಗಿಲ್ಲ. ಇವೆಲ್ಲ ಪ್ರಕ್ರಿಯೆಗಳು ಸರ್ಕಾರದ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ' ಎಂದು ಸುರಂಗ ರಸ್ತೆ ಅನುಷ್ಠಾನದ ಜವಾಬ್ದಾರಿ ಹೊಂದಿರುವ ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ಮಾಹಿತಿ ನೀಡಿದರು.

'ಸುರಂಗ ರಸ್ತೆ ಅತಿದೊಡ್ಡ ನಿರೀಕ್ಷೆಯ ಯೋಜನೆಯಾಗಿದ್ದು, ಇದರ ಬಗ್ಗೆ ಪರೀಕ್ಷೆ, ವಿನ್ಯಾಸ ಸೇರಿದಂತೆ ಹಲವು ರೀತಿಯ ಪ್ರಕ್ರಿಯೆ, ವಿವರಣೆ, ದಾಖಲಾತಿಗಳನ್ನು ಸಂಗ್ರಹಿಸಬೇಕಾಗಿರುತ್ತದೆ. ಸರ್ವೆ–ತಪಾಸಣೆಗಳೆಲ್ಲವೂ ಟೆಂಡರ್ ಪ್ರಕ್ರಿಯೆಯ ಭಾಗ' ಎಂದರು.

ನಿಯಮದಂತೆ ಸರ್ವೆ: ಪ್ರಹ್ಲಾದ್

ಟೆಂಡರ್‌ನಲ್ಲಿರುವ ನಿಯಮಗಳಂತೆ, ಬಿಡ್ ಸಲ್ಲಿಸಿದವರು ಯೋಜನೆಯ ಬಗ್ಗೆ ಸರ್ವೆ ಸೇರಿದಂತೆ ಪರೀಕ್ಷೆಗಳನ್ನು ನಡೆಸಬಹುದಾಗಿದೆ. ಅದರಂತೆ, ಸುರಂಗ ರಸ್ತೆಗೆ ಬಿಡ್ ಸಲ್ಲಿಸಿದ ನಾಲ್ಕು ಸಂಸ್ಥೆಗಳು ಸರ್ವೆ ನಡೆಸಿವೆ. ಅದಾನಿ ಗ್ರೂಪ್‌ನವರು ಸರ್ವೆ ಕಾರ್ಯವನ್ನು ಆರಂಭದಿಂದ ಈವರೆಗೂ ಮುಂದುವರಿಸಿದ್ದಾರೆ ಅಷ್ಟೇ' ಎಂದು ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಕೆಎಸ್‌ಡಿಎಲ್‌ಗೆ 'ಝಿಪ್ಪ್ರೋ' ಪುರಸ್ಕಾರ

ಬೆಂಗಳೂರು: ಮೈಸೂರು ಸ್ಯಾಂಡಲ್ ಸೋಪ್ ವಹಿವಾಟು ಉಪಕ್ರಮಕ್ಕಾಗಿ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್‌ಡಿಎಲ್) ಝಿಪ್ಪ್ರೋ ಕಂಪನಿಯ 'ಪೂರೈಕೆ ಸರಪಳಿ ಉತ್ಕೃಷ್ಟತಾ ಪುರಸ್ಕಾರ'ಕ್ಕೆ ಪಾತ್ರವಾಗಿದೆ.

ಸಂಸ್ಥೆಯ ಸಾಧನೆಯನ್ನು ಅಭಿನಂದಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, 'ಮೂರು ವರ್ಷಗಳ ಹಿಂದೆ ಕೆಎಸ್‌ಡಿಎಲ್ ಇ-ಕಾಮರ್ಸ್ ವಹಿವಾಟು ₹28 ಕೋಟಿ ಇತ್ತು. ದಿಟ್ಟ ಮಾರುಕಟ್ಟೆ ವಿಸ್ತರಣೆ ನಿರ್ಧಾರದ ಫಲವಾಗಿ ಈಗ ₹122 ಕೋಟಿ ತಲುಪಿದೆ. ಸಂಸ್ಥೆಯು ತನ್ನ ಪರಂಪರೆ ಮತ್ತು ನಂಬಿಕೆಗಳನ್ನು ಬಿಟ್ಟುಕೊಡದೆ, ಇ-ಕಾಮರ್ಸ್ ಮತ್ತು ಕ್ವಿಕ್ ಕಾಮರ್ಸ್ ವಹಿವಾಟು ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಯಶಸ್ಸು ಸಾಧಿಸಿದ್ದಕ್ಕೆ ಪ್ರತಿಫಲವಾಗಿ ಪ್ರಶಸ್ತಿ ಲಭಿಸಿದೆ' ಎಂದಿದ್ದಾರೆ.

ವೈದ್ಯಕೀಯ: ಅಧಿಕ ಶುಲ್ಕ ಸಂಗ್ರಹಿಸಿದರೆ ಕ್ರಮ

ಬೆಂಗಳೂರು: ರಾಜ್ಯದ ವೈದ್ಯಕೀಯ ಕಾಲೇಜುಗಳು ನಿಗದಿಗಿಂತ ಅಧಿಕ ಶುಲ್ಕ ಸಂಗ್ರಹಿಸಿದ್ದರೆ ವಿದ್ಯಾರ್ಥಿಗಳು ದೂರು ನೀಡಬೇಕು ಎಂದು 'ಪ್ರವೇಶ ಮೇಲ್ವಿಚಾರಣಾ ಸಮಿತಿ' ಕೋರಿದೆ.

ಸರ್ಕಾರ ಹಾಗೂ ಶಿಕ್ಷಣ ಸಮಸ್ಥೆಗಳ ನಡುವಿನ ಒಪ್ಪಂದದಂತೆ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಖಾತೆಗೆ ಶುಲ್ಕದ ಮೊತ್ತವನ್ನು ಜಮೆ ಮಾಡಿರುತ್ತಾರೆ. ಕೆಲವು ವೈದ್ಯಕೀಯ ಕಾಲೇಜುಗಳು ಎಂಬಿಬಿಎಸ್ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಸಮಯದಲ್ಲಿ ವಿಶ್ವವಿದ್ಯಾಲಯ ಶುಲ್ಕ, ಠೇವಣಿ ಅಥವಾ ಅನುಮತಿಸದ ಇತರೆ ಶುಲ್ಕಗಳನ್ನು ವಸೂಲಿ ಮಾಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿದೆ. ಇದು ನಿಯಮ ಬಾಹಿರ ಎಂದು ಸಮಿತಿಯ ಅಧ್ಯಕ್ಷ ನ್ಯಾಯಮೂರ್ತಿ ರಾಮಚಂದ್ರ ಡಿ. ಹುದ್ದಾರ್ ಹೇಳಿದ್ದಾರೆ.

ಕಾಲೇಜುಗಳು ಕೆಇಎ ಶುಲ್ಕ ಹೊರತಾಗಿ ₹30,000 ಕೌಶಲ ಪ್ರಯೋಗಾಲಯ ಶುಲ್ಕ ಹಾಗೂ ₹15,000 ಇತರೆ ಶುಲ್ಕಗಳನ್ನು ಮಾತ್ರ ಸಂಗ್ರಹಿಸಲು ಅವಕಾಶವಿದೆ. ಅಧಿಕ ಶುಲ್ಕ ಸಂಗ್ರಹಿಸಿದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿರುವ ಸಮಿತಿಯ ಕಚೇರಿಗೆ ದೂರು ನೀಡಬಹುದು. ದೂರವಾಣಿ ಸಂಖ್ಯೆ 080-23466844 ಅಥವಾ ಇ-ಮೇಲ್: aoc.kea@gmail.com ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

ಯಕ್ಷಗಾನ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕಲಾಕದಂಬ ಆರ್ಟ್ ಸೆಂಟರ್ 2026–27ನೇ ಸಾಲಿಗೆ ಯಕ್ಷಗಾನ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಈ ಕೋರ್ಸ್‌ಗಳು ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲಾ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿದೆ. 12 ತಿಂಗಳ ಡಿಪ್ಲೊಮಾ ಕೋರ್ಸ್‌ಗೆ ಪ್ರವೇಶ ಪಡೆಯಲು ಇಚ್ಛಿಸುವವರು ಎಸ್ಸೆಸ್ಸೆಲ್ಸಿ ಅಥವಾ ಪಿಯುಸಿ ಉತ್ತೀರ್ಣರಾಗಿರಬೇಕು. 6 ತಿಂಗಳ ಸರ್ಟಿಫಿಕೇಟ್ ಕೋರ್ಸ್‌ಗೆ ಯಕ್ಷಗಾನದಲ್ಲಿ ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದು ಎಂದು ಕೇಂದ್ರದ ನಿರ್ದೇಶಕ ರಾಧಾಕೃಷ್ಣ ಉರಾಳ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು ಮೇ 28 ಕೊನೆಯ ದಿನ ಎಂದು ಹೇಳಿದ್ದಾರೆ.

ಸಂಪರ್ಕಕ್ಕೆ: 9916053143 ಅಥವಾ 8310482075

ಜಿಕೆವಿಕೆ ಆಡಳಿತ ಮಂಡಳಿಗೆ ನೇಮಕ



ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆಡಳಿತ ಮಂಡಳಿಯ ಸದಸ್ಯರನ್ನಾಗಿ ಕೃಷಿ ಎಂಜಿನಿಯರಿಂಗ್ ಮಹಾವಿದ್ಯಾಲಯದ ವಿಶೇಷಾಧಿಕಾರಿ ಡಾ.ಕೆ.ಎಸ್.ರಾಜಶೇಖರಪ್ಪ ಅವರನ್ನು ನಾಮನಿರ್ದೇಶನ ಮಾಡಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ನೇಮಕಾತಿ ಅವಧಿಯು ಜುಲೈ 1ರಿಂದ ಮೂರು ವರ್ಷ ಇರಲಿದೆ. ರಾಜಶೇಖರಪ್ಪ ಅವರು ಮಣ್ಣು ಮತ್ತು ನೀರು ಸಂರಕ್ಷಣಾ ನಿರ್ವಹಣೆಯಲ್ಲಿ 32 ವರ್ಷ ಕಾರ್ಯನಿರ್ವಹಿಸಿದ್ದಾರೆ.


ಉತ್ತರ ಪ್ರದೇಶ ಮಹೋತ್ಸವ ನಾಳೆ

ಬೆಂಗಳೂರು: ದಿ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರವು ಇದೇ 21ರಿಂದ ನಾಲ್ಕು ದಿನಗಳ ಉತ್ತರ ಪ್ರದೇಶ ಮಹೋತ್ಸವ ಹಮ್ಮಿಕೊಂಡಿದೆ.

ಉತ್ತರ ಪ್ರದೇಶ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಈ ಮಹೋತ್ಸವ ನಡೆಯಲಿದೆ. ಉತ್ತರ ಪ್ರದೇಶದ ಸಾಂಪ್ರದಾಯಿಕ ಆಚರಣೆಗಳ ಜತೆಗೆ, ಅಲ್ಲಿನ ಕರಕುಶಲ ವಸ್ತುಗಳು, ಸಂಗೀತ–ನೃತ್ಯ, ಆಹಾರ ಪದ್ಧತಿ ಅನಾವರಣಗೊಳ್ಳಲಿದ್ದು, ಈ ಕಾರ್ಯಕ್ರಮ ಸಾಂಸ್ಕೃತಿಕ ಸಂಗಮವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಎಸ್.ಪ್ರಸನ್ನ ಕುಮಾರ್



ಬೆಂಗಳೂರು: ಪಶುವೈದ್ಯಕೀಯ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಡಾ.ಎಸ್.ಪ್ರಸನ್ನ ಕುಮಾರ್ (89) ಅವರು ವಯೋಸಹಜ ಅನಾರೋಗ್ಯದಿಂದಾಗಿ ಸುಲ್ತಾನ್ ಪಾಳ್ಯದ ನಿವಾಸದಲ್ಲಿ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಲೇಖಕಿಯಾದ ಪುತ್ರಿ ರೂಪ ಹಾಸನ ಇದ್ದಾರೆ.

ಪ್ರಸನ್ನ ಕುಮಾರ್ ಅವರು ಕರ್ನಾಟಕ ಜೈನ್ ಅಸೋಸಿಯೇಷನ್‌ನ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಅವರ ತಮ್ಮ. ಇವರು ಪಂಡಿತ ಶಾಂತಿ ರಾಜಶಾಸ್ತ್ರಿ ಟ್ರಸ್ಟ್‌ನ ಸಂಸ್ಥಾಪಕ ಧರ್ಮದರ್ಶಿಗಳಲ್ಲಿ ಒಬ್ಬರಾಗಿದ್ದರು. ಬುಧವಾರ ಬೆಳಿಗ್ಗೆ 10 ಗಂಟೆಗೆ ಹೆಬ್ಬಾಳದ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಗರಜೀವಿಗಳ 'ಉಸಿರಾಟ' ಪತ್ತೆಹಚ್ಚಿದ ಡ್ರೋನ್



• ಸುಧೀರ ಎಚ್.ಎಸ್.

ಕರಾವಳಿ ತೀರಕ್ಕೆ ಚಂಡಮಾರುತ ಅಪ್ಪಳಿಸಿದಾಗ ನಾವೆಲ್ಲರೂ ಮೇಲ್ಭಾಗದಲ್ಲಿ ಅಬ್ಬರಿಸುವ ಅಲೆಗಳು, ಜೋರು ಗಾಳಿ-ಮಳೆ ಮತ್ತು ಆಗುವ ಹಾನಿಯನ್ನಷ್ಟೇ ನೋಡುತ್ತೇವೆ. ಆದರೆ, ಅದೇ ಸಮಯದಲ್ಲಿ ಸಮುದ್ರದ ನೂರಾರು ಅಡಿ ಆಳದಲ್ಲಿ ಏನಾಗುತ್ತಿರಬಹುದು? ಚಂಡಮಾರುತದ ಭೀಕರ ಗಾಳಿ ಮತ್ತು ಅಲೆಗಳು ಸಾಗರದ ಆಳದ ಪರಿಸರವನ್ನು ಹೇಗೆ ಬದಲಾಯಿಸುತ್ತವೆ? ಈ ನಿಗೂಢ ಪ್ರಶ್ನೆಗೆ ಭಾರತೀಯ ವಿಜ್ಞಾನಿಗಳು ಈಗ ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ ಅದ್ಭುತ ಉತ್ತರವನ್ನು ಹುಡುಕಿದ್ದಾರೆ. ಜಲಾಂತರ್ಗಾಮಿ ರೋಬೋಟಿಕ್ ಡ್ರೋನ್ ಒಂದನ್ನು ಬಳಸಿದ ವಿಜ್ಞಾನಿಗಳು, ಭೀಕರ ಚಂಡಮಾರುತವು ಸಮುದ್ರದ ಆಳದಲ್ಲಿ ಅಡಗಿರುವ ಪೋಷಕಾಂಶಗಳನ್ನು ಮೇಲಕ್ಕೆ ತಂದು, ಸಸ್ಯಪ್ರಪಂಚಕ್ಕೆ ಹೇಗೆ ಮರುಜೀವ ನೀಡುತ್ತದೆ ಎಂಬುದನ್ನು ಮೊದಲ ಬಾರಿಗೆ ಕಣ್ಣಾರೆ ಕಂಡಿದ್ದಾರೆ.

ನಮ್ಮ ಕರ್ನಾಟಕದ ಕಾರವಾರ, ಮಂಗಳೂರು ಅಥವಾ ಉಡುಪಿಯ ಕರಾವಳಿ ಭಾಗದ ಜನರಿಗೆ ಅರಬ್ಬಿ ಸಮುದ್ರದಲ್ಲಿ ಏಳುವ ಚಂಡಮಾರುತಗಳ ಪರಿಚಯ ಚೆನ್ನಾಗಿಯೇ ಇದೆ. ಪ್ರಕೃತಿಯ ಈ ವಿಕೋಪಗಳು ಭೂಮಿಯ ಮೇಲೆ ತಲ್ಲಣ ಸೃಷ್ಟಿಸಿದರೂ, ಸಮುದ್ರದ ಆಳದಲ್ಲಿ ಮಾತ್ರ ಇವು ಜೀವಜಗತ್ತಿನ ಬೆಳವಣಿಗೆಗೆ ಕಾರಣವಾಗುತ್ತವೆ ಎಂಬುದು ಈ ಹೊಸ ಸಂಶೋಧನೆಯಿಂದ ತಿಳಿದುಬಂದಿದೆ. ಹೈದರಾಬಾದ್‌ನಲ್ಲಿರುವ 'ಭಾರತೀಯ ರಾಷ್ಟ್ರೀಯ ಸಾಗರ ಮಾಹಿತಿ ಸೇವೆಗಳ ಕೇಂದ್ರ'ದ (INCOIS) ವಿಜ್ಞಾನಿಗಳು ಈ ಸಾಧನೆಯನ್ನು ಮಾಡಿದ್ದಾರೆ.

2023ರ ಮೇ ತಿಂಗಳಲ್ಲಿ ಬಂಗಾಳ ಕೊಲ್ಲಿಯಲ್ಲಿ 'ಮೋಚಾ' ಎಂಬ ಭೀಕರ ಚಂಡಮಾರುತ ಅಪ್ಪಳಿಸಿತ್ತು. ಆ ಸಮಯದಲ್ಲಿ ಇಡೀ ಸಮುದ್ರವೇ ರೊಚ್ಚಿಗೆದ್ದಾಗ, ವಿಜ್ಞಾನಿಗಳು 'ಸ್ಲೋಕಮ್ ಜಿ3' (Slocum G3) ಎಂಬ ಅತ್ಯಾಧುನಿಕ ಸಮುದ್ರದಾಳದ 'ಗ್ಲೈಡರ್' ಅಥವಾ 'ರೋಬೋಟಿಕ್ ಡ್ರೋನ್' ಅನ್ನು ನೀರಿನೊಳಗೆ ಬಿಟ್ಟಿದ್ದರು. ಟಾರ್ಪಿಡೊ ಆಕಾರದಲ್ಲಿರುವ ಈ ಡ್ರೋನ್, ತನ್ನ ತೂಕ ಮತ್ತು ನೀರಿನ ತೇಲುವಿಕೆ ಸಾಮರ್ಥ್ಯವನ್ನು ಬದಲಾಯಿಸಿಕೊಳ್ಳುತ್ತಾ ಸಮುದ್ರದ ಸುಮಾರು ಸಾವಿರ ಮೀಟರ್ ಆಳದವರೆಗೆ ಮುಳುಗಬಲ್ಲದು. ದಡದಲ್ಲೇ ಕುಳಿತು ವಿಜ್ಞಾನಿಗಳು ಇದನ್ನು ನಿಯಂತ್ರಿಸುತ್ತಿದ್ದರು. ಚಂಡಮಾರುತದ ಭೀಕರ ಗಾಳಿಗೆ ತರಂಗಗಳು ಏಳುತ್ತಿದ್ದಾಗಲೂ, ಈ ಡ್ರೋನ್ ಮಾತ್ರ ಸಮುದ್ರದ ಆಳದಲ್ಲಿ ಸುರಕ್ಷಿತವಾಗಿ ಈಜುತ್ತಾ ಸಾಗರದ ಭೌತಿಕ ಮತ್ತು ಜೈವಿಕ ಬದಲಾವಣೆಗಳ ನಿಖರ ಮಾಹಿತಿಯನ್ನು ಸ್ಯಾಟಲೈಟ್ ಮೂಲಕ ವಿಜ್ಞಾನಿಗಳಿಗೆ ರವಾನಿಸುತ್ತಿತ್ತು.

ಸಾಮಾನ್ಯವಾಗಿ ಬಂಗಾಳ ಕೊಲ್ಲಿಯ ಮೇಲ್ಭಾಗದಲ್ಲಿ ಮಳೆ ಮತ್ತು ನದಿಗಳ ನೀರು ಬಂದು ಸೇರುವುದರಿಂದ ಬೆಚ್ಚಗಿನ ಮತ್ತು ಸಿಹಿನೀರಿನ ಒಂದು ಸ್ಥಿರವಾದ ಪದರ ನಿರ್ಮಾಣವಾಗಿರುತ್ತದೆ. ಇದನ್ನು ವಿಜ್ಞಾನಿಗಳು 'ಸ್ಟ್ರಾಟಿಫಿಕೇಶನ್' ಅಥವಾ 'ಪದರ ವಿನ್ಯಾಸ' ಎನ್ನುತ್ತಾರೆ. ಈ ಮೇಲಿನ ಪದರವು ಒಂದು ಬಗೆಯಲ್ಲಿ ತುಂಬಾ ಧೃಡವಾಗಿ ನಮ್ಮ ಮನೆಗಳಲ್ಲಿ ಇರುವ ಮೇಲ್ಛಾವಣಿಯಂತೆ ಇರುವುದರಿಂದ, ಸಮುದ್ರದ ಆಳದಲ್ಲಿರುವ ತಂಪಾದ ಮತ್ತು ಪೋಷಕಾಂಶಗಳಿಂದ ಕೂಡಿದ ನೀರು ಸೂರ್ಯನ ಬೆಳಕು ಬೀಳುವ ಮೇಲ್ಭಾಗಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದಾಗಿ ಅಲ್ಲಿನ ಸಾಗರ ಜೀವಿಗಳಿಗೆ ಆಹಾರದ ಕೊರತೆ ಇರುತ್ತಿತ್ತು. ಆದರೆ, ಮೋಚಾ ಚಂಡಮಾರುತದ ಅತಿವೇಗದ ಗಾಳಿಯು ಸಮುದ್ರದ ಈ ನೈಸರ್ಗಿಕ ಪದರಗಳನ್ನೇ ಒಡೆದುಹಾಕಿತು. ವೈಜ್ಞಾನಿಕವಾಗಿ 'ಅಪ್‌ವೆಲ್ಲಿಂಗ್' (Upwelling) ಅಥವಾ 'ಆಳದ ನೀರು ಮೇಲಕ್ಕೆ ಬರುವ ಪ್ರಕ್ರಿಯೆ' ಎಂದು ಕರೆಯಲಾಗುವ ಈ ವಿದ್ಯಮಾನದಿಂದಾಗಿ ಕತ್ತಲಲ್ಲಿ ಅಡಗಿದ್ದ ನೂರಾರು ಪೋಷಕಾಂಶಗಳು ಸಮುದ್ರದ ಮೇಲ್ಮೈಗೆ ಬಂದವು.

> ಪ್ರಕೃತಿಯ ವಿಕೋಪಗಳ ನಡುವೆಯೂ ಜೀವಜಗತ್ತು ಹೇಗೆ ತನ್ನ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ ಎಂಬುದಕ್ಕೆ ಭಾರತೀಯ ವಿಜ್ಞಾನಿಗಳ ಈ ಸಂಶೋಧನೆಯೇ ಸಾಕ್ಷಿ.

ಹೀಗೆ ಪೋಷಕಾಂಶಗಳು ಮೇಲಕ್ಕೆ ಬರುತ್ತಿದ್ದಂತೆ, ಸಮುದ್ರದ ಮೇಲ್ಭಾಗದಲ್ಲಿದ್ದ 'ಫೈಟೊಪ್ಲಾಂಕ್ಟನ್' (Phytoplankton) ಎಂಬ ಸೂಕ್ಷ್ಮಜೀವಿಗಳಿಗೆ ಹಬ್ಬದೂಟ ಸಿಕ್ಕಂತಾಯಿತು. 'ಫೈಟೊಪ್ಲಾಂಕ್ಟನ್' ಎಂದರೆ ಕಣ್ಣಿಗೆ ಕಾಣಿಸದ ಸೂಕ್ಷ್ಮ ಸಸ್ಯಜೀವಿಗಳು. ಇವುಗಳನ್ನು ನಮ್ಮ ಕೆರೆಗಳು, ತೊರೆಗಳು ಅಥವಾ ನದಿಗಳಲ್ಲೂ ಕಾಣಬಹುದು, ಹಾಗೆಯೇ ಇವುಗಳು ಸಮುದ್ರದಲ್ಲೂ ಸಾಕಷ್ಟಿವೆ. ಇವು ಸಸ್ಯಗಳಂತೆಯೇ ಸೂರ್ಯನ ಬೆಳಕನ್ನು ಬಳಸಿ 'ದ್ಯುತಿಸಂಶ್ಲೇಷಣೆ' (Photosynthesis) ಕ್ರಿಯೆಯ ಮೂಲಕ ಆಹಾರವನ್ನು ತಯಾರಿಸಿಕೊಳ್ಳುತ್ತವೆ. ಸಮುದ್ರದ ಆಳದಿಂದ ಬಂದ ಆಹಾರ ಮತ್ತು ಚಂಡಮಾರುತ ಸರಿದ ನಂತರ ಸಿಕ್ಕ ಸೂರ್ಯನ ಬೆಳಕಿನಿಂದಾಗಿ ಈ ಸೂಕ್ಷ್ಮಜೀವಿಗಳು ಅತ್ಯಂತ ವೇಗವಾಗಿ ವೃದ್ಧಿಯಾಗತೊಡಗಿದವು. ಚಂಡಮಾರುತ ಹಾದುಹೋದ ಎಂಟು ದಿನಗಳ ನಂತರ ಇವುಗಳ ಸಂಖ್ಯೆ ದಾಖಲೆ ಮಟ್ಟಕ್ಕೆ ಏರಿತು. ಗ್ಲೈಡರ್ ಡ್ರೋನ್ ಕಳುಹಿಸಿದ ದತ್ತಾಂಶದಲ್ಲಿ ಕಡಲ ಸಸ್ಯಗಳ ಹಸಿರುಬಣ್ಣಕ್ಕೆ ಕಾರಣವಾಗುವ 'ಕ್ಲೋರೊಫಿಲ್' ಅಂಶವು ವಿಪರೀತವಾಗಿ ಹೆಚ್ಚಿರುವುದು ಪತ್ತೆಯಾಯಿತು.

ಈ ಸೂಕ್ಷ್ಮ ಕಡಲ ಸಸ್ಯಗಳು ದೊಡ್ಡ ಪ್ರಮಾಣದಲ್ಲಿ ವೃದ್ಧಿಯಾದಾಗ, ಅವು ವಾತಾವರಣಕ್ಕೆ ಅಪಾರ ಪ್ರಮಾಣದ ಕರಗಿದ ಆಮ್ಲಜನಕವನ್ನು (Dissolved Oxygen) ಬಿಡುಗಡೆ ಮಾಡಿದವು. ಈ ರೋಬೋಟಿಕ್ ಡ್ರೋನ್ ಎಷ್ಟು ನಿಖರವಾದ ಮಾಹಿತಿ ನೀಡಿದೆಯೆಂದರೆ, ಅದು ಸಮುದ್ರದ ದೈನಂದಿನ ಉಸಿರಾಟವನ್ನೇ ದಾಖಲಿಸಿದೆ. ಅಂದರೆ ಹಗಲಿನಲ್ಲಿ ಸೂರ್ಯನ ಬೆಳಕಿರುವಾಗ ಕಡಲ ಸಸ್ಯಗಳು ಸಕ್ರಿಯವಾಗಿ ಆಮ್ಲಜನಕವನ್ನು ಉತ್ಪಾದಿಸುವುದರಿಂದ ನೀರಿನಲ್ಲಿ ಆಮ್ಲಜನಕದ ಮಟ್ಟ ಹೆಚ್ಚಿರುತ್ತಿತ್ತು ಮತ್ತು ರಾತ್ರಿಯ ಸಮಯದಲ್ಲಿ ಅವುಗಳೂ ಆಮ್ಲಜನಕವನ್ನು ಬಳಸುವುದರಿಂದ ಆ ಮಟ್ಟವು ಕಡಿಮೆಯಾಗುತ್ತಿತ್ತು. ಸಮುದ್ರದ ಈ ದೈನಂದಿನ ಉಸಿರಾಟದ ಏರಿಳಿತವನ್ನು ವಿಜ್ಞಾನಿಗಳು ಮೊದಲ ಬಾರಿಗೆ ಇಷ್ಟು ನಿಖರವಾಗಿ ಗಮನಿಸಿದ್ದಾರೆ.

ಇಲ್ಲಿಯವರೆಗೆ ವಿಜ್ಞಾನಿಗಳು ಇಂತಹ ಬದಲಾವಣೆಗಳನ್ನು ತಿಳಿಯಲು ಉಪಗ್ರಹಗಳನ್ನು ಅವಲಂಬಿಸಿದ್ದರು. ಆದರೆ ಚಂಡಮಾರುತ ಬಂದಾಗ ದಟ್ಟವಾದ ಮೋಡಗಳು ಇಡೀ ಆಕಾಶವನ್ನು ಮುಚ್ಚಿಕೊಳ್ಳುವುದರಿಂದ ಉಪಗ್ರಹಗಳಿಗೆ ಸಮುದ್ರದ ಒಳಗೆ ಏನಾಗುತ್ತಿದೆ ಎಂದು ನೋಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಚಂಡಮಾರುತದ ಭೀಕರ ಅಲೆಗಳ ನಡುವೆ ವಿಜ್ಞಾನಿಗಳ ಹಡಗನ್ನು ಕಳುಹಿಸುವುದು ಅತ್ಯಂತ ಅಪಾಯಕಾರಿ ಕೆಲಸವಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಈ ಸಮುದ್ರದಾಳದ ರೋಬೋಟಿಕ್ ಡ್ರೋನ್ ದೊಡ್ಡ ಯಶಸ್ಸನ್ನು ತಂದುಕೊಟ್ಟಿದೆ. ಚಂಡಮಾರುತದ ನೇರ ಹಾದಿಯಲ್ಲೇ ಇದ್ದುಕೊಂಡು, ಹಗಲು-ರಾತ್ರಿ ಎನ್ನದೆ ನಿರಂತರವಾಗಿ ಉಷ್ಣಾಂಶ ಮತ್ತು ಲವಣಾಂಶದ ನಿಖರ ಮಾಹಿತಿಯನ್ನು ಇದು ಸಂಗ್ರಹಿಸಿದೆ.

ಈ ಅದ್ಭುತ ಯಶಸ್ಸು ಕೇವಲ ಬಂಗಾಳಕೊಲ್ಲಿಗಷ್ಟೇ ಸೀಮಿತವಲ್ಲ. ಕರ್ನಾಟಕದ ಕರಾವಳಿ ಭಾಗದಲ್ಲೂ ಆಗಾಗ ಸಂಭವಿಸುವ ಚಂಡಮಾರುತಗಳ ಮುನ್ಸೂಚನೆಯನ್ನು ನೀಡಲು, ಹವಾಮಾನ ಮಾದರಿಗಳನ್ನು ಸುಧಾರಿಸಲು ಮತ್ತು ಜಾಗತಿಕ ತಾಪಮಾನದ ಪರಿಣಾಮಗಳನ್ನು ಅಧ್ಯಯನ ಮಾಡಲು ಈ ತಂತ್ರಜ್ಞಾನವು ದಾರಿದೀಪವಾಗಲಿದೆ. ಪ್ರಕೃತಿಯ ವಿಕೋಪಗಳ ನಡುವೆಯೂ ಜೀವಜಗತ್ತು ಹೇಗೆ ತನ್ನ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ ಎಂಬುದಕ್ಕೆ ಭಾರತೀಯ ವಿಜ್ಞಾನಿಗಳ ಈ ಸಂಶೋಧನೆಯೇ ಸಾಕ್ಷಿ. ಸಾಂಪ್ರದಾಯಿಕ ಸಂಶೋಧನಾ ವಿಧಾನಗಳನ್ನು ಮೀರಿ ನಿಂತಿರುವ ಈ ಸ್ವಯಂಚಾಲಿತ ಡ್ರೋನ್‌ಗಳು ಮುಂದಿನ ದಿನಗಳಲ್ಲಿ ಹವಾಮಾನ ಮತ್ತು ಸಾಗರ ಸಂಶೋಧನೆಯ ಭವಿಷ್ಯವನ್ನು ಸಂಪೂರ್ಣವಾಗಿ ಬದಲಾಯಿಸಲಿವೆ. ❖



ಎಐ ಚಿತ್ರ

ಟ್ರ್ಯಾಕ್ಟರ್ ಟೈರ್‌ಗಳೇ ಇಂಧನ ಟ್ಯಾಂಕ್‌ಗಳು!

• ಪೃಥ್ವಿರಾಜ್

ನಾವೀನ್ಯ (Innovation) ಎಂಬುದು ಕೇವಲ ವಾಡಿಕೆಯಂತಿರದೆ ಅಚ್ಚರಿ ಮೂಡಿಸುವಂತಿರಬೇಕು. ಅಂತಹದ್ದೇ ಒಂದು ಬೆರಗುಗೊಳಿಸುವ ಸುದ್ದಿಯಿದು. ಸಾಮಾನ್ಯವಾಗಿ ಟ್ರ್ಯಾಕ್ಟರ್ ಚಕ್ರಗಳ ಕೆಲಸ ವಾಹನವನ್ನು ಹೊರುವುದು ಮತ್ತು ಮುಂದಕ್ಕೆ ಚಲಿಸುವುದು ಮಾತ್ರ. ಆದರೆ ಜರ್ಮನಿಯ 'ಹೋರ್ಮನ್ ವೆಹಿಕಲ್ ಎಂಜಿನಿಯರಿಂಗ್' (Hörmann Vehicle Engineering) ಸಂಸ್ಥೆಯ ಎಂಜಿನಿಯರ್‌ಗಳು ಈ ಚಕ್ರಗಳಿಗೆ ಒಂದು ವಿಶಿಷ್ಟವಾದ ಜವಾಬ್ದಾರಿಯನ್ನು ನೀಡಿದ್ದಾರೆ. ಬೃಹತ್ ಟ್ರ್ಯಾಕ್ಟರ್‌ಗಳ ಚಕ್ರಗಳ ಒಳಭಾಗದಲ್ಲಿ ಇರುವ ಖಾಲಿಜಾಗವನ್ನು ಹೈಡ್ರೋಜನ್ ಇಂಧನವನ್ನು ಸಂಗ್ರಹಿಸುವ 'ಹೈ-ಪ್ರೆಷರ್ ವೆಸೆಲ್ಸ್' (High-pressure Vessels) ಆಗಿ ಮಾರ್ಪಡಿಸಿದ್ದಾರೆ.

ಟೈರ್‌ಗಳಲ್ಲೇ ಇಂಧನಸಂಗ್ರಹ ಏಕೆ?

ಹೈಡ್ರೋಜನ್ ಚಾಲಿತ ಟ್ರ್ಯಾಕ್ಟರ್‌ಗಳ ವಿಷಯದಲ್ಲಿ ಪ್ರಮುಖ ಸವಾಲು ಅದರ ತೂಕವಲ್ಲ, ಬದಲಾಗಿ ಇಂಧನ ಸಂಗ್ರಹಣೆಯ ಗಾತ್ರ (Volume).

ಡೀಸೆಲ್‌ಗೆ ಹೋಲಿಸಿದರೆ ಹೈಡ್ರೋಜನ್ ಕಡಿಮೆ ಸಾಂದ್ರತೆಯನ್ನು ಹೊಂದಿರುತ್ತದೆ. ಆದ್ದರಿಂದ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡಲು ದೊಡ್ಡ ಗಾತ್ರದ ಟ್ಯಾಂಕ್‌ಗಳ ಅಗತ್ಯ ಇರುತ್ತದೆ. ಪ್ರಸ್ತುತ ಇರುವ 'ಫೆಂಡ್ ಹೆಲಿಯೋಸ್' (Fendt Helios) ಪ್ರೊಟೊಟೈಪ್ ಟ್ರ್ಯಾಕ್ಟರ್‌ಗಳು ಒಮ್ಮೆ ಇಂಧನ ತುಂಬಿಸಿದರೆ ಕೇವಲ 5ರಿಂದ 8 ಗಂಟೆಗಳ ಕಾಲ ಮಾತ್ರ ಕೆಲಸ ಮಾಡಬಲ್ಲವು. ಆದರೆ ರೈತರಿಗೆ ಡೀಸೆಲ್ ಟ್ರ್ಯಾಕ್ಟರ್‌ಗಳಂತೆ ದಿನವಿಡೀ (ಸುಮಾರು 12 ಗಂಟೆ) ಸತತವಾಗಿ ಕೆಲಸ ಮಾಡುವ ಯಂತ್ರಗಳ ಅವಶ್ಯಕತೆಯಿದೆ. ಈ ಕೊರತೆಯನ್ನು ನೀಗಿಸಲು 'ಚಕ್ರಗಳಲ್ಲೇ ಇಂಧನ ಸಂಗ್ರಹ' ಎಂಬ ಪರಿಕಲ್ಪನೆ ಹುಟ್ಟಿಕೊಂಡಿದೆ.

> ಈ ತಂತ್ರಜ್ಞಾನದಿಂದ ಡೀಸೆಲ್ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ

ಹೇಗೆ ಕೆಲಸ ಮಾಡುತ್ತದೆ?

ಹೋರ್ಮನ್ ಕಂಪನಿಯ ಪ್ರತಿನಿಧಿಗಳಾದ ವೋಕ್ಮಾರ್ ವೋಗೆಲ್ ಮತ್ತು ಸ್ಟೀಫನ್ ಪ್ರಾಜರ್ ನೇತೃತ್ವದಲ್ಲಿ ನಡೆಯುತ್ತಿರುವ ಈ 'H2-Wheels' ಯೋಜನೆಗೆ ಯುರೋಪಿಯನ್ ಯೂನಿಯನ್ ಬೆಂಬಲ ನೀಡುತ್ತಿದೆ.

ಕಾರ್ಬನ್-ಫೈಬರ್ ಟ್ಯಾಂಕ್‌ಗಳು: ದೊಡ್ಡ ಅಗ್ರಿಕಲ್ಚರ್ ಟೈರ್‌ಗಳ ಒಳಭಾಗದಲ್ಲಿ ಕಾರ್ಬನ್-ಫೈಬರ್ ಬಲವರ್ಧಿತ ಟ್ಯಾಂಕ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ಟ್ರ್ಯಾಕ್ಟರ್ ಕ್ಯಾಬಿನ್ ಅಥವಾ ಚಾವಣಿಯ ಮೇಲೆ ಹೆಚ್ಚುವರಿ ಟ್ಯಾಂಕ್‌ಗಳನ್ನು ಇಡುವ ಅವಶ್ಯಕತೆ ಇರುವುದಿಲ್ಲ.

ಸವಾಲುಗಳ ಮೆಟ್ಟಿ ನಿಂತ ಎಂಜಿನಿಯರಿಂಗ್: ತಿರುಗುವ ಚಕ್ರದಿಂದ ಎಂಜಿನ್‌ಗೆ ಹೈಡ್ರೋಜನ್ ಹರಿವನ್ನು ನಿಯಂತ್ರಿಸುವುದು ಮತ್ತು ಪ್ರೆಷರ್ ಸೀಲ್‌ಗಳನ್ನು ನಿರ್ವಹಿಸುವ ತಾಂತ್ರಿಕ ಸವಾಲುಗಳನ್ನು ಎಂಜಿನಿಯರ್‌ಗಳು ಯಶಸ್ವಿಯಾಗಿ ಪರಿಹರಿಸಿದ್ದಾರೆ.

ಚಕ್ರದ ಒಳಗೇ ವಿದ್ಯುತ್ ಮೋಟಾರ್!

ಈ ತಂತ್ರಜ್ಞಾನವು ಕೇವಲ ಇಂಧನ ಸಂಗ್ರಹಕ್ಕೆ ಮಾತ್ರ ಸೀಮಿತವಾಗಿಲ್ಲ. ಚಕ್ರದ ಒಳಗೇ ಎಲೆಕ್ಟ್ರಿಕ್ ಡ್ರೈವ್ ಸಿಸ್ಟಮ್ (Electric Drive System) ಅನ್ನು ಅಳವಡಿಸಲಾಗಿದೆ.

ಇದು ಒಂದು 'ಮಾಡ್ಯುಲರ್ ಯೂನಿಟ್' ಆಗಿ ಕಾರ್ಯನಿರ್ವಹಿಸುತ್ತದೆ. ಅಂದರೆ ಒಂದೇ ಯುನಿಟ್ ಇಂಧನ ಸಂಗ್ರಹಿಸುವುದರ ಜೊತೆಗೆ ವಾಹನಕ್ಕೆ ಶಕ್ತಿಯನ್ನೂ ನೀಡುತ್ತದೆ.

ಈ ಮೋಟಾರ್‌ಗಳ ತಯಾರಿಕೆಯಲ್ಲಿ ಯಾವುದೇ ಅಪರೂಪದ ಖನಿಜಗಳನ್ನು (Rare Earth Metals) ಬಳಸದಿರುವುದು ಇದರ ಮತ್ತೊಂದು ವಿಶೇಷ. ಇದರಿಂದ ತಯಾರಿಕಾ ವೆಚ್ಚ ಕಡಿಮೆ ಆಗುವುದಲ್ಲದೆ ಪರಿಸರಕ್ಕೂ ಪೂರಕವಾಗಿದೆ.

ಭಾರತದ ಕೃಷಿ ಮೇಲೆ ಪ್ರಭಾವ: ಭಾರತವು ಪ್ರಸ್ತುತ 'ನ್ಯಾಷನಲ್ ಗ್ರೀನ್ ಹೈಡ್ರೋಜನ್ ಮಿಷನ್' ಮೂಲಕ ಪರಿಸರಸ್ನೇಹಿ ಇಂಧನದತ್ತ ಹೆಜ್ಜೆ ಹಾಕುತ್ತಿದೆ.

ಈ ಜರ್ಮನ್ ಎಂಜಿನಿಯರಿಂಗ್ ಅದ್ಭುತವು ಶೀಘ್ರದಲ್ಲೇ ಜಾಗತಿಕವಾಗಿ ಮಾರುಕಟ್ಟೆಗೆ ಬರಲಿದೆ. ಭಾರತೀಯ ರೈತರಿಗೆ ಈ ತಂತ್ರಜ್ಞಾನವು ಲಭ್ಯವಾದರೆ, ಡೀಸೆಲ್ ಮೇಲಿನ ಅವಲಂಬನೆ ಕಡಿಮೆಯಾಗಿ ಕೃಷಿವೆಚ್ಚ ಗಣನೀಯವಾಗಿ ತಗ್ಗಲಿದೆ. ಆದರೆ, ಈ ಅತ್ಯಾಧುನಿಕ ತಂತ್ರಜ್ಞಾನವನ್ನು ನಮ್ಮ ದೇಶದ ರೈತರಿಗೆ ಕೈಗೆಟುಕುವ ದರದಲ್ಲಿ ತಲುಪಿಸಲು ಸರ್ಕಾರಗಳು ಯಾವ ರೀತಿಯ ಕ್ರಮ ಕೈಗೊಳ್ಳಲಿವೆ ಎಂಬುದನ್ನು ಕಾದು ನೋಡಬೇಕಿದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ | ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

23) ಸೀಸದ ನೈಟ್ರೇಟ್ ಅನ್ನು ಕಾಯಿಸಿದಾಗ ಬಿಡುಗಡೆಯಾಗುವ ಕಂದು ಬಣ್ಣದ ಧೂಮವನ್ನು ಹೆಸರಿಸಿ ಈ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ (ಏಪ್ರಿಲ್ 2019)

ಉತ್ತರ:– ನೈಟ್ರೋಜನ್ ಡೈ ಆಕ್ಸೈಡ್

$$2Pb(NO_3)_2 \rightarrow 2PbO + 4NO_2 + O_2$$

ಬಹು ಆಯ್ಕೆ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಪ್ರಕ್ಷೇಪನ ಕ್ರಿಯೆಗಳು ವಿಲೀನಗೊಳ್ಳದ .... ಗಳನ್ನು ಉತ್ಪತ್ತಿ ಮಾಡುತ್ತವೆ.

ಎ) ಕಿಣ್ವ ಬಿ) ಲವಣ
ಸಿ) ನರ ತಂತು ಡಿ) ಯಾವುದೂ ಅಲ್ಲ

ಉತ್ತರ:– (ಬಿ) ಲವಣ

2) ಸಂಯೋಗ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ವಸ್ತುಗಳು. ಸಂಯೋಗವಾಗಿ ಒಂದೇ ಹೊಸ.................. ಉಂಟಾಗುತ್ತದೆ

ಎ) ಜವ ಬಿ) ಉದ್ದ
ಸಿ) ತೂಕ ಡಿ) ವಸ್ತು

ಉತ್ತರ:– (ಡಿ) ವಸ್ತು

3) "ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ." ಇದು ಯಾವ ನಿಯಮ?

ಎ) ಗುರುತ್ವಾಕರ್ಷಣ ನಿಯಮ
ಬಿ) ನ್ಯೂಟನನ ಮೊದಲ ನಿಯಮ
ಸಿ) ರಾಶಿ ಸಂರಕ್ಷಣೆ ನಿಯಮ
ಡಿ) ಹೊಸ ವಿಕಿರಣ ನಿಯಮ

ಉತ್ತರ:– (ಸಿ) ರಾಶಿ ಸಂರಕ್ಷಣೆ ನಿಯಮ

4) ಯಾವ ರಾಸಾಯನಿಕ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟಾಗುತ್ತದೆಯೋ ಅಂತಹ ಕ್ರಿಯೆಗೆ .... ಎನ್ನುವರು

ಎ) ಸಂಯೋಗ ಬಿ) ಕುಂಬಕ
ಸಿ) ವಿಭಜನ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ:– (ಎ) ಸಂಯೋಗ

5) ಬೆಳ್ಳಿಯ ಕ್ಲೋರೈಡ್‌ನ ಬಿಳಿ ಬಣ್ಣವು ಸೂರ್ಯನ ಬೆಳಕಿನಲ್ಲಿ ಬೂದು ಬಣ್ಣಕ್ಕೆ ತಿರುಗಿಸುತ್ತದೆ, ಇದಕ್ಕೆ ಕಾರಣ ಬೆಳಕು, ಬೆಳ್ಳಿಯ ಕ್ಲೋರೈಡ್ ಅನ್ನು .... ಮತ್ತು .... ಆಗಿ ವಿಭಜಿಸುವುದು

ಎ) ಬೆಳ್ಳಿ ಮತ್ತು ಆಕ್ಸಿಡ್ ಬಿ) ಚಿನ್ನ ಮತ್ತು ತಾಮ್ರ
ಸಿ) ಬೆಳ್ಳಿ ಮತ್ತು ಕಬ್ಬಿಣದ ಆಕ್ಸೈಡ್
ಡಿ) ಬೆಳ್ಳಿ ಮತ್ತು ಕ್ಲೋರಿನ್

ಉತ್ತರ:– (ಡಿ) ಬೆಳ್ಳಿ ಮತ್ತು ಕ್ಲೋರಿನ್

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮಿಂಚು ಹುಳು ರಾತ್ರಿವೇಳೆಯಲ್ಲಿ ಮಿಂಚಲು ಕಾರಣವೇನು?

ಉತ್ತರ: ಮಿಂಚು ಹುಳುವಿನಲ್ಲಿರುವ ಪ್ರೋಟೀನ್ ಆಕ್ಸಿಜನ್‌ನೊಂದಿಗೆ ಅಪಕರ್ಷಿಸಿ ಬೆಳಕು ಬಿಡುಗಡೆ ಮಾಡುವ ರಾಸಾಯನಿಕ ಕ್ರಿಯೆ ನಡೆಯುವುದರಿಂದ ಅದು ರಾತ್ರಿ ವೇಳೆ ಮಿಂಚುತ್ತದೆ.

2) ಈ ಕೆಳಗಿನ ಯಾವುದೆಲ್ಲವೂ ಭೌತಿಕ ಕ್ರಿಯೆ ಅಥವಾ ರಾಸಾಯನಿಕ ಕ್ರಿಯೆಗಳಾಗಿವೆ ಎಂಬುದನ್ನು ತಿಳಿಸಿ

1) ಪೆಟ್ರೋಲಿಯಂ ಅನಿಲ ದಹನ
2) ಪೆಟ್ರೋಲ್ ಬಾಷ್ಪೀಕರಿಸುವಿಕೆ
3) ಕಬ್ಬಿಣವನ್ನು ಕೆಂಪಗೆ ತ್ಕಾಯಿಸುವುದು
4) ಹಾಲು ಮೊಸರಾಗುವಿಕೆ
5) ಅಮೋನಿಯಂ ಕ್ಲೋರೈಡ್ ನ ಸಂಸ್ಕರಣೆ
6) ನೀರು ಮಂಜುಗಡ್ಡೆಯಾಗುವುದು

ಉತ್ತರ:

ಭೌತಿಕ ಕ್ರಿಯೆ: (1) ಪೆಟ್ರೋಲ್ ಬಾಷ್ಪೀಕರಿಸುವಿಕೆ
(2) ಕಬ್ಬಿಣ ಕೆಂಪಗೆ ಕಾಯಿಸುವುದು
(3) ನೀರು ಮಂಜುಗಡ್ಡೆಯಾಗುವುದು

ರಾಸಾಯನಿಕ ಕ್ರಿಯೆ: (1) ಪೆಟ್ರೋಲಿಯಂ ಅನಿಲದ ದಹನ
(2) ಹಾಲು ಮೊಸರಾಗುವಿಕೆ
(3) ಅಮೊನಿಯಂಅ ಕ್ಲೋರೈಡ್‌ನ ಸಂಸ್ಕರಣೆ

3) ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಮತ್ತು ದ್ವಿಸ್ಥಾನಪಲ್ಲಟ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಬರೆಯಿರಿ

ಉತ್ತರ:– ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಎಂದರೆ ಹೆಚ್ಚು ಕ್ರಿಯಾಪಟುವಾದ ಲೋಹವು ಸಂಯುಕ್ತದಿಂದ ಕಡಿಮೆ ಕ್ರಿಯಾಪಟುವಾದ ಲೋಹವನ್ನು ಸ್ಥಾನಪಲ್ಲಟಗೊಳಿಸುವ ಕ್ರಿಯೆಯಾಗಿದೆ

ಆದರೆ ಎರಡು ಪ್ರತಿವರ್ತಕಗಳ ನಡುವೆ ಆಯಾನುಗಳ ವಿನಿಯಮ ನಡೆಯುವುದೋ ಅದನ್ನು ದ್ವಿಸ್ಥಾನಪಲ್ಲಟ ಕ್ರಿಯೆ ಎನ್ನುವರು.

4) ನೈಸರ್ಗಿಕ ಅನಿಲದ ದಹನವನ್ನು ರಾಸಾಯನಿಕ ಕ್ರಿಯೆ ಎಂದು ಹೇಗೆ ತಿಳಿಯುವಿರಿ?

ಉತ್ತರ:– ನೈಸರ್ಗಿಕ ಅನಿಲವನ್ನು ದಹಿಸಿದಾಗ ಶಾಖ ಬಿಡುಗಡೆಯಾಗುವುದರೊಂದಿಗೆ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಉಂಟಾಗುವುದು ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಎಂದು ತಿಳಿಯುತ್ತದೆ.

5) ಮಂಜುಗಡ್ಡೆ ನೀರಾಗುವುದು ರಾಸಾಯನಿಕ ಕ್ರಿಯೆ ಅಲ್ಲ ಎಂದು ಹೇಗೆ ತಿಳಿಯುವಿರಿ

ಉತ್ತರ:– ಮಂಜುಗಡ್ಡೆ ನೀರಾಗುವುದರಿಂದ ಹೊಸ ಉತ್ಪನ್ನ ಬಿಡುಗಡೆಯಾಗುವುದಿಲ್ಲ, ಆದ್ದರಿಂದ ಇದು ರಾಸಾಯನಿಕಕ್ರಿಯೆ ಅಲ್ಲ.

6) ಸರಿದೂಗಿಸಿದ ರಾಸಾಯನಿಕ ಸಮೀಕರಣ ಎಂದರೇನು? ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉತ್ತರ:– ಪ್ರತಿ ಧಾತುವಿನ ಪರಮಾಣುಗಳ ಸಂಖ್ಯೆ ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಂದೇ ರೀತಿ ಇರಬೇಕು ಅಂದರೆ ಪ್ರತಿವರ್ತಕ ಮತ್ತು ಉತ್ಪನ್ನಗಳಲ್ಲಿ ಸಮನಾದ ಧಾತುಗಳ ಒಟ್ಟು ರಾಶಿ ಇರುವಿಕೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣ ಎನ್ನುವರು.

ರಾಶಿ ಸಂರಕ್ಷಣೆಯ ನಿಯಮದಂತೆ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ ಆದ್ದರಿಂದ ಸಮೀಕರಣಗಳನ್ನು ಸರಿದೂಗಿಸಬೇಕು.

7) ಕಂದು ಬಣ್ಣದ ವಸ್ತು x ಅನ್ನು ಕಾಯಿಸಿದಾಗ ಅದರ ಮೇಲ್ಮೈ ಕಪ್ಪಾಗುವುದರೊಂದಿಗೆ y ಉತ್ಪತ್ತಿಯಾಗುವುದು ಬಿಸಿಯಾಗಿರುವ x ವಸ್ತುವಿನ ಮೇಲೆ ಹೈಡ್ರೋಜನ್ ಅನಿಲ ಹಾಯಿಸಿದಾಗ ಪುನಃ ಕಂದು ಬಣ್ಣದ x ವಸ್ತುವಾಗುವುದು.

ಅ) x ಮತ್ತು y ವಸ್ತುಗಳು ಯಾವುವು? (ಮುಂದುವರಿಯುವುದು)
ಬ) ಇದು ಯಾವ ಬಗೆಯ ರಾಸಾಯನಿಕ ಕ್ರಿಯೆ ಆಗಿದೆ?
ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ ಬರೆಯಿರಿ

(ಮುಂದುವರಿಯುವುದು)

CHEMISTRY

Types of Solutions

Problems:-

4. The density of 10% by mass of KCl solution is 1.06 g cm^{-3}. Calculate the molarity of the solution.

Ans:- ***I. Calculation of volume of the solution:***

Mass of the solution = 100 g

Density of the solution = 1.06 g cm^{-3}

$$\text{Volume of solution} = \frac{\text{Mass of solution}}{\text{Density}}$$

$$= \frac{100\,g}{1.06\,g\,cm^{-3}} = 94.34\,cm^3$$

II. Calculation of molarity of the solution:

$$\text{Molarity of solution(M)} = \frac{\left(\frac{\text{Mass of KCl}}{\text{Molar mass of KCl}}\right)}{\text{Volume of solution in } dm^3}$$

Mass of the KCl = 10 g

Molar mass of KCl = 39 + 35.5 = 74.5 g mol^{-1}

Volume of the solution = 94.34 cm^3 = 0.0943 dm^3

$$\text{Molarity (M)} = \frac{10g/(74.5\,g\,mol^{-1})}{0.0943\,dm^3}$$

$$= 1.42\ mol\ dm^{-3} = 1.42\,M$$

5. 3.6 M sulphuric acid solution is 29% H_2SO_4. Calculate the density of the solution.

Soln:- ***I. Calculation of mass of the solution:***

Mass of H_2SO_4 in 3.6 M solution

= (3.6 mol) x (98 g mol^{-1})

= 352.8 g

29% H_2SO_4 means,

29 g of H_2SO_4 are present in solution = 100 g

∴ 352.8 g of H_2SO_4 are present in solution

$$= \frac{100\,g}{29\,g}(352.8\,g) = 1216.5\,g$$

II. Calculation of the density of the solution:

$$\text{Density of the solution} = \frac{\text{Mass of solution}}{\text{Volume of solution}}$$

$$= \frac{1216.5\,g}{1000\,mL}$$

$$= 1.22\,g\,mL^{-1}$$

6. The solubility of $Ba(OH)_2 . 8H_2O$ in water at 298 K is 5.6 g per 100 g of water. What is the molality of the hydroxide ions in a saturated solution of barium hydroxide at 298 K? (Atomic mass of Ba = 137, O = 16)

Soln:- ***I. Calculation of molality of the solution:***

$$\text{Molality of solution(m)} = \frac{\left(\frac{\text{Mass of solute}}{\text{Molar mass of solute}}\right)}{\text{Mass of solvent in kg}}$$

Mass of solute, $Ba(OH)_2 . 8H_2O$ = 5.6 g

Molar mass of solute, $Ba(OH)_2 . 8H_2O$

= 137 + 2 x (16 + 1) + 8 x 18 = 315 g mol^{-1}

Mass of the solvent (water) = 100 g = 0.1 kg

$$\text{Molality (m)} = \frac{5.6g/(315\,g\,mol^{-1})}{0.1\,kg}$$

$$= 0.18\ mol\ kg^{-1} = 0.18\,m$$

II. Calculation of molality of the OH^- ions:

Barium hydroxide ionises in water as follows –

$$Ba(OH)_2 \xrightleftharpoons{(aq)} Ba^{2+}(aq) + 2OH^-(aq)$$

This shows that the molality of OH^- ions is twice the molaltiy of $Ba(OH)_2$ = 2 x 0.18 m = 0.36 m

7. A solution has been prepared by dissolving 0.49 g of sulphuric acid in 100 mL of the solution. Calculate normality of the solution.

Soln:- Normality of solution (N)

$$= \frac{\text{No. of gram equivalents of } H_2SO_4}{\text{Volume of solution in litres}}$$

Mass of H_2SO_4 = 0.49 g

Equivalent Mass of H_2SO_4 =

$$= \frac{\text{Molar mass}}{\text{Basicity}} = \frac{98.0}{2} = 49.0\ g\ equiv^{-1}$$

Volume of the solution = 100 mL

$$= \frac{100}{1000} = 0.1\,L$$

$$\text{Normality of solution(N)} = \frac{\left(\frac{\text{Mass of } H_2SO_4}{\text{Eq. mass of } H_2SO_4}\right)}{\text{Volume of solution in litres}}$$

$$= \frac{0.49\,g/49\,g\ equiv^{-1}}{0.1L}$$

$$= 0.1\,equiv.L^{-1} = 0.1\,N$$

8. Calculate the number of molecules of oxalic acid ($H_2C_2O_4 . 2H_2O$) in 100 mL of 0.2 N oxalic acid solution.

Soln:- ***I. Calculation of mass of the oxalic acid:***

$$\text{Normality of solution} = \frac{\left(\frac{\text{Mass of Oxalic acid}}{\text{Equivalent mass}}\right)}{\text{Volume of solution in litres}}$$

$$= 0.2\,N$$

$$= 0.2\ equiv.L^{-1}$$

Equivalent mass of the acid = Molar mass / Basicity

$$= \frac{2\times1 + 2\times12 + 4\times16 + 2\times18}{2} = \frac{126}{2}$$

$$= 63\ g\ equiv^{-1}$$

Volume of solution = 100 mL

$$= \frac{100}{1000} = 0.1\ L$$

$$\therefore (0.2\ equiv.L^{-1}) = \frac{\text{Mass of oxalic acid}}{(63\ g\ equiv^{-1}) \times (0.1L)}$$

Mass of the oxalic acid

$$= (0.2\ equiv\,L^{-1}) \times (63\ g\ equiv.^{-1}) \times (0.1L)$$

$$= 1.26\,g$$

Step II. ***Calculation of no. of molecules of oxalic acid***

Molar mass of oxalic acid = 126 g mol^{-1}

Now, 126 g of oxalic acid has molecules = (N_0)

= 6.022 x 10^{23}

1.26 g of oxalic acid has molecules

$$= \frac{6.022\times10^{23}}{126\,g}\ 1.26\,g$$

$$= 6.022\times10^{21}$$

9. Calculate the osmotic pressure of 8 % sucrose solution at 293 K. (R=8.314J$K^{-1}mol^{-1}$)

Soln:- The osmotic pressure is given by,

$$\pi = \frac{RTw}{MV}$$

Given that – w = 8g, M = 342 g;

($C_{12}H_{22}O_{11}$ – mol.mass is 342) *(Contd.....)*

ಕಾದಾಟ: ಅಸುನೀಗಿದ 'ಮಾರ್ತಾಂಡ'

ದಾಳಿಯಿಂದ ಗಾಯಗೊಂಡಿದ್ದ ಆನೆ
• ಮಾವುತ, ಕಾವಾಡಿಗರ ಆಕ್ರಂದನ

ಪ್ರಜಾವಾಣಿ ವಾರ್ತೆ



ಮೃತಪಟ್ಟ ಸಾಕಾನೆ ಮಾರ್ತಾಂಡ

ಮಡಿಕೇರಿ: ಕುಶಾಲನಗರ ತಾಲ್ಲೂಕಿನ ದುಬಾರೆ ಸಾಕಾನೆ ಶಿಬಿರದಲ್ಲಿ 26 ವರ್ಷದ ಆನೆ ಕಂಜನ್ ದಾಳಿಯಿಂದ ಗಾಯಗೊಂಡಿದ್ದ 53 ವರ್ಷದ ಮಾರ್ತಾಂಡ ಆನೆ ಮಂಗಳವಾರ ಮೃತಪಟ್ಟಿತು.

ಸಾವಿನ ಮಾಹಿತಿಯನ್ನು ವೈದ್ಯರು ಪ್ರಕಟಿಸುತ್ತಿದ್ದಂತೆ, ಅದರ ಮಾವುತ ಗೌಸ್ ಮತ್ತು ಕಾವಾಡಿ ನವೀನ್ ಅವರು ಕಳೇಬರದ ಮುಂದೆ ಕುಸಿದು ರೋದಿಸಿದರು. ಇನ್ನಿತರ ಮಾವುತರು ಮತ್ತು ಕಾವಾಡಿಗರ ಕಣ್ಣಲ್ಲೂ ನೀರು ಜಿನುಗಿತು. ನದಿಯಲ್ಲಿ ರ‍್ಯಾಫ್ಟಿಂಗ್ ಮಾಡುತ್ತಿದ್ದ ಸಿಬ್ಬಂದಿಯೂ ಮರುಗಿದರು.

ಸೋಮವಾರ ಕಾವೇರಿ ನದಿಯಲ್ಲಿ ಸ್ನಾನ ಮಾಡಿಸುವ ವೇಳೆಯಲ್ಲಿ ಕಂಜನ್ ಏಕಾಏಕಿ ಮಾರ್ತಾಂಡನ ಮೇಲೆ ದಾಳಿ ನಡೆಸಿತ್ತು. ಕೆಳಗೆ ಬಿದ್ದ ಮಾರ್ತಾಂಡನ ಅಡಿ ನೀರಿನಲ್ಲಿ ಸಿಲುಕಿದ್ದ ತಮಿಳುನಾಡಿನ ಪ್ರವಾಸಿ ಮಹಿಳೆ ಜೋಯ್ಸಿ ಮೃತಪಟ್ಟಿದ್ದರು. ಮಾರ್ತಾಂಡ ತೀವ್ರತರವಾಗಿ ಗಾಯಗೊಂಡಿತ್ತು. ಕಂಜನ್ ತನ್ನ ದಂತಗಳಿಂದ ಮಾರ್ತಾಂಡನ ಹೊಟ್ಟೆ, ಕಿವಿ, ಮರ್ಮಾಂಗದ ಭಾಗಕ್ಕೆ ತಿವಿದಿತ್ತು. ಕೆಳಗೆ ಬಿದ್ದ ಮೇಲೂ ಗುದ್ದಿತ್ತು.

'ದೇಹದಲ್ಲಿ 5ರಿಂದ 6 ಕಡೆ ಆಳವಾದ ಗಾಯಗಳಾಗಿದ್ದವು. ಚಿಕಿತ್ಸೆ ನೀಡಿದರೂ ಪ್ರಯೋಜನವಾಗಲಿಲ್ಲ' ಎಂದು ವೈದ್ಯರೊಬ್ಬರು ತಿಳಿಸಿದರು.

ಸೌಮ್ಯ ಸ್ವಭಾವದ ಮಾರ್ತಾಂಡ: ಹೆಸರು ಮಾರ್ತಾಂಡ ಎಂದಿದ್ದರೂ ಆನೆ ಸೌಮ್ಯ ಸ್ವಭಾವದ್ದಾಗಿತ್ತು. ಬೇರೆ ಆನೆಗಳ ತಂಟೆಗೆ ಹೋಗುತ್ತಿರಲಿಲ್ಲ. ಪ್ರವಾಸಿಗರು ಎಷ್ಟೇ ಕಿರಿಕಿರಿ ಮಾಡಿದರೂ ಸಹಿಸಿಕೊಳ್ಳುತ್ತಿತ್ತು. ಹೀಗಾಗಿ ಎಲ್ಲರಿಗೂ ಪ್ರಿಯವಾಗಿತ್ತು. ಪ್ರವಾಸಿಗರಿಂದ ಸ್ನಾನ ಮಾಡಿಸಲು ಸಿಬ್ಬಂದಿ ಇದನ್ನೇ ಮುಂದೆ ಬಿಡುತ್ತಿದ್ದರು. ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದರಿಂದ ಮಾವುತ, ಕಾವಾಡಿಗಳಿಗೂ ಅಚ್ಚುಮೆಚ್ಚಿನದ್ದಾಗಿತ್ತು.

ಹಾಸನ ಜಿಲ್ಲೆಯ ಆಲೂರಿನಲ್ಲಿ 2023ರಲ್ಲಿ ಸೆರೆ ಹಿಡಿಯಲಾಗಿದ್ದ ಈ ಮಾರ್ತಾಂಡ ಆನೆ ಮಖನಾ (ದಂತ ಇರದ ಗಂಡು ಆನೆ) ಜಾತಿಗೆ ಸೇರಿತ್ತು. ಬರೋಬ್ಬರಿ 4,500 ಕೆ.ಜಿ. ತೂಕವಿತ್ತು. 3 ವರ್ಷಗಳಿಂದ ದುಬಾರೆಯಲ್ಲಿ ಸಿಬ್ಬಂದಿಗೂ ಪ್ರಿಯವಾಗಿತ್ತು. ಹೀಗಾಗಿ, ಶಿಬಿರದಲ್ಲಿ ಶೋಕ ಮಡುಗಟ್ಟಿದೆ.

ಆನೆಯ ಕೆಳಗೆ ಸಿಲುಕಿ ಮೃತಪಟ್ಟ ಜೋಯ್ಸಿ ಅವರ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಸೋಮವಾರ ರಾತ್ರಿಯೇ ತಮಿಳುನಾಡಿಗೆ ಅವರ ಪತಿ ಒಯ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಾಧ್ಯಮದವರಿಗೆ ನಿರ್ಬಂಧ: ವರದಿ ಮಾಡಲು ಮಂಗಳವಾರ ಸಾಕಾನೆ ಶಿಬಿರಕ್ಕೆ ತೆರಳಿದ್ದ ಮಾಧ್ಯಮದವರಿಗೆ ಪ್ರವೇಶ ನಿರಾಕರಿಸಲಾಯಿತು.

ಕಾವೇರಿ ನದಿಯಲ್ಲಿ ನೀರು ತುಸು ಹೆಚ್ಚಿದ್ದರಿಂದ ನಡೆದು ಹೋಗಲು ಸಾಧ್ಯವಿರಲಿಲ್ಲ. ನದಿ ದಾಟಲು ಬೋಟ್ ಕೊಡಲಿಲ್ಲ. ನದಿಯ ಆಚೆ ದಡದಲ್ಲಿ ನಿಂತುಕೊಂಡೇ ಕೆಲವರು ದೃಶ್ಯಾವಳಿಗಳನ್ನು ಸೆರೆ ಹಿಡಿದರು.

ಮೈಸೂರು ದಸರೆಗೆ ಇನ್ನು 'ಕಂಜನ್' ಇಲ್ಲ



'ದಿಢೀರ್ ದಾಳಿ ಮಾಡಿ ಮಹಿಳೆ ಮತ್ತು ಸಾಕಾನೆ ಸಾವಿಗೆ ಕಾರಣವಾದ ಕಂಜನ್, ದಾಳಿ ನಡೆಸಿದ ಮರುಗಳಿಗೆಯೇ ಶಾಂತವಾಯಿತು. ಮೊದಲು ಹೇಗಿತ್ತೋ ಹಾಗೆಯೇ ಸಹಜ ಸ್ಥಿತಿಗೆ ಬಂತು' ಎಂದು ಡಿಸಿಎಫ್ ಅಭಿಷೇಕ್ ತಿಳಿಸಿದರು. 2014ರಲ್ಲಿ ಹಾಸನ ಜಿಲ್ಲೆಯ ಯಸಳೂರಿನ ಬಳಿ ಕಂಜನ್‌ನನ್ನು ಹಿಡಿಯಲಾಗಿತ್ತು. ಮೂರು ಬಾರಿ ಮೈಸೂರು ದಸರಾ ಮಹೋತ್ಸವದಲ್ಲಿ ಅದು ಭಾಗವಹಿಸಿತ್ತು.

'ಮೂರು ಬಾರಿ ದಾಳಿ ನಡೆಸಿರುವ ಅದನ್ನು ಮೈಸೂರು ದಸರೆ ಉತ್ಸವದಲ್ಲಿ ಮತ್ತೆ ಬಳಸಬಾರದು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದಾರೆ.

ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಜಾರಿಗೊಳಿಸುವವರೆಗೂ ದುಬಾರೆ ಸಾಕಾನೆ ಶಿಬಿರಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಎಸ್‌ಒಪಿ ಜಾರಿಗೆ ಸಿದ್ಧತೆಗಳು ನಡೆಯುತ್ತಿವೆ

ಅಭಿಷೇಕ್, ಡಿಸಿಎಫ್

ಚಿಟಿಕೆ ಸುದ್ದಿ

ವಸತಿ ಶಾಲೆ ಪ್ರವೇಶ: ಫಲಿತಾಂಶ ಪ್ರಕಟ

ಬೆಂಗಳೂರು: ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಡಾ.ಬಿ. ಆರ್.ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ ಸೇರಿದಂತೆ ಸರ್ಕಾರಿ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಈ ಸೀಟು ಹಂಚಿಕೆಗೆ ಆಕ್ಷೇಪಣೆಗಳು ಅಥವಾ ಬದಲಾವಣೆಗಳು ಇದ್ದಲ್ಲಿ ಮೇ 21ರೊಳಗೆ ಆಯಾ ಶಾಲೆಗಳಲ್ಲಿಯೇ ಲಿಖಿತವಾಗಿ ಸಲ್ಲಿಸಲು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಸೂಚಿಸಿದ್ದಾರೆ.

ಹರ್ಷ ಗುಪ್ತ ಕೆಎಟಿ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷರನ್ನಾಗಿ ಹಿರಿಯ ಐಎಎಸ್ ಅಧಿಕಾರಿ ಹರ್ಷ ಗುಪ್ತ ಅವರನ್ನು ನೇಮಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲಾಧಿಕಾರಿ ನಾಗರಾಜ್ ಎಂ.ಎನ್. ಅವರನ್ನು ಕರ್ನಾಟಕ ಏಡ್ಸ್ ನಿಯಂತ್ರಣ ಸೊಸೈಟಿಯ ಒಂಬುಡ್ಸ್‌ಮನ್ ಆಗಿ ವರ್ಗಾಯಿಸಲಾಗಿದೆ. ಚಿಕ್ಕಮಗಳೂರು ಜಿಲ್ಲಾಧಿಕಾರಿ ಹುದ್ದೆಗೆ ಭನ್ವರ್ ಲಾಲ್ ಸಿಂಗ್ ಮೀನಾ ಅವರನ್ನು ವರ್ಗಾಯಿಸಲಾಗಿದೆ. ರಾಹುಲ್ ಶರಣಪ್ಪ ಸಂಕನೂರ ಅವರನ್ನು ಕಲಬುರಗಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ವರ್ಗಾಯಿಸಲಾಗಿದೆ.

ನಾಲ್ಕೂವರೆ ತಿಂಗಳಲ್ಲೇ ಡಿ.ಸಿ ವರ್ಗಾವಣೆ

ಚಿಕ್ಕಮಗಳೂರು: ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ನಾಲ್ಕೂವರೆ ತಿಂಗಳಲ್ಲೇ ಎನ್.ಎಂ. ನಾಗರಾಜ್ ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.



ಹೈಕೋರ್ಟ್ ಆದೇಶದಂತೆ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಎಣಿಕೆ ಮೇ 2ರಂದು ನಡೆದಿತ್ತು. ನಾಗರಾಜ್ ಅವರು ಜಿಲ್ಲಾ ಚುನಾವಣಾಧಿಕಾರಿಯಾಗಿದ್ದರೆ, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಗೌರವಕುಮಾರ್ ಶೆಟ್ಟಿ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

2023ರಲ್ಲಿ 201 ಮತಗಳಿಂದ ಜಯ ಸಾಧಿಸಿದ್ದ ಟಿ.ಡಿ.ರಾಜೇಗೌಡ ಅವರಿಗೆ ಮರು ಎಣಿಕೆ ನಂತರ 255 ಮತ ಕಡಿಮೆಯಾಗಿದ್ದವು. ಬಿಜೆಪಿಯ ಡಿ.ಎನ್. ಜೀವರಾಜ್ ಅವರು ಗೆಲುವು ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ಘೋಷಿಸಿದ್ದರು.

'ಶೃಂಗೇರಿ ಕ್ಷೇತ್ರದ ಬೆಳವಣಿಗೆ ಕಾರಣಕ್ಕೆ ವರ್ಗಾವಣೆಯಾಗಿಲ್ಲ. ಸರ್ಕಾರ ನಿರ್ಧಾರ ತೆಗೆದುಕೊಂಡಿದೆ, ಅದನ್ನು ಪಾಲಿಸುವುದಷ್ಟೇ ನಮ್ಮ ಕೆಲಸ' ಎಂದು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಪ್ರತಿಕ್ರಿಯಿಸಿದರು.

ನೀಲಣ್ಣವರ ವಿರುದ್ಧ ದೂರು ದಾಖಲು

ಬೆಳಗಾವಿ: ಸಾವಿರಾರು ಕೋಟಿ ರೂಪಾಯಿ ಅನಧಿಕೃತ ಬಡ್ಡಿ ವ್ಯವಹಾರ ಮಾಡಿದ ಆರೋಪ ಎದುರಿಸುತ್ತಿರುವ ಇಲ್ಲಿನ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರ ವಿರುದ್ಧ ಕಾಗವಾಡ ತಾಲ್ಲೂಕಿನ ಐನಾಪುರ ಗ್ರಾಮದ ಕೃಷ್ಣ ಅಪ್ಪಣ್ಣ ಅಪ್ರಾಜ್ ದೂರು ದಾಖಲಿಸಿದ್ದಾರೆ.

'ಶೇ 36ರಷ್ಟು ಬಡ್ಡಿ ನೀಡುವುದಾಗಿ ನಂಬಿಸಿ ನನ್ನಿಂದ ಇದೇ ಏಪ್ರಿಲ್ 4 ರಿಂದ ಮೇ 8ರವರೆಗೆ ₹ 5 ಲಕ್ಷ ಹಣ ಹೂಡಿಕೆ ಮಾಡಿಸಿಕೊಂಡಿದ್ದಾರೆ. ಹಣ ಹೂಡಿಕೆ ಮಾಡಿದ ಕೆಲವೇ ದಿನಗಳಲ್ಲಿ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು ಮಾಧ್ಯಮಗಳಿಗೆ ಹೇಳಿಕೆ ನೀಡಿದಾಗಲೇ ವಿಷಯ ಗೊತ್ತಾಗಿದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಸಿಐಡಿ ಅಧಿಕಾರಿಗಳು ಮಂಗಳವಾರ ಶಿವಾನಂದ ಅವರನ್ನು ಬೆಂಗಳೂರಿಗೆ ಕರೆದೊಯ್ದರು ಎಂದು ಮೂಲಗಳು ಖಚಿತಪಡಿಸಿವೆ.

ಕಲಬುರಗಿ ಜಿಲ್ಲೆಯಲ್ಲಿ 500 ಎಕರೆ ಜಮೀನಿನಲ್ಲಿ ಬಾಳೆ ಗಿಡಗಳಿಗೆ ಹಾನಿ

'ಕಲ್ಯಾಣ'ದ ವಿವಿಧೆಡೆ ಉತ್ತಮ ಮಳೆ



ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಭಾರಿ ಬಿರುಗಾಳಿ ಸಹಿತ ಮಳೆ ಸುರಿಯಿತು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ವಿವಿಧೆಡೆ ಮಂಗಳವಾರ ಉತ್ತಮ ಮಳೆಯಾಗಿದೆ. ಬಿಸಿಲಿನ ತಾಪಕ್ಕೆ ಕಂಗೆಟ್ಟಿದ್ದ ಜನರಿಗೆ ಮಳೆ ತುಸು ತಂಪೆರೆದಿದೆ.

ಕಲಬುರಗಿ ಜಿಲ್ಲೆಯ ಅಫಜಲಪುರ, ಚಿಂಚೋಳಿ, ಕಾಳಗಿ ತಾಲ್ಲೂಕುಗಳಲ್ಲಿ ಮಳೆ ಸುರಿದಿದೆ. ಅಫಜಲಪುರ ತಾಲ್ಲೂಕಿನಲ್ಲಿ ಅಕಾಲಿಕ ಮಳೆಗೆ 500 ಎಕರೆ ಜಮೀನಿನಲ್ಲಿ ಬಾಳೆ ಗಿಡಗಳು ನೆಲಕ್ಕುರುಳಿವೆ.

ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಅಂಕುಶದೊಡ್ಡಿಯಲ್ಲಿ ಸೋಮವಾರ ಸಿಡಿಲು ಬಡಿದು ಎರಡು ಹಸು, 20ಕ್ಕೂ ಹೆಚ್ಚು ಕೋಳಿಗಳು ಮೃತಪಟ್ಟಿವೆ. ಜೋಗಿನ ಮನೆ ಬಳಿ ಮರ ಬಿದ್ದು 3 ಕಾರು ಜಖಂಗೊಂಡಿವೆ.

ಬೀದರ್ ಜಿಲ್ಲೆಯ ಭಾಲ್ಕಿ, ಕಮಲನಗರ, ಚಿಟಗುಪ್ಪ, ಔರಾದ್‌ನಲ್ಲಿ ಧಾರಾಕಾರ ಮಳೆಯಾಗಿದೆ. ಬೀದರ್ ತಾಲ್ಲೂಕಿನ ಮರಕಲ್ ಗ್ರಾಮದಲ್ಲಿ ಹಾಗೂ ಬಾವಗಿ, ಕಮಠಾಣ ಗ್ರಾಮದಲ್ಲೂ ಮನೆಯ ಶೀಟುಗಳು ಹಾರಿ ಹೋಗಿವೆ.

ಅಣದೂರ ಸಮೀಪ ಬೀದರ್–ಹುಮನಾಬಾದ್ ಮುಖ್ಯರಸ್ತೆಗೆ ವಿದ್ಯುತ್ ಕಂಬ ಉರುಳಿ ಸಂಚಾರಕ್ಕೆ ತೊಡಕಾಯಿತು. ಬಿರುಗಾಳಿ ತೀವ್ರವಾಗಿದ್ದರಿಂದ ಜನ ಹೊರಗೆ ಬರಲು ಹಿಂಜರಿದರು.

ಔರಾದ್ ತಾಲ್ಲೂಕಿನ ಗಡಿಕುಶನೂರದಲ್ಲಿ ಮರ ಬಿದ್ದು ಹುಸೇನಸಾಬ್ ಅವರು ಸಾಕಿದ್ದ ಎತ್ತು ಮೃತಪಟ್ಟಿದೆ. ಭಾಲ್ಕಿ ತಾಲ್ಲೂಕಿನ ಜಮಖಂಡಿಯಲ್ಲಿ ಸಿಡಿಲು ಬಡಿದು ರೈತ ಶ್ರೀಧರ ಬೋರ್ಕುಡೆ ಅವರಿಗೆ ಸೇರಿದ ಎತ್ತು ಮೃತಪಟ್ಟಿದೆ. ಯಾದಗಿರಿ ನಗರದಲ್ಲಿ ಗುಡುಗು, ಮಿಂಚು ಸಹಿತ ಮಳೆ ಸುರಿದಿದೆ.

ಮರ, ಕಂಬಗಳು ಧರೆಗೆ

ಬಳ್ಳಾರಿ ವರದಿ: ಬಳ್ಳಾರಿ ನಗರ ಸೇರಿ ಜಿಲ್ಲೆಯಲ್ಲಿ ಮಂಗಳವಾರ ಮಧ್ಯಾಹ್ನ ಎರಡೂವರೆ ಗಂಟೆ ಗುಡುಗು ಸಹಿತ ಭಾರಿ ಮಳೆ ಸುರಿದಿದ್ದು, ಮರ ಮತ್ತು ವಿದ್ಯುತ್ ಕಂಬಗಳು ಧರೆಗುರುಳಿದವು.

ವಿವಿಧೆಡೆ ವಿದ್ಯುತ್ ಕಂಬಗಳು ಉರುಳಿದ್ದು, ಬಳ್ಳಾರಿ ನಗರದಾದ್ಯಂತ ವಿದ್ಯುತ್ ಕಡಿತವಾಯಿತು. ಸಮಸ್ಯೆ ಸರಿಪಡಿಸಲು ಜೆಸ್ಕಾಂ ಸಿಬ್ಬಂದಿ ಪರದಾಡಿದರು. ಅಂಡರ್‌ಪಾಸ್‌ಗಳಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ನಗರದಲ್ಲಿ ಕನಿಷ್ಠ 500 ಮರಗಳು ಬಿದ್ದಿವೆ ಎಂದು ಪಾಲಿಕೆ ಆಯುಕ್ತ ಮಂಜುನಾಥ್ ಹೇಳಿದರು. 60 ಕಂಬಗಳು ಉರುಳಿ ಬಿದ್ದಿವೆ ಎಂದು ಜೆಸ್ಕಾಂ ಅಧಿಕಾರಿಯೊಬ್ಬರು ತಿಳಿಸಿದರು.

ಹಲವೆಡೆ ಒಂದು ವಾರ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರದಿಂದ ಮುಂದಿನ ಒಂದು ವಾರ ಭಾರಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆ ಬಿಟ್ಟು, ರಾಜ್ಯದ ಉಳಿದ ಎಲ್ಲ ಜಿಲ್ಲೆಗಳಿಗೆ ಬುಧವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ ಹಾಗೂ ಬಾಗಲಕೋಟೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು ಜಿಲ್ಲೆಯ ಕೆಲ ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆಯಿದೆ. ಬಳ್ಳಾರಿ, ರಾಮನಗರ, ಚಾಮರಾಜನಗರ, ವಿಜಯನಗರ, ಶಿವಮೊಗ್ಗ, ದಾವಣಗೆರೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರಿನ ಕೆಲವೆಡೆ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕೆಲ ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. 24ರಿಂದ ರಾಜ್ಯದಾದ್ಯಂತ ಗಾಳಿಯ ತೀವ್ರತೆ ಕಡಿಮೆಯಾಗಿ, ಕೆಲವೆಡೆ ಮಳೆ ಮುಂದುವರಿಯುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದ ಕೆಲವೆಡೆ ಮಳೆಯಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ, ಬೆಳಗಾವಿಯ ಬೈಲಹೊಂಗಲದಲ್ಲಿ ತಲಾ 6 ಸೆಂ.ಮೀ. ಮಳೆ ಸುರಿದಿದೆ. ಚಿತ್ರದುರ್ಗದ ನಾಯಕನಹಟ್ಟಿ, ತುಮಕೂರಿನ ವೈ.ಎನ್. ಹೊಸಕೋಟೆ ಹಾಗೂ ಮಂಡ್ಯದ ಮದ್ದೂರಿನಲ್ಲಿ ತಲಾ 5 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಬಿದ್ದಿದೆ.

ಆನ್‌ಲೈನ್‌ನಲ್ಲಿ ಔಷಧ ಮಾರಾಟಕ್ಕೆ ವ್ಯಾಪಾರಿಗಳ ವಿರೋಧ

ಮಳಿಗೆ ಬಂದ್: ಸಿಗದ ಪೂರ್ಣ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್‌ನಲ್ಲಿ ಔಷಧ ಮಾರಾಟ ವಿರೋಧಿಸಿ ಔಷಧ ವ್ಯಾಪಾರಿಗಳ ಸಂಘವು ದೇಶದಾದ್ಯಂತ ಔಷಧ ಮಳಿಗೆಗಳನ್ನು ಬುಧವಾರ (ಮೇ20) ಬಂದ್ ಮಾಡುವಂತೆ ನೀಡಿರುವ ಕರೆಗೆ ರಾಜ್ಯದ ಔಷಧ ವ್ಯಾಪಾರಿಗಳಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.



ಇ-ಫಾರ್ಮಸಿ ವೇದಿಕೆಗಳು ಒದಗಿಸುವ ಭಾರಿ ರಿಯಾಯಿತಿಯನ್ನು ವಿರೋಧಿಸಿರುವ ಆಲ್ ಇಂಡಿಯಾ ಆರ್ಗನೈಸೇಷನ್ ಆಫ್ ಕೆಮಿಸ್ಟ್ ಆ್ಯಂಡ್ ಡ್ರಗ್ಗಿಸ್ಟ್, ದೇಶದಾದ್ಯಂತ ಮುಷ್ಕರಕ್ಕೆ ಕರೆ ನೀಡಿದೆ.

ಕರ್ನಾಟಕ ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಬಂದ್‌ಗೆ ನೈತಿಕ ಬೆಂಬಲ ವ್ಯಕ್ತಪಡಿಸಿದ್ದು, ಕಪ್ಪುಪಟ್ಟಿ ಧರಿಸಿ ಕಾರ್ಯನಿರ್ವಹಿಸುವಂತೆ ಔಷಧ ವ್ಯಾಪಾರಿಗಳಿಗೆ ಕರೆ ನೀಡಿದೆ. ಬೆಂಗಳೂರು ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಫೋರಂ ಔಷಧ ಮಳಿಗೆಗಳನ್ನು ಬಂದ್ ಮಾಡುವುದಾಗಿ ತಿಳಿಸಿದೆ. ರಾಜ್ಯದಲ್ಲಿ 45 ಸಾವಿರ ಚಿಲ್ಲರೆ ಔಷಧ ವ್ಯಾಪಾರಿಗಳಿದ್ದು, ಹೆಚ್ಚಿನವರು ಯಥಾ ಪ್ರಕಾರ ಮಳಿಗೆಗಳನ್ನು ತೆರೆದು ಔಷಧ ಮಾರಾಟ ಮಾಡುವ ಸಾಧ್ಯತೆಯಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿನ ಔಷಧ ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ.

ಈ ನಡುವೆ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಯುಕ್ತ ಕೆ.ಶ್ರೀನಿವಾಸ ಅವರು ಔಷಧ ವ್ಯಾಪಾರಿಗಳ ಜತೆಗೆ ಸಭೆ ನಡೆಸಿ, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಜೀವರಕ್ಷಕ ಔಷಧಗಳು ಜನರಿಗೆ ಲಭ್ಯವಾಗುವಂತಾಗಲು ಆಸ್ಪತ್ರೆ ಹಾಗೂ ನರ್ಸಿಂಗ್ ಹೋಮ್ ಆವರಣದಲ್ಲಿ ಇರುವ ಔಷಧ ಮಳಿಗೆಗಳನ್ನು ಮುಚ್ಚದಿರಲು ಮನವಿ ಮಾಡಿದ್ದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಜೀವರಕ್ಷಕ ಔಷಧ ಕೊರತೆಯಾಗದಂತೆ ಕ್ರಮವಹಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ್ದರು.

'ಆನ್‌ಲೈನ್ ಔಷಧ ಮಾರಾಟ ಹಾಗೂ ಇ-ಫಾರ್ಮಸಿ ವೇದಿಕೆಗಳು ಒದಗಿಸುವ ಭಾರಿ ರಿಯಾಯಿತಿಗೆ ನಮ್ಮ ವಿರೋಧವಿದೆ. ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಕಪ್ಪು ಪಟ್ಟಿ ಧರಿಸಿ ನೈತಿಕ ಬೆಂಬಲ ನೀಡಲಾಗುತ್ತಿದೆ. ಶೇ 85ರಷ್ಟು ಮಳಿಗೆಗಳು ಎಂದಿನಂತೆ ಕಾರ್ಯನಿರ್ವಹಿಸಲಿದ್ದು, ಶೇ 10ರಿಂದ ಶೇ 15ರಷ್ಟು ಮಳಿಗೆಗಳ ವ್ಯಾಪಾರಿಗಳು ಮಾತ್ರ ಬಂದ್ ಮಾಡಲು ಒಲವು ತೋರಿದ್ದಾರೆ. ರೋಗಿಗಳಿಗೆ ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಸೇವೆ ನೀಡಲು ಸೂಚಿಸಲಾಗಿದೆ' ಎಂದು ಕರ್ನಾಟಕ ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಆರ್ಗನೈಸೇಷನ್ ಅಧ್ಯಕ್ಷ ಸಿ.ಜಯರಾಮ್ ತಿಳಿಸಿದರು.

ಬೆಂಗಳೂರು ಫಾರ್ಮಾ ರಿಟೇಲರ್ಸ್ ಆ್ಯಂಡ್ ಡಿಸ್ಟ್ರಿಬ್ಯೂಟರ್ಸ್ ಫೋರಂ ಅಧ್ಯಕ್ಷ ರಘುನಾಥ ರೆಡ್ಡಿ, 'ಇ-ಫಾರ್ಮಸಿಗಳಲ್ಲಿ ನಿಯಂತ್ರಣವಿಲ್ಲದೇ ಔಷಧ ಮಾರಾಟ ಮಾಡಲಾಗುತ್ತಿದೆ. ನಕಲಿ ವೈದ್ಯರ ಚೀಟಿಗಳನ್ನು ಬಳಕೆ ಮಾಡಲಾಗುತ್ತಿದೆ. ಈ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಸ್ಪಂದಿಸುತ್ತಿಲ್ಲ. ಸಾರ್ವಜನಿಕರಿಗೆ ಹಾಗೂ ರೋಗಿಗಳಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಔಷಧಗಳನ್ನು ಪೂರೈಕೆ ಮಾಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ' ಎಂದರು.

ಸಾರಿಗೆ ನೌಕರರ ಮುಷ್ಕರ ವಾಪಸ್

ಒಂದನೇ ಪುಟದಿಂದ...

ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಶನ್ (ಎಐಟಿಯುಸಿ), ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ವಿಶ್ವ ಕಾರ್ಮಿಕ ಕೂಟ ಸಾರಿಗೆ ನಿಗಮಗಳ ನೌಕರರ ವಲಯ ಸಂಘಟನೆಗಳು ಜಂಟಿ ಕ್ರಿಯಾ ಸಮಿತಿ ಅಡಿ ಮುಷ್ಕರಕ್ಕೆ ಮುಂದಾಗಿದ್ದವು.

'ಕಾರ್ಮಿಕರ ವಿರುದ್ಧ ಪಿಐಎಲ್ ಬಳಕೆ': 'ಸಾರಿಗೆ ನಿಗಮಗಳ ನೌಕರರು ತಮ್ಮ ಹಕ್ಕುಗಳಿಗಾಗಿ ಮುಷ್ಕರಕ್ಕೆ ಮುಂದಾಗಿದ್ದರು. ಅದನ್ನು ತಡೆಯಲು ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ತಂತ್ರವನ್ನು ಸರ್ಕಾರ ಬಳಸಿಕೊಂಡಿದೆ' ಎಂದು ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷೆ ಎಸ್.ವರಲಕ್ಷ್ಮಿ ಅವರು ಸುದ್ದಿಗೋಷ್ಠಿಯಲ್ಲಿ ದೂರಿದರು.

'ಹೈಕೋರ್ಟ್‌ನಲ್ಲಿ ಅರ್ಜಿ ಇನ್ನೂ ವಿಚಾರಣೆಯಲ್ಲಿ ಇದ್ದು, ಅಂತಿಮ ಆದೇಶದ ನಂತರ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದರು.

ಸಾರಿಗೆ ನಿಗಮಗಳ ನೌಕರರು ತಮ್ಮ ಮೂಲ ವೇತನದಲ್ಲಿ ಶೇ 25ರಷ್ಟು ಹೆಚ್ಚಳ ಮಾಡಿ, 2024ರ ಜನವರಿಯಿಂದ ಪೂರ್ವಾನ್ವಯ ಮಾಡುವಂತೆ ಒತ್ತಾಯಿಸಿದ್ದರು. ರಾಜ್ಯ ಸರ್ಕಾರವು 2025ರ ಏಪ್ರಿಲ್ ಒಂದರಿಂದ ಪೂರ್ವಾನ್ವಯವಾಗುವಂತೆ ಮೂಲ ವೇತನದಲ್ಲಿ ಶೇ 12.50ರಷ್ಟು ಏರಿಕೆಗೆ ಆದೇಶಿಸಿತ್ತು. ಸರ್ಕಾರದ ಈ ನಡೆಯನ್ನು ವಿರೋಧಿಸಿ ರಾಜ್ಯದಾದ್ಯಂತ ಮುಷ್ಕರಕ್ಕೆ ಜಂಟಿ ಕ್ರಿಯಾ ಸಮಿತಿ ಕರೆ ನೀಡಿತ್ತು.

ಮುಷ್ಕರಕ್ಕೆ ಹೈಕೋರ್ಟ್ ನಿರ್ಬಂಧ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆ ಕೊಟ್ಟಿರುವ ಸಾರಿಗೆ ನೌಕರರ ಮುಷ್ಕರಕ್ಕೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ಮುಷ್ಕರವನ್ನು ಆಕ್ಷೇಪಿಸಿ ನಗರದ ಮನೆ ಕೆಲಸಗಾರ್ತಿ ಸಿ.ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ. ಶ್ರೀಧರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ಅವರು, 'ಕೂಡಲೇ ಮುಷ್ಕರ ಹಿಂಪಡೆಯಲು ಜಂಟಿ ಕ್ರಿಯಾ ಸಮಿತಿಗೆ ನಿರ್ದೇಶಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಸರ್ಕಾರ ಸಾರಿಗೆ ಸಂಘಟನೆಗಳ ಜೊತೆ ಚರ್ಚೆ ನಡೆಸಲು ಮುಂದಾಗಬೇಕು' ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ ಪೂಜಾರಿ ಅವರಿಗೆ ನಿರ್ದೇಶಿಸಿತು. ಜತೆಗೆ, ರಾಜ್ಯ ಸರ್ಕಾರ ಮತ್ತು ಸಾರಿಗೆ ಸಂಘಟನೆಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಸಿರಿಗೆರೆ ಮಠದ ರವಿಚಂದ್ರ ವಿರುದ್ಧ ಎಫ್‌ಐಆರ್



ಸಿರಿಗೆರೆ: ಇಲ್ಲಿನ ಶಿವಕುಮಾರ ಸ್ವಾಮೀಜಿ ವಿದ್ಯಾರ್ಥಿ ನಿಲಯದ ಬಾಲಕರ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ತರಳಬಾಳು ಮಠದ ಸಂಪರ್ಕದಲ್ಲಿದ್ದ ರವಿಚಂದ್ರ ವಿರುದ್ಧ ಭರಮಸಾಗರ ಪೊಲೀಸ್ ಠಾಣೆಯಲ್ಲಿ ಸೋಮವಾರ ಎಫ್‌ಐಆರ್ ದಾಖಲಾಗಿದೆ.

ವಿದ್ಯಾರ್ಥಿಗಳನ್ನು ರವಿಚಂದ್ರ ಹಿಡಿದು ಥಳಿಸುವ, ತಲೆ ಹಿಡಿದು ಗೋಡೆಗೆ ಗುದ್ದುವ, ಕಾಲಿನಿಂದ ತುಳಿಯುವ ದೃಶ್ಯಗಳಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಸ್ಥಳೀಯರು ಮಕ್ಕಳ ಕಲ್ಯಾಣ ಸಮಿತಿಗೆ ಈ ವಿಡಿಯೊ ಕಳುಹಿಸಿದ್ದರು. ಬಳಿಕ ಸಮಿತಿಯವರು, ಪೊಲೀಸರೊಂದಿಗೆ ಹಾಸ್ಟೆಲ್‌ಗೆ ಭೇಟಿ ನೀಡಿ ಮಹಜರು ನಡೆಸಿದ್ದರು. ನಂತರ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಎಫ್‌ಐಆರ್ ಹಾಕಿದ್ದಾರೆ. ಆರೋಪಿ ತಲೆಮರೆಸಿಕೊಂಡಿದ್ದಾರೆ.





ತುಮಕೂರಿನಲ್ಲಿ ಮಂಗಳವಾರ ನಡೆದ 'ಸಾರ್ಥಕ ಸೇವೆಯ ಸಮರ್ಪಣೆ' ಕಾರ್ಯಕ್ರಮದಲ್ಲಿ ನವ ಕರ್ನಾಟಕ ಅಭಿವೃದ್ಧಿ ಮಾದರಿಯ ವಸ್ತು ಪ್ರದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 'ತುಮಕೂರು ಮೆಟ್ರೊ' ಮಾದರಿ ವೀಕ್ಷಿಸಿದರು. ಸಚಿವರಾದ ಜಿ.ಪರಮೇಶ್ವರ, ಎಂ.ಬಿ.ಪಾಟೀಲ, ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿ.ಪಂ ಸಿಇಒ ಬಿ.ವಿ.ಅಶ್ವಿಜ, ಉಪವಿಭಾಗಾಧಿಕಾರಿ ನಾಹಿದಾ ಜಮ್ ಜಮ್ ಇತರರು ಹಾಜರಿದ್ದರು (ಎಡಚಿತ್ರ) ಕಾರ್ಯಕ್ರಮದಲ್ಲಿ ಫಲಾನುಭವಿಗಳು ಹಕ್ಕುಪತ್ರ ಪ್ರದರ್ಶಿಸಿದರು

ಕಲ್ಪತರು ನಾಡಿನಲ್ಲಿ ಸಾಧನೆಯ ಸಡಗರ

ತುಮಕೂರಿನಲ್ಲಿ ಸಾಧನಾ ಸಮಾವೇಶ; ಸಾರ್ಥಕ ಸೇವೆ ಸಮರ್ಪಣೆಗೆ ಸಾಕ್ಷಿಯಾದ ಜನಸ್ತೋಮ

ಪ್ರಜಾವಾಣಿ ವಾರ್ತೆ

ತುಮಕೂರು: ರಾಜ್ಯ ಸರ್ಕಾರದ ಮೂರು ವರ್ಷದ ಸಾಧನಾ ಸಮಾವೇಶ 'ಸಾರ್ಥಕ ಸೇವೆಯ ಸಮರ್ಪಣೆ'ಗೆ ರಾಜ್ಯದ ಮೂಲೆ, ಮೂಲೆಗಳಿಂದ ಬಂದಿದ್ದ ಸಾವಿರಾರು ಜನರು ಸಾಕ್ಷಿಯಾದರು.

ಸೋಮವಾರ ರಾತ್ರಿ ಸುರಿದ ಮಳೆ ತಂಪೆರೆದಿತ್ತು. ಹಾಗಾಗಿ ನಗರದಲ್ಲಿ ಮಂಗಳವಾರ ಬಿಸಿಲು ಕೊಂಚ ತಗ್ಗಿ ಆಹ್ಲಾದಕರ ವಾತಾವರಣವಿತ್ತು. ಬೆಳಗ್ಗೆಯಿಂದಲೇ ಗುಂಪು ಗುಂಪಾಗಿ ಜನರು ನಗರದ ಜೂನಿಯರ್ ಕಾಲೇಜು ಮೈದಾನದ ಕಡೆಗೆ ಹೆಜ್ಜೆ ಹಾಕಿದರು.

2,500ಕ್ಕೂ ಹೆಚ್ಚು ಬಸ್‌ಗಳಲ್ಲಿ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಬಂದಿದ್ದರು. ಮಧ್ಯಾಹ್ನ 12ರ ಹೊತ್ತಿಗೆ ಕಾಲೇಜು ಮೈದಾನದಲ್ಲಿ ಸಾವಿರಾರು ಜನ ಸೇರಿದ್ದರು. ಎಲ್ಲರಿಗೂ ಅಚ್ಚುಕಟ್ಟಾಗಿ ಆಸನ, ಊಟ, ನೀರಿನ ವ್ಯವಸ್ಥೆ ಮಾಡಲಾಗಿತ್ತು. ರೈತರು ಕೃಷಿ ಕೆಲಸಗಳಿಗೆ ವಿರಾಮ ನೀಡಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸರ್ಕಾರದ ಮೂರು ವರ್ಷದ ಸಾಧನೆಯನ್ನು ಚಿತ್ರಗಳಲ್ಲಿ ಕಟ್ಟಿ ಕೊಡಲಾಗಿತ್ತು. ಜೊತೆಗೆ ಅದಕ್ಕೆ ಡಿಜಿಟಲ್ ಸ್ಪರ್ಶ ನೀಡಲಾಗಿತ್ತು. ಕಂದಾಯ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಒಳಗೊಂಡಂತೆ ಇತರೆ 11 ಇಲಾಖೆಗಳ ಸಾಧನೆ ಮತ್ತು ಸರ್ಕಾರದ ಸವಲತ್ತು ಕುರಿತು ಮಾಹಿತಿ ನೀಡಲು ಬೃಹತ್ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಸುಮಾರು 800 ಚಿತ್ರಗಳ ಪ್ರದರ್ಶನ ಗಮನ ಸೆಳೆಯಿತು.

ನಗರದ ಎಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ನಾಲ್ವರು ಪೊಲೀಸ್ ವರಿಷ್ಠಾಧಿಕಾರಿಗಳು, ಒಂಬತ್ತು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ, 26 ಡಿವೈಎಸ್‌ಪಿ ಸೇರಿ ನಾಲ್ಕು ಸಾವಿರಕ್ಕೂ ಹೆಚ್ಚು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಸಮಾವೇಶಕ್ಕೆ ಭದ್ರತೆ ಒದಗಿಸಿದ್ದರು.

ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ನಾಯಕರ ಹಟ್ಟಿ ನಿವಾಸಿಗಳಿಗೆ ಸಮಾವೇಶದ ಮೂಲಕ ಕಂದಾಯ ದಾಖಲೆ ಒದಗಿಸಲಾಯಿತು. ಕೊರಟಗೆರೆ ತಾಲ್ಲೂಕಿನ ಕಾಶಾಪುರದ ಹಕ್ಕಿಪಿಕ್ಕಿ ಕಾಲೊನಿಯಿಂದ ಹಿಡಿದು, ಪಾವಗಡದ ತಿರುಮಣಿವರೆಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸರ್ಕಾರದ ಸವಲತ್ತು ತಲುಪಿಸಲಾಯಿತು. ಇ-ಪೌತಿ ಖಾತೆ, ದರಖಾಸ್ತು ಪೋಡಿ, ಕಂದಾಯ ಗ್ರಾಮದ ಹಕ್ಕುಪತ್ರ ವಿತರಿಸಲಾಯಿತು.

ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಹಕ್ಕುಪತ್ರ ಪಡೆದು ನಗೆ ಬೀರಿದರು. ನೇಮಕಾತಿ ಆದೇಶ ಪತ್ರ ಪಡೆದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಖುಷಿಯಿಂದ ವೇದಿಕೆಯಿಂದ ಇಳಿದರು. ಹಕ್ಕುಪತ್ರ, ಕಂದಾಯ ಇಲಾಖೆಯ ಇತರೆ ದಾಖಲೆ ಪಡೆದ ಫಲಾನುಭವಿಗಳು ಕೃತಜ್ಞತಾ ಭಾವದಿಂದ ಊರುಗಳಿಗೆ ಮರಳಿದರು.

ಗಮನ ಸೆಳೆದ ಅಭಿವೃದ್ಧಿ ಮಾದರಿ: 'ನವ ಕರ್ನಾಟಕ' ಅಭಿವೃದ್ಧಿ ಮಾದರಿಯ ವಸ್ತು ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಜಿಲ್ಲೆಯ ಆಡಳಿತದ ಕಳೆದ ಮೂರು ವರ್ಷದ ಹಾದಿಯನ್ನು ಚಿತ್ರಗಳಲ್ಲಿ ಕಟ್ಟಿಕೊಡಲಾಯಿತು.

ಬೆಂಗಳೂರಿನ ಮಾದಾವರದಿಂದ ತುಮಕೂರಿನ ತನಕ ಮೆಟ್ರೊ ವಿಸ್ತರಿಸಿದರೆ ನಗರದ ಚಿತ್ರಣ ಹೇಗಿರುತ್ತದೆ ಎಂಬುದನ್ನು ವಸ್ತು ಪ್ರದರ್ಶನದ ಮೂಲಕ ಜನರಿಗೆ ತಿಳಿಸಲಾಯಿತು.

ಮೆಟ್ರೊ ನಿಲ್ದಾಣ, ಸಾಗುವ ಮಾರ್ಗ, ದೂರದ ಕುರಿತು ಮಾಹಿತಿಯೂ ಒಳಗೊಂಡಿತ್ತು. ಇದು ಜನರ ಗಮನ ಸೆಳೆಯಿತು. ಜನರು ಮೆಟ್ರೊ ಮಾದರಿ ಜತೆಗೆ ಫೋಟೊ ತೆಗೆದುಕೊಂಡರು.

'ತುಮಕೂರು ದಸರಾ', ರಾಜ್ಯ ಒಲಿಂಪಿಕ್ಸ್, ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್, 'ತುಮಕೂರು ಓಪನ್' ವಿಶ್ವ ಟೆನಿಸ್ ಟೂರ್ನಿಗಳು ಹಾಗೂ ಪಾವಗಡ ಸೋಲಾರ್ ಪಾರ್ಕ್, ಹಿಂದಿನ ಮತ್ತು ಈಗಿನ ತುಮಕೂರು ಅಮಾನಿ ಕೆರೆ ಚಿತ್ರ ಪ್ರದರ್ಶನ ವಿಶೇಷವಾಗಿತ್ತು.

ಕೃಷಿ, ಮೀನುಗಾರಿಕೆ, ಬೆಸ್ಕಾಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಾನಗರ ಪಾಲಿಕೆ, ಕೆಎಸ್‌ಆರ್‌ಟಿಸಿ ಸೇರಿ ವಿವಿಧ ಇಲಾಖೆಗಳಿಂದ ಮಳಿಗೆ ತೆರೆಯಲಾಗಿತ್ತು. ಸಾರ್ವಜನಿಕರಿಗೆ ಸರ್ಕಾರದಿಂದ ಸಿಗುವ ಸೌಲಭ್ಯದ ಅರಿವು ಮೂಡಿಸಲಾಯಿತು.

ತೋಟಗಾರಿಕೆ ಇಲಾಖೆಯಿಂದ ಸ್ಥಳೀಯ ಮಾವಿನ ತಳಿಯ ಜತೆಗೆ ಮಿಯಾಜಕಿ, ಕೊಲಂಬಿಯಾ, ಬಟನ್, ದಶೇರಿ, ಕೋಕೊನೆಟ್, ಬಾದಾಮಿ ಮಾವಿನ ಹಣ್ಣು ಪ್ರದರ್ಶನಕ್ಕೆ ಇಡಲಾಗಿತ್ತು. ರೈತರಿಗೆ ಸಮಗ್ರ ಕೃಷಿಗೆ ಪೂರಕವಾದ ಮಾಹಿತಿ ಒದಗಿಸಲಾಯಿತು.

ಕೆಎಸ್‌ಆರ್‌ಟಿಸಿ ಮಳಿಗೆಯಲ್ಲಿ ಬಸ್‌ಗಳ ಮಾದರಿ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪುಟ್ಟ, ಪುಟ್ಟ ಬಸ್‌ಗಳನ್ನು ಜನ ವೀಕ್ಷಿಸಿದರು. ಡಿ.ದೇವರಾಜ ಅರಸು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮಾದರಿ ನೋಡುಗರನ್ನು ಆಕರ್ಷಿಸಿತು.

ಹಕ್ಕುಪತ್ರ; ನನಸಾದ ಕನಸು

'ಹಕ್ಕುಪತ್ರಕ್ಕಾಗಿ ದಶಕದಿಂದ ಕಾಯುತ್ತಿದ್ದೇವೆ. ಹತ್ತು ವರ್ಷದ ಕನಸು ಈಗ ನನಸಾಗಿದೆ. ಮನೆ ಮಾಲೀಕರಾಗಿದ್ದೇವೆ. ರಾಜ್ಯ ಸರ್ಕಾರ ಹಕ್ಕುಪತ್ರ ವಿತರಿಸಿದೆ. ಇದು ಖುಷಿಯ ಕ್ಷಣ. ಬದುಕಿಗೆ ಭದ್ರತೆ ಸಿಕ್ಕಂತಾಗಿದೆ' ಎಂದು ಪಾವಗಡದ ಪದ್ಮಾಬಾಯಿ ಭಾವುಕರಾದರು.

'ಸರ್ಕಾರ ಜೀವನಕ್ಕೆ ಒಂದು ಗ್ಯಾರಂಟಿ ಕೊಟ್ಟಿದೆ. ಇಷ್ಟು ವರ್ಷ ಹಕ್ಕುಪತ್ರಕ್ಕಾಗಿ ಹೋರಾಟ, ಪ್ರತಿಭಟನೆ ನಡೆಸಲಾಗಿತ್ತು. ಕೊನೆಗೆ ನಮ್ಮ ನೋವು ಸರ್ಕಾರಕ್ಕೆ ಅರ್ಥವಾಗಿದೆ. ಇಂತಹ ಕೆಲಸಗಳು ಇನ್ನೂ ಜಾಸ್ತಿಯಾಗಬೇಕು. ಬಡವರು, ನಿರ್ಗತಿಕರ ಬದುಕು ಸುಧಾರಣೆಗೆ ಬೇಕಾದ ಯೋಜನೆ ರೂಪಿಸಬೇಕು. ಹಕ್ಕುಪತ್ರ ಕೊಟ್ಟ ಮುಖ್ಯಮಂತ್ರಿ, ಸಚಿವರಿಗೆ ಒಳಿತಾಗಲಿ' ಎಂದು ಕೊರಟಗೆರೆ ತಾಲ್ಲೂಕು ಕಾಶಾಪುರ ಹಕ್ಕಿಪಿಕ್ಕಿ ಕಾಲೊನಿಯ ಕಾಂತಮ್ಮ ಆಶಿಸಿದರು.

'ಈಗ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ನಾವು ಕಚೇರಿಗೆ ಅಲೆದರೂ ಕಂದಾಯ ದಾಖಲೆ ಸಿಗುತ್ತಿರಲಿಲ್ಲ. ರೈತರು, ಸಾರ್ವಜನಿಕರು ಬೇಸತ್ತು ಹೋಗಿದ್ದರು. ಅಧಿಕಾರಿಗಳೇ ನಮ್ಮ ಮನೆ ಬಾಗಿಲಿಗೆ ಬಂದು ದಾಖಲೆ ಪಡೆದು, ಹಕ್ಕುಪತ್ರ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲೂ ಇದು ಮುಂದುವರಿಯಬೇಕು. ಇನ್ನಷ್ಟು ಜನಪರ ಕಾರ್ಯ ನಡೆಸಬೇಕು' ಎಂದು ಗುಬ್ಬಿ ತಾಲ್ಲೂಕು ಮಂಚಲದೊರೆಯ ಸಿದ್ದಯ್ಯ ಪ್ರತಿಕ್ರಿಯಿಸಿದರು.

ಬೆಂಗಳೂರು ಉತ್ತರ ಜಿಲ್ಲೆಗೆ ಬೇಡಿಕೆ

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡಿದಂತೆ ತುಮಕೂರು ಜಿಲ್ಲೆಯ ಹೆಸರನ್ನು 'ಬೆಂಗಳೂರು ಉತ್ತರ ಜಿಲ್ಲೆ' ಎಂದು ಮರು ನಾಮಕರಣ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಮನವಿ ಮಾಡಿದರು.

ಬೆಂಗಳೂರಿಗೆ ತುಮಕೂರು ಪರ್ಯಾಯವಾಗಿ ಅಭಿವೃದ್ಧಿ ಕಾಣುತ್ತಿದೆ. ನಗರಕ್ಕೆ ಮೆಟ್ರೊ ರೈಲು ತರುವ ಪ್ರಯತ್ನ ನಡೆದಿದೆ. ಅದೇ ರೀತಿ ಜಿಲ್ಲೆ ಹೆಸರು ಬದಲಿಸಬೇಕು. ಅದಕ್ಕೆ ಡಿ.ಕೆ.ಶಿವಕುಮಾರ್ ಸಹಕಾರ ನೀಡಬೇಕು ಎಂದು ಕೇಳಿಕೊಂಡರು. ಇದಕ್ಕೆ ಶಿವಕುಮಾರ್ ವೇದಿಕೆಯಲ್ಲೇ ಸಹಮತ ವ್ಯಕ್ತಪಡಿಸಿದರು.

'ಬಿಜೆಪಿ ಅಧಿಕಾರಕ್ಕೆ ಬರುವುದು ಕನಸಿನ ಮಾತು'

ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಜತೆಗೆ ಈಗ 6ನೇ ಗ್ಯಾರಂಟಿಯಾಗಿ ಭೂಮಿ ದಾಖಲೆಗಳನ್ನು ಜನರಿಗೆ ನೀಡಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಪಂಚ ಗ್ಯಾರಂಟಿ ಯೋಜನೆಗಳನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಪ್ರಸ್ತಾಪಿಸಿದ್ದು ವಿಶ್ವದಲ್ಲೇ ನಮ್ಮ ಯೋಜನೆಗಳು ಹೆಸರು ಮಾಡಿವೆ. ಬಿಜೆಪಿಯವರು ನಮ್ಮ ಯೋಜನೆಗಳನ್ನು ನಕಲು ಮಾಡಿ ಚುನಾವಣೆ ಮಾಡುತ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಜನರ ಕೆಲಸ ಮಾಡಲಿಲ್ಲ. ಈಗ ನಾವು ಮಾಡುವ ಅಭಿವೃದ್ಧಿ ಕಂಡು ಟೀಕೆ ಮಾಡುತ್ತಿದ್ದಾರೆ' ಎಂದರು.

'ಮುಂದಿನ ಬಾರಿಯೂ ರಾಜ್ಯದಲ್ಲಿ ಬಿಜೆಪಿಯವರು ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದ್ದಾರೆ. ನಮ್ಮ ಸಾಧನೆ ಮೆಚ್ಚಿಕೊಂಡಿರುವ ಜನರು ಮುಂದಿನ ಚುನಾವಣೆಯಲ್ಲೂ ನಮ್ಮನ್ನು ಆಶೀರ್ವದಿಸುತ್ತಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೊಟ್ಟ ಕುದುರೆ ಏರದ ಎಚ್‌ಡಿಕೆ: ಡಿಕೆಶಿ

ಒಂದನೇ ಪುಟದಿಂದ...

'ಕೇವಲ 17 ಜನರನ್ನು ಇಟ್ಟುಕೊಂಡು ಏನು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

ಜೆಡಿಎಸ್ ಶಾಸಕರು ಒಂದು ದಿನವೂ ವಿಧಾನಸಭೆಯಲ್ಲಿ ಬಡವರ ಬಗ್ಗೆ ಮಾತನಾಡಿಲ್ಲ. ಜೆಡಿಎಸ್‌ನಲ್ಲಿರುವ ಆಂತರಿಕ ಸಮಸ್ಯೆ ಬಗೆಹರಿಸಲು ಕುಮಾರಸ್ವಾಮಿ ಅವರಿಗೆ ಸಾಧ್ಯವಾಗುತ್ತಿಲ್ಲ. ಇನ್ನು ರಾಜ್ಯದ ಜನರ ಸಮಸ್ಯೆ ಹೇಗೆ ಬಗೆಹರಿಸುತ್ತಾರೆ ಎಂದು ಪ್ರಶ್ನಿಸಿದರು.

17 ಶಾಸಕರನ್ನು ಹೊಂದಿರುವ ಜೆಡಿಎಸ್ ಮುಂದಿನ ಬಾರಿಯೂ ಅಧಿಕಾರಕ್ಕೆ ಬರುವುದು ಕನಸಿನ ಮಾತು. ಹಾಗಾಗಿ ಕುಮಾರಸ್ವಾಮಿ ಜೆಡಿಎಸ್ ಸರ್ಕಾರ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತದೆ, ಮತ್ತೆ ಮುಖ್ಯಮಂತ್ರಿ ಆಗುತ್ತೇನೆ ಎಂದು ಕನಸು ಕಾಣುವುದನ್ನು ಬಿಡಬೇಕು ಎಂದು ಅವರು ಸಲಹೆ ಮಾಡಿದರು.

'ಬಿಜೆಪಿ ನಿರ್ಮೂಲನೆ ಕಾಲ ದೂರವಿಲ್ಲ'

ತುಮಕೂರು: ಬರೀ ಸುಳ್ಳು ಹೇಳುತ್ತಾ ಬೆಲೆ ಏರಿಕೆಯ ಮೂಲಕ ಜನರ ಬದುಕು ದುಸ್ತರ ಮಾಡಿದ ಬಿಜೆಪಿಯನ್ನು ಜನರು ಬುಡ ಸಮೇತ ಕಿತ್ತು ಹಾಕುವ ಕಾಲ ದೂರವಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.

ಐದು ವಿಧಾನಸಭೆಗಳ ಚುನಾವಣೆ ಮುಗಿಯುತ್ತಿದ್ದಂತೆಯೇ ಕೇಂದ್ರ ಸರ್ಕಾರ ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ ದರ ಹೆಚ್ಚಿಸಿತು. ಬಡ, ಮಧ್ಯಮ ವರ್ಗದವರ ನೆಮ್ಮದಿಗೆ ಕೊಳ್ಳಿ ಇಟ್ಟಿರುವ ಕೇಂದ್ರಕ್ಕೆ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ವರ್ಷ ಮೂರು, ಹರ್ಷ ಜೋರು...

ಒಂದನೇ ಪುಟದಿಂದ...

ಪ್ರಮುಖವಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, ಗ್ಯಾರಂಟಿಗಳಿಂದ ರಾಜ್ಯದ ತಲಾ ಆದಾಯದಲ್ಲಿ ಏರಿಕೆಯಾಗಿದೆ. ಪ್ರಗತಿಯಲ್ಲಿ ರಾಜ್ಯ ಮೊದಲ ಸ್ಥಾನದಲ್ಲಿದೆ. ಜಿಎಸ್‌ಟಿ ಬೆಳವಣಿಗೆ ಪ್ರಮಾಣ ದೇಶದಲ್ಲಿ ಶೇ 7.4ರಷ್ಟು ಇದ್ದರೆ, ರಾಜ್ಯದಲ್ಲಿ ಶೇ 8.1ಕ್ಕೆ ಏರಿಕೆಯಾಗಿದೆ. ರಾಜ್ಯ ಸರ್ಕಾರ ನೀಡಿದ ಗ್ಯಾರಂಟಿ ಯೋಜನೆಗಳಿಂದ ಇಷ್ಟೆಲ್ಲ ಪ್ರಗತಿ ಸಾಧಿಸಲು ಸಾಧ್ಯವಾಗಿದೆ ಎಂದು ಸಮರ್ಥಿಸಿಕೊಂಡರು.

ಗುಜರಾತಿನಲ್ಲಿ ಬಿಜೆಪಿ 35 ವರ್ಷ ಅಧಿಕಾರ ನಡೆಸಿದೆ. ಅಲ್ಲಿ ₹2,500 ಬಾಡಿಗೆ ಕಟ್ಟಲಾಗದ ಬಡ ಕುಟುಂಬದ ಬಾಲಕಿ ಮೇಲೆ ಮನೆ ಮಾಲೀಕ ಅತ್ಯಾಚಾರ ನಡೆಸಿದ್ದಾನೆ. ಬಾಡಿಗೆ ಕಟ್ಟಲಾಗದ ಸ್ಥಿತಿಯಲ್ಲಿರುವುದು ಗುಜರಾತ್ ಮಾದರಿಯೇ ಎಂದು ಪ್ರಶ್ನಿಸಿದ ಅವರು, ಕರ್ನಾಟಕದ್ದು ನಿಜವಾದ ಅಭಿವೃದ್ಧಿ ಮಾದರಿ ಎಂದು ಸಾರಿದರು.

ನರೇಂದ್ರ ಮೋದಿ ಪ್ರಧಾನಿಯಾದ ಮೇಲೆ ದೇಶದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಳವಾಗಿದೆ. ರೈತರ ಆದಾಯ ದುಪ್ಪಟ್ಟಾಗಲಿಲ್ಲ. ಬದಲಾಗಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆ ಮೂರ್‍ನಾಲ್ಕು ಪಟ್ಟು ಹೆಚ್ಚಳವಾಗಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಹೀಗೆ ಕೇಂದ್ರ ಸರ್ಕಾರದ ಸಾಲು, ಸಾಲು ವೈಫಲ್ಯಗಳು ಎದ್ದುಕಾಣುತ್ತವೆ ಎಂದು ತರಾಟೆಗೆ ತೆಗೆದುಕೊಂಡರು.

'ಸರ್ಕಾರವೇ ರೈತರ ಮನೆ ಬಾಗಿಲಿಗೆ ಹೋಗಿ ಜಮೀನಿನ ದಾಖಲೆಗಳನ್ನು ಮಾಡಿಕೊಟ್ಟಿದೆ. ಈವರೆಗೆ ಯಾವ ಸರ್ಕಾರವೂ ಮಾಡಲಾಗದ ಸಾಧನೆ ಮಾಡಿದ್ದೇವೆ. ರಾಜ್ಯದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದೇವೆ. ರೈತರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿ ಆನ್‌ಲೈನ್ ಮೂಲಕ ದಾಖಲೆ ಪಡೆದುಕೊಳ್ಳುವ ವ್ಯವಸ್ಥೆ ಕಲ್ಪಿಸಿದ್ದೇವೆ. ಇದೊಂದು ಐತಿಹಾಸಿಕ ಸಾಧನೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಬಣ್ಣಿಸಿದರು.

ಸಚಿವರಾದ ಜಿ.ಪರಮೇಶ್ವರ, ಡಾ.ಎಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಎಂ.ಬಿ.ಪಾಟೀಲ, ಕೆ.ಎಚ್.ಮುನಿಯಪ್ಪ, ಕೆ.ಜೆ.ಜಾರ್ಜ್, ಡಾ.ಎಂ.ಸಿ.ಸುಧಾಕರ್, ಜಮೀರ್ ಅಹಮ್ಮದ್ ಖಾನ್, ಶಿವಾನಂದ ಪಾಟೀಲ, ಶರಣಪ್ರಕಾಶ ಪಾಟೀಲ, ಕೆ.ವೆಂಕಟೇಶ್, ಲಕ್ಷ್ಮೀ ಹೆಬ್ಬಾಳಕರ, ಮಧು ಬಂಗಾರಪ್ಪ, ಮಂಕಾಳ ಎಸ್. ವೈದ್ಯ ಪಾಲ್ಗೊಂಡಿದ್ದರು.

ರೈತರ ಆತ್ಮಹತ್ಯೆ ಮುಚ್ಚಿಟ್ಟ ಸರ್ಕಾರ: ಎಚ್‌ಡಿಕೆ ಟೀಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ 5,394 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಸರ್ಕಾರ ಈ ಮಾಹಿತಿ ಮುಚ್ಚಿಟ್ಟಿದೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ವರದಿಯ ಪ್ರಕಾರ ರಾಜ್ಯದಲ್ಲಿ, 2023ರಲ್ಲಿ 2,423 ಮತ್ತು 2024ರಲ್ಲಿ 2,971 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದರು.

'ಒಟ್ಟು ಈ ಅವಧಿಯಲ್ಲಿ 5,394 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೆಲವು ಪತ್ರಿಕೆಗಳು ಹನ್ನೆರಡು ದಿನಗಳ ಹಿಂದೆ ವರದಿ ಮಾಡಿದ್ದವು. ಸರ್ಕಾರವು ಈ ಬಗ್ಗೆ ಪ್ರತಿಕ್ರಿಯೆ ನೀಡುತ್ತದೆ ಎಂದು ಕಾದು ನೋಡಿದೆ. ಆದರೆ, ಸರ್ಕಾರವು ಈವರೆಗೂ ತುಟಿಬಿಚ್ಚಿಲ್ಲ. ಬದಲಿಗೆ ಸಾಧನಾ ಸಮಾವೇಶಗಳ ನೆಪದಲ್ಲಿ ಸಂಭ್ರಮಾಚರಣೆ ನಡೆಸುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇವರ ಗ್ಯಾರಂಟಿಗಳು ಉತ್ತಮವಾಗಿದ್ದರೆ ಮತ್ತು ಅವುಗಳಿಂದ ಜನರಿಗೆ ಅನುಕೂಲವಾಗಿದ್ದು ನಿಜವೇ ಆಗಿದ್ದರೆ, ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತು. ಸರ್ಕಾರಕ್ಕೆ ಆತ್ಮಹತ್ಯೆಯ ಅಂಕಿಅಂಶಗಳು ಗೊತ್ತಿಲ್ಲವೇ ಅಥವಾ ಬೇಕೆಂದು ಈ ಮಾಹಿತಿಯನ್ನು ಮುಚ್ಚಿಟ್ಟಿದೆಯೇ? ಸರ್ಕಾರದ ವರ್ತನೆ ನೋಡಿದರೆ ಬೇಕೆಂದೇ ಸಾರ್ವಜನಿಕರಿಂದ ಈ ಮಾಹಿತಿ ಮುಚ್ಚಿಟ್ಟಿದೆ ಎಂಬುದು ದೃಢವಾಗುತ್ತದೆ' ಎಂದರು.

'ಇವರು ಸಾಧನ ಸಮಾವೇಶ ಮಾಡಿದಾಗಲೆಲ್ಲಾ ಕಂದಾಯ ಇಲಾಖೆ ಕಾರ್ಯಕ್ರಮಗಳು, ಹಕ್ಕುಪತ್ರ ವಿತರಣೆ ಬಗ್ಗೆ ಮಾತನಾಡುತ್ತಾರೆ. ತುಮಕೂರಿನ ಸಮಾವೇಶದಲ್ಲೂ ಈ ಬಗ್ಗೆಯೇ ಮಾತನಾಡಿದ್ದಾರೆ. ಆದರೆ ರೈತರು ಕಂದಾಯ ಇಲಾಖೆ ಬಗ್ಗೆಯೇ ಹೆಚ್ಚು ದೂರು ಹೊತ್ತು ಬರುತ್ತಾರೆ. ರೈತರ ಜಮೀನಿನ ಸಮಸ್ಯೆ ಬಗೆಹರಿಯದೇ ಇದ್ದರೂ, ಭೂಗ್ಯಾರಂಟಿ ಹೆಸರಿನಲ್ಲಿ ಪುಕ್ಕಟೆ ಪ್ರಚಾರ ಪಡೆಯುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ಸರ್ಕಾರಕ್ಕೆ 'ಗ್ಯಾರಂಟಿ'ಯ ಉಸಿರಾಟ'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 'ಗ್ಯಾರಂಟಿ' ಯೋಜನೆಯಿಂದಷ್ಟೇ ಉಸಿರಾಡುತ್ತಿದೆ. ಇದನ್ನು ಜನರಿಗೆ ತೋರಿಸಲು ಸಾಧನಾ ಸಮಾವೇಶ ಹಮ್ಮಿಕೊಂಡಿದೆ. ಉಳಿದಂತೆ ಸರ್ಕಾರ ಸತ್ತು ಹೋಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು.

ರಾಜ್ಯ ಸರ್ಕಾರದ ವೈಫಲ್ಯಗಳ ಕುರಿತು ಪೋಸ್ಟರ್ ಬಿಡುಗಡೆ ಮಾಡಿ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಬಿಜೆಪಿ ಸರ್ಕಾರದ ಯೋಜನೆಗಳನ್ನು ತಮ್ಮ ಸಾಧನೆಗಳು ಎಂಬಂತೆ ಕಾಂಗ್ರೆಸ್ ಸರ್ಕಾರ ಬಿಂಬಿಸಿಕೊಳ್ಳುತ್ತಿದೆ. ಹಕ್ಕುಪತ್ರ ವಿತರಣೆ ಯೋಜನೆಯೂ ಬಿಜೆಪಿ ಸರ್ಕಾರದ್ದಾಗಿತ್ತು. ಯಾವ ಪುರುಷಾರ್ಥಕ್ಕೆ ಸಮಾವೇಶ ಹಮ್ಮಿಕೊಂಡಿದ್ದೀರಿ' ಎಂದು ಪ್ರಶ್ನಿಸಿದರು.

'ಎಲ್ಲೂ ಯಾವುದೇ ಸಾಧನೆಗಳನ್ನು ಮಾಡಿಲ್ಲ. ಕೇವಲ ಜಾಹೀರಾತಿನಲ್ಲಿ ಮಾತ್ರ ಕೆಲಸ ಆಗಿದೆ ಎಂದು ಹೇಳಿಕೊಳ್ಳುತ್ತಿದೆ. ನಾಡಿಗೆ ಎರಡು ತುತ್ತು ಅನ್ನ ಕೊಡುವ ರೈತರ ಬದುಕನ್ನು ಕಟ್ಟಿಕೊಡುವ ಸಲುವಾಗಿ ಪ್ರವಾಹ ಮತ್ತು ಬರದ ಸಂದರ್ಭದಲ್ಲಿ ನಿಮ್ಮ ಸರ್ಕಾರ ನೆರವಿಗೆ ಬಂದಿದೆಯೇ' ಎಂದು ಪ್ರಶ್ನಿಸಿದರು.



ರಾಜ್ಯ ಸರ್ಕಾರದ ವಿರುದ್ಧ ಪೋಸ್ಟರ್ ಬಿಡುಗಡೆ ಮಾಡಿದ ಬಿ.ವೈ. ವಿಜಯೇಂದ್ರ

ಸಿ.ಎಂ ಮತ್ತು ಡಿಸಿಎಂ ಮಧ್ಯೆ ಕುರ್ಚಿ ಕದನದಿಂದ ಆಡಳಿತ ಯಂತ್ರ ಸಂಪೂರ್ಣ ಕುಸಿದಿದೆ ಎಂದು ದೂರಿದರು.

ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ, ಶಾಸಕರಾದ ಬಿ.ಎ ಬಸವರಾಜ, ಶಶಿಕಲಾ ಜೊಲ್ಲೆ, ರಾಜ್ಯ ವಕ್ತಾರ ಎಚ್. ವೆಂಕಟೇಶ್ ದೊಡ್ಡೇರಿ, ಒಬಿಸಿ ಮೋರ್ಚಾ ರಾಜ್ಯ ಅಧ್ಯಕ್ಷ ರಘು ಕೌಟಿಲ್ಯ, ಎಸ್‌ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಹೂಡಿ ಮಂಜುನಾಥ್ ಇದ್ದರು.

'ಖಾಲಿ ಹುದ್ದೆ 2.84 ಲಕ್ಷ, 8 ಸಾವಿರ ಭರ್ತಿ'

ಉದ್ಯೋಗ ಸೃಷ್ಟಿ ಮಾಡುವುದಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್‌ನ ಮಹಾಶೂರರು ಮೂರು ವರ್ಷದಲ್ಲಿ ಭರ್ತಿ ಮಾಡಿರುವುದು ಕೇವಲ ಎಂಟು ಸಾವಿರ ಮಾತ್ರ. ಖಾಲಿ ಇರುವುದು 2.84 ಲಕ್ಷ ಹುದ್ದೆಗಳು ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಚುನಾವಣೆಗೂ ಮುನ್ನ ಯುವಕರಿಗೆ ಭರ್ಜರಿ ಉದ್ಯೋಗದ ಭರವಸೆ ನೀಡಿದ್ದರು. ಕಳೆದ ಮೂರು ವರ್ಷಗಳಲ್ಲಿ ನಿರುದ್ಯೋಗಿಗಳಿಗೆ ಕೇವಲ ನಿರಾಸೆಯ ಗ್ಯಾರಂಟಿ ನೀಡಿದೆ. ಭಾಷಣಗಳಲ್ಲಿ ಲಕ್ಷ ಲಕ್ಷ ಉದ್ಯೋಗಗಳ ಬಗ್ಗೆ ಮಾತನಾಡುವ ಕಾಂಗ್ರೆಸ್ ಸರ್ಕಾರದ ಅಸಲಿ ಮುಖವಾಡ ಈಗ ಅಂಕಿ–ಅಂಶಗಳ ಸಮೇತ ಕಳಚಿ ಬಿದ್ದಿದೆ ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಮೂರು ವರ್ಷದಿಂದ ಭರ್ತಿ ಆಗಿದ್ದು ಕೇವಲ 8,157 ಹುದ್ದೆಗಳು ಎಂದು ವಿಧಾನಸಭೆಯಲ್ಲೇ ಸರ್ಕಾರ ಮಾಹಿತಿ ನೀಡಿದೆ ಎಂದು ಹೇಳಿದ್ದಾರೆ.

'ಸಾಲ ಸಂಭ್ರಮಿಸಲು ಸಮಾವೇಶವಾ?'

'ರಾಜ್ಯದ ಸಾಲದ ಹೊರೆ ₹8 ಲಕ್ಷ ಕೋಟಿ ದಾಟಿದೆ. 2025–26ನೇ ಸಾಲಿನ ಬಜೆಟ್‌ನಲ್ಲಿ ಮತ್ತೆ ₹1.50 ಲಕ್ಷ ಕೋಟಿ ಸಾಲ ಎತ್ತಲು ಮುಂದಾಗಿದ್ದಾರೆ. ಪ್ರತಿ ಕನ್ನಡಿಗನ ತಲೆ ಮೇಲೆ ₹1 ಲಕ್ಷಕ್ಕೂ ಹೆಚ್ಚು ಸಾಲದ ಹೊರೆ ಬೀಳಲಿದೆ. ಈ ಸಂಭ್ರಮಕ್ಕಾಗಿ ಸಮಾವೇಶವೇ?' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

'ರಾಜ್ಯದ ವಿದ್ಯುತ್ ಕಂಪನಿಗಳು ಒಟ್ಟು ₹42,750 ಕೋಟಿ ಸಾಲದಲ್ಲಿ ಮುಳುಗಿವೆ. ಬೆಸ್ಕಾಂ ಒಂದರಿಂದಲೇ ₹6,211 ಕೋಟಿ ಬಾಕಿ ಇದೆ. ಬಡವರ ಮೇಲೆ ದರ ಏರಿಕೆ ಹೇರಿ, ವಿದ್ಯುತ್ ಕಂಪನಿಗಳನ್ನು ದಿವಾಳಿ ಮಾಡಿದ್ದಕ್ಕಾಗಿ ಈ ಸಂಭ್ರಮವೇ' ಎಂದೂ ಪ್ರಶ್ನಿಸಿದ್ದಾರೆ.

ಎಸ್‌ಐಆರ್: ಮತ ಕಸಿಯುವ ಆಯುಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಒಂದು ಸಾಮಾನ್ಯ ಆಡಳಿತಾತ್ಮಕ ಪ್ರಕ್ರಿಯೆಯಲ್ಲ. ಇದು ಶೋಷಿತ ಸಮುದಾಯಗಳ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಆಯುಧವಾಗಿದೆ ಎಂದು 'ನನ್ನ ಮತ, ನನ್ನ ಹಕ್ಕು ಸಂಘಟನೆ' ಆರೋಪಿಸಿದೆ.

ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಸಂಘಟನೆಯ ಪ್ರಮುಖರಾದ ಶ್ರೀಪಾದ್ ಭಟ್, ಮೈತ್ರೇಯಿ ಕೃಷ್ಣನ್, ಅಕ್ಕೈ ಪದ್ಮಶಾಲಿ, ಮಮತಾ ಯಜಮಾನ್, ಕ್ರಿಸ್ಸಿ, ಮಹಮ್ಮದ್‌ಪೀರ್ ಮಾತನಾಡಿ, 'ಮತದಾರರ ಪಟ್ಟಿ ತಯಾರಿಸಲು ಈಗಿರುವ ಕಾನೂನು ಹಾಗೂ ಸಂವಿಧಾನದ ಚೌಕಟ್ಟಿನ ಹೊರಗೆ ಎಸ್‌ಐಆರ್ ಮೂಲಕ ಕಾರ್ಯನಿರ್ವಹಿಸಲಾಗುತ್ತಿದೆ' ಎಂದು ದೂರಿದರು.

'ಈಗಾಗಲೇ ಎಸ್‌ಐಆರ್ ಜಾರಿಯಾಗಿರುವ 10 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಲ್ಪಸಂಖ್ಯಾತರು, ಕಾರ್ಮಿಕರು, ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ ಲಕ್ಷಾಂತರ ಮಂದಿ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ' ಎಂದರು.

'ಕರ್ನಾಟಕದಲ್ಲಿ ನಡೆಸುತ್ತಿರುವ ಮ್ಯಾಪಿಂಗ್ ಕುರಿತು ಎತ್ತಲಾದ ಪ್ರಶ್ನೆಗಳಿಗೆ ಚುನಾವಣಾ ಆಯೋಗ ಉತ್ತರ ನೀಡಿಲ್ಲ. ಸೊಸೆಯನ್ನು ಮಗಳು ಎಂದು ತಪ್ಪಾಗಿ ಮ್ಯಾಪಿಂಗ್ ಮಾಡಿದ್ದು, ಈಗ ನೋಟಿಸ್ ನೀಡಲಾಗುತ್ತಿದೆ. ರಾಜ್ಯದಲ್ಲಿರುವ 59,050 ಬಿಎಲ್‌ಒಗಳ ರಕ್ಷಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ' ಎಂದು ಪ್ರಶ್ನಿಸಿದರು.

'ಎಸ್‌ಐಆರ್ ವಿರೋಧಿಸಿ ರಾಜ್ಯ ಸರ್ಕಾರ ಕೂಡಲೇ ನಿರ್ಣಯ ಅಂಗೀಕರಿಸಬೇಕು. ಕನ್ನಡಿಗರ ಮತದಾನದ ಹಕ್ಕುಗಳನ್ನು ಕಸಿದುಕೊಳ್ಳದಂತೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು. ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದ ಕಾನೂನು, ಸಂವಿಧಾನದ ಚೌಕಟ್ಟನ್ನು ಎಸ್‌ಐಆರ್ ಮೂಲಕ ಉಲ್ಲಂಘಿಸಲಾಗುತ್ತಿದೆ ಎಂಬ ಬಗ್ಗೆ ಚುನಾವಣಾ ಆಯೋಗಕ್ಕೆ ಅಧಿಕೃತವಾಗಿ ಆಕ್ಷೇಪಣೆ ಸಲ್ಲಿಸಬೇಕು' ಎಂದು ಆಗ್ರಹಿಸಿದರು.

'ಎಸ್‌ಐಆರ್ ಕುರಿತ ಆತಂಕಗಳ ಬಗ್ಗೆ ಚರ್ಚಿಸಲು ಎಲ್ಲ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳ ಸಭೆ ಕರೆಯಬೇಕು. ಇತರೆ ರಾಜ್ಯಗಳಲ್ಲಿ ನಡೆಸಿದ ಎಸ್‌ಐಆರ್ ಪ್ರಕ್ರಿಯೆಯನ್ನು ಕರ್ನಾಟಕದಲ್ಲಿ ಮುಂದುವರಿಸಬಾರದು. ನಮ್ಮ ಎಲ್ಲ ಪ್ರಶ್ನೆಗಳು ಹಾಗೂ ಬೇಡಿಕೆಗಳಿಗೆ ಏಳು ದಿನಗಳಲ್ಲಿ ಉತ್ತರಿಸಬೇಕು ಎಂದು ಆಗ್ರಹಿಸಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು, ಗುತ್ತಿಗೆದಾರರ ಮನೆ- ಕಚೇರಿಗಳ ಮೇಲೆ 'ಲೋಕಾ' ದಾಳಿ

'ಖೊಟ್ಟಿ ದಾಖಲೆ ಸೃಷ್ಟಿಸಿ ₹23.35 ಕೋಟಿ ಗುಳುಂ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು


- ವಿವಿಧ ಜಿಲ್ಲೆಗಳಲ್ಲಿ ದಾಳಿ, ದಾಖಲೆಪತ್ರ ವಶಕ್ಕೆ
- ಯೋಜನೆ ಹೆಸರಿನಲ್ಲಿ ಅಕ್ರಮ ವ್ಯವಹಾರ
- ತನಿಖೆ ತೀವ್ರ; ಮಾಹಿತಿ ಸಂಗ್ರಹ

ಬೆಳಗಾವಿ: 'ಜಿಲ್ಲೆಯ ರಾಮದುರ್ಗ ಪಟ್ಟಣದ ಕೊಳೆಗೇರಿಯಲ್ಲಿ 600 ಮನೆಗಳನ್ನು ನಿರ್ಮಿಸಲಾಗಿದೆ' ಎಂದು ಖೊಟ್ಟಿ ದಾಖಲೆ ಸೃಷ್ಟಿಸಿ ₹23.35 ಕೋಟಿ ಹಣ ಲಪಟಾಯಿಸಿದ ಆರೋಪದ ಮೇಲೆ ಇಲ್ಲಿನ ಕೊಳೆಗೇರಿ ಅಭಿವೃದ್ಧಿ ಮಂಡಳಿ ಕಚೇರಿ, ವಿವಿಧೆಡೆ ಅಧಿಕಾರಿಗಳ ಮನೆಗಳ ಮೇಲೆ ಲೋಕಾಯುಕ್ತರು ಮಂಗಳವಾರ ದಾಳಿ ನಡೆಸಿದರು.

ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ) ಬಿ.ಎಸ್. ಶಂಭುಲಿಂಗಪ್ಪ ಮತ್ತು ಗುತ್ತಿಗೆದಾರ ಎನ್.ಪಿ.ಪ್ರಸಾದ್ ಸೇರಿ ಕೃತ್ಯದಲ್ಲಿ ಪಾಲ್ಗೊಂಡ ಇತರರ ವಿರುದ್ಧ ಲೋಕಾಯುಕ್ತ ಪಿಎಸ್‌ಐ ಪ್ರಸನ್ನ ದೇಸಾಯಿ ದೂರು ದಾಖಲಿಸಿದರು. ಇನ್‌ಸ್ಪೆಕ್ಟರ್ ಎಸ್.ಎಚ್. ಹೊಸಮನಿ ಅವರ ನೇತೃತ್ವದಲ್ಲಿ ದಾಳಿ ಮಾಡಿದರು.

'ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಸರ್ವರಿಗೂ ಸೂರು (ನಗರ)–2022 ಕಾರ್ಯಕ್ರಮದಡಿ 600 ಮನೆ ನಿರ್ಮಿಸಲಾಗಿದೆ ಎಂದು ದಾಖಲೆ ತೋರಿಸಿ, ಅನುದಾನ ಪಡೆಯಲಾಗಿದೆ. ಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ಗುತ್ತಿಗೆದಾರ ಸೇರಿ ಸಂಚು ರೂಪಿಸಿ ಹಣ ಪಡೆದಿದ್ದಾರೆ. ದಾಳಿ ವೇಳೆ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತ ಎಸ್ಪಿ ಹಣಮಂತರಾಯ ತಿಳಿಸಿದರು.

2019ರಿಂದ 2024ರವರೆಗೆ ವಿವಿಧ ಹಂತಗಳಲ್ಲಿ ₹29.45 ಕೋಟಿ ಬಿಲ್ ತೆಗೆಯಲಾಗಿದೆ. ಸಿಮೆಂಟ್, ಕಬ್ಬಿಣ, ಇಟ್ಟಿಗೆ ಮುಂತಾದ ನಿರ್ಮಾಣ ಸಾಮಗ್ರಿಗಳಿಗೆ ₹6.10 ಕೋಟಿ ವ್ಯಯಿಸಲಾಗಿದೆ. 600 ಫಲಾನುಭವಿಗಳಿಗೆ ತಲಾ ₹1.10 ಲಕ್ಷ ಹಣ ಸಂದಾಯ ಮಾಡಿ ನೀವೇ ಮನೆ ಕಟ್ಟಿಕೊಳ್ಳಬೇಕು ನಿಯಮಬಾಹಿರ ಕ್ರಮವಹಿಸಲಾಗಿದೆ.



ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ನಿವೃತ್ತ) ಬಿ.ಎಸ್ ಶಂಭುಲಿಂಗಪ್ಪ ಅವರ ಹುಬ್ಬಳ್ಳಿಯ ಮನೆ ಮೇಲೆ ಮಂಗಳವಾರ ದಾಳಿ ಮಾಡಿದ ಲೋಕಾಯುಕ್ತರು, ದಾಖಲೆಪತ್ರಗಳನ್ನು ಪರಿಶೀಲಿಸಿದರು

ಇದನ್ನು ಹೊರತುಪಡಿಸಿ ಯಾವುದೇ ಕಾಮಗಾರಿ ಮಾಡಿಲ್ಲ. ಜಿಪಿಎಸ್ ಇಲ್ಲದೆಯೇ, ಕಾಮಗಾರಿ ಮುಗಿಸಲಾಗಿದೆ ಎಂದು ಹಣ ಮಂಜೂರು ಮಾಡಿಸಿಕೊಂಡು, ಖೊಟ್ಟಿ ಬಿಲ್ ತೆಗೆಯಲಾಗಿದೆ. ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಬೆಳಗಾವಿಯ ವಿಭಾಗ ಮತ್ತು ಉಪವಿಭಾಗದ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದಾಗ ಈ ಅಪರಾಧ ಕಂಡುಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಎಲ್ಲೆಲ್ಲಿ ದಾಳಿ: 'ಬೆಳಗಾವಿಯ ಹಿಂಡಲಗಾದ ಕೊಳೆಗೇರಿ ಅಭಿವೃದ್ಧಿ ಮಂಡಳಿ ಕಚೇರಿ, ಹುಬ್ಬಳ್ಳಿಯ ವಿದ್ಯಾನಗರದ ಶಿರೂರ ಪಾರ್ಕ್‌ನಲ್ಲಿರುವ ಶಂಭುಲಿಂಗಪ್ಪ ಅವರ ಮನೆ, ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ನ್ಯಾಷನಲ್ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಲಿಮಿಟೆಡ್ ಕಚೇರಿ, ವಿಜಯಪುರದ ಗಿರಿಮಲ್ಲಪ್ಪ ಜೋಗೂರ ಅವರ ಮನೆ, ಬಾಗಲಕೋಟೆ ಜಿಲ್ಲೆಯ ಮುಧೋಳದ ಕಿರಣ ಹೊಸಕೋಟಿ ಅವರ ಮನೆ, ಬೆಲ್‌ಕೆರೂರಿನ ರಿಂದನಗೌಡ ಶೇಖರಗೌಡ ಪಾಟೀಲ ಮನೆ ಮೇಲೂ ಏಕಕಾಲಕ್ಕೆ ದಾಳಿ ಮಾಡಲಾಯಿತು' ಎಂದು ತನಿಖಾಧಿಕಾರಿ ಇನ್‌ಸ್ಪೆಕ್ಟರ್ ವೆಂಕಟೇಶ ಯಡಹಳ್ಳಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಸಿಇಟಿಗೆ ಪ್ರತ್ಯೇಕ ಕೌನ್ಸೆಲಿಂಗ್: ನಾಳೆ ಸಭೆ

ಬೆಂಗಳೂರು: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮೇ 3ರಂದು ನಡೆದಿದ್ದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು (ನೀಟ್) ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ರದ್ದು ಮಾಡಿದ್ದರಿಂದ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆ ವಿಳಂಬ ತಪ್ಪಿಸಲು ರಾಜ್ಯ ಸರ್ಕಾರ ಪ್ರತ್ಯೇಕ ಕೌನ್ಸೆಲಿಂಗ್ ನೀತಿ ರೂಪಿಸಲು ಮುಂದಾಗಿದೆ.

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಮೇ 21ರಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಭಾಗವಹಿಸಲಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ವಿವಿಧ ಇಲಾಖೆಯ ಅಧಿಕಾರಿಗಳು, ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿ ಶಿಕ್ಷಣ ಶಿಕ್ಷಣ ಸಂಸ್ಥೆಗಳ ಪ್ರಮುಖರು ಹಾಜರಿದ್ದು, ಪ್ರತ್ಯೇಕ ಕೌನ್ಸೆಲಿಂಗ್ ಕುರಿತು ಚರ್ಚೆ ನಡೆಸಲಿದ್ದಾರೆ.

ನೀಟ್ ಫಲಿತಾಂಶದ ಆಧಾರದಲ್ಲಿ ವೈದ್ಯಕೀಯ ಕೌನ್ಸೆಲಿಂಗ್ ಪರಿಷತ್ತು (ಎಂಸಿಸಿ) ದೇಶದಲ್ಲಿ ಲಭ್ಯವಿರುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಒಟ್ಟು ಸೀಟುಗಳಲ್ಲಿ ಶೇ 15ರಷ್ಟು ಹಂಚಿಕೆ ಮಾಡುತ್ತದೆ. ನೀಟ್ ಅರ್ಹತಾ ಪಟ್ಟಿಯ ಆಧಾರದಲ್ಲೇ ರಾಜ್ಯ ಕೋಟಾದ ಶೇ 85ರಷ್ಟು ವೈದ್ಯಕೀಯ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಂಚಿಕೆ ಮಾಡುತ್ತದೆ. ಮೊದಲ ಸುತ್ತು ಆರಂಭವಾದ ನಂತರವೇ ಸಿಇಟಿ ಸೀಟು ಹಂಚಿಕೆ ನಡೆಯುತ್ತದೆ. ಆದರೆ, ಈ ಬಾರಿ ನೀಟ್ ಮರು ಪರೀಕ್ಷೆ ನಡೆಯುತ್ತಿದ್ದು, ಅಲ್ಲಿಯವರೆಗೂ ಕಾದು ಕುಳಿತರೆ ಸಿಇಟಿ ಬರೆದ ರಾಜ್ಯದ 3.31 ಲಕ್ಷ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಲಿದ್ದಾರೆ.

ಯುವ ಕಾಂಗ್ರೆಸ್ ಗಲಾಟೆ: 7 ಮಂದಿಗೆ ನೋಟಿಸ್

ಬೆಂಗಳೂರು: ಪದಾಧಿಕಾರಿಗಳನ್ನು ಜವಾಬ್ದಾರಿಗಳಿಂದ ತಾತ್ಕಾಲಿಕವಾಗಿ ಮುಕ್ತಗೊಳಿಸಿದ ವಿಚಾರಕ್ಕೆ ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ಮತ್ತು ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಬೆಂಬಲಿಗರ ನಡುವೆ ಸೋಮವಾರ ನಡೆದ ಗಲಾಟೆ ಕಾರಣಕ್ಕೆ ದೀಪಿಕಾ ರೆಡ್ಡಿ ಜತೆಗಿದ್ದ ಏಳು ಮಂದಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

ಕೆಪಿಸಿಸಿ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಮಂಜುನಾಥ ಗೌಡ ಮತ್ತು ದೀಪಿಕಾ ರೆಡ್ಡಿ ಬೆಂಬಲಿಗರ ನಡುವೆ ತಳ್ಳಾಟ-ನೂಕಾಟ ನಡೆದು ಕೈಕೈ ಮಿಲಾಯಿಸುವ ಹಂತ ತಲುಪಿತು. ಈ ಘಟನೆಯ ಬಗ್ಗೆ ವಾರದೊಳಗೆ ಉತ್ತರ ನೀಡುವಂತೆ ಯುವ ಕಾಂಗ್ರೆಸ್‌ನ ದೀಪಿಕಾ ರೆಡ್ಡಿ, ನಿಖಿಲ್ ಕೊಂಡಜ್ಜಿ, ಮಂಜು ಮಣಿ ಚೆಟ್ಟಿ, ಸಂದೀಪ್, ಗೋವರ್ಧನ್, ರವಿಕಿರಣ್ ಮತ್ತು ಯಶ್ ಗೌಡ ಅವರಿಗೆ ರಾಷ್ಟ್ರೀಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಿಗಂ ಭಂಡಾರಿ ನೋಟಿಸ್ ನೀಡಿದ್ದಾರೆ.

ಯುವ ಕಾಂಗ್ರೆಸ್ ಪದಾಧಿಕಾರಿಗಳ ನಡುವಿನ ಗಲಾಟೆಯನ್ನು ಗಂಭೀರವಾಗಿ ಪರಿಗಣಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಈ ಬಗ್ಗೆ ಪರಾಮರ್ಶೆ ನಡೆಸುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಅವರಿಗೆ ಸೂಚನೆ ನೀಡಿದ್ದಾರೆ. ಅದರಂತೆ, ಗಲಾಟೆಯಲ್ಲಿ ಭಾಗಿಯಾದ ಪದಾಧಿಕಾರಿಗಳನ್ನು ಕರೆಯಿಸಿಕೊಂಡು ಚಂದ್ರಶೇಖರ್ ಚರ್ಚೆ ನಡೆಸಿದ್ದಾರೆ.

ನೀಟ್: ಎಂಎನ್‌ಎಸ್ ಪ್ರತಿಭಟನೆ

ರೇಣುಕೈ ಕರಿಯರ್ ಸೆಂಟರ್ ವಿರುದ್ಧ ಆಕ್ರೋಶ

ಲಾತೂರ್ (ಪಿಟಿಐ): 'ನೀಟ್-ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿರುವ ಆರೋಪಿ ಶಿವರಾಜ್ ರಘುನಾಥ್ ಮೋಟೆಗಾಂವ್ಕರ್ ಅವರ ಒಡೆತನದ ರೇಣುಕೈ ಕರಿಯರ್ ಸೆಂಟರ್‌ನ ವಿರುದ್ಧ ಮಹಾರಾಷ್ಟ್ರ ನವ ನಿರ್ಮಾಣ ಸೇನಾ (ಎಂಎನ್‌ಎಸ್) ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಇಲ್ಲಿರುವ ರೇಣುಕೈ ಕರಿಯರ್ ಸೆಂಟರ್‌ನ ಪ್ರಧಾನ ಕಚೇರಿಯ ಎದುರು ಎಂಎನ್‌ಎಸ್ ಕಾರ್ಯಕರ್ತರು ಜಮಾಯಿಸಿ, ಕೋಚಿಂಗ್ ಸೆಂಟರ್ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಸಾವಿರಾರು ವಿದ್ಯಾರ್ಥಿಗಳಿಂದ ಸಂಗ್ರಹಿಸಿರುವ ಶುಲ್ಕವನ್ನು ಕೋಚಿಂಗ್ ಸೆಂಟರ್ ಮರಳಿಸಬೇಕು ಎಂದೂ ಆಗ್ರಹಿಸಿದ್ದಾರೆ.

ನೀಟ್ ಪರೀಕ್ಷೆ ನಡೆಯುವ 10 ದಿನಗಳ ಮುಂಚೆಯೇ ರಸಾಯನ ವಿಜ್ಞಾನ ವಿಷಯದ ಪ್ರಶ್ನೆಪತ್ರಿಕೆ ಶಿವರಾಜ್ ಅವರಿಗೆ ತಲುಪಿತ್ತು ಎಂಬುದು ದೃಢಪಟ್ಟ ಹಿನ್ನೆಲೆಯಲ್ಲಿ ಸಿಬಿಐ ಅಧಿಕಾರಿಗಳು ಭಾನುವಾರ ಶಿವರಾಜ್ ಅವರನ್ನು ಬಂಧಿಸಿದ್ದಾರೆ. ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡಿದ ಹಾಗೂ ಹಂಚಿದ ತಂಡದಲ್ಲಿ ಶಿವರಾಜ್ ಸಕ್ರಿಯ ಸದಸ್ಯರಾಗಿದ್ದರು ಎಂದೂ ಸಿಬಿಐ ಆರೋಪಿಸಿದೆ.

ಈ ಕಾರಣದಿಂದ ಕೋಚಿಂಗ್ ಸೆಂಟರ್ ವಿರುದ್ಧ ಎಂಎನ್‌ಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದು, ನೀಟ್ ಪರೀಕ್ಷೆ ವಿವಾದದಿಂದ ಮಹಾರಾಷ್ಟ್ರದಲ್ಲಿ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದೂ ಆರೋಪಿಸಿ, ಕೋಚಿಂಗ್ ಸೆಂಟರ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಮರು ಪರೀಕ್ಷೆ: ವ್ಯವಸ್ಥೆ ಪರಿಶೀಲಿಸಿದ ಪ್ರಧಾನ್

ನವದೆಹಲಿ (ಪಿಟಿಐ): 'ನೀಟ್-ಯುಜಿ' ಮರು ಪರೀಕ್ಷೆಗೆ ಸಂಬಂಧಿಸಿದ ಸಿದ್ಧತೆಗಳನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಂಗಳವಾರ ಪರಿಶೀಲಿಸಿದ್ದಾರೆ.

ಕಟ್ಟುನಿಟ್ಟಾದ ಶಿಷ್ಟಾಚಾರಗಳನ್ನು ಪಾಲಿಸುವ ಮೂಲಕ ದೋಷರಹಿತವಾಗಿ ಪರೀಕ್ಷೆ ನಡೆಯುವುದನ್ನು ಖಾತರಿ ಪಡಿಸಿಕೊಳ್ಳುವಂತೆಯೂ ಅಧಿಕಾರಿಗಳಿಗೆ ಅವರು ನಿರ್ದೇಶಿಸಿದ್ದಾರೆ.

ವ್ಯವಸ್ಥೆ ಪರಿಶೀಲನೆಗೆ ಸಂಬಂಧಿಸಿದಂತೆ ಸಭೆ ನಡೆಸಿರುವ ಪ್ರಧಾನ್, 'ಈ ಹಿಂದೆ ಪರೀಕ್ಷಾ ಪ್ರಕ್ರಿಯೆಗಳಲ್ಲಿ ಗುರುತಿಸಲಾದ ಲೋಪಗಳನ್ನು ಪರಿಹರಿಸಿ, ಸಂಪೂರ್ಣ ಪಾರದರ್ಶಕ ರೀತಿಯಲ್ಲಿ ಪರೀಕ್ಷೆ ನಡೆಸಬೇಕು' ಎಂದು ಸೂಚಿಸಿದ್ದಾರೆ.

ಅಲ್ಲದೇ, ಪರೀಕ್ಷೆಗಳನ್ನು ಸುರಕ್ಷಿತವಾಗಿ ನಡೆಸುವ ನಿಟ್ಟಿನಲ್ಲಿ ಎಲ್ಲಾ ರಾಜ್ಯಗಳಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳ ಜತೆಗೆ ಸಮನ್ವಯ ಸಭೆಗಳನ್ನು ನಡೆಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಜೂನ್ 21ರಂದು 'ನೀಟ್-ಯುಜಿ' ಮರು ಪರೀಕ್ಷೆ ನಡೆಯಲಿದೆ.

ವಿದ್ಯಾರ್ಥಿಗಳ ನಿವಾಸದಲ್ಲಿ ಸಿಬಿಐ ಶೋಧ

ನಾಗ್ಪುರ (ಪಿಟಿಐ): 'ನೀಟ್-ಯುಜಿ' ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಕೇಂದ್ರ ತನಿಖಾ ಸಂಸ್ಥೆಯ (ಸಿಬಿಐ) ಅಧಿಕಾರಿಗಳು ನಾಗ್ಪುರದಲ್ಲಿ ಇಬ್ಬರು ವಿದ್ಯಾರ್ಥಿಗಳ ನಿವಾಸದಲ್ಲಿ ಶೋಧ ಕಾರ್ಯಾಚರಣೆ ನಡೆಸಿರುವುದಾಗಿ ಮಂಗಳವಾರ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಬಂಧಿತರಾಗಿರುವ ಆರೋಪಿಗಳ ಜತೆಗೆ ವಿದ್ಯಾರ್ಥಿಗಳು ಸಂಪರ್ಕ ಹೊಂದಿರುವ ಶಂಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಸೆಂಟ್ರಲ್ ಅವೆನ್ಯೂ ಹಾಗೂ ಇತವಾರಿ ಪ್ರದೇಶದಲ್ಲಿರುವ ವಿದ್ಯಾರ್ಥಿಗಳ ನಿವಾಸದಲ್ಲಿ ಸೋಮವಾರ ಶೋಧ ನಡೆಸಲಾಗಿದೆ.

ಈ ವೇಳೆ ಮೊಬೈಲ್ ಫೋನ್, ಲ್ಯಾಪ್‌ಟಾಪ್ ಹಾಗೂ ಕೈಬರಹದ ಪುಸ್ತಕಗಳು ಮತ್ತು ಇತರೆ ಡಿಜಿಟಲ್ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲಾಗುವುದು ಎಂದೂ ಅಧಿಕಾರಿಗಳು ತಿಳಿಸಿದ್ದಾರೆ. ಈ ವಿಚಾರದ ತನಿಖೆ ಪ್ರಗತಿಯಲ್ಲಿದ್ದು, ವಿದ್ಯಾರ್ಥಿಗಳನ್ನು ಬಂಧಿಸಲಾಗಿಲ್ಲ ಎಂದೂ ಸಿಬಿಐ ಅಧಿಕಾರಿಗಳು ಹೇಳಿದ್ದಾರೆ.

ಅಬಕಾರಿ ನೀತಿ ಪ್ರಕರಣ: 25ರಂದು ದೆಹಲಿ ಹೈಕೋರ್ಟ್ ವಿಚಾರಣೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಮೇ 25ರಂದು ನಡೆಸಲಿದೆ.

ವಿಚಾರಣಾ ನ್ಯಾಯಪೀಠದ ಬದಲಾವಣೆ ಬಗ್ಗೆ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮಾಜಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಮತ್ತು ಮಾಜಿ ಶಾಸಕ ದುರ್ಗೇಶ್ ಪಾಠಕ್ ಅವರಿಗೆ ಮಾಹಿತಿ ನೀಡುವಂತೆ ನ್ಯಾಯಾಲಯ ಸೂಚಿಸಿದೆ.

'ನ್ಯಾಯಪೀಠ ಬದಲಾವಣೆ ಬಗ್ಗೆ ಅವರಿಗೆ ಮಾಹಿತಿ ನೀಡಿ. ಪ್ರಸಕ್ತ ಸನ್ನಿವೇಶದ ಬಗ್ಗೆ ಪ್ರತಿಕ್ರಿಯೆ ನೀಡುವುದಿದ್ದರೆ ನೀಡಲಿ' ಎಂದು ನ್ಯಾಯಮೂರ್ತಿ ಮನೋಜ್ ಜೈನ್ ಹೇಳಿದರು. ವಿಚಾರಣಾ ನ್ಯಾಯಾಲಯವು ಫೆಬ್ರುವರಿ 27ರಂದು ಕೇಜ್ರಿವಾಲ್, ಸಿಸೋಡಿಯಾ ಮತ್ತು ಇತರ 21 ಮಂದಿಯನ್ನು ಖುಲಾಸೆಗೊಳಿಸಿತ್ತು.

'ಇರಾನ್ ಮೇಲಿನ ದಾಳಿ ಸ್ಥಗಿತ'

ವಾಷಿಂಗ್ಟನ್(ಪಿಟಿಐ): ಇರಾನ್ ಮೇಲೆ ಹೊಸದಾಗಿ ದಾಳಿಗಳನ್ನು ನಿಲ್ಲಿಸಿದ್ದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ಕತಾರ್, ಸೌದಿ ಅರೇಬಿಯಾ ಹಾಗೂ ಯುಎಇ ಮನವಿ ಮೇರೆಗೆ ದಾಳಿಗಳನ್ನು ನಿಲ್ಲಿಸಲಾಗಿದೆ. ಎಲ್ಲರಿಗೂ ಒಪ್ಪಿತವಾಗುವ ಒಪ್ಪಂದ ಸಾಧ್ಯವಾಗುವ ನಿಟ್ಟಿನಲ್ಲಿ ಇರಾನ್ ಜೊತೆ ಚರ್ಚೆಗಳು ನಡೆಯುತ್ತಿವೆ' ಎಂದೂ ಹೇಳಿದ್ದಾರೆ.

ಟ್ರಂಪ್ ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರೂಥ್ ಸೋಷಿಯಲ್'ನಲ್ಲಿ ಈ ಘೋಷಣೆ ಮಾಡಿದ್ದಾರೆ. ಆದರೆ, ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧವನ್ನು ನಿಲ್ಲಿಸುವ ಸಲುವಾಗಿ ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಕುರಿತು ಟ್ರಂಪ್ ಅವರ ಈ ಹೇಳಿಕೆಯಲ್ಲಿ ಯಾವುದೇ ಉಲ್ಲೇಖ ಇಲ್ಲದಿರುವುದು ಗಮನಾರ್ಹ.

'ನಮ್ಮ ಸೇನೆ ಇರಾನ್ ಮೇಲೆ ದಾಳಿ ನಡೆಸಲು ಯೋಜಿಸಿತ್ತು. ಈ ದಾಳಿಗಳನ್ನು ನಿಲ್ಲಿಸುವಂತೆ ಕತಾರ್ ದೊರೆ ತಮೀಮ್ ಬಿನ್ ಹಮದ್ ಅಲ್ ಥನಿ, ಸೌದಿ ಅರೇಬಿಯಾ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಹಾಗೂ ಯುಎಇ ಅಧ್ಯಕ್ಷ ಮೊಹಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಮನವಿ ಮಾಡಿದರು. ಹೀಗಾಗಿ, ದಾಳಿಗಳನ್ನು ನಿಲ್ಲಿಸಿದ್ದೇವೆ' ಎಂದು ಬರೆದುಕೊಂಡಿದ್ದಾರೆ.

ಹಸುಗೂಸು ರಕ್ಷಣೆ: ತಂದೆ ಬಂಧನ

ನವದೆಹಲಿ (ಪಿಟಿಐ): ಚರಂಡಿಯಲ್ಲಿ ಬಿಟ್ಟುಹೋಗಿದ್ದ ಒಂದೂವರೆ ತಿಂಗಳ ಹೆಣ್ಣುಮಗುವನ್ನು ದೆಹಲಿಯ ರೋಹಿಣಿಯಲ್ಲಿ ಪೊಲೀಸರು ರಕ್ಷಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಗುವಿನ ತಂದೆ ಸಜ್ಜನ್ ಕುಮಾರ್ (20) ಅವರನ್ನು ಬಂಧಿಸಲಾಗಿದೆ.

ವ್ಯಗ್ರ ನಾಯಿ ಕೊಲ್ಲಿ: 'ಸುಪ್ರೀಂ'

ಒಂದನೇ ಪುಟದಿಂದ...

'ಕ್ರೋಧೋನ್ಮತ್ತ, ಗುಣಪಡಿಸಲಾಗದಷ್ಟು ಅನಾರೋಗ್ಯ ಅಥವಾ ಸ್ಪಷ್ಟವಾಗಿ ಅಪಾಯಕಾರಿ ಅಥವಾ ಆಕ್ರಮಣಕಾರಿ ವರ್ತನೆಯ ನಾಯಿಗಳನ್ನು ಒಳಗೊಂಡ ಪ್ರಕರಣಗಳಲ್ಲಿ ಕಾನೂನಿನಲ್ಲಿ ಅನುಮತಿಸಲಾಗುವ ಕ್ರಮಗಳ ಮೂಲಕ ಕೊಲ್ಲಬಹುದು ಎಂದು ನ್ಯಾಯಪೀಠ ನಿರ್ದೇಶನ ನೀಡಿತು.

ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ಜಾರಿ ಮಾಡಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಪೀಠ, ಬೀದಿ ನಾಯಿಗಳು ಮಕ್ಕಳ ಮೇಲೆ ದಾಳಿ ಮಾಡಿರುವ ಅಪಾಯಕಾರಿ ಘಟನೆಗಳನ್ನು ಉಲ್ಲೇಖಿಸಿತು.

ಚಿಕ್ಕ ಮಕ್ಕಳು ಮತ್ತು ಹಿರಿಯ ನಾಗರಿಕರ ಮೇಲೆ ಬೀದಿ ನಾಯಿಗಳು ದಾಳಿ ಮಾಡಿವೆ. ವಿದೇಶಿ ಪ್ರವಾಸಿಗರು ಕೂಡ ನಾಯಿಗಳಿಂದ ತೊಂದರೆಗೀಡಾಗಿದ್ದಾರೆ. ನಾಯಿಗಳ ಹಾವಳಿಯಿಂದ ಜನರನ್ನು ರಕ್ಷಿಸುವ ಹೊಣೆಗಾರಿಕೆಯಲ್ಲಿ ರಾಜ್ಯ ಸರ್ಕಾರಗಳು ವಿಫಲವಾಗಿವೆ ಎಂದಿತು.

ಇಂತಹ ಘಟನೆಗಳು ಪುನರಾವರ್ತನೆಯಾಗುತ್ತಿವೆ. ನ್ಯಾಯಾಲಯದ ನಿರ್ದೇಶನಗಳು ಸರಿಯಾಗಿ ಜಾರಿಯಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ನಿರ್ದೇಶನಗಳನ್ನು ಸರಿಯಾಗಿ ಪಾಲಿಸದ ಅಧಿಕಾರಿಗಳು ನ್ಯಾಯಾಂಗ ನಿಂದನೆ ಮತ್ತು ಶಿಸ್ತು ಕ್ರಮಗಳಿಗೆ ಗುರಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿತು.

ದೇಶದ ವಿವಿಧ ಭಾಗಗಳಲ್ಲಿ ಚಿಕ್ಕ ಮಕ್ಕಳು ಮತ್ತು ವೃದ್ಧರ ಮೇಲೆ ನಡೆಯುತ್ತಿರುವ ದಾಳಿ, ಸಾರ್ವಜನಿಕ ಸ್ಥಳಗಳಲ್ಲಿ ಸಾಮಾನ್ಯ ನಾಗರಿಕರು ಮತ್ತು ವಿದೇಶ ಪ್ರವಾಸಿಗರು ಸಹ ಇಂತಹ ಘಟನೆಗಳಿಂದ ಸಂತ್ರಸ್ತರಾಗುತ್ತಿರುವ ತೀವ್ರ ಆತಂಕಕಾರಿ ವಾಸ್ತವಗಳನ್ನು ನಾವು ನಿರ್ಲಕ್ಷಿಸುವಂತಿಲ್ಲ. ಇದು ರಾಜ್ಯ ಸರ್ಕಾರದ ವೈಫಲ್ಯ ಎಂದು ಹೇಳಬಹುದಷ್ಟೇ ಎಂದು ಪೀಠ ಕಟುವಾಗಿ ಹೇಳಿತು.

ಪ್ರಕರಣವೇನು: ಶಾಲೆಗಳು, ಆಸ್ಪತ್ರೆಗಳು, ಬಸ್‌ನಿಲ್ದಾಣಗಳು, ರೈಲು ನಿಲ್ದಾಗಳು ಮತ್ತು ಕ್ರೀಡಾ ಸಂಕೀರ್ಣದಂತಹ ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ತೆರವುಗೊಳಿಸಲು ನ್ಯಾಯಪೀಠ ಕಳೆದ ನವೆಂಬರ್‌ನಲ್ಲಿ ಸರಣಿ ನಿರ್ದೇಶನಗಳನ್ನು ನೀಡಿತ್ತು. ಈ ನಾಯಿಗಳನ್ನು ಆಶ್ರಯತಾಣಗಳಿಗೆ ವರ್ಗಾಯಿಸಬೇಕು ಮತ್ತು ತೆರವುಗೊಳಿಸಿದ ಸ್ಥಳಗಳಿಗೆ ಅವು ಮರಳಿ ಬಾರದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಸೂಚಿಸಿತ್ತು. ನಿರ್ದಿಷ್ಟ ಸ್ಥಳಗಳನ್ನು ಹೊರತುಪಡಿಸಿ ಎಲ್ಲೆಂದರಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ಕೂಡ ನ್ಯಾಯಪೀಠ ನಿಷೇಧಿಸಿತ್ತು. ನಂತರ, ಈ ನಿರ್ದೇಶನವನ್ನು ಹಿಂಪಡೆಯುವಂತೆ ಕೋರಿ ಹಲವು ಪ್ರಾಣಿ ಪ್ರಿಯರು ಮತ್ತು ಪ್ರಾಣಿ ಹಕ್ಕು ರಕ್ಷಣಾ ಸಂಘಟನೆಗಳು ಅರ್ಜಿ ಸಲ್ಲಿಸಿದ್ದವು. ಈ ಅರ್ಜಿಗಳನ್ನು ಸುದೀರ್ಘವಾಗಿ ವಿಚಾರಣೆ ನಡೆಸಿದ್ದ ನ್ಯಾಯಪೀಠ ಜನವರಿ 29ರಂದು ತೀರ್ಪನ್ನು ಕಾಯ್ದಿರಿಸಿತ್ತು.

ಡಾರ್ವಿನ್ ಸಿದ್ಧಾಂತದ ಉಲ್ಲೇಖ

ನಾಯಿ ಕಡಿತದ ಪ್ರಕರಣಗಳನ್ನು ನಿರ್ಲಕ್ಷಿಸುವುದು ಮತ್ತು ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಡಾರ್ವಿನ್ ಅವರ 'ಬಲಿಷ್ಠರ ಉಳಿಯುವಿಕೆ' (ಸರ್ವೈವಲ್ ಆಫ್ ದಿ ಫಿಟ್ಟೆಸ್ಟ್) ಸಿದ್ಧಾಂತವನ್ನು ಸೂಚಿಸುತ್ತಿದ್ದು, ಇದು ಉತ್ತಮ ಸಮಾಜದ ಉದಾಹರಣೆಯಲ್ಲ ಎಂದು ನ್ಯಾಯ ಪೀಠ ಅಭಿಪ್ರಾಯಪಟ್ಟಿತು.

ಬೀದಿ ನಾಯಿ ಕಡಿತದ ಘಟನೆಗಳ ಕುರಿತು ದೇಶದಾದ್ಯಂತದ ದತ್ತಾಂಶಗಳನ್ನು ಉಲ್ಲೇಖಿಸಿದ ಪೀಠವು, ವ್ಯಾಪಕ ಪ್ರಮಾಣದಲ್ಲಿ ಹೆಚ್ಚುತ್ತಿರುವ ನಾಯಿ ಕಡಿತದ ಘಟನೆಗಳು ನಾಗರಿಕ ಜೀವನವನ್ನು ಅಪಾಯಕ್ಕೆ ತಳ್ಳಬಹುದು. ಇದುವರೆಗಿನ ವರದಿಗಳನ್ನು ಪರಿಶೀಲಿಸಿದಾಗ, ಇದು ಕೇವಲ ಅಂಕಿಅಂಶವಲ್ಲ. ಬದಲಿಗೆ, ಇದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದ್ದು, ಸಾರ್ವಜನಿಕ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿರುವುದು ಕಂಡುಬಂದಿದೆ ಎಂದು ಕಳವಳ ವ್ಯಕ್ತಪಡಿಸಿತು.

ನ್ಯಾಯಪೀಠದ ನಿರ್ದೇಶನಗಳು

- ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ನಿಯಮಗಳನ್ನು ಜಾರಿಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು
- ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಪ್ರಾಣಿ ಸಂತಾನ ನಿಯಂತ್ರಣ (ಎಬಿಸಿ) ಕೇಂದ್ರ ಸ್ಥಾಪಿಸಬೇಕು
- ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ರೇಬಿಸ್ ವಿರೋಧಿ ಲಸಿಕೆಗಳು ಮತ್ತು ಇಮ್ಯುನೊಗ್ಲಾಬ್ಯುಲಿನ್‌ಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು
- ಸಾರ್ವಜನಿಕ ಸ್ಥಳಗಳನ್ನು ನಾಯಿಗಳಿಂದ ಸುರಕ್ಷಿತಗೊಳಿಸುವ ನಿರ್ದೇಶನಗಳನ್ನು ಜಾರಿಗೊಳಿಸುವ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳಿಗೆ ಕರ್ತವ್ಯಗಳ ನಿರ್ವಹಣೆಯ ಸಮಯದಲ್ಲಿ ಸೂಕ್ತ ರಕ್ಷಣೆ ಒದಗಿಸಬೇಕು. ಕರ್ತವ್ಯಗಳ ನಿರ್ವಹಣೆಯ ಸಂದರ್ಭದಲ್ಲಿ ಅವರ ವಿರುದ್ಧ ಎಫ್‌ಐಆರ್ ಅಥವಾ ಕ್ರಿಮಿನಲ್ ದೂರುಗಳನ್ನು ದಾಖಲಿಸಬಾರದು
- ಜನರ ಜೀವಕ್ಕೆ ಅಪಾಯ ತಡೆಯಲು ಅಧಿಕಾರಿಗಳು ಕಾನೂನುಬದ್ಧವಾಗಿ ಅನುಮತಿಸಬಹುದಾದ ಕ್ರಮಗಳನ್ನು ತೆಗೆದುಕೊಳ್ಳಬಹುದು
- ಈ ಆದೇಶದ ಪಾಲನೆಗಾಗಿ ಹೈಕೋರ್ಟ್‌ಗಳು ಸ್ವಯಂಪ್ರೇರಿತ ಪ್ರಕರಣಗಳನ್ನು ದಾಖಲಿಸಿಕೊಡು ಮೇಲ್ವಿಚಾರಣೆ ಮಾಡಬೇಕು
- ಬೀಡಾಡಿ ದನಗಳ ಕಾಟದಿಂದ ಹೆದ್ದಾರಿಗಳನ್ನು ಮುಕ್ತಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು

> **ಸಂವಿಧಾನದ ಪರಿಚ್ಛೇದ 21ರ ಅನುಸಾರ ಜನರಿಗೆ ಒದಗಿಸಲಾಗಿರುವ ಜೀವಿಸುವ ಹಕ್ಕಿನಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಭಯವಿಲ್ಲದೆ ಮುಕ್ತವಾಗಿ ಸಂಚರಿಸುವುದು ಕೂಡ ಸೇರಿದೆ. ಇದು ದೈಹಿಕ ಹಲ್ಲೆ, ನಾಯಿ ದಾಳಿಯಂತಹ ಪ್ರಾಣಕ್ಕೆ ಹಾನಿ ತರುವಂತಹ ದಾಳಿಯ ಆತಂಕವಿಲ್ಲದೆ ಬದುಕುವುದಕ್ಕೂ ಅನ್ವಯಿಸುತ್ತದೆ**
>
> **ನ್ಯಾಯಮೂರ್ತಿ ಸಂದೀಪ್ ಮೆಹ್ತಾ**
>
> (ತೀರ್ಪು ಪ್ರಕಟಿಸುತ್ತಾ)

ಸುಭಾಷಿತ



ನಿಜವಾದ ಗುರು ಎಂದರೆ ಅನುಭವ.

–ವಿ.ಕೃ. ಗೋಕಾಕ್

ಸಂಪಾದಕೀಯ

ಜಾಮೀನು ನಿರಾಕರಣೆ ನಿರ್ಧಾರ 'ಸುಪ್ರೀಂ' ಪರಾಮರ್ಶೆ ಸ್ವಾಗತಾರ್ಹ

ದೆಹಲಿಯಲ್ಲಿ 2020ರಲ್ಲಿ ನಡೆದ ಗಲಭೆಯ ಸಂಚಿನ ಆರೋಪ ಹೊತ್ತಿರುವ ಉಮರ್ ಖಾಲಿದ್ ಅವರಿಗೆ ಜಾಮೀನು ನಿರಾಕರಿಸಿದ್ದ ತನ್ನದೇ ತೀರ್ಪನ್ನು ಸುಪ್ರೀಂ ಕೋರ್ಟ್ ಮರು ವಿಮರ್ಶೆಗೆ ಒಳಪಡಿಸಿದೆ. ಈ ಪರಾಮರ್ಶೆ, ಸರ್ಕಾರ ಮಾತ್ರವಲ್ಲದೆ ನ್ಯಾಯಾಂಗವೂ ಉಮರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಅನ್ಯಾಯ ಮತ್ತು ಭೇದಭಾವದಿಂದ ನಡೆದುಕೊಂಡಿರುವುದನ್ನು ಸೂಚಿಸುವಂತಿದೆ. ಉಮರ್ ಹಾಗೂ ಶರ್ಜೀಲ್ 'ಇಮಾಮ್' ಅವರು ಐದು ವರ್ಷಕ್ಕಿಂತಲೂ ಹೆಚ್ಚಿನ ಅವಧಿಯಿಂದ ಜೈಲಿನಲ್ಲಿದ್ದು, ಅವರಿಗೆ ಜಾಮೀನು ನೀಡುವಂತೆ ಸಲ್ಲಿಸಿದ ಅರ್ಜಿ ಮನವಿಗಳನ್ನು ಸುಪ್ರೀಂ ಕೋರ್ಟ್ ಸೇರಿದಂತೆ ನ್ಯಾಯಾಲಯಗಳು ತಿರಸ್ಕರಿಸಿವೆ. ಮೇ 19ರ ಮಂಗಳವಾರ ಕೂಡ ದೆಹಲಿಯ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಉಮರ್ ಅವರಿಗೆ ಜಾಮೀನು ನಿರಾಕರಿಸಿದೆ. ಜಾಮೀನು ಪ್ರಕರಣವೊಂದರ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭೂಯಾನ್ ಅವರನ್ನೊಳಗೊಂಡ ವಿಭಾಗೀಯ ಪೀಠವು, ಉಮರ್ ಖಾಲಿದ್ ಮತ್ತು ಶರ್ಜೀಲ್ ಅವರಿಗೆ ಮತ್ತೊಂದು ಪೀಠವು ಜಾಮೀನು ನಿರಾಕರಿಸಿದ್ದು ತಪ್ಪು ನಿರ್ಧಾರವಾಗಿದೆ ಹಾಗೂ 2021ರ ಕೆ.ಎ. ನಜೀಬ್ ಪ್ರಕರಣದಲ್ಲಿ ಮೂರು ನ್ಯಾಯಮೂರ್ತಿಗಳ ಪೀಠ ಸ್ಥಾಪಿಸಿದ್ದ ತತ್ತ್ವದ ಉಲ್ಲಂಘನೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ವಿಚಾರಣೆ ವಿಳಂಬವಾದ ಸಂದರ್ಭದಲ್ಲಿ 'ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆ' (ಯುಎಪಿಎ) ಅಡಿಯಲ್ಲಿ ಕೂಡ 'ಜಾಮೀನು ನಿಯಮ, ಜೈಲು ಅಪವಾದ' ಎಂದು ನಜೀಬ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು.



ಉಮರ್ ಖಾಲಿದ್ ಮತ್ತು ಶರ್ಜೀಲ್ ಅವರಿಗೆ ಜಾಮೀನು ನೀಡದಿರುವ ತೀರ್ಪಿನ ಸುಪ್ರೀಂ ಕೋರ್ಟ್ ಪರಾಮರ್ಶೆಗೆ, ಸಾಂವಿಧಾನಿಕ ಹಕ್ಕುಗಳು ಒತ್ತಡದಲ್ಲಿರುವ ಸಂದರ್ಭದಲ್ಲಿ ವಿಶೇಷ ಮಹತ್ವವಿದೆ.

ವ್ಯಕ್ತಿಗತ ಹಕ್ಕುಗಳನ್ನು ಎತ್ತಿಹಿಡಿಯುವ ನಜೀಬ್ ಪ್ರಕರಣದ ತೀರ್ಪಿನಂತಹ ಪೂರ್ವ ನಿದರ್ಶನಗಳನ್ನು ಸುಪ್ರೀಂ ಕೋರ್ಟ್ ಸೇರಿದಂತೆ ಎಲ್ಲ ನ್ಯಾಯಾಲಯಗಳು ಪಾಲಿಸಬೇಕೆಂದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ವಿಸ್ತೃತ ಪೀಠಗಳ ತಾರ್ಕಿಕತೆಗೆ ಕಿರಿಯ ಸಂಖ್ಯೆಯ ನ್ಯಾಯಮೂರ್ತಿಗಳನ್ನು ಒಳಗೊಂಡಿರುವ ಸಣ್ಣ ಪೀಠಗಳು ಅಸಮ್ಮತಿ ವ್ಯಕ್ತಪಡಿಸದೆಯೇ ದುರ್ಬಲಗೊಳಿಸುವುದನ್ನೂ ಕೋರ್ಟ್ ಗಮನಿಸಿದೆ. ವಿಭಾಗೀಯ ಪೀಠದ ಈ ಗಂಭೀರ ವಿಮರ್ಶೆ ಮತ್ತು ವಿಶ್ಲೇಷಣೆಯು, ಉಮರ್ ಖಾಲಿದ್ ರೀತಿಯ ಪ್ರಕರಣಗಳ ವಿಚಾರಣೆಯ ಸಂದರ್ಭದಲ್ಲಿ ಸಣ್ಣ ಪೀಠಗಳು ಹೇಗೆ ನಡೆದುಕೊಳ್ಳಬೇಕು ಎನ್ನುವುದಕ್ಕೆ ಮಾರ್ಗದರ್ಶನ ನೀಡುವಂತಿದೆ. ಉಮರ್ ಖಾಲಿದ್ ಅವರ ಮುಂದುವರಿದಿರುವ ಬಂಧನವು ವಿಚಾರಣೆ ಹಾಗೂ ನ್ಯಾಯದ ಚೌಕಟ್ಟನ್ನು ದಾಟಿದ್ದು, ಸರ್ಕಾರದ ಹಟದಿಂದ ಮಾತ್ರ ಅದು ಜಾರಿಯಲ್ಲಿದೆ. ತನಿಖಾಸಂಸ್ಥೆ ಹೊರಿಸಿರುವ ಮೇಲ್ನೋಟದ ಆರೋಪಗಳನ್ನು ಕಣ್ಣು ಮುಚ್ಚಿ ಒಪ್ಪಿಕೊಂಡು ಆರೋಪಿಗಳಿಗೆ ಜಾಮೀನು ನಿರಾಕರಿಸಿದರೆ, ವಿಚಾರಣೆ ಮೊದಲಿನ ಬಂಧನದ ಅವಧಿಯೇ ವಿಚಾರಣೆಯ ನಂತರದ ಶಿಕ್ಷೆಯ ಸ್ವರೂಪವನ್ನು ಪಡೆಯುತ್ತದೆ ಎಂದು ಕೋರ್ಟ್ ಹೇಳಿದೆ. ಉಮರ್ ಪ್ರಕರಣದಲ್ಲಿ ಹೀಗೆಯೇ ಆಗಿದ್ದು, ವಿಚಾರಣಾಪೂರ್ವ ಪ್ರಕ್ರಿಯೆ ಶಿಕ್ಷೆಯಾಗಿ ಪರಿಣಮಿಸಿದೆ.

ಜಾಮೀನಿಗೆ ಸಂಬಂಧಿಸಿದ ಮೂಲಭೂತ ತತ್ತ್ವವು 'ಯುಎಪಿಎ' ಪ್ರಕರಣಗಳಿಗೂ ಅನ್ವಯಿಸುತ್ತದೆ ಎಂದು ನ್ಯಾಯಾಲಯ ಪುನರುಚ್ಚರಿಸಿರುವುದು ಗಮನಾರ್ಹ. ಯುಎಪಿಎ ಕಾಯ್ದೆಯ 43ಡಿ(5) ಸೆಕ್ಷನ್ ಕಠಿಣ ಜಾಮೀನು ನಿಯಮಗಳನ್ನು ಒಳಗೊಂಡಿದ್ದು, ವ್ಯಕ್ತಿಯ ಸ್ವಾತಂತ್ರ್ಯದ ಹಕ್ಕು ಮತ್ತು ತ್ವರಿತ ವಿಚಾರಣೆಯ ಹಕ್ಕನ್ನು ಈ ನಿಯಮಗಳು ಹತ್ತಿಕ್ಕಬಾರದು ಎಂದು ನ್ಯಾಯಾಲಯ ಹೇಳಿದೆ. ಯುಎಪಿಎ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಶೇ 2ರಿಂದ 6ರಷ್ಟಿದ್ದು, ಶೇ 94ರಿಂದ 98ರಷ್ಟು ಪ್ರಕರಣಗಳಲ್ಲಿ ಆರೋಪಿಗಳು ದೋಷಮುಕ್ತರಾಗಿ ಬಿಡುಗಡೆ ಆಗುತ್ತಿರುವುದನ್ನೂ ಕೋರ್ಟ್ ಎತ್ತಿ ತೋರಿಸಿದೆ. ನಾಗರಿಕರ ವಿರುದ್ಧ ಸರ್ಕಾರ ಅತ್ಯಂತ ಕಠಿಣ ಕಾನೂನು ಅಸ್ತ್ರಗಳನ್ನು ಬಳಸಲು ಹಿಂಜರಿಯದಿರುವ ಹಾಗೂ ಮೂಲಭೂತ ಹಕ್ಕುಗಳು ಒತ್ತಡದಲ್ಲಿರುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ವಿಶೇಷ ಮಹತ್ವವಿದೆ. ಸರ್ಕಾರದ ದಮನಕಾರಿ ವರ್ತನೆಗೆ ಉಮರ್ ಖಾಲಿದ್ ಪ್ರಕರಣ ಸ್ಪಷ್ಟ ನಿದರ್ಶನವಾಗಿದೆ. ನ್ಯಾಯಾಂಗದ ಚರಿತ್ರೆಯಲ್ಲಿ ಸುಪ್ರೀಂ ಕೋರ್ಟ್ ತನ್ನದೇ ತೀರ್ಪನ್ನು ಪ್ರಶ್ನಿಸಿರುವುದು ವಿರಳ. ಇದು ತಾಂತ್ರಿಕ ಪ್ರಶ್ನೆಯಷ್ಟೇ ಆಗಿರದೆ, ಗಂಭೀರವಾದ ಹಾಗೂ ಸಾವಧಾನದಿಂದ ಆಲಿಸಿ ಉತ್ತರಿಸಬೇಕಾದ ವಿಷಯವಾಗಿದೆ.

ಚಾಟಿ

ರೈತರ ಸಂಕಷ್ಟಕ್ಕೆ ಉತ್ತರವಿಲ್ಲ



ಸಿದ್ದರಾಮಯ್ಯ ಸರ್ಕಾರ ರೈತರ ಸಂಕಷ್ಟ ಪರಿಹಾರಕ್ಕೆ ಯಾವುದೇ ಗಟ್ಟಿಯಾದ ಕ್ರಮ ಕೈಗೊಂಡಿಲ್ಲ. ರೈತರ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರವಾಗುತ್ತಿದೆ. ಸಮಸ್ಯೆಗಳನ್ನು ಹೆಚ್ಚಿಸುವ ಸರ್ಕಾರ ಬೇಡ; ಪರಿಹರಿಸುವ ಸರ್ಕಾರ ಬೇಕು.

ಚೇತನ್ ಅಹಿಂಸಾ, ನಟ, 'ಎಕ್ಸ್'ನಿಂದ

ಕಿಡಿನುಡಿ



ವರ್ಷಕ್ಕೆ ಎರಡು ಕೋಟಿ ಉದ್ಯೋಗದ ಭರವಸೆ ನೀಡಿದ್ದ ಮೋದಿಯವರ ಅಚ್ಛೇ ದಿನ ಬರಲಿಲ್ಲ. 'ನೀಟ್' ಬರೆದ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯಲು ಆಗಿಲ್ಲ. ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ದೇಶದ ಸಾಲವನ್ನು ₹220 ಲಕ್ಷ ಕೋಟಿಗೆ ಹೆಚ್ಚಿಸಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 20-5-2001

● **ಮಗುವಿನ ಮರ್ಮಾಂಗ ಕತ್ತರಿಸಿದ ವೈದ್ಯ**

ದಾವಣಗೆರೆ, ಮೇ 19– ಅತ್ಯಂತ ಸಣ್ಣ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದ ಎರಡೂವರೆ ವಯಸ್ಸಿನ ಮಗುವಿನ ಮರ್ಮಾಂಗವನ್ನೇ ವೈದ್ಯರೊಬ್ಬರು ಕತ್ತರಿಸಿದ ಪ್ರಕರಣ ಜಿಲ್ಲೆಯ ಜಗಳೂರಿನಲ್ಲಿ ನಡೆದಿದೆ.

ಜಗಳೂರಿನ ರಾಘವೇಂದ್ರ ಆಸ್ಪತ್ರೆಯ ಡಾ. ಎಂ.ಎಚ್. ರಮೇಶ್ ಮತ್ತು ಅವರ ತಂದೆ ಹನುಮಂತ ರೆಡ್ಡಿ ಎಂಬುವರ ನಿರ್ಲಕ್ಷ್ಯದಿಂದಾಗಿ ಮಗುವೊಂದು ಈಗ ಸಾವು ಬದುಕಿನ ಜೊತೆಗೆ ಹೋರಾಟ ನಡೆಸಿದೆ.

ಜಗಳೂರು ತಾಲ್ಲೂಕಿನ ಚಿಕ್ಕಮಲ್ಲನಹೊಳೆ ಗ್ರಾಮದ ಸಿ. ವೀರಭದ್ರಯ್ಯ ಮತ್ತು ನೀಲಮ್ಮ ಎಂಬುವರ ಮಗು ಎಸ್.ಎಂ. ಗಾಯಕ್, ವೈದ್ಯರ ನಿರ್ಲಕ್ಷ್ಯಕ್ಕೆ ತುತ್ತಾಗಿ ಮರ್ಮಾಂಗವನ್ನು ಅರ್ಧದಷ್ಟು ಕಳೆದುಕೊಂಡಿರುವ ದುರ್ದೈವಿ.

● **ಜಾದೂಗಾರನ ಕೈಚಳಕ: ಮಾಯವಾದ ಸಚಿವ ರೈ!**

ಮಂಗಳೂರು, ಮೇ 19– ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ಬಿ. ರಮಾನಾಥ ರೈ ಅವರನ್ನು ಜಾದೂಗಾರ ಗಣೇಶ್ ಕುದ್ರೋಳಿ ಅವರು, ಮಂಗಳೂರಿನ ಪುರಭವನದಲ್ಲಿ ಜಾದೂ ಮೂಲಕ 'ಮಾಯ' ಮಾಡಿದ ಘಟನೆ ಇಂದು ನಡೆಯಿತು.

ಸಚಿವ ರಮಾನಾಥ ರೈ ಅವರನ್ನು ತ್ರಿಕೋನಾಕಾರದ ಪೆಟ್ಟಿಗೆಯಲ್ಲಿ ಬಂಧಿಸಿದ ಬಳಿಕ ಅವರನ್ನು ಮಾಯ ಮಾಡಲಾಯಿತು. ಸಭಿಕರು ನೋಡುತ್ತಿದ್ದಂತೆ ಸಚಿವರಿದ್ದ ಪೆಟ್ಟಿಗೆ ತೆರೆದಾಗ ಅದರಿಂದ ಸ್ಫೋಟದ ಶಬ್ದ ಹಾಗೂ ಹೊಗೆ ಕಾಣಿಸಿಕೊಂಡಿತು.

75 ವರ್ಷಗಳ ಹಿಂದೆ

ಭಾನುವಾರ, 20-5-1951

● **ಆಹಾರ ಧಾನ್ಯದ ಬೆಲೆ ವಾಪಸು ಪಡೆವ ಬಗ್ಗೆ ಭಿನ್ನಾಭಿಪ್ರಾಯ**

ವಾಷಿಂಗ್‌ಟನ್, ಮೇ 19– ಅಮೆರಿಕದ ಸೆನೆಟ್ ಸಭೆಯ ಭಾರತೀಯ ಧಾನ್ಯ ಮಸೂದೆಯಂತೆ ಭಾರತಕ್ಕೆ ಕಳುಹಿಸಲಿರುವ ಆಹಾರ ಧಾನ್ಯದ ಬೆಲೆಯ ಅರ್ಧ ಭಾಗವನ್ನು ಭಾರತ ಮೋನಾಜೈಟ್ ಮೂಲಕ ಕೊಡಲು ಸಾಧ್ಯವೇ ಅಥವಾ ಇಲ್ಲವೆ? ಎಂಬ ವಿಚಾರದ ಬಗ್ಗೆ ಅಮೆರಿಕದ ಕಾಂಗ್ರೆಸ್ಸಿನ ನ್ಯಾಯ ಕಾನೂನು ಪರಿಣತರು ಇನ್ನೂ ನಿರ್ಧಾರಕ್ಕೆ ಬಂದಿಲ್ಲ.

ಅಣುಶಕ್ತಿ ತಯಾರಕ ವಸ್ತುವಾದ ಮೋನಾಜೈಟ್ ಅನ್ನು ಹೊರಗಡೆಗೆ ರಫ್ತು ಮಾಡಕೂಡದೆಂದು ಭಾರತ ಸರ್ಕಾರ ಮೊದಲೇ ಆಜ್ಞೆ ಮಾಡಿದೆ.

ಆಹಾ ನೋಡದೊ ಹೊನ್ನಿನ ಜಿಂಕೆ



ವಿಶ್ಲೇಷಣೆ

ಎಂ.ಎಸ್. ಆಶಾದೇವಿ

> ಚಿನ್ನ ಕೊಳ್ಳುವುದನ್ನು ಮುಂದೂಡಿ ಎಂದು ಕರೆ ನೀಡಿದ ಪ್ರಧಾನಿ, ಬಂಗಾರವನ್ನು ಬರಿಯ ಲೋಹವಾಗಿಯಷ್ಟೇ ಕಂಡಿರುವಂತಿದೆ. ಅದು ಭಾರತೀಯ ಹೆಣ್ಣುಮಕ್ಕಳ ಭಾವಕೋಶದ ಭಾಗ, 'ಸುರಕ್ಷತೆಯ ಬಾಂಡ್'. ಕನ್ನಡಿಗರ ಪಾಲಿಗಂತೂ ಸೌಹಾರ್ದ–ಸ್ಥೈರಣೆ ಸಂಕೇತ.

ಹೊನ್ನು, ಹೆಣ್ಣು ಮತ್ತು ಮಣ್ಣುಗಳು ಈಗಲೂ ಅನೇಕರ ಗುರಿ ಮತ್ತು ಕನಸು. ನಿಜದಲ್ಲಿ ಆರ್ಥಿಕತೆಯ ಮೂಲಧಾತುಗಳೆಂದು ಈ ಮೂರನ್ನೂ ಗುರ್ತಿಸಲಾಗುತ್ತಿದೆ. ಹೊಳೆಯುವ ಹಳದಿ ಲೋಹ, ಹೊಳೆಯುತ್ತಲೇ ಕೊನೆಗೊಮ್ಮೆ ಕೊಳೆಯುವ ಹೆಣ್ಣುದೇಹ, ಕೊಳೆಯಲು ನಿರಾಕರಿಸಿಯೂ ಮನುಷ್ಯನ ದುರಾಸೆಗೆ ಕೊಳೆಯಲು ಆರಂಭಿಸಿರುವ ಮಣ್ಣುದೇಹ – ಈ ಮೂರನ್ನೂ ಅದೆಷ್ಟು ದುರ್ಬಳಕೆ ಮಾಡಿಯೂ ಅವುಗಳನ್ನು ಇನ್ನೂ ಹೂಡುವ ದಾರಿಗಳನ್ನು ಹುಡುಕಿ ತೆಗೆಯಲಾಗುತ್ತಿದೆ. ಇದು ಅವುಗಳ ಶಕ್ತಿಯೋ, ಹುಡುಕುತ್ತಿರುವವರ ಅಸೀಮ ಅಸುರೀ ಶಕ್ತಿಯೋ ಹೇಳುವುದು ಕಷ್ಟ.

ಚಿನ್ನ ಎನ್ನುವುದು ಅದೆಷ್ಟೊಂದು ಸಂಗತಿಗಳಿಗೆ ರೂಪಕ! ಚಿನ್ನದಂತಹ ಮಾತು, ಚಿನ್ನದಂತಹ ವ್ಯಕ್ತಿತ್ವ, ಅಪ್ಪಟ ಚಿನ್ನ ಎನ್ನುವುದಂತೂ ಇನ್ನು ಮುಂದೆ ಶಬ್ದವಿಲ್ಲ ಎನ್ನುವಂತಹ ಆತ್ಯಂತಿಕ ಗುಣವಾಚಕ. ಅದು ಮನುಷ್ಯರಾದವರು ಏರಬಹುದಾದ ಎತ್ತರ, ಸಾಧಿಸಬಹುದಾದ ಪರಿಪಾಕ!

ಚಿನ್ನವನ್ನು ಲೌಕಿಕ ಶ್ರೀಮಂತಿಕೆಯೊಂದಿಗೆ ಮಾತ್ರ ನಾವು ಸಮೀಕರಿಸಿಕೊಂಡಿಲ್ಲ ಎನ್ನುವುದೇ ಇದರ ಲೋಕೋತ್ತರ ಸಂಗತಿಯಾಗಿದೆ. ಕೆಜಿಎಫ್‌ನ ಚಿನ್ನದ ಗಣಿಯೊಂದಿಗೆ ಹೆಣೆದುಕೊಂಡಿರುವ ನೂರಾರು ಸಂಗತಿಗಳನ್ನು ಕುರಿತು ಓದುವುದೇ ಒಂದು ರೋಮಾಂಚಕಾರಿ ಅನುಭವ. ಗಣಿಯಲ್ಲಿ ಹೂತುಹೋದವರ ಸಂಖ್ಯೆ ಅಸಂಖ್ಯಾತ. ಗಣಿಗಳ ಆಳ, ಆ ಕಗ್ಗತ್ತಲಿನಲ್ಲಿ ಮಿಣುಕು ದೀಪಗಳನ್ನು ಹಣೆಗೆ ಕಟ್ಟಿಕೊಂಡು ಅದಿರನ್ನು ಬುಟ್ಟಿಯಲ್ಲಿ ತುಂಬುವ, ಹೊರ ಸಾಗಿಸುವ ಮೊದಲ ಘಟ್ಟ, ನಂತರದಲ್ಲಿ ಯಂತ್ರಗಳನ್ನು ಬಳಸಿ ಭೂಮಿಯನ್ನು ಅಗೆದಗೆದು ತುಂಬುವ ಎರಡನೆಯ ಘಟ್ಟ, ಚಿನ್ನ ಕದಿಯಲು ಮಾಡಿದ ಅದೆಂತೆಂತಹ ಸಾಹಸಗಳು, ಆ ಕಳ್ಳತನಕ್ಕೆ ಸಿಗುತ್ತಿದ್ದ ಶಿಕ್ಷೆಗಳಾದರೂ ಅದೆಷ್ಟು ಭಯಾನಕ! ಆ ಚಿನ್ನದ ಮೇಲೆ ಆಧಿಪತ್ಯ ಸ್ಥಾಪಿಸಲು ಬ್ರಿಟಿಷರು ಆದಿಶೇಷನಂತೆ ಕಟ್ಟಿಕೊಂಡ ಸರ್ಪಗಾವಲಿನ ವ್ಯವಸ್ಥೆ, ಅದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದಾಗ ನಮ್ಮೆದುರು ಸುಳಿಯುವ ಪ್ರಶ್ನೆ: ಈ ಲೋಹಕ್ಕೆ ಇಷ್ಟೊಂದು ಮಾನವಶಕ್ತಿಯ, ಸಮಯದ ಬಳಕೆ ಮತ್ತು ಬಲಿಯ ಅಗತ್ಯವಿದೆಯೆ? ಬ್ರಿಟಿಷರಂತೂ ಕೆಲಸಗಾರರನ್ನು ಮನುಷ್ಯರಂತೆ ನಡೆಸಿಕೊಂಡದ್ದಕ್ಕಿಂತ ಜೀತದಾಳುಗಳಂತೆ ನಡೆಸಿಕೊಂಡದ್ದೇ ಹೆಚ್ಚು. ಈಗಲೂ ಕೆಜಿಎಫ್‌ನಲ್ಲಿ ಸಂಕರ ಎನ್ನಬಹುದಾದ ಸಾಂಸ್ಕೃತಿಕ ವಾತಾವರಣವಿದೆ. ಕೆಲವು ವೈರುಧ್ಯಗಳಂತೂ ಒಟ್ಟಿಗೇ ಅಸ್ತಿತ್ವದಲ್ಲಿವೆ, ಮತ್ತೆ ಕೆಲವು ಅಖಂಡವಾಗಿ ಮಣ್ಣಿನೊಂದಿಗೆ ಬೆರೆತುಹೋಗಿವೆ.

ಕವಿ ಸಿದ್ಧಲಿಂಗಯ್ಯನವರ ಆತ್ಮಚರಿತ್ರೆ 'ಊರು ಕೇರಿ'ಯಲ್ಲಿ ಒಂದು ಪ್ರಸಂಗವಿದೆ. ಅವರು ಶ್ರೀರಾಮಪುರದ ಸ್ಲಂನಲ್ಲಿ ವಾಸವಿದ್ದಾಗ, ಅಲ್ಲಿನ ದೊಡ್ಡ ದೊಡ್ಡ ಗಟಾರಗಳಲ್ಲಿ ಹುಡುಗರು ಒಂದು ತುದಿಯಿಂದ ಆರಂಭಿಸಿ ಮತ್ತೊಂದು ತುದಿಯ ತನಕ, ಆ ಕತ್ತಲು, ವಾಸನೆ, ಕೊಚ್ಚೆಯಲ್ಲಿ ಚಿನ್ನದ ಕಣಗಳಿಗಾಗಿ ಹುಡುಕಾಟ ನಡೆಸುತ್ತಿದ್ದರಂತೆ. ಜರಡಿಯಲ್ಲಿ ಕಸವನ್ನೆಲ್ಲ ಸೋಸುತ್ತಾ, ಗಟಾರದ ಮತ್ತೊಂದು ತುದಿಯಲ್ಲಿ ತಲೆಯೆತ್ತುತ್ತಿದ್ದುದನ್ನು ಓದುತ್ತಿದ್ದಾಗ ಕೆಜಿಎಫ್ ಮಾತ್ರವಲ್ಲ, ಭಾರತದಿಂದ ಅದೆಷ್ಟೋ ಹಡಗುಗಳಲ್ಲಿ ಬ್ರಿಟಿಷರು ತುಂತುಂಬಿ ಒಯ್ದ ಚಿನ್ನ, ಮುತ್ತು, ರತ್ನಗಳ ನೆನಪಾಯಿತು. ಅಣುವಿನಂತಹ ಚಿನ್ನಕ್ಕಾಗಿ ಕಸವನ್ನು ಸೋಸುವ ಹುಡುಗರೆಲ್ಲಿ? ಹಕ್ಕಿನದೆಂಬಂತೆ ಹಡಗುಗಳಲ್ಲಿ ಸಾಗಿಸಿದ ಚಿನ್ನವೆಲ್ಲಿ?

ಚಿನ್ನವನ್ನು ಸಾವಿಲ್ಲದ ಸಂಪತ್ತೆಂದು, ಸಮಾಜ ಮತ್ತು ಪ್ರಭುತ್ವ ಸಮಾನವಾಗಿ ನಂಬಿಕೊಂಡಿವೆ. ಹೆಣ್ಣುಮಕ್ಕಳಿಗೆ ಚಿನ್ನವನ್ನು ಆಪದ್ಧನವೆಂದು ಪೋಷಕರು ಕೊಡುವುದು ವಾಡಿಕೆ. ಆದರೆ, ಹೆಣ್ಣುಮಕ್ಕಳ ಆ ಚಿನ್ನದ ಮೇಲಿನ ಆಧಿಪತ್ಯ ಯಾರದು ಎನ್ನುವುದು ಬೇರೆಯ ಪ್ರಶ್ನೆ. ಹೆಣ್ಣುಮಕ್ಕಳಿಗೆ ಚಿನ್ನವನ್ನು ಕೊಡುವುದು ಅವಳ ಮಟ್ಟಿಗೆ ಅದೊಂದು 'ಸುರಕ್ಷತೆಯ ಬಾಂಡ್' ಎನ್ನುವ ಕಾರಣಕ್ಕೆ. ಸಾಮಾನ್ಯ ಹೆಣ್ಣುಮಕ್ಕಳಿಂದ ಹಿಡಿದು ಮಹಾರಾಣಿಯರ ತನಕವೂ ಇದು ನಿಜ. 'ಮಹಾರಾಣಿ ವಿದ್ಯಾಸಂಸ್ಥೆ'ಗಳನ್ನು ಆರಂಭಿಸುವಾಗ, ಶಿಂಷಾ ವಿದ್ಯುಚ್ಛಕ್ತಿ ಘಟಕವನ್ನು ಆರಂಭಿಸುವಾಗ ಮೈಸೂರಿನ ಒಡೆಯರಿಗೆ ಹಣದ ಮುಗ್ಗಟ್ಟು ಎದುರಾಯಿತು. ಆಗ ಮಹಾರಾಣಿಯಾಗಿದ್ದ ಕೆಂಪನಂಜಮ್ಮಣ್ಣಿಯವರು ತಮ್ಮ ಅಮೂಲ್ಯ ಚಿನ್ನಾಭರಣಗಳನ್ನು ಅಡವಿಟ್ಟು ಆ ಯೋಜನೆಗಳು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಂಡರು. ನಾಲ್ವಡಿಯವರನ್ನು ನಮ್ಮ ಕಾಲದ 'ರಾಜರ್ಷಿ'ಯೆಂದು ಗಾಂಧೀಜಿ ಕರೆದರಲ್ಲ, ಅವರ ಜನಪರ ನಿಲುವುಗಳು ಯಾವ ಕಾಲಕ್ಕೂ ಮಾದರಿ ಎಂದು ನಾವು ಪ್ರೀತಿ ಮತ್ತು ಕೃತಜ್ಞತೆಯಿಂದ ನೆನಪಿಸಿಕೊಳ್ಳುವುದರ ಹಿಂದೆ ಚಿನ್ನದ ಪಾತ್ರವೂ ಇದೆ.

ಮಹಾರಾಣಿಯವರ ಬಳಿಯಿದ್ದ ಅಪಾರ ಚಿನ್ನ ಲೋಕಕಲ್ಯಾಣಕ್ಕಾಗಿ ಬಳಕೆಯಾಯಿತು. ಅದೆಷ್ಟು ಸಾವಿರ, ಲಕ್ಷ ಮನೆಗಳಲ್ಲಿ ಮಹಿಳೆಯರ ಬಳಿ ಇರುವ ಚಿನ್ನ, ಅದಿರುವುದೇ ಮನೆಯ ಕಷ್ಟಗಳನ್ನು ಬಗೆಹರಿಸಲು, ಚಿನ್ನದ ವ್ಯಾಪಾರಿಗಳು ಇರುವುದೇ ಅವುಗಳನ್ನು ಅಡ ಇರಿಸಿಕೊಳ್ಳಲು ಎನ್ನುವಮಟ್ಟಿಗೆ ಚಿನ್ನ ನಮ್ಮ ಆಪ್ತಮಿತ್ರ, ಆಪದ್ಬಾಂಧವ. ಚಿನ್ನವನ್ನು ಸೃಷ್ಟಿಸಿರುವುದೇ ಹೆಣ್ಣಿಗಾಗಿ ಎನ್ನುವ ಮಾತುಗಳು ಲಾಗಾಯ್ತಿನಿಂದಲೂ ಸ್ಥಾಪಿತವಾಗಿವೆ ಮಾತ್ರವಲ್ಲ, ಬಹುತೇಕ ಸಂದರ್ಭಗಳಲ್ಲಿ ಆ ಚಿನ್ನ ನಮ್ಮ ಕಷ್ಟಕ್ಕೆ ಒದಗುವುದು ಹೆಣ್ಣುಮಕ್ಕಳ ಒಡವೆಯ ರೂಪದಲ್ಲಿ ಎಂದಾದ ಮೇಲೆ ಆ ಸಹಾಯವನ್ನು ಸ್ತ್ರೀವಾಚಕಗಳಲ್ಲಿ ಬಳಸುವುದೇ ಹೆಚ್ಚು ಸರಿ.

ಲೇಖಕರೊಬ್ಬರು ತಮ್ಮ ಆತ್ಮಚರಿತ್ರೆಯಲ್ಲಿ, ಅವರ ಮನೆಯ ಚಿನ್ನ ಮನೆಯಲ್ಲಿದ್ದದ್ದೇ ಕಮ್ಮಿ, ಅದು ಯಾವಾಗಲೂ ನಮ್ಮ ಊರಿನ ಮಾರವಾಡಿಗಳ ಅಂಗಡಿಯಲ್ಲಿರುತ್ತಿತ್ತು, ಕೊನೆಗೊಮ್ಮೆ ಮಗಳೊಬ್ಬಳು ಅವುಗಳನ್ನು ನೋಡಲೇಬೇಕೆಂದು ಹಟ ಮಾಡಿದಾಗ ಅಂಗಡಿಗೇ ಅವಳನ್ನು ಕರೆದೊಯ್ದು, ಅಂಗಡಿಯವನನ್ನು ಒಪ್ಪಿಸಿ ಅವುಗಳನ್ನು ತೋರಿಸುವಾಗ ಕಣ್ಣಲ್ಲಿ ನೀರು ಬಂದಿತು ಎನ್ನುತ್ತಾರೆ. ತಮಿಳಿನ ಕತೆಯೊಂದರಲ್ಲಿ ತಾಯಿ ಬಯಸಿದ ಎರಡೇ ಎರಡು ಚಿನ್ನದ ಬಳೆಗಳನ್ನು ಮಾಡಿಸಿಕೊಡಲು ಮಗ ಅದೆಷ್ಟು ಕಷ್ಟಪಟ್ಟರೂ ಆಗದ, ಆ ಕೊರತೆಯೊಂದಿಗೇ ಆಕೆ ಸಾಯುವ ದಾರುಣ ಪ್ರಸಂಗವಿದೆ. ಇಲ್ಲಿ ಪ್ರಶ್ನೆ ಚಿನ್ನದ್ದಲ್ಲ ನಿಜ, ಅದು ಅಮ್ಮ–ಮಗನ ಸಂಬಂಧದ ಎಳೆಯನ್ನು ನೇಯುವುದರಲ್ಲಿ ಚಿನ್ನ ವಹಿಸಿದ ಪಾತ್ರದ್ದು. ಅಮ್ಮನನ್ನು ಕುರಿತ ತನ್ನ ಪ್ರೀತಿಯನ್ನು ತೋರಿಸಲು ಚಿನ್ನದ ಬಳೆಗಳನ್ನು ಮಾಡಿಸಿಕೊಡಲಾಗದ್ದು ಆ ಮಗನಿಗೆ ತನ್ನ ಪ್ರೀತಿ, ಕರ್ತವ್ಯ, ಜವಾಬ್ದಾರಿ ಎಲ್ಲದರಲ್ಲೂ ಸೋತ ಅನುಭವವನ್ನು ಕೊಟ್ಟು, ಜೀವಮಾನವಿಡೀ ಕಾಡುತ್ತದೆ.

ಇದನ್ನೆಲ್ಲ ಹೇಳಬೇಕಾಗಿ ಬಂದದ್ದು 'ಒಂದು ವರ್ಷ ಚಿನ್ನ ಕೊಳ್ಳಬೇಡಿ' ಎನ್ನುವ ಪ್ರಧಾನಿಯ ಸಲಹೆಯನ್ನು ನೋಡಿದಾಗ. ವಾಟ್ಸ್‌ಆ್ಯಪ್ ವಿವಿಯಲ್ಲಿ ಕಳೆದ 70–80 ವರ್ಷಗಳಲ್ಲಿ ಚಿನ್ನದ ಬೆಲೆ ಹೇಗೆ ಏರಿಕೆಯಾಗುತ್ತಾ ಹೋಯಿತು ಎನ್ನುವುದನ್ನು ವಿವರವಾಗಿ ಕೊಡುತ್ತಲೇ ಇದ್ದಾರೆ. ಇನ್ನೊಂದು ಕಡೆ ಚಿನ್ನದ ಅಂಗಡಿಗಳಲ್ಲಿ ಮುಕುರಿರುವ ಹೆಂಗಳೆಯರ ಚಿತ್ರಗಳನ್ನು ತೋರಿಸುತ್ತಾ– ಹೆಣ್ಣುಮಕ್ಕಳಿಗೆ ತುಸುವಾದರೂ ವಿವೇಕವಿದೆಯೆ, ಇಷ್ಟು ಬೆಲೆ ಕೊಟ್ಟಾದರೂ ಚಿನ್ನ ಯಾಕೆ ಕೊಳ್ಳುತ್ತಾರೆ ಎಂದು ವ್ಯಂಗ್ಯ, ಗೇಲಿಯ ಉದ್ಗಾರಗಳನ್ನು ಎಳೆದೆಳೆದು ಹಾಕುತ್ತಿದ್ದಾರೆ. ಜಮಾನದಿಂದಲೂ ಹೆಣ್ಣಿನ ಚಿನ್ನದ ಕುಟುಂಬವತ್ಸಲ ಗುಣಗಳನ್ನು ಬಳಸಿಯೂ ಅನುಭವಿಸಿಯೂ ಇಂಥ ಮಾತುಗಳನ್ನು ಆಡುವ ಅಗತ್ಯವಿಲ್ಲ.

ಚಿನ್ನದ ಆಭರಣಗಳನ್ನು ಬ್ಯಾಂಕಿನಲ್ಲಿ ಅಡವಿಟ್ಟವರು ಅನುಭವಿಸುತ್ತಿರುವ ಮೋಸದ ಕತೆಗಳು ಸನ್ನಿವೇಶವನ್ನು ಇನ್ನೂ ಸಂಕೀರ್ಣಗೊಳಿಸುತ್ತಿವೆ. ಇದು ಭ್ರಷ್ಟಾಚಾರದ ಊಹಿಸಲಸಾಧ್ಯವಾದ ಸಾಧ್ಯತೆಗಳ ಹೊಸ ಅವತಾರವಾಗಿದೆ. ನಕಲಿ ಚಿನ್ನವನ್ನು ಅಸಲಿ ಚಿನ್ನದ ಜಾಗದಲ್ಲಿ ಲಾಕರ್‌ನಲ್ಲಿ ಇಡುತ್ತಿರುವ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಅಮೂಲ್ಯವಾದ ವಸ್ತುವಿಗೆ ಸುರಕ್ಷಿತ ತಾಣ ಯಾವುದು? ಮನೆಯೂ ಅಲ್ಲ, ಬ್ಯಾಂಕೂ ಅಲ್ಲ, ಮತ್ತಾವುದು? ನಮ್ಮ ಅಜ್ಜಿ, ಮನೆಯ ಯಾವುದೋ ಮೂಲೆಯಲ್ಲಿ ನೆಲ ಬಗೆದು ಆಭರಣಗಳನ್ನು ಬುಟ್ಟಿಯಲ್ಲಿ ತುಂಬಿ ಹೂತಿಡುತ್ತಿದ್ದರಂತೆ. ಸರಸ್ವತಿಬಾಯಿ ರಾಜವಾಡೆ, ಕನ್ನಡದ ಆರಂಭದ ಮುಖ್ಯ ಲೇಖಕಿಯರಲ್ಲಿ ಒಬ್ಬರು, ಅವರಿಗೂ ಅವರ ಗಂಡ ತಾನು ಸಾಯುವ ಮುಂಚೆಯೇ ಎರಡು ಬುಟ್ಟಿಗಳಲ್ಲಿ ಚಿನ್ನ ತುಂಬಿ ಮನೆಯಲ್ಲಿ ಹೂತಿಡಿಸಿದ್ದರು.

ಹೊನ್ನಿಗಾಗಿ, ಮಣ್ಣಿಗಾಗಿ ಸತ್ತವರಿದ್ದಾರೆ, ನಿಮಗಾಗಿ ಸತ್ತವರನಾರನೂ ಕಾಣೆ ಎನ್ನುವ ವಚನಕಾರರ ಮಾತು ಭವಿ ಮತ್ತು ಶರಣರ ನಡುವಿನ ಕಂದರವನ್ನು ಹೇಳುವುದರ ಜೊತೆಗೇ ಈ ಲೌಕಿಕದ ಸಂಕೇತಗಳೊಂದಿಗೆ ನಾವು ಇಟ್ಟುಕೊಳ್ಳಬೇಕಾದ ಅಂತರವನ್ನೂ ಧ್ವನಿಸುತ್ತಿವೆ ಎನ್ನಿಸುತ್ತದೆ. ಇಷ್ಟಾಗಿ ಕನ್ನಡಿಗರು ಇನ್ನೂ ಒಂದು ಚಿನ್ನದ ಬಗ್ಗೆ, ಸಂಪತ್ತಿನ ಬಗ್ಗೆ ನಂಬಿಕೆ ಇಟ್ಟವರಾಗಿದ್ದರು. 'ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮುಂ ಪರ ಧರ್ಮಮುಂ' (ಅನ್ಯರವಿಚಾರಗಳನ್ನು, ಅನ್ಯರಧರ್ಮವನ್ನು ಸಹಿಸಿಕೊಳ್ಳುವ ವಿವೇಕವೇ ನಿಜವಾದ ಚಿನ್ನ) ಎನ್ನುತ್ತಾನೆ ಕವಿರಾಜಮಾರ್ಗಕಾರ. ಚಿನ್ನ ಮತ್ತು ಚಿನ್ನದಂತಹ ವಿಚಾರಗಳು, ಎರಡೂ ನಮಗೆ ಬೇಕು.

ಇನ್ನು ಚಿನ್ನ ಕೊಳ್ಳಬೇಕೇ ಬೇಡವೇ ಎನ್ನುವುದಕ್ಕೆ ವಿದೇಶದಿಂದ ಆಮದಾಗುತ್ತಿರುವ, ಅದರ ಸುಂಕವೇ ಬಹು ಹೆಚ್ಚಾಗುತ್ತಿರುವ ವಾಸ್ತವವನ್ನು ಒಪ್ಪುವುದು, ಪ್ರಧಾನಿಯವರ ಸಲಹೆಯನ್ನು ಪಾಲಿಸುವುದು ಜನಪ್ರಭುಗಳ ವಿವೇಚನೆಗೆ ಬಿಟ್ಟದ್ದು. ನೀತಾ ಅಂಬಾನಿಯವರು ಕುಡಿಯುವ ನೀರಿನಲ್ಲೇ ಚಿನ್ನದ ಅಣುಗಳನ್ನು ಸೇರಿಸಲಾಗಿರುತ್ತದೆ ಎನ್ನುವ ಅಂಶವನ್ನು ಎಲ್ಲಿಯೋ ಓದಿದ ನೆನಪು. ಉಳ್ಳವರಿಗೆ ಯಾವ ಬೆಲೆಯೇರಿಕೆ? ಇಲ್ಲದವರಿಗೆ ನೀವು ಸಲಹೆ ಕೊಡುವ ಅಗತ್ಯವೇ ಇಲ್ಲ, ಹೇಗೂ ಅವರಿಗೆ ಕೊಳ್ಳುವ ಶಕ್ತಿ ಇರುವುದಿಲ್ಲ. ಮಧ್ಯಮವರ್ಗದವರಿಗೇ ನಿಜವಾದ ಕಷ್ಟ. ಬೇಕು–ಬೇಡಗಳ ನಡುವಿನ ಆಯ್ಕೆ ಅವರಿಗೆ ಸುಲಭದ್ದಲ್ಲ.

ಚಿನ್ನವನ್ನು ಕೊಳ್ಳಬೇಡಿ ಎನ್ನುವ ಸಲಹೆಗಿಂತ ಚಿನ್ನ ಕೊಳ್ಳುವ, ಅದರ ಆಪದ್ಧನದ ಶಕ್ತಿಯನ್ನು ಎಲ್ಲರೂ ಪಡೆಯುವಂತೆ ಅವಕಾಶ ಸೃಷ್ಟಿಸುವುದೇ ನಿಜವಾದ ಪ್ರಜಾಪ್ರಭುತ್ವದ ಶಕ್ತಿ.



ವಾಚಕರ ವಾಣಿ

ಗ್ಯಾರಂಟಿ: ಬಿಜೆಪಿ 'ಯೂ–ಟರ್ನ್' ಪ್ರಸಂಗ

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆ ಘೋಷಿಸಿದಾಗ 'ರಾಜ್ಯ ದಿವಾಳಿಯಾಗುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೇರಿರುವ ಬಿಜೆಪಿ, ಮಹಿಳೆಯರಿಗೆ ಮಾಸಿಕ ₹3 ಸಾವಿರ ಹಾಗೂ ಉಚಿತ ಬಸ್ ಪ್ರಯಾಣ ಸೌಲಭ್ಯವನ್ನು ಜೂನ್ 1ರಿಂದ ಜಾರಿಗೆ ತರುತ್ತಿದೆ. ಇದು ಕರ್ನಾಟಕದ ಗ್ಯಾರಂಟಿಗಳಿಗಿಂತಲೂ ದುಬಾರಿ. ಟೀಕಿಸಿದ್ದ ಪಕ್ಷವೇ ಈಗ ಗ್ಯಾರಂಟಿಗಳಿಗೆ ಜೋತು ಬಿದ್ದಿದೆ ಎಂದರೆ ಈ ಯೋಜನೆಗಳು ಜನರ ಪಾಲಿಗೆ ಎಷ್ಟು ಉಪಯುಕ್ತ ಎಂಬುದು ಸಾಬೀತಾಗಿದೆ. ಗ್ಯಾರಂಟಿ ಬರೀ ಮತಬೇಟೆಯಲ್ಲ; ಬಡಜನರ ಬದುಕಿಗೆ ನಿಜವಾದ ಆಧಾರ ಎನ್ನುವುದು ಕಮಲ ಪಾಳಯದ 'ಯೂ–ಟರ್ನ್'ನಿಂದ ಸ್ಪಷ್ಟವಾಗಿದೆ.

ರಮೇಶ್ ಪಾಟೀಲ್, ಡೋಣಮರಡಿ

ಮನೆಯಿಂದ ಕೆಲಸ: ಆಡಿಟ್ ನಡೆಯಲಿ

ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ ಅವರು ಸರ್ಕಾರಿ ನೌಕರರಿಗೆ ವಾರದಲ್ಲಿ ಎರಡು ದಿನ ಮನೆಯಿಂದ ಕೆಲಸ ಮಾಡಬೇಕೆಂದು ಆದೇಶಿಸಿದ್ದಾರೆ. ಉತ್ತರ ಪ್ರದೇಶದಲ್ಲಿಯೂ ಇಂತಹದ್ದೇ ಆದೇಶ ಹೊರಬಿದ್ದಿದೆ. ಇಂಧನ ಉಳಿಸುವ ಉದ್ದೇಶ ಇದರ ಹಿಂದಿದೆ. ಈ ನಿರ್ಧಾರವು ಒಂದರ್ಥದಲ್ಲಿ ಬೆಟ್ಟ ಅಗೆದು ಇಲಿ ಹಿಡಿದಂತಿದೆ. ಏಕೆಂದರೆ, ಸರ್ಕಾರಿ ಇಲಾಖೆಗಳಲ್ಲಿ ಕೆಲವು ಹುದ್ದೆಗಳಲ್ಲಿ ಇರುವವರು ಹಾಗೂ ಅಂತರ್ಜಾಲ, ಗಣಕಯಂತ್ರ ಬಳಸಿ ಕೆಲಸ ಮಾಡುವವರಿಗಷ್ಟೇ ಮನೆಯಿಂದ ಕೆಲಸ ಮಾಡುವ ಅವಕಾಶ ಇರುತ್ತದೆ. ಉಳಿದ ನೌಕರರಿಗೆ ಇಂತಹ ಅವಕಾಶವಿರುವುದಿಲ್ಲ. ಐಟಿ ಕ್ಷೇತ್ರಕ್ಕಷ್ಟೇ ಮನೆಯಿಂದ ಕೆಲಸ ನಿಯಮ ಹೆಚ್ಚು ಅನ್ವಯಿಸುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಸರ್ಕಾರಿ ಅಧಿಕಾರಿಗಳು ಕೆಲಸದ ಸ್ಥಳದಲ್ಲಿ ಹಾಜರಿರಬೇಕಾಗುತ್ತದೆ. ಕೋವಿಡ್ ಲಾಕ್‌ಡೌನ್ ವೇಳೆ ಸರ್ಕಾರಿ ನೌಕರರಿಗೆ ಮನೆಯಿಂದ ಕೆಲಸ ಮಾಡುವ ಅವಕಾಶ ಕಲ್ಪಿಸಲಾಗಿತ್ತು. ಇದರಿಂದ ಎಷ್ಟು ಪ್ರಯೋಜನವಾಗಿದೆ ಎಂಬ ಬಗ್ಗೆ ಆಡಿಟ್ ಮಾಡಿಸಿದರೆ ಸತ್ಯ ತಿಳಿಯಲಿದೆ.

ಜಗದೀಶ್ ಎಚ್.ಬಿ., ಹುಬ್ಬಳ್ಳಿ

ಪರ್ಯಾಯ ಗೊಬ್ಬರ ಕೃಷಿಗೆ ಆಧಾರ

ಮುಂಗಾರು ಆರಂಭವಾಗುವ ಮುನ್ನವೇ ರಾಜ್ಯದಲ್ಲಿ ರಸಗೊಬ್ಬರದ ಅಭಾವ ತಲೆದೋರಿದೆ. ಕೊಲ್ಲಿ ಯುದ್ಧವೇ ಇದಕ್ಕೆ ಕಾರಣ. ಕೃಷಿ ಚಟುವಟಿಕೆಗಳಿಗೆ ನ್ಯಾನೊ ಯೂರಿಯಾ, ಡಿಎಪಿ ಪರ್ಯಾಯವಲ್ಲ; ರಸಗೊಬ್ಬರದ ಕೊರತೆ ನೀಗಿಸಲು ಹಸಿರೆಲೆ ಮತ್ತು ಜೈವಿಕ ಗೊಬ್ಬರದ ಬಳಕೆಗೆ ರೈತರು ಒತ್ತು ನೀಡಬೇಕಿದೆ. ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರ ಬಳಸಬೇಕಿದೆ. ರಸಗೊಬ್ಬರವನ್ನು ಸಾವಯವ ಗೊಬ್ಬರದ ಜೊತೆಗೆ ಬೆರೆಸಿ ಬಳಸಬಹುದು. ಪ್ರಸ್ತುತ ಸುರಿಯುತ್ತಿರುವ ಮಳೆಯ ಪ್ರಯೋಜನ ಪಡೆದು ಸೆಣಬು, ಹುರುಳಿ, ಅಲಸಂದೆ ಬಿತ್ತಿ 45 ದಿನಗಳ ನಂತರ ಭೂಮಿಗೆ ಸೇರಿಸಬೇಕು. ಗ್ಲಿರಿಸಿಡಿಯಾ, ಹೊಂಗೆ, ಬೇವು ಇತರೆ ಮರಗಳ ಸೊಪ್ಪು ಬಳಸಿ ಭೂಮಿಗೆ ಸೇರಿಸಿದರೆ ಶೇ 50ರಷ್ಟು ರಸಗೊಬ್ಬರವನ್ನು ಉಳಿಸಬಹುದು.

ಎಚ್.ಆರ್. ಪ್ರಕಾಶ್, ಮಂಡ್ಯ

ಬಸಾಪುರ ಕೆರೆಯ ಅಕರಾಳ ವಿಕರಾಳ ಸ್ಥಿತಿ

ಕೊಪ್ಪಳ ತಾಲ್ಲೂಕಿನ ಬಸಾಪುರ ಗ್ರಾಮದ 44.35 ಎಕರೆ ವಿಸ್ತೀರ್ಣದ ಕೆರೆಯನ್ನು ಅಧಿಕಾರಿಗಳ ನೆರವಿನಿಂದ ಕಂಪನಿಯೊಂದು ತನ್ನ ಖಾಸಗಿ ಆಸ್ತಿಯಾಗಿಸಿಕೊಂಡಿದೆ. ಸುತ್ತುಗೋಡೆ ನಿರ್ಮಿಸಿ ಅದು ಸಾರ್ವಜನಿಕರಿಗೆ ಮತ್ತು ಜಾನುವಾರುಗಳಿಗೆ ನೀರು ದೊರೆಯದಂತೆ ಮಾಡಿದೆ. ಕೆರೆಯ ಸ್ವರೂಪವೂ ಬದಲಾಗಿದೆ. ಅದರ ಅರ್ಧ ಭಾಗವನ್ನು ಮುಚ್ಚಿ ಉಳಿದ ಭಾಗದಲ್ಲಿ 60 ಅಡಿಗಳಷ್ಟು ಆಳ ತೋಡಿ ಕೊಳ ನಿರ್ಮಿಸಲಾಗಿದೆ. ಇದು 2011ರ ಜನವರಿ 28ರಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜು ನೇತೃತ್ವದ ನ್ಯಾಯಪೀಠ ನೀಡಿರುವ ಆದೇಶಕ್ಕೆ ವಿರುದ್ಧವಾದುದು. ಜಿಲ್ಲಾಡಳಿತ ಮತ್ತು ಪರಿಸರ ಇಲಾಖೆಯು ಹೊಣೆಗಾರಿಕೆ ಅರಿತು ಕೆರೆಯನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಬೇಕಿದೆ.

ಟಿ.ಆರ್. ಚಂದ್ರಶೇಖರ, ಹೊಸಪೇಟೆ

ಜನಸಂಖ್ಯೆ ಹೆಚ್ಚಿಸಲು ಹತ್ತಾರು ಕಸರತ್ತು

ಆಂಧ್ರಪ್ರದೇಶ ಸರ್ಕಾರವು ಮೂರು ಮತ್ತು ನಾಲ್ಕನೇ ಮಗು ಪಡೆಯುವವರಿಗೆ ವಿಶೇಷ ಪ್ರೋತ್ಸಾಹಧನ ನೀಡುವುದಾಗಿ ಘೋಷಿಸಿದೆ. ಸರ್ಕಾರದ ಈ ನೀತಿಗೆ ಆತಂಕ ಪಡಬೇಕೋ ಅಥವಾ ಅಚ್ಚರಿಪಡಬೇಕೋ ಅರ್ಥವಾಗದು. ಕೆಲವು ರಾಜಕೀಯ ಧುರೀಣರು, ಧಾರ್ಮಿಕ ಮುಖಂಡರು ಕೂಡ ಜನನ ಪ್ರಮಾಣ ಹೆಚ್ಚಿಸಲು ಆಗಾಗ ತುತ್ತೂರಿ ಊದುತ್ತಾರೆ. ಜಗತ್ತಿನಲ್ಲಿಯೇ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ಭಾರತದಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲದ ಸಮರ್ಪಕ ಬಳಕೆಯಾಗುತ್ತಿಲ್ಲ. ಇದರ ಬಗ್ಗೆ ಯಾರೊಬ್ಬರಿಗೂ ಲಕ್ಷ್ಯ ಇದ್ದಂತಿಲ್ಲ. ಜನಸಂಖ್ಯಾ ಹೆಚ್ಚಳದಿಂದ ಇನ್ನೂ ತೀವ್ರವಾಗಬಹುದಾದ ಬಡತನ, ನಿರುದ್ಯೋಗದ ಬಗ್ಗೆ ಕಿಂಚಿತ್ತೂ ಅರಿವು ಇಲ್ಲ. ಇಂತಹ ಸಂದರ್ಭದಲ್ಲಿ ಜನಸಂಖ್ಯೆ ಹೆಚ್ಚಿಸಲು ಪ್ರೋತ್ಸಾಹ ನೀಡುವುದು ಯಾವ ರೀತಿಯಲ್ಲಿ ಸಮರ್ಥನೀಯ?

ಶಿವರಾಜು ಎ.ಆರ್., ಜಟ್ಟಿಅಗ್ರಹಾರ

ಈಶಾನ್ಯ ಭಾಗಕ್ಕೆ ಡೆಮು ರೈಲು ಮರೀಚಿಕೆ

ಇಡೀ ದೇಶವೇ ಈಗ ಬುಲೆಟ್ ರೈಲಿನ ಬಗ್ಗೆ ಮಾತಾಡುತ್ತಿದೆ. ಆದರೆ, ಕರ್ನಾಟಕದ ಈಶಾನ್ಯ ಭಾಗದ ಜನರು ಡೆಮು ರೈಲಿಗಾಗಿ ಪರದಾಡುತ್ತಿದ್ದಾರೆ. ಕಲ್ಯಾಣ ಕರ್ನಾಟಕದ ಬೀದರ್ ಮತ್ತು ರಾಯಚೂರು, ಸಿಕಂದರಾಬಾದ್‌ನ ದಕ್ಷಿಣ ಮಧ್ಯ ರೈಲ್ವೆ ವಲಯದ ವ್ಯಾಪ್ತಿಗೆ ಒಳಪಟ್ಟಿವೆ. ಈ ವಲಯ ಬೀದರ್–ಕಲಬುರಗಿ ನಡುವೆ ಎರಡು ದಿಕ್ಕಿನಿಂದ ಡೆಮು ರೈಲಿನ ಸೇವೆ ನೀಡುತ್ತಿದೆ. ಆದರೆ, ರಾಯಚೂರು–ಕಲಬುರಗಿ ನಡುವೆ ಡೆಮು ರೈಲು ಓಡಿಸಲು ಜಿಪುಣತನ ತೋರಿದೆ. ಕಲಬುರಗಿ ಮತ್ತು ರಾಯಚೂರಿನ ಸಂಸದರು ಈ ಬಗ್ಗೆ ಗಮನಹರಿಸಲಿ.

ವೆಂಕಟೇಶ್ ಮುದಗಲ್, ಕಲಬುರಗಿ

ಚುರುಮುರಿ

ಒಡವೆ ವೈರಾಗ್ಯ



● ಮಣ್ಣೆ ರಾಜು

'**ನೋಟ್** ಬ್ಯಾನ್ ಮಾಡಿದಂತೆ ಸರ್ಕಾರ ಬಂಗಾರವನ್ನೂ ಬ್ಯಾನ್ ಮಾಡಬೇಕೂರೀ!' ಎಂದಳು ಸುಮಿ.

'ಅಂತಹ ಉತ್ತಮ ನಿರ್ಧಾರವನ್ನು ಯಾವ ಸರ್ಕಾರವೂ ಮಾಡುವುದಿಲ್ಲ. ಅಶಕ್ತರು ಒಂದು ವರ್ಷ ಚಿನ್ನ ಕೊಳ್ಳಬೇಡಿ ಎಂದು ಪ್ರಧಾನಿ ಹೇಳಿದ್ದಾರಷ್ಟೆ' ಎಂದ ಶಂಕ್ರಿ.

'ಮದುವೆ, ಗೃಹಪ್ರವೇಶಗಳಲ್ಲಿ ಸಂಬಂಧಿಗಳ ಒಡವೆ ಸ್ಪರ್ಧೆಯಲ್ಲಿ ಪ್ರತಿ ಬಾರಿಯೂ ಸೋತು, ನೋವು, ಅವಮಾನ ಅನುಭವಿಸಿ ನನಗೆ ಒಡವೆ ಬಗ್ಗೆ ವೈರಾಗ್ಯ ಮೂಡಿದೆ...' ಜಿಗುಪ್ಸೆಯಿಂದ ಹೇಳಿದಳು.

ಶಂಕ್ರಿ ಕಳವಳಗೊಂಡ. ಹೆಂಡತಿಯ ಒಡವೆ ವೈರಾಗ್ಯದ ಬಗ್ಗೆ ಫ್ಯಾಮಿಲಿ ವೈದ್ಯರಲ್ಲಿ ಹೇಳಿಕೊಂಡ.

'ಹೆಣ್ಣುಮಕ್ಕಳಲ್ಲಿ ಒಡವೆ ವೈರಾಗ್ಯ ಮೂಡುವುದು ಅಪಾಯಕಾರಿ! ಉಳ್ಳವರು ಒಡವೆ ಕೊಳ್ಳುವರು, ನಿಮ್ಮಂಥ ಶಕ್ತಿಹೀನರ ಕುಟುಂಬದ ಮಹಿಳೆಯರಲ್ಲಿ ಒಡವೆ ವೈರಾಗ್ಯ ಸಹಜ' ಎಂದರು ವೈದ್ಯರು.

'ವೈರಾಗ್ಯ ರೋಗಕ್ಕೆ ಚಿಕಿತ್ಸೆ ಇಲ್ವೆ ಡಾಕ್ಟ್ರೆ?'

'ನಿಮ್ಮ ಹೆಂಡತಿಯನ್ನು ಜುವೆಲ್ಲರಿ ಅಂಗಡಿಗೆ ಕರೆದುಕೊಂಡು ಹೋಗಿ ಒಡವೆಗಳನ್ನು ತೋರಿಸಿ, ವ್ಯಾಮೋಹ ಬೆಳೆಸುವ ಪ್ರಯತ್ನ ಮಾಡಿ' ಎಂದರು.

ವೈದ್ಯರ ಸಲಹೆ ಮೇರೆಗೆ ಹೆಂಡತಿ ಜೊತೆ ಒಡವೆ ಅಂಗಡಿಗೆ ಬಂದ ಶಂಕ್ರಿ, ಆಕೆಯ ಸಮಸ್ಯೆ ಬಗ್ಗೆ ಅಂಗಡಿ ಓನರ್‌ಗೆ ಹೇಳಿ, ಸಹಕರಿಸಿ ಎಂದು ಕೇಳಿಕೊಂಡ.

'ಹೆಂಡತಿಗೆ ಒಡವೆ ತೋರಿಸಲು ಬಂದ ಇವತ್ತಿನ ಹದಿನಾರನೇ ಕೇಸು ನೀವು, ನಿಮ್ಮ ಹೆಂಡತಿಯ ವೈರಾಗ್ಯ ನಿವಾರಣೆಯಾಗಿ ಚಿನ್ನದ ವ್ಯಾಮೋಹ ಬೆಳೆಯಲಿ' ಎಂದು ಹಾರೈಸಿದರು.

'ಅಂಗಡಿಯ ಆಕರ್ಷಕ ಡಿಸೈನಿನ ಒಡವೆಗಳಿಗೆ ಸುಮಿ ಮನಸೋತಳು. ಕೇಳಿದ ಒಡವೆಗಳನ್ನು ಸೇಲ್ಸ್ ಗರ್ಲ್ ಷೋಕೇಸ್‌ನಿಂದ ತೆಗೆದುಕೊಟ್ಟಳು. ಒಂದೊಂದನ್ನೂ ಧರಿಸಿಕೊಂಡು, 'ರೀ, ಹೇಗೆ ಕಾಣ್ತಿದ್ದೀನಿ?' ಎಂದಳು.

'ಚೆನ್ನಾಗಿ ಕಾಣ್ತೀಯಾ' ಎಂದು ಶಂಕ್ರಿ ಮೊಬೈಲ್‌ನಲ್ಲಿ ಅವಳ ಫೋಟೊ ತೆಗೆದುಕೊಂಡ.

ಫೋಟೊಗಳನ್ನು ಫೇಸ್‌ಬುಕ್, ವಾಟ್ಸ್‌ಆ್ಯಪ್‌ನಲ್ಲಿ ಗೆಳತಿಯರೊಂದಿಗೆ ಹಂಚಿಕೊಂಡು ಸುಮಿ ಸಂಭ್ರಮಿಸಿದಳು, ಸುಧಾರಿಸಿದಳು.

ಸಂಗತ

ದೂರ ಶಿಕ್ಷಣದಲ್ಲಿ ದೂರ ಆಗದಿರಲಿ ಗುಣಮಟ್ಟ


ವಿ.ವಿ.ಗಳು ಪದವಿ ನೀಡುವ ಕಾರ್ಖಾನೆಗಳಂತಾಗಿವೆ. ಅವುಗಳ ಚಟುವಟಿಕೆಯ ವಿಸ್ತರಣೆಯಂತೆ 'ದೂರ ಶಿಕ್ಷಣ' ಆಗಬಾರದು; ಜ್ಞಾನೋತ್ಪಾದನೆ ಧ್ಯೇಯವಾಗಲಿ.

● ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ದೂರ ಶಿಕ್ಷಣ ಕಾರ್ಯಕ್ರಮಗಳನ್ನು ಆರಂಭಿಸಲು ಸರ್ಕಾರ ಅನುಮತಿ ನೀಡಿದೆ. ಆರ್ಥಿಕ ಸಂಕಷ್ಟ, ಉದ್ಯೋಗದ ಅನಿವಾರ್ಯತೆ, ಭೌಗೋಳಿಕ ಅಡಚಣೆಗಳು ಅಥವಾ ಸಾಮಾಜಿಕ ಕಾರಣಗಳಿಂದ ಸಹಸ್ರಾರು ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಉನ್ನತ ಹಂತದಲ್ಲಿ ಮುಂದುವರಿಸಲು ಸಾಧ್ಯವಾಗದಿರುವ ಸಂದರ್ಭದಲ್ಲಿ, ದೂರ ಶಿಕ್ಷಣದ ವಿಸ್ತರಣೆಯು ಅಗತ್ಯವೂ ಸಮಯೋಚಿತವೂ ಆಗಿದೆ. ಉನ್ನತ ಶಿಕ್ಷಣದ ಅವಕಾಶಗಳು ಅಸಮಾನ ಆಗಿರುವಾಗ ಇಂತಹ ಕ್ರಮಗಳು ವಿಶ್ವವಿದ್ಯಾಲಯದ ಬಾಗಿಲುಗಳನ್ನು ಇನ್ನಷ್ಟು ಜನರಿಗೆ ತೆರೆದಿಡುವ ಭರವಸೆ ನೀಡುತ್ತವೆ. ಆದರೆ, ಇಂತಹ ವಿಸ್ತರಣೆಯನ್ನು ನಾವು ಆಶಾವಾದದಷ್ಟೇ ಎಚ್ಚರಿಕೆಯಿಂದಲೂ ನೋಡಬೇಕಾಗಿದೆ.

ಭಾರತ ಈಗಾಗಲೇ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಿಯಂತ್ರಣವಿಲ್ಲದ ವಿಸ್ತರಣೆಯ ಹಂತಗಳನ್ನು ಕಂಡಿದೆ. ಆ ಪ್ರಯತ್ನಗಳು ಜ್ಞಾನೋತ್ಪಾದನೆಗೆ ಕಾರಣವಾಗುವುದಕ್ಕಿಂತಲೂ ಹೆಚ್ಚಾಗಿ ಶಿಕ್ಷಣದ ಗುಣಮಟ್ಟದ ಕುಸಿತಕ್ಕೆ ದಾರಿ ಮಾಡಿಕೊಟ್ಟಿವೆ. ಕಪಿಲ್ ಸಿಬಲ್ ಅವರು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾಗಿದ್ದ ಅವಧಿಯಲ್ಲಿ ಡೀಮ್ಡ್ ವಿಶ್ವವಿದ್ಯಾಲಯಗಳ ಬಗ್ಗೆ ವಿವಾದ ಉಂಟಾಗಿತ್ತು. ಆ ವಿವಾದ, ಕಟ್ಟುನಿಟ್ಟಿನ ವ್ಯವಸ್ಥೆಗಳಿಲ್ಲದ ವೇಗವಾದ ಶೈಕ್ಷಣಿಕ ವಿಸ್ತರಣೆ ಉನ್ನತ ಶಿಕ್ಷಣವನ್ನು ಬರೀ ಪದವಿಗಳ ಕಾರ್ಖಾನೆಯಾಗಿ ಹೇಗೆ ಪರಿವರ್ತಿಸಬಹುದು ಎಂಬುದನ್ನು ಬಹಿರಂಗಪಡಿಸಿತ್ತು.

ನಮ್ಮ ಮುಂದೆ ಪ್ರಸ್ತುತ ಇರುವ ಪ್ರಶ್ನೆ– ದೂರ ಶಿಕ್ಷಣದ ಸ್ನಾತಕೋತ್ತರ ಕಾರ್ಯಕ್ರಮಗಳ ವಿಸ್ತರಣೆಯು ವಿಶ್ವವಿದ್ಯಾಲಯವನ್ನು ವಿಶ್ವವಿದ್ಯಾಲಯವಾಗಿಸುವ ಶೈಕ್ಷಣಿಕ ನಿಷ್ಠೆ, ಬೌದ್ಧಿಕ ಗಾಂಭೀರ್ಯ ಮತ್ತು ಸಾಮಾಜಿಕ ಧ್ಯೇಯವನ್ನು ಉಳಿಸಿಕೊಂಡು ಹೋಗುತ್ತದೆಯೇ ಎನ್ನುವುದಾಗಿದೆ. ಗುಣಮಟ್ಟವನ್ನು ಬದಿಗೊತ್ತಿ ಹೆಚ್ಚಿನ ಪ್ರವೇಶಾತಿಗಾಗಿ ಶಿಕ್ಷಣವನ್ನು ಎಲ್ಲರ ಮನೆಯ ಬಾಗಿಲಿಗೆ ವಿಸ್ತರಿಸಿದರೆ, ಅಂತಿಮವಾಗಿ ಯಾವ ವಿದ್ಯಾರ್ಥಿಗಳು ಸಬಲೀಕರಣಗೊಳ್ಳಬೇಕೆಂದು ಬಯಸುತ್ತೇವೆಯೋ ಅವರಿಗೆ ಅನ್ಯಾಯ ಆಗುತ್ತದೆ.



ವಿಶ್ವವಿದ್ಯಾಲಯವೆಂದರೆ ಏನು? ಅದರ ಉದ್ದೇಶವೇನು? ಎನ್ನುವ ಪ್ರಶ್ನೆಗಳನ್ನು ನಿರ್ಲಕ್ಷಿಸಿ ಉನ್ನತ ಶಿಕ್ಷಣವನ್ನು ಪದವಿಗಳ ವಿತರಣೆಗಷ್ಟೇ ಸೀಮಿತಗೊಳಿಸಿದರೆ, ದೂರ ಶಿಕ್ಷಣ ಕಾರ್ಯಕ್ರಮಗಳು ತೃಪ್ತಿಕರ ಎಂದು ಹೇಳಬಹುದು. ಆದರೆ, ವಿ.ವಿ.ಯನ್ನು ಬೌದ್ಧಿಕ ರೂಪುಗೊಳಿಸುವಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಜ್ಞಾನಾನ್ವೇಷಣೆಯ ಕೇಂದ್ರವೆಂದು ಪರಿಗಣಿಸಿದರೆ, ಗುಣಮಟ್ಟದ ಪ್ರಶ್ನೆ ಮುಖ್ಯವಾಗುತ್ತದೆ.

ಜರ್ಮನಿಯ ತತ್ತ್ವಶಾಸ್ತ್ರಜ್ಞ ಮತ್ತು ಶಿಕ್ಷಣ ತಜ್ಞ ವಾನ್ ಹಂಬೋಲ್ಟ್ ಅವರ ಪ್ರಕಾರ, ವಿಶ್ವವಿದ್ಯಾಲಯಗಳು ಬೋಧನೆ ಮತ್ತು ಸಂಶೋಧನೆಯನ್ನು ಒಂದಾಗಿಸಬೇಕು. ಆಗಷ್ಟೇ ವಿದ್ಯಾರ್ಥಿಗಳು ಮಾಹಿತಿಯನ್ನಷ್ಟೇ ಸ್ವೀಕರಿಸುವವರಾಗದೆ, ವಿಚಾರಣೆ ಮತ್ತು ಬೌದ್ಧಿಕ ತೊಡಗಿಸಿಕೊಳ್ಳುವಿಕೆಯ ಮೂಲಕ ಕಲಿಯುತ್ತಾರೆ. ಬೈಬಲ್ ಆಧಾರಿತ ನಂಬಿಕೆಗಳನ್ನು ಶೈಕ್ಷಣಿಕವಾಗಿ ಮತ್ತು ವೈಜ್ಞಾನಿಕವಾಗಿ ವಿಶ್ಲೇಷಿಸಿ ಬೋಧಿಸಿದ ಇಂಗ್ಲೆಂಡಿನ ಜಾನ್ ಹೆನ್ರಿ ನ್ಯೂಮನ್ ಅವರು, ವಿಶ್ವವಿದ್ಯಾಲಯವು ವೃತ್ತಿಪರ ತರಬೇತಿ ಕೇಂದ್ರವಾಗಿರದೆ ವಿಮರ್ಶಾತ್ಮಕ ಚಿಂತನೆ ಮತ್ತು ವಿಶಾಲ ಬೌದ್ಧಿಕ ಬೆಳವಣಿಗೆಯನ್ನು ಬೆಳೆಸುವ ಸ್ಥಳವೆಂದು ಕಂಡರು. ರವೀಂದ್ರನಾಥ ಟ್ಯಾಗೋರ್, ಶಿಕ್ಷಣವನ್ನು ಪರೀಕ್ಷೆ ಮತ್ತು ಪ್ರಮಾಣಪತ್ರಗಳಿಗೆ ಸೀಮಿತಗೊಳಿಸುವ ಯಾಂತ್ರಿಕ ಶಿಕ್ಷಣದ ವಿರುದ್ಧ ಎಚ್ಚರಿಕೆ ನೀಡಿದ್ದರು.

ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಗಳು ಶಿಕ್ಷಕ–ವಿದ್ಯಾರ್ಥಿ ಸಂವಾದ, ರಚನಾತ್ಮಕ ಮೌಲ್ಯಮಾಪನ, ಶೈಕ್ಷಣಿಕ ಮಾರ್ಗದರ್ಶನ ಮತ್ತು ಸಂಶೋಧನಾ ಮನೋಭಾವವನ್ನು ಖಚಿತಪಡಿಸಬೇಕು. ದೂರ ಶಿಕ್ಷಣವು ಶಿಕ್ಷಣದ ವ್ಯಾಪ್ತಿಯನ್ನು ವಿಸ್ತರಿಸಬಹುದು. ಆದರೆ ಶೈಕ್ಷಣಿಕ ಕಟ್ಟುನಿಟ್ಟು, ಚರ್ಚೆ, ಮತ್ತು ಬೌದ್ಧಿಕ ಕುತೂಹಲವನ್ನು ಉಳಿಸದಿದ್ದರೆ, ಉನ್ನತ ಶಿಕ್ಷಣವು ಸಾಮೂಹಿಕ ಪ್ರಮಾಣಪತ್ರ ವಿತರಣೆಗೆ ಸೀಮಿತವಾಗುವ ಅಪಾಯವಿದೆ.

ದೂರ ಶಿಕ್ಷಣ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ಉದ್ದೇಶಿಸುವ ಯಾವುದೇ ವಿಶ್ವವಿದ್ಯಾಲಯವು ಹೆಚ್ಚಿನ ಪ್ರವೇಶ ಸಂಖ್ಯೆಯನ್ನು ಗುರಿಯಾಗಿಸಿಕೊಳ್ಳುವ ಮೊದಲು ತನ್ನ ಸಂಸ್ಥಾತ್ಮಕ ಸಿದ್ಧತೆಯನ್ನು ಸಾಬೀತುಪಡಿಸಬೇಕು. ದೂರ ಶಿಕ್ಷಣವೆಂದರೆ ಬರೀ 'ಹೆಚ್ಚುವರಿ ಬೋಧನಾ ವಿಧಾನ' ವಲ್ಲ; ಅದಕ್ಕೆ ಸಮಗ್ರ ಹಾಗೂ ಪ್ರತ್ಯೇಕ ಶೈಕ್ಷಣಿಕ ವ್ಯವಸ್ಥೆಯ ಅಗತ್ಯವಿದೆ. ಯುಜಿಸಿ ದೂರ ಶಿಕ್ಷಣ ಬ್ಯೂರೊ ನಿಯಮಾವಳಿಗಳ ಪ್ರಕಾರ, ಮುಕ್ತ ಮತ್ತು ದೂರ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸುವ ವಿಶ್ವವಿದ್ಯಾಲಯಗಳು ಸಮರ್ಪಕ ಬೋಧಕ ಸಿಬ್ಬಂದಿ, ವಿದ್ಯಾರ್ಥಿ ಬೆಂಬಲ ಕೇಂದ್ರಗಳು, ಡಿಜಿಟಲ್ ಮೂಲಸೌಕರ್ಯ, ಸ್ವಯಂ ಅಧ್ಯಯನ ಸಾಮಗ್ರಿಗಳು, ಪಾರದರ್ಶಕ ಮೌಲ್ಯಮಾಪನ ವ್ಯವಸ್ಥೆಗಳು ಮತ್ತು ಆಂತರಿಕ ಗುಣಮಟ್ಟ ಭದ್ರತಾ ವ್ಯವಸ್ಥೆಗಳನ್ನು ಹೊಂದಿರಬೇಕು.

ವಿಶ್ವವಿದ್ಯಾಲಯಗಳು ತಮ್ಮನ್ನು ತಾವು ಕೆಲವು ಪ್ರಶ್ನೆ ಕೇಳಿಕೊಳ್ಳಬೇಕು: ದೂರ ಶಿಕ್ಷಣ ನೀಡಲು ಸಮರ್ಥರಾದ ಮತ್ತು ತರಬೇತಿ ಪಡೆದ ಪ್ರತ್ಯೇಕ ಬೋಧಕರು ಇದ್ದಾರೆಯೆ? ಅಧ್ಯಯನ ಸಾಮಗ್ರಿಗಳನ್ನು ಅಪ್‌ಲೋಡ್ ಮಾಡುವುದನ್ನು ಮೀರಿ, ವಿದ್ಯಾರ್ಥಿಗಳಿಗೆ ಬೌದ್ಧಿಕ ಮಾರ್ಗದರ್ಶನ ಒದಗಿಸಲು ಸಾಧ್ಯವಿದೆಯೆ? ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸಲು ತಾಂತ್ರಿಕ ಮೂಲಸೌಕರ್ಯವಿದೆಯೆ? ಪರೀಕ್ಷೆಗಳು ಮತ್ತು ಮೌಲ್ಯಮಾಪನ ನಡೆಸಲು ವಿಶ್ವಾಸಾರ್ಹ ಕ್ರಮ ಇವೆಯೆ?

ದೂರ ಶಿಕ್ಷಣ ಕಾರ್ಯಕ್ರಮಗಳನ್ನು ಆದಾಯೋತ್ಪಾದಕ ವ್ಯವಸ್ಥೆ ಎಂದು ಪರಿಗಣಿಸಬಾರದು. ಆಗ, ಉನ್ನತ ಶಿಕ್ಷಣವು ಜ್ಞಾನೋತ್ಪಾದನೆಯ ತನ್ನ ಮೂಲ ಧ್ಯೇಯವನ್ನು ಕಳೆದುಕೊಂಡು, ಬರೀ ವಾಣಿಜ್ಯ ಚಟುವಟಿಕೆಯಾಗುವ ಅಪಾಯ ಎದುರಾಗುತ್ತದೆ.

ದೂರ ಶಿಕ್ಷಣದ ಯಶಸ್ಸು ಸರ್ಕಾರದ ಅನುಮತಿಯ ಮೇಲಷ್ಟೇ ಅವಲಂಬಿತವಾಗಿರದೆ, ವಿಶ್ವವಿದ್ಯಾಲಯಗಳು ಬೌದ್ಧಿಕವಾಗಿ, ಆಡಳಿತಾತ್ಮಕವಾಗಿ, ತಾಂತ್ರಿಕವಾಗಿ ಮತ್ತು ನೈತಿಕವಾಗಿ ಎಷ್ಟು ಸಿದ್ಧವಾಗಿವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಯುಎಪಿಎ: ಜಾಮೀನು ವ್ಯಾಖ್ಯಾನ ಭಿನ್ನ ಭಿನ್ನ...

ಪ್ರಜಾವಾಣಿ ವಾರ್ತೆ

‘ಜಾಮೀನು ನಿಯಮ, ಜೈಲು ಅಪವಾದ’ ಎನ್ನುವುದು ಭಾರತದ ನ್ಯಾಯ ವ್ಯವಸ್ಥೆಯ ಮಹತ್ವದ ಅಂಶವಾಗಿದೆ. ಅದರ ಪ್ರಕಾರ, ಆರೋಪಿಗಳು ಮಾಡಿರುವ ತಪ್ಪು ಸಾಬೀತಾಗುವವರೆಗೆ ಅವರನ್ನು ನಿರಪರಾಧಿ ಎಂದು ಪರಿಗಣಿಸಲಾಗುತ್ತದೆ ಮತ್ತು ಜಾಮೀನಿಗೆ ಅರ್ಹರಾಗಿರುತ್ತಾರೆ. ಈ ನಿಯಮವನ್ನು ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ (ಯುಎಪಿಎ) ಬಂಧಿತರಾದವರಿಗೆ ಸಾಮಾನ್ಯವಾಗಿ ಅನ್ವಯ ಮಾಡಲಾಗುತ್ತಿರಲಿಲ್ಲ. ಆದರೆ, ಯುಎಪಿಎ ಅಡಿ ಆರೋಪಿಗಳು ಜಾಮೀನಿಗೆ ಅರ್ಹರೇ ಅಲ್ಲವೇ ಎನ್ನುವುದರ ಬಗ್ಗೆ ಸುಪ್ರೀಂ ಕೋರ್ಟ್‌ನ ವಿವಿಧ ಪೀಠಗಳು ಭಿನ್ನ ರೀತಿಯ ತೀರ್ಪುಗಳನ್ನು ನೀಡಿವೆ.

ಯುಎಪಿಎ ಅಡಿಯಲ್ಲಿ ದೂರು ದಾಖಲಾದರೆ ಪೊಲೀಸ್ ದಾಖಲೆ ಮತ್ತು ಪ್ರಕರಣದ ಡೈರಿಯಲ್ಲಿ ಆರೋಪಕ್ಕೆ ಪೂರಕವಾದ ಅಂಶಗಳಿವೆ ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, (ಸೆಕ್ಷನ್ 43–ಡಿ 5) ನ್ಯಾಯಾಲಯವು ಜಾಮೀನು ನಿರಾಕರಿಸಬಹುದು. ಹೀಗಾಗಿಯೇ ಯುಎಪಿಎ ಅಡಿ ವಿಶೇಷ ನ್ಯಾಯಾಲಯಗಳು ಮತ್ತು ಹೈಕೋರ್ಟ್‌ಗಳಲ್ಲಿ ಬಹುತೇಕ ಜಾಮೀನು ಅರ್ಜಿಗಳು ತಿರಸ್ಕಾರಗೊಂಡಿವೆ.

ಸಂವಿಧಾನಬದ್ಧ ಹಕ್ಕು: ಸಂವಿಧಾನದ 21ನೇ ವಿಧಿಯು ದೇಶದ ಪ್ರತಿಯೊಬ್ಬ ಪ್ರಜೆಗೂ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ನೀಡುತ್ತದೆ. ಈ ವಿಧಿಯು ಆರೋಪಿಗಳ ತ್ವರಿತ ವಿಚಾರಣೆಯ ಹಕ್ಕನ್ನೂ ಒಳಗೊಂಡಿದೆ ಎಂದು ಸುಪ್ರೀಂ ಕೋರ್ಟ್ ಬಹಳ ಹಿಂದಿನಿಂದಲೂ ಪ್ರತಿಪಾದಿಸುತ್ತಲೇ ಬರುತ್ತಿದೆ. ಆದರೆ, ಯುಎಪಿಎ ಅಡಿ ದಾಖಲಾಗುತ್ತಿರುವ ಬಹುತೇಕ ಪ್ರಕರಣಗಳಲ್ಲಿ ಆರೋಪಿಗಳು ದೀರ್ಘಕಾಲ ಜೈಲುವಾಸ ಅನುಭವಿಸುವುದು ಸಾಮಾನ್ಯವಾಗಿದೆ. ಭೀಮಾ ಕೋರೆಗಾಂವ್ ಪ್ರಕರಣದಲ್ಲಿ 16 ಮಂದಿ ಮಾನವ ಹಕ್ಕುಗಳ ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರನ್ನು ಬಂಧಿಸಿ, ಅವರ ವಿರುದ್ಧ ಯುಎಪಿಎ ಸೇರಿದಂತೆ ಹಲವು ಕಾಯ್ದೆಗಳ ಅಡಿ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಪ್ರಕರಣದ ವಿಚಾರಣೆ ಹಲವು ವರ್ಷ ವಿಳಂಬವಾಗಿತ್ತು. ಬಂಧಿತರ ಪೈಕಿ ವರವರರಾವ್ ಅವರಿಗೆ ಮಾತ್ರ ಎರಡೂವರೆ ವರ್ಷಗಳ ನಂತರ ವೈದ್ಯಕೀಯ ಕಾರಣದಿಂದ ಜಾಮೀನು ಲಭ್ಯವಾಗಿತ್ತು. ಉಳಿದ ಬಹುತೇಕರು ಐದು ವರ್ಷಕ್ಕೂ ಹೆಚ್ಚು ಜೈಲುವಾಸ ಅನುಭವಿಸಿದರು. 86 ವರ್ಷದ ಬುಡಕಟ್ಟು ಹಕ್ಕುಗಳ ಹೋರಾಟಗಾರ ಸ್ಟ್ಯಾನ್ ಸ್ವಾಮಿ ಅವರಿಗೆ ತೀವ್ರ ಅನಾರೋಗ್ಯದ ನಡುವೆಯೂ ಜಾಮೀನು ನಿರಾಕರಿಸಲಾಗಿತ್ತು. ಅವರು ಜಾಮೀನಿಗೆ ಕಾಯುತ್ತಾ ಜೈಲಿನಲ್ಲಿಯೇ ನಿಧನರಾಗಿದ್ದರು. ಇದು ಭಾರಿ ಚರ್ಚೆಗೆ ಕಾರಣವಾಗಿತ್ತು. ಸಂವಿಧಾನದ 21ನೇ ವಿಧಿ ಅನ್ವಯ ಜಾಮೀನು ನೀಡಬೇಕೇ ಅಥವಾ ಯುಎಪಿಎ ಕಾಯ್ದೆಯ ಅಡಿ ಮೇಲ್ನೋಟಕ್ಕೆ ಆರೋಪ ನಿಜವೆಂದು ಕಂಡರೆ ಅವರನ್ನು ಜೈಲಿನಲ್ಲಿಯೇ ಉಳಿಸಬೇಕೇ ಎನ್ನುವ ಸಂದಿಗ್ಧ ತಲೆದೋರಿತ್ತು.

ನಜೀಬ್ ಪ್ರಕರಣ: 2021ರಲ್ಲಿ ಕೆ.ಎ.ನಜೀಬ್ ಮತ್ತು ಭಾರತ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ಪೀಠವು ಯುಎಪಿಎ ಪ್ರಕರಣಗಳ ಜಾಮೀನು ಅರ್ಜಿಗೆ ಸಂಬಂಧಿಸಿ ಮಹತ್ವದ ಆದೇಶ ನೀಡಿತು. ಪ್ರಕರಣದ ವಿಚಾರಣೆ ನಿಗದಿತ ಅವಧಿಯಲ್ಲಿ ಮುಗಿಯುವುದಿಲ್ಲ ಎನ್ನುವಂತಿದ್ದರೆ ಅಥವಾ ಆರೋಪಿ ಅದಾಗಲೇ ಗಣನೀಯ ಅವಧಿಯ ಜೈಲುವಾಸ ಅನುಭವಿಸಿದ್ದರೆ, ಅವರಿಗೆ ಜಾಮೀನು ನೀಡಬಹುದು ಎಂದಿತ್ತು. ಆದರೆ, ಈ ಆದೇಶವನ್ನು ವಿವಿಧ ನ್ಯಾಯಾಲಯಗಳಲ್ಲಿ ಮತ್ತು ನ್ಯಾಯಪೀಠಗಳಲ್ಲಿ ಭಿನ್ನ ಭಿನ್ನವಾಗಿ ವ್ಯಾಖ್ಯಾನಿಸಲಾಗುತ್ತಿದೆ.

ದೆಹಲಿ ಗಲಭೆಗಳ ಪ್ರಕರಣದಲ್ಲಿ ಬಂಧಿತರಾಗಿದ್ದ ಏಳು ಮಂದಿಯ ಪೈಕಿ ಗುಲ್‌ಫಿಶಾ ಫಾತಿಮಾ ಸೇರಿದಂತೆ ಐವರು ಆರೋಪಿಗಳಿಗೆ ಇದೇ ಜನವರಿಯಲ್ಲಿ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠವು ಜಾಮೀನು ನೀಡಿತ್ತು. ಆದರೆ, ಅದೇ ಪ್ರಕರಣದ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಂ ಅವರಿಗೆ ಜಾಮೀನು ನಿರಾಕರಿಸಲಾಗಿತ್ತು.

ಕಾಯ್ದೆ ಅಡಿ ಕಠಿಣ ಜೈಲು ಶಿಕ್ಷೆ ಅನುಭವಿಸಿದ ನಂತರ ಆರೋಪಿಗಳಿಗೆ 21ನೇ ವಿಧಿ ಅನ್ವಯಿಸಬಹುದು ಎಂದು ನಜೀಬ್ ಪ್ರಕರಣದ ಆದೇಶವು ಹೇಳಿದರೆ, ಸಂವಿಧಾನದತ್ತವಾದ ಹಕ್ಕುಗಳ ಅಡಿಯಲ್ಲಿ ರಕ್ಷಣೆ ಸಿಗಬೇಕಾದರೆ, ಮೊದಲು ಕಾಯ್ದೆಯ ನಿಯಮಗಳನ್ನು ಪೂರೈಸಬೇಕು (ಮೇಲ್ನೋಟಕ್ಕೆ ಆರೋಪ ಸಾಬೀತಾಗದಿರುವುದು–ಸೆಕ್ಷನ್ 43–ಡಿ 5) ಎಂದು ಗುಲ್‌ಫಿಶಾ ಫಾತಿಮಾ ಮತ್ತು ಗುರ್‌ವಿಂದರ್ ಸಿಂಗ್ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಹೇಳಿತ್ತು.

ಮತ್ತೆ ಭಿನ್ನ ವ್ಯಾಖ್ಯಾನ: ಈಗ ಮತ್ತೆ ಇದೇ ವಿಚಾರಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ಭಿನ್ನ ತೀರ್ಪು ಬಂದಿದೆ. ಯುಎಪಿಎ ಅಡಿ ಬಂಧಿತನಾಗಿದ್ದ ಸೈಯದ್ ಇಫ್ತಿಕಾರ್ ಅಂದ್ರಾಬಿ ಜಾಮೀನು ಅರ್ಜಿ ವಿಚಾರಣೆಯ ವೇಳೆ ಮೇ 18ರಂದು ನ್ಯಾ.ಬಿ.ವಿ.ನಾಗರತ್ನ ಮತ್ತು ನ್ಯಾ.ಉಜ್ಜಲ್ ಭುಯಾನ್ ಅವರ ದ್ವಿಸದಸ್ಯ ಪೀಠವು ಯುಎಪಿಎನಲ್ಲಿನ 43 ಡಿ (5) ಅನಿರ್ದಿಷ್ಟಾವಧಿ ಜೈಲುಶಿಕ್ಷೆಯನ್ನು ಸಮರ್ಥಿಸುವುದಿಲ್ಲ ಮತ್ತು ಸಂವಿಧಾನದ 21 ಮತ್ತು 22ನೇ ವಿಧಿಗಳ ಅಡಿ ಕಾರ್ಯನಿರ್ವಹಿಸಬೇಕು ಎಂದಿದೆ.

2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಯುಎಪಿಎ ಅನ್ನು ಭಿನ್ನಮತ, ವಿರೋಧ ವ್ಯಕ್ತಪಡಿಸುವವರನ್ನು ಹತ್ತಿಕ್ಕಲು ಬಳಸಲಾಗುತ್ತಿದೆ ಎನ್ನುವ ಆರೋಪಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ಉಮರ್ ಖಾಲಿದ್ ಅವರನ್ನೂ ಇದೇ ರೀತಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಕೆಲವರು ಆರೋಪಿಸಿದ್ದು ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು. ಈಗ ಈ ಕಾಯ್ದೆಯ ಜಾಮೀನು ನಿಯಮಗಳು ಮತ್ತು ಸಂವಿಧಾನದ ಮೂಲಭೂತ ಹಕ್ಕುಗಳ ಬಗೆಗಿನ ಚರ್ಚೆ ಏರ್ಪಟ್ಟಿದ್ದು, ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿಯೇ ಭಿನ್ನ ವ್ಯಾಖ್ಯಾನಗಳು ಕೇಳಿಬಂದಿವೆ.

ಏನಿದು ಯುಎಪಿಎ?

ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ ಸಂಕ್ಷಿಪ್ತ ರೂಪ ಯುಎಪಿಎ. ದೇಶದ ಭದ್ರತೆ, ಏಕತೆ ಮತ್ತು ಸಾರ್ವಭೌಮತೆಗೆ ಧಕ್ಕೆ ಉಂಟು ಮಾಡುವ ಕಾನೂನುಬಾಹಿರ ಚಟುವಟಿಕೆಗಳು, ಭಯೋತ್ಪಾದನೆಯಂತಹ ಕೃತ್ಯಗಳನ್ನು ತಡೆಯುವುದು ಮತ್ತು ಅಂತಹ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ, ಕೃತ್ಯ ಎಸಗುವ ಸಂಘಟನೆಗಳಿಗೆ ಶಿಕ್ಷೆ ವಿಧಿಸುವುದು ಈ ಕಾನೂನಿನ ಪ್ರಮುಖ ಉದ್ದೇಶ. ದೇಶದಲ್ಲಿ ಜಾರಿಯಲ್ಲಿರುವ ಅತ್ಯಂತ ಕಠಿಣ ಕಾಯ್ದೆ ಎಂದು ಇದು ಗುರುತಿಸಿಕೊಂಡಿದೆ.

1967ರಲ್ಲೇ ಈ ಕಾನೂನು ಜಾರಿಗೆ ಬಂದಿದೆ. ಆದರೆ, ಭಯೋತ್ಪಾದಕರು, ಭಯೋತ್ಪಾದನಾ ಸಂಘಟನೆಗಳನ್ನು ಶಿಕ್ಷಿಸುವುದಕ್ಕಾಗಿ ಈ ಕಾಯ್ದೆಗೆ ತಿದ್ದುಪಡಿ ತಂದು ಪ್ರತ್ಯೇಕ ಅಧ್ಯಾಯಗಳನ್ನು ಕೇಂದ್ರ ಸರ್ಕಾರ ಸೇರಿಸಿದ್ದು 2004ರಲ್ಲಿ. 2019ರಲ್ಲಿ ಎನ್‌ಡಿಎ ಸರ್ಕಾರ ಮತ್ತೊಂದು ತಿದ್ದುಪಡಿ ತಂದು ಇದರಲ್ಲಿ ಮಹತ್ವದ ಬದಲಾವಣೆ ಮಾಡಿತು. ಕಾಯ್ದೆಯ ಸೆಕ್ಷನ್ 35 ಅನ್ನು ಬದಲಾಯಿಸಲಾಯಿತು. ಯಾವುದೇ ವ್ಯಕ್ತಿಯನ್ನು ‘ಭಯೋತ್ಪಾದಕ’ ಎಂದು ಗುರುತಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಇದು ನೀಡಿತು. ಇದಕ್ಕೂ ಮೊದಲು ಸಂಘಟನೆಗಳನ್ನು ಮಾತ್ರ ಈ ರೀತಿ ಗುರುತಿಸುವುದಕ್ಕೆ ಅವಕಾಶ ಇತ್ತು. ಈ ತಿದ್ದುಪಡಿಯನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯನ್ನೂ ಸಲ್ಲಿಸಲಾಗಿದೆ.

ಈ ಕಾನೂನಿನ ಬಗ್ಗೆ ಜಾಗತಿಕ ಮಟ್ಟದಲ್ಲೂ ಚರ್ಚೆಯಾಗುತ್ತಿದೆ. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘಟಕ, ಅಮೆರಿಕದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಆಯೋಗ, ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸೇರಿದಂತೆ ಹಲವು ಜಾಗತಿಕ ಸಂಘಟನೆಗಳು ಯುಎಪಿಎಯನ್ನು ವಿರೋಧಿಸಿವೆ. ಇದರ ಅಡಿಯಲ್ಲಿ ಬಂಧಿತರಾಗಿರುವ ಮಾನವ ಹಕ್ಕುಗಳ ಕಾರ್ಯಕರ್ತರು, ಪತ್ರಕರ್ತರು, ಹೋರಾಟಗಾರರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸುತ್ತಲೇ ಬಂದಿವೆ.

ಖಾಲಿದ್‌ಗೆ ಸಿಗದ ಜಾಮೀನು


ಮೇ 18ರಂದು ನ್ಯಾ.ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ದೆಹಲಿ ಗಲಭೆ ಪ್ರಕರಣದ ಆರೋಪಿ ಉಮರ್ ಖಾಲಿದ್‌ಗೆ ಜಾಮೀನು ನಿರಾಕರಿಸಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತು. ಇದರ ನಡುವೆಯೇ, ಉಮರ್ ಖಾಲಿದ್‌ಗೆ ದೆಹಲಿ ನ್ಯಾಯಾಲಯವು ಮಂಗಳವಾರ ಜಾಮೀನು ನಿರಾಕರಿಸಿದೆ. ಉಮರ್ ಖಾಲಿದ್ ಗಲಭೆ ಪ್ರಕರಣದ ಹಿಂದಿನ ಪಿತೂರಿಯ ಪ್ರಮುಖ ಭಾಗವಾಗಿದ್ದು, ದಾಖಲೆಗಳು ಮೇಲ್ನೋಟಕ್ಕೆ ಅದನ್ನು ಪುಷ್ಟೀಕರಿಸುತ್ತಿವೆ ಎಂಬ ಕಾರಣಕ್ಕೆ ಜಾಮೀನು ನಿರಾಕರಿಸಲಾಗುತ್ತಿದೆ. ಉಮರ್ ಖಾಲಿದ್ 2020ರ ಸೆ.13ರಿಂದಲೂ ಜೈಲಿನಲ್ಲಿ ಇದ್ದಾರೆ.

ಪತ್ರಕರ್ತರ ವಿರುದ್ಧವೂ ಪ್ರಯೋಗ

ತನ್ನನ್ನು ಕಟುವಾಗಿ ಟೀಕಿಸುತ್ತಿರುವವರನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಈ ಕಾಯ್ದೆಯನ್ನು ಗುರಾಣಿಯನ್ನಾಗಿ ಬಳಸಿಕೊಳ್ಳುತ್ತಿದೆ ಎಂಬುದು ಸರ್ಕಾರದ ವಿರುದ್ಧ ಕೇಳಿಬರುತ್ತಿರುವ ಗಂಭೀರ ಆರೋಪ. ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳು ಕೂಡ ಈ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂಬ ಆರೋಪವೂ ಇದೆ.

ಹೋರಾಟಗಾರರು, ಮಾನವ ಹಕ್ಕುಗಳ ಕಾರ್ಯಕರ್ತರನ್ನಲ್ಲದೆ, ಪತ್ರಕರ್ತರನ್ನೂ ಬಂಧಿಸಲಾಗಿದೆ. ಕೇರಳದ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರು 2020ರಲ್ಲಿ ಉತ್ತರ ಪ್ರದೇಶದ ಹಾಥರಸ್ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವರದಿಗೆಂದು ಹೋಗುತ್ತಿದ್ದಾಗ ಪೊಲೀಸರು ಅವರನ್ನು ಬಂಧಿಸಿದ್ದರು. 28 ತಿಂಗಳ ಜೈಲುವಾಸದ ಬಳಿಕ 2023ರ ಫೆಬ್ರುವರಿ 2ರಂದು ಅವರು ಬಿಡುಗಡೆಯಾದರು. ಕಾಶ್ಮೀರದ ಪತ್ರಕರ್ತ ಇರ್ಫಾನ್ ಮೆಹರಾಜ್ ಅವರು 2023ರ ಮಾರ್ಚ್ 20ರಂದು ಬಂಧನಕ್ಕೆ ಒಳಗಾಗಿದ್ದರು. ಅವರಿನ್ನೂ ಸೆರೆವಾಸದಲ್ಲಿದ್ದಾರೆ. 2023ರಲ್ಲಿ ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆಯ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರನ್ನು ಕೂಡ ಇದೇ ಕಾನೂನಿನ ಅಡಿಯಲ್ಲಿ ಬಂಧಿಸಲಾಗಿತ್ತು. 225 ದಿನಗಳ ಜೈಲುವಾಸವನ್ನು ಅವರು ಅನುಭವಿಸಿದ್ದರು. ನ್ಯೂಸ್‌ಕ್ಲಿಕ್ ಚೀನಾದಿಂದ ಹಣಕಾಸು ನೆರವು ಪಡೆದಿದೆ ಎಂದು ಆರೋಪಿಸಲಾಗಿತ್ತು.

ಯುಎಪಿಎ: ಬಂಧಿತರು ಮತ್ತು ಶಿಕ್ಷೆಗೆ ಒಳಗಾದವರು




ಶಿಕ್ಷೆಗೆ ಒಳಗಾದವರು ಕಡಿಮೆ

ಯುಎಪಿಎ ಅಡಿಯಲ್ಲಿ ಬಂಧಿತರಾಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದರೂ, ಶಿಕ್ಷೆಗೆ ಒಳಗಾಗುತ್ತಿರುವವರ ಸಂಖ್ಯೆ ತುಂಬಾ ಕಡಿಮೆ. ಕೇಂದ್ರ ಗೃಹ ಸಚಿವಾಲಯವು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ನೀಡಿರುವ ಅಂಕಿ ಅಂಶಗಳು ಇದನ್ನು ಹೇಳುತ್ತಿವೆ. 2019ರಿಂದ 2023ರ ನಡುವೆ ಯುಎಪಿಎ ಅಡಿಯಲ್ಲಿ ಒಟ್ಟು 10,440 ಮಂದಿಯನ್ನು ಬಂಧಿಸಲಾಗಿತ್ತು. ಈ ಪೈಕಿ 335 ಜನರು ಅಪರಾಧ ಎಸಗಿರುವುದು ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ಶೇಕಡವಾರು ಲೆಕ್ಕಾಚಾರದಲ್ಲಿ ಶಿಕ್ಷೆಗೆ ಒಳಗಾಗಿರುವ ಪ್ರಮಾಣ ಶೇ 3.2ರಷ್ಟು ಮಾತ್ರ.

ಈ ಐದು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಮಂದಿಯನ್ನು ಈ ಕಾನೂನಿನ ಅಡಿಯಲ್ಲಿ ಬಂಧಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ 3,662 ಜನರನ್ನು ಬಂಧಿಸಲಾಗಿದ್ದರೆ, ಉತ್ತರ ಪ್ರದೇಶದಲ್ಲಿ ಈ ಸಂಖ್ಯೆ 2,805ರಷ್ಟಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶಿಕ್ಷೆಗೆ ಒಳಗಾದವರು 23 ಮಂದಿ ಮಾತ್ರ. ಉತ್ತರ ಪ್ರದೇಶದಲ್ಲಿ 222 ಮಂದಿಯ ಮೇಲಿನ ಆರೋಪಗಳು ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ಶೇಕಡವಾರು ಲೆಕ್ಕ ಹಾಕಿದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಶಿಕ್ಷೆಗೆ ಒಳಗಾಗಿರುವವರ ಪ್ರಮಾಣ ಶೇ 1 ಕೂಡ (0.68 %) ದಾಟುವುದಿಲ್ಲ.

ಕರ್ನಾಟಕದಲ್ಲಿ ಬಂಧಿತರು

ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ಈ ಕಾಯ್ದೆ ಅಡಿಯಲ್ಲಿ 24 ಮಂದಿಯನ್ನು ಬಂಧಿಸಲಾಗಿದೆ. 2023ರಲ್ಲಿ ಮಾತ್ರ ಮೂವರಿಗೆ ಶಿಕ್ಷೆಯಾಗಿದೆ.



ಆಧಾರ: ಪಿಟಿಐ, ಸಂಸತ್ತಿನಲ್ಲಿ ಸಚಿವರ ಉತ್ತರಗಳು, ಸುಪ್ರೀಂ ಕೋರ್ಟ್ ಅಬ್ಸರ್ವರ್, ಆಕ್ಸ್‌ಫರ್ಡ್ ಹ್ಯೂಮನ್ ರೈಟ್ಸ್ ಹಬ್, ಮಾಧ್ಯಮ ವರದಿಗಳು

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಕಾಲೇಜು ಶುಲ್ಕ ಕಟ್ಟಿದೆ



‘ಪ್ರಜಾವಾಣಿ’ ಪತ್ರಿಕೆಯು ಬಡ ವಿದ್ಯಾರ್ಥಿಗಳಿಗೆ ನೆರವಿನ ಹಸ್ತವನ್ನು ಚಾಚುವ ಮೂಲಕ ನಿಜವಾದ ಸಮಾಜಸೇವೆ ಮಾಡುತ್ತಿದೆ. ಆ ಸೇವೆಯ ಭಾಗ್ಯ ನನಗೂ ಸಿಕ್ಕಿದೆ. ಪತ್ರಿಕೆ ನೀಡಿದ ವಿದ್ಯಾರ್ಥಿವೇತನವನ್ನೂ ಕಾಲೇಜು ಶುಲ್ಕಕ್ಕಾಗಿ ಹಾಗೂ ಪಠ್ಯಪುಸ್ತಕ ಖರೀದಿಸಲು ಬಳಸಿಕೊಂಡೆ.

ಖುಷಿ, ಮೂಡುಬಿದಿರೆ

ವರ್ಷದ ಕಲಿಕೆ ನಿಶ್ಚಿಂತೆ ಆಯಿತು



ನಾನು ಪಿಯುಸಿ ವಿಜ್ಞಾನ ಓದುತ್ತಿರುವೆ. ‘ಪ್ರಜಾವಾಣಿ’ ನೀಡಿದ ನೆರವನ್ನು ಪಠ್ಯಪುಸ್ತಕಗಳು, ನೋಟ್‌ಬುಕ್, ಪೆನ್ನು ಸೇರಿದಂತೆ ಅಧ್ಯಯನ ಸಾಮಗ್ರಿಗಳ ಖರೀದಿಗೆ ಬಳಸಿಕೊಂಡೆ. ‘ಪ್ರಜಾವಾಣಿ’ ನೆರವಿನಿಂದ ಕಲಿಕಾ ಸಾಮಗ್ರಿ ಖರೀದಿಸಿದ್ದರಿಂದ ಚಿಂತೆಯೇ ಇಲ್ಲದೇ ವರ್ಷವಿಡೀ ಕಲಿಯಲು ನೆರವಾಯಿತು.

ಭಾಗ್ಯಶ್ರೀ, ಕಾಳಗಿ ತಾಲ್ಲೂಕು, ಕಲಬುರಗಿ

ಉಗ್ರ ಸಂಘಟನೆಗಳಿಗೆ ನೆರವು: 9 ಮಂದಿ ಬಂಧನ

ಕ್ರಿಪ್ಟೊ ಕರೆನ್ಸಿ ಜಾಲ ಭೇದಿಸಿದ ಗುಜರಾತ್ ಪೊಲೀಸರು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಭಯೋತ್ಪಾದನೆಗೆ ಆರ್ಥಿಕ ನೆರವು, ಡಾರ್ಕ್ ವೆಬ್ ಮತ್ತು ಮಾದಕವಸ್ತುಗಳ ಸಾಗಾಣೆಯ ನಂಟು ಹೊಂದಿದ್ದ ₹225 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ ಜಾಲವನ್ನು ಭೇದಿಸಿದ ಗುಜರಾತ್ ಪೊಲೀಸರು 9 ಮಂದಿಯನ್ನು ಬಂಧಿಸಿದ್ದಾರೆ.



ಬಂಧಿತರು ಹಮಾಸ್ ಮತ್ತು ಹುಥಿಯಂಥ ಬಂಡುಕೋರ ಸಂಘಟನೆಗಳಿಗೆ ತಮ್ಮ ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ಹಣ ವರ್ಗಾಯಿಸುತ್ತಿದ್ದರು. ದೇಶದಾದ್ಯಂತ ನಡೆದಿರುವ 935 ಸೈಬರ್ ವಂಚನೆ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಈ ಜಾಲವು ‘ಆರ್ಟೆಮಿಸ್‌ಲ್ಯಾಬ್.ಸಿಸಿ’ ಎಂಬ ಡಾರ್ಕ್ ವೆಬ್‌ಸೈಟ್ ಮೂಲಕ ಮಾದಕ ವಸ್ತು ಪೂರೈಕೆ, ಹಣ ಅಕ್ರಮ ವರ್ಗಾವಣೆ ಮತ್ತು ಅಂತರರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳಿಗೆ ಆರ್ಥಿಕ ನೆರವು ನೀಡುತ್ತಿತ್ತು ಎಂದು ಗುಜರಾತ್‌ನ ಸೈಬರ್ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಸಿಇ) ತಿಳಿಸಿದೆ.

ಮೊದಲು ಅಹಮದಾಬಾದ್ ನಿವಾಸಿ ಮೊಹಸಿನ್ ಸಾದಿಕ್ ಮೊಲನಿಯ ಡಿಜಿಟಲ್ ವ್ಯಾಲೆಟ್ ಅನ್ನು ಪತ್ತೆ ಹಚ್ಚಿದ ಪೊಲೀಸರು ಬಳಿಕ 9 ಮಂದಿ ಶಂಕಿತ ಕ್ರಿಪ್ಟೊ ಬಳಕೆದಾರರನ್ನು ಪತ್ತೆ ಮಾಡಿದರು.

ಈ ಪ್ರಕರಣದಲ್ಲಿ ಪತ್ತೆಹಚ್ಚಲಾದ ಹಣಕಾಸು ವ್ಯವಹಾರದ ಒಟ್ಟು ಮೌಲ್ಯ ₹226.54 ಕೋಟಿ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೊಬ್ಬ ಆರೋಪಿಗೆ ಸೇರಿದ ವ್ಯಾಲೆಟ್ ಅನ್ನು ಉಗ್ರರಿಗೆ ಆರ್ಥಿಕ ನೆರವು ನಿಗ್ರಹಿಸುವ ಇಸ್ರೇಲ್ ರಾಷ್ಟ್ರೀಯ ದಳವು 2025ರಲ್ಲಿ ನಿರ್ಬಂಧಿಸಿತ್ತು. ಈ ವ್ಯಾಲೆಟ್ ‘ದುಬೈ ಕಂಪನಿ ಫಾರ್ ಎಕ್ಸ್‌ಚೇಂಜ್’ ಜೊತೆ ನೇರ ಸಂಪರ್ಕ ಹೊಂದಿದ್ದು, ಅದನ್ನು ಹಮಾಸ್ ಬಳಸಿಕೊಂಡಿತ್ತು. ಜಾಲವು ‘ಮೊನೆರೊ’ದಂತಹ ವಿರಳ ಕರೆನ್ಸಿಗಳನ್ನು ಬಳಕೆ ಮಾಡುತ್ತಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ, ಪಿಡಿಪಿಯ ಹಿರಿಯ ನಾಯಕಿ ಮೆಹಬೂಬಾ ಮುಫ್ತಿ ಅವರ ಭಾಷಣದ ವಿಡಿಯೊ ತುಣುಕನ್ನು ಪಾಕಿಸ್ತಾನ ಮೂಲದ @ಜಿಯೊಡಿಫೆನ್ಸ್‌ಬ್ರೀಫ್ ಎಂಬ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ. ಮೇ 17ರಂದು ಕಾರ್ಯಕ್ರಮವೊಂದರಲ್ಲಿ ಭಾಷಣ ಮಾಡುತ್ತಿದ್ದ ಮೆಹಬೂಬಾ ಮುಫ್ತಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸುತ್ತಾ, ‘ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಜನರು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದು, ಶಾಂತಿ ಮತ್ತು ನೆಮ್ಮದಿಯಿಂದ ಬದುಕುತ್ತಿದ್ದಾರೆ. ಭಾರತದ ನಿಯಂತ್ರಣದಲ್ಲಿರುವ ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತೀಯ ಸೇನೆ ನಡೆಸುತ್ತಿರುವ ಭಯೋತ್ಪಾದನೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಿಂದಾಗಿ ಜನರು ನರಳುತ್ತಿದ್ದಾರೆ’ ಎಂದು ಹೇಳಿರುವುದು ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು.



ಮೆಹಬೂಬಾ ಮುಫ್ತಿ ಅವರು ಈ ರೀತಿಯ ಹೇಳಿಕೆ ನೀಡಿದ್ದಾರೆಯೇ ಎಂದು ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, ಇದನ್ನು ದೃಢಪಡಿಸುವ ವಿಶ್ವಾಸಾರ್ಹ ವರದಿ ಸಿಗಲಿಲ್ಲ. ವಿಡಿಯೊದ ಕೀಫ್ರೇಮ್ ಅನ್ನು ಬಳಸಿಕೊಂಡು ಹುಡುಕಾಟ ನಡೆಸಿದಾಗ ಮೇ 17ರಂದು ಇಂಡಿಯಾ ಟುಡೇಯ ಯೂಟ್ಯೂಬ್ ಚಾನೆಲ್‌ನಲ್ಲಿ ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. ಶ್ರೀನಗರದಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮುಫ್ತಿ ಅವರು ಮಾತನಾಡಿರುವ ವಿಡಿಯೊ ಅದು. ಈಗ ಜಾಲತಾಣಗಳಲ್ಲಿ ಹಂಚಿಕೊಂಡಿರುವ ವಿಡಿಯೊದಲ್ಲಿರುವ ದೃಶ್ಯಾವಳಿಗಳೂ, ಈ ವಿಡಿಯೊದಲ್ಲಿರುವ ದೃಶ್ಯಗಳೂ ಒಂದೇ ಆಗಿದ್ದವು. ಆ ಭಾಷಣವನ್ನು ಕೇಳಿದಾಗ ಪೋಸ್ಟ್‌ನಲ್ಲಿ ಪ್ರತಿಪಾದಿಸಿದಂತೆ ಅವರು ಹೇಳಿಕೆ ನೀಡಿಲ್ಲ ಎನ್ನುವುದು ತಿಳಿದು ಬಂತು. ವಿಡಿಯೊ ತುಣುಕಿನಿಂದ ಆಡಿಯೊವನ್ನು ಪ್ರತ್ಯೇಕಿಸಿ ರಿಸೆಂಬಲ್ ಎಐ ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಅದು ತಿರುಚಿದ ಆಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಮಿಂಚಂತೆ ಬಂದುಹೋದ ನೆನಪು

ನುಡಿ ಬೆಳಗು



ವಾಸುದೇವ ನಾಡಿಗ್

ಸುಮ್ಮನೆ ಕೆಲ ದಿನ ಇದ್ದು ಸಮೃದ್ಧವಾಗಿ ಬಾಳಿ ಬದುಕಿ ಹಾಗೇ ಹೋಗಿಬಿಡುವ ಜೀವ ಚೆರ‍್ರಿ ಹೂಗಳದ್ದು. ಗದ್ದಲವಿಲ್ಲ, ಗಲಾಟೆಯಿಲ್ಲ, ಮಾರುಕಟ್ಟೆಯಲ್ಲಿ ಮಾರಿಕೊಳ್ಳುವುದಿಲ್ಲ, ಕಟ್ಟಲು, ಮುಡಿಯಲು ಸಿಗುವುದಿಲ್ಲ, ಮಣಿಯುವುದಿಲ್ಲ, ಭಾರ ಆಗುವುದಿಲ್ಲ. ಚೆರ‍್ರಿ ಹೂ ಅಥವಾ ಚೆರ‍್ರಿ ಬ್ಲಾಸಮ್ ಜೀವನ ವ್ಯಾಖ್ಯಾನಕ್ಕೆ ದಕ್ಕುವುದಿಲ್ಲ. ಇದ್ದಷ್ಟು ದಿನ ಇದ್ದು ಕಣ್ಣರಳಿಸಿ ಎದೆ ಹೊಕ್ಕು ಕವಿತೆ ಹುಟ್ಟಿಸಿ ಹೋಗಿಬಿಡುತ್ತದೆ. ವಸಂತನಿಗೆ ಮುನ್ನುಡಿಯಂಥವಳು ಇವಳು. ಹಗುರ ಹಾರಿ ಉಳಿದು ಎದೆಭಾರದ ನೆನಪು ಉಳಿಸಿ ಹೊರಟುಬಿಡುವ ಚೆಲುವೆ. ಜಪಾನಿನ ರಾಷ್ಟ್ರೀಯ ಹೂವಿದು. ಎತ್ತರ ಹರವಿಕೊಂಡ ಮರಗಳಲ್ಲಿ ಮೂಡಿ ಎಲ್ಲರನ್ನೂ ಸ್ವಾಗತಿಸಿ ಮಾಯವಾಗುವ ಮಾಯಗಾತಿ ಇವಳು. ಸಕುರಾ ಎಂದೇ ಕರೆಯಲಾಗುವ ಈ ಹೂಗಳನ್ನು ನೋಡುವುದೇ ಒಂದು ಸಂಭ್ರಮ. ಹನಾಮಿ ಎಂದು ಈ ‘ನೋಡು ಸಂಪ್ರದಾಯ’ದ ಹೆಸರು.

ಉದ್ಯಾನಗಳಲ್ಲಿ ಹಾರಿಬಿದ್ದ ಇವುಗಳ ಪಕಳೆಗಳೇ ಚಾಪೆ. ಕಾಲಿಟ್ಟರೆ ಎಲ್ಲಿ ನಲುಗಿ ಹೋಗುವುದೋ ಎಂದು ಮೆಲ್ಲನೆ ಹೆಜ್ಜೆ ಇಡಬೇಕಾದ ಸೂಕ್ಷ್ಮ ಕಾಲ.

ಕಾಲದ ನಶ್ವರತೆಯನ್ನು ಪೂರ್ತಿ ಅರ್ಥಮಾಡಿಕೊಂಡಂತೆ ಬಾಳುವ ಚೆರ‍್ರಿ ಹೂಗಳು ಇದ್ದ ಆಯುಷ್ಯದ ಹದಿನಾಲ್ಕು ದಿನಗಳನ್ನು ಭರಪೂರ ಬಾಳಿ ಹೋಗಿಬಿಡುತ್ತವೆ. ‘ಸೆಲೆಬ್ರೇಟಿಂಗ್ ಎವೆರಿ ಮೊಮೆಂಟ್’ ಅಂತಾರಲ್ಲ ಹಾಗೆ ಇವು ತಮ್ಮ ಪಾಲಿನ ಬಾಳಿನ ಅನುಕ್ಷಣವನ್ನೂ ಸಂಭ್ರಮಿಸಿಬಿಡುತ್ತವೆ. ನಿಜವಾಗಿ ಬಾಳಿ ಹೊರಟು ಬಿಡುತ್ತವೆ. ಅರ್ಥಪೂರ್ಣವಾಗಿ ಬದುಕುವ ಬಗ್ಗೆ ಚೆರ‍್ರಿ ಬ್ಲಾಸಮ್‌ಗಿಂತ ಅನ್ಯ ಉದಾಹರಣೆ ಬೇಕಿಲ್ಲ. ತನಗೆ ಬೇಕಾದ ನೆಲದ ಸಾರವನ್ನು ಹೀರಿ ಚೆಲುವನ್ನು ಸುರಿಸಿ ಪಟ್ಟಂತ ನೆಲಕ್ಕೆ ಬಿದ್ದು ಹದಿನಾಲ್ಕು ದಿನಗಳಲ್ಲಿ ಮರೆಯಾಗುತ್ತವೆ; ಒದ್ದೆ ಕಲೆಗಳನ್ನು ಉಳಿಸಿ.

ಇರುವುದೇ ಹದಿನಾಲ್ಕು ದಿನದ ಆಯುಷ್ಯ. ಇನ್ನು ಜೋರಾಗಿ ಗಾಳಿಯೋ, ರಸ್ತೆ ಬದಿಯಲ್ಲಿದ್ದರೆ ರಕ್ಕಸನ ಹಾಗೆ ಓಡುವ ಕಾರು, ಲಾರಿ, ಬಸ್ಸಿನ ರಭಸ, ಬಿರುಸಿಗೆ ಹೂಗಳು ಉದುರಿ ಮರ ಬೋಳಾಗುತ್ತದೆ.

ಕೆಲವರ ಬಾಳೂ ಹೀಗೇ ಅಲ್ಲವೆ? ಬಾಳಿನ ಪ್ರತಿ ಕ್ಷಣವನ್ನು ಭರಪೂರ ಸಂಭ್ರಮಿಸಿ ಪಟ್ಟಂತ ಹೊರಟುಬಿಡುತ್ತಾರೆ. ಶಂಕರ್‌ನಾಗ್, ಸುನಿಲ್, ದಿವ್ಯಭಾರತಿ, ಸುಶಾಂತ್ ಸಿಂಗ್, ಇರ್ಫಾನ್ ಖಾನ್, ಪುನೀತ್ ರಾಜಕುಮಾರ್, ನಿವೇದಿತಾ ಜೈನ್ ಅನೇಕರು ಹೀಗೆ ಚೆರ‍್ರಿ ಬ್ಲಾಸಮ್ ತರಹ ಅರಳಿ ಕೆಲದಿನ ಇದ್ದು ಮಾಯವಾದರು. ಷೆಲ್ಲಿ, ಕೀಟ್ಸ್, ಅನ್ನೆ ಫ್ರಾಂಕ್, ಕಲ್ಪನಾ ಚಾವ್ಲಾ, ನಮ್ಮ ಕವಿ ಮುದ್ದಣ ಹೀಗೆ ಚೆರ‍್ರಿ ಹೂಗಳ ಬಾಳಿನ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಕವಿ, ಚಿಂತಕ, ಕಲಾವಿದರು, ರಾಜಕಾರಣಿಗಳು, ಕ್ರೀಡಾಪಟುಗಳು, ಸೈನಿಕರು ಬಹಳ ಅವಸರದಲ್ಲಿ ಬಂದು ಹೊರಟುಬಿಡುತ್ತಾರೆ. ನಲವತ್ತೆಂಟು ವರ್ಷ ಬಾಳಿದ್ದ ಖಲೀಲ್ ಗಿಬ್ರಾನ್ ಮತ್ತು ನಲವತ್ತೊಂದು ವರ್ಷ ಬಾಳಿದ್ದ ಫ್ರಾಂಜ್ ಕಾಫ್ಕಾ ಅಂಥವರ ಬರಹಗಳು ಚೆರ‍್ರಿ ಹೂಗಳು ಉಳಿಸಿಹೋಗುವ ಆ ತಣ್ಣೆಳಲ ಮಧುರ ಅನುಭೂತಿಯಷ್ಟೇ ಅನುಪಮವಾದವು. ಇತ್ತ ಹೀಗೆ ಬಂದು ಅತ್ತ ಹಾಗೆ ಹೋದ ಚೈತನ್ಯಗಳು ಅಸಂಖ್ಯಾತ. ಇವರಂತಹ ಜೀವಗಳು, ಸಾಧನೆಗಳು ನಮ್ಮೊಳಗೆ ಅರಳುವ ಚೆರ‍್ರಿ ಬ್ಲಾಸಮ್ ಅಲ್ಲದೆ ಬೇರೇನು? ❖

ಗುಂಡಣ್ಣ



ಪದಬಂಧ 6408


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಬ್ಬಿಣವನ್ನು ಅಕರ್ಷಿಸುವಂಥದ್ದು (5)
3.ರಸಿಕ ನೋಡುತ್ತಿರುವ ಮರಳಿನ ತೀರ (3)
5.ಹನುಮಂತನ ಇನ್ನೊಂದು ಹೆಸರು (5)
7.ಋತುಗಳ ರಾಜನಿವನು (3)
8.ಹೆಸರಿಡುವ ಶಾಸ್ತ್ರ (5)
11.ಹರನಿಗೆ ಸಲ್ಲಿಸಿದ ಮುಡಿಪು (3)
12.ಹೇಳಲಾರದ ಯಾತನೆ (5)
15.ಮಾಲು ತರುವಾಗ ಧರಿಸಿರುವ ಮುಂಡಾಸು (3)
16.ರಾಡಿಯಲ್ಲಿರುವ ಭೂತಗನ್ನಡಿ ಕಾಣಿಸಿತೇ? (5)

ಮೇಲಿಂದ ಕೆಳಕ್ಕೆ

1.ಈತ ಅತಿಯಾಸೆಯುಳ್ಳವನು (3)
2.ಬನದ ಹತ್ತಿರ ನೀಡಿದ ಮುತ್ತು (3)
4.ತಲೆಮಾರು ಈ ತರ ಬಂದಿದೆ (4)
6.ಮಗ ಕೊನೆಗೆ ತಿರುಗಿದರೆ ಇದು ಸಲೀಸು! (3)
7.ನೀರಿನ ಅಧಿದೇವತೆ (3)
8.ಲಜ್ಜೆ ಇಲ್ಲಿ ಆವರಿಸಿದೆ (3)
9.ಈತ ವಿಲಾಸಪ್ರಿಯ (3)
10.ಜರೂರಾಗಿ ಮಾಡಿರುವ ಪಂಚನಾಮೆ (4)
13.ಉತ್ತೇಜನಕರವಾದ ಆಹಾರ (3)
14.ಅಡಿಗಡಿಗೆ ತಲೆದೋರುವ ಶೀತ (3)



6407ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಒಳ್ನುಡಿ 3.ಹುತ್ತ
4.ಕ್ರಮೇಣ 5.ತಗಡು
6.ಹತ್ಯಾಕಾಂಡ 8.ಟೆಸ
10.ಉಪಾ 13.ರಸಮಯ
14.ವಾಯಸ 15.ಗಾಚಾರ
16.ದಿಟ 17.ಚಮ್ಮಾರ

ಮೇಲಿಂದ ಕೆಳಕ್ಕೆ:
1.ಅಕ್ರಮಪ್ರವೇಶ 2.ಒಣಹರಟೆ
3.ಹುಡುಗಿ 5.ತಡಸಲು
7.ಅಕಾಲಮರಣ 9.ಸಮರಸ
11.ಪಾಳೆಯಗಾರ 12.ಕವಾಟ

ಸುಡೊಕು 6791

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		6					5	
		7	5		6	3		2
3	8						6	
	2					9		4
			2	4	7			
	7					5		8
		9			8	4		
4		2					8	1
	6		4		2	7		3

6790 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

20 ಮೇ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಚತುರ್ಥಿ ಗಂ. 11-07 ನಕ್ಷತ್ರ: ಆರ್ದ್ರಾ ಗಂ. 6-12 ನಂತರ ಪುನರ್ವಸು ಗಂ. 28-12 ಯೋಗ ಶೂಲ ಗಂ. 14-10 ಕರಣ: ವಿಷ್ಟಿ ಗಂ. 11-07, ವೃಷಭ ಮಾಸದ 05 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ಸೂರ್ಯೋದಯ : 06-07 ಸೂರ್ಯಾಸ್ತ : 06-47, ಮುಸ್ಲಿಂ ದಿನಾಂಕ : 03 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 4, 6

ಮೇಷ: ತುಂಬಾ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗೆ ಅಪರಿಚಿತನೊಬ್ಬನ ಭೇಟಿಯಿಂದ ಉತ್ತರ ಸಿಗುತ್ತದೆ. ಪತ್ನಿ ವರ್ಗದವರಿಂದ ಕಾರ್ಯಗಳಿಗೆ ಸಹಾಯ ದೊರೆಯಲಿದೆ.

ವೃಷಭ: ಆರೋಗ್ಯದ ಬಗ್ಗೆ ಆತಂಕಪಡಬೇಕಾದ ಅವಶ್ಯಕತೆ ಇಲ್ಲ. ಜೀವನ-ಶೈಲಿಯಿಂದಾಗಿ ಖರ್ಚುಗಳಾಗಬಹುದು. ಶ್ರೀರಾಮನಾಮ ಭಜನೆಯಿಂದ ಕಾರ್ಯಗಳು ಈಡೇರಲಿವೆ.

ಮಿಥುನ: ಷೇರು ಮಾರುಕಟ್ಟೆ ಹಾಗೂ ಕಮಿಷನ್ ವ್ಯಾಪಾರಕ್ಕೆ ಸಂಬಂಧಿಸಿದಂತ ವೃತ್ತಿಯಲ್ಲಿರುವವರಿಗೆ ನಷ್ಟ ಸಂಭವಿಸಲಿದೆ. ಅಧಿಕಾರಕ್ಕಾಗಿ ಅಡ್ಡದಾರಿ ಅನುಸರಿಸಬೇಡಿ.

ಕರ್ಕಾಟಕ: ವ್ಯವಹಾರದಲ್ಲಿನ ಯೋಜನೆ ಹಾಗು ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಿಂದ ತಿಳಿದುಕೊಳ್ಳಿ. ಮಾರ್ಗದರ್ಶಕರ ವಾಕ್ಯವನ್ನು ಅನುಸರಿಸಿದರೆ ಉತ್ತಮ ಜೀವನ ಲಭ್ಯ.

ಸಿಂಹ: ಎತ್ತರದ ಸ್ಥಾನ ತಲುಪಬೇಕೆಂಬ ಮಹತ್ವಾಕಾಂಕ್ಷೆಯು ಸಾಕಾರಗೊಳ್ಳಬಹುದು. ಸರಿ ತಪ್ಪುಗಳ ತೀರ್ಮಾನಕ್ಕೆ ಬರುವುದು ಕಷ್ಟ. ಮಹಿಳಾ ಉದ್ಯೋಗಿಗಳಿಗೆ ಜವಾಬ್ದಾರಿ ದೊರೆಯಲಿದೆ.

ಕನ್ಯಾ: ಸಾಮಾಜಿಕ ವಲಯದಲ್ಲಿ ಬರುವ ಅವಕಾಶಗಳ ಸದುಪಯೋಗ ಪಡೆದುಕೊಳ್ಳಿ. ಹಣಕಾಸಿನ ವ್ಯವಹಾರಗಳಲ್ಲಿ ಅತಿ ಜಾಗರೂಕರಾಗಿರುವುದು ಅವಶ್ಯ.

ತುಲಾ: ಸ್ವಾತಂತ್ರ್ಯ ಸಿಗುವ ಕಾರಣದಿಂದ ಗುರಿ ಸಾಧನೆ ಇನ್ನೂ ಹತ್ತಿರವಾಗಲಿದೆ. ನಯ -ವಿನಯ, ಶಿಷ್ಟಾಚಾರಗಳನ್ನು ನಿಮ್ಮ ಕೆಲಸ ಕಾರ್ಯಗಳಲ್ಲಿ ಕಾಪಾಡಿಕೊಳ್ಳಿ. ಕಹಿ ಘಟನೆಗಳು ಪುನಃ ಮರುಕಳಿಸದಂತೆ ಎಚ್ಚರ ವಹಿಸಿ.

ವೃಶ್ಚಿಕ: ಹಣ ಮಾಡುವ ಪ್ರಯತ್ನಕ್ಕಿಂತ ಮಿಗಿಲಾಗಿ ಹೆಸರು ಮಾಡುವ ಬಗ್ಗೆ ಗಮನವಿರಲಿ. ಧಾರ್ಮಿಕ ವೃತ್ತಿಯನ್ನು ನಡೆಸುವ ವ್ಯಕ್ತಿಗಳಿಗೆ ಸಾಧಿಸಿದ ಖುಷಿ ಸಿಗಲಿದೆ. ಅದೃಷ್ಟದ ಬಾಗಿಲು ತೆರೆಯುವುದು.


ಧನು: ನಿರಪರಾಧಿಯಾದರೂ ಶಿಕ್ಷೆಗೆ ಒಳಗಾಗುವ ಲಕ್ಷಣಗಳಿರುವುದರಿಂದ ಜಾಗ್ರತರಾಗಿರಿ. ಉತ್ತಮ ಉದ್ಯೋಗವನ್ನು ಗಳಿಸಿಕೊಳ್ಳಬಹುದು. ಸರ್ಕಾರಿ ಕೆಲಸಗಳು ಸುಲಭವಾಗಿ ಆಗಲಿವೆ.

ಮಕರ: ನಾಲ್ಕಾರು ಜನರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಏಳಿಗೆಗೆ ದಾರಿಯಾಗಲಿದೆ. ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ ದೊರಕಲಿದೆ. ಕಟ್ಟಡ ಕಾರ್ಮಿಕರಿಗೆ ಅವಕಾಶಗಳು ಸಿಗಲಿವೆ.

ಕುಂಭ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದು ಬೇಡ. ಈಶ್ವರನ ಸೇವೆ ಮಾಡುವುದರಿಂದ ಹೆಚ್ಚಿನ ಕಾರ್ಯ ಸಾಧನೆಗೆ ಸಹಾಯವಾಗುವುದು. ಸಗಟು ವ್ಯಾಪಾರಿಗಳಿಗೆ ಶುಭ ದಿನ.

ಮೀನ: ಸಿವಿಲ್ ಎಂಜಿನಿಯರ್‌ಗಳಿಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ಸಿಗಲಿದೆ. ವೃತ್ತಿಯಲ್ಲಿ ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ವೇದಿಕೆ ಸಿಗಲಿದೆ. ಹೂವು ಹಣ್ಣುಗಳ ರಫ್ತು ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭವಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,649
ಇಂದಿನ ಅಂತ್ಯ: 23,618
ದಿನದ ಕನಿಷ್ಠ: 23,587
31

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹600
12 ಕ್ಕೆ ₹86
ಮೈಸೂರು: 100 ಕ್ಕೆ ₹610

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹366-716
ದ್ವಿತಳಿ (ಬಿ.ವಿ) ₹425-835

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹256
ಆರ್‌ಎಸ್‌ಎಸ್-5 ₹249.50
ಗುಡ್ ಲಾಟ್ ₹216.50

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹22,750
ಎಸಿ ₹13,700
ಆರ್‌ಪಿ ₹17,900
ಆರ್‌ಸಿ ₹9,550

ಯುಪಿಐ ಮೂಲಕ ಪಿ.ಎಫ್ ಹಣ ಶೀಘ್ರ

‘ವಾಟ್ಸ್‌ಆ್ಯಪ್ ಮೂಲಕ ಪಿ.ಎಫ್ ಸಂಘಟನೆ ಜೊತೆ ಸಂವಹನ ಸೌಲಭ್ಯ ಜಾರಿ’

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಚಂದಾದಾರರಿಗೆ ತಮ್ಮ ಭವಿಷ್ಯ ನಿಧಿಯಲ್ಲಿನ (ಪಿ.ಎಫ್) ಹಣವನ್ನು ಯುಪಿಐ ಮೂಲಕ ಹಿಂದಕ್ಕೆ ಪಡೆಯುವ ಸೌಲಭ್ಯವು ಶೀಘ್ರದಲ್ಲಿಯೇ ಸಿಗಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ ಮಂಗಳವಾರ ತಿಳಿಸಿದ್ದಾರೆ.

ಈ ಸೌಲಭ್ಯದ ಪರೀಕ್ಷೆಗಳು ಪೂರ್ಣಗೊಂಡಿವೆ ಎಂದು ಅವರು ಮಾಹಿತಿ ನೀಡಿದ್ದಾರೆ. ‘ಹಿಂದಕ್ಕೆ ಪಡೆದ ಮೊತ್ತವು ಚಂದಾದಾರರ ಖಾತೆಗೆ ನೇರವಾಗಿ ವರ್ಗಾವಣೆ ಆಗುತ್ತದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪಿ.ಎಫ್ ಖಾತೆಯಲ್ಲಿರುವ ಮೊತ್ತದಲ್ಲಿ ಹೆಚ್ಚಿನ ಪಾಲನ್ನು ಯುಪಿಐ ವ್ಯವಸ್ಥೆಯ ಮೂಲಕ ಬ್ಯಾಂಕ್ ಖಾತೆಗೆ ಪಡೆದುಕೊಳ್ಳುವ ಸೌಲಭ್ಯ ಒದಗಿಸುವ ಉದ್ದೇಶವನ್ನು ಕೇಂದ್ರ ಕಾರ್ಮಿಕ ಸಚಿವಾಲಯವು ಹೊಂದಿದೆ. ಇದರ ಅಡಿಯಲ್ಲಿ, ಎಷ್ಟು ಮೊತ್ತವನ್ನು ಪಿ.ಎಫ್ ಖಾತೆಯಿಂದ ಯುಪಿಐ ವ್ಯವಸ್ಥೆಯ ಮೂಲಕ ಹಿಂಪಡೆಯಬಹುದು ಎಂಬುದನ್ನು ತಾವೇ ಪರಿಶೀಲಿಸಿಕೊಳ್ಳುವ ಅನುಕೂಲವೂ ಚಂದಾದಾರರಿಗೆ ಸಿಗಲಿದೆ. ಮೊತ್ತವು ಪಿ.ಎಫ್ ಖಾತೆಗೆ ಜೋಡಣೆ ಆಗಿರುವ ಬ್ಯಾಂಕ್ ಖಾತೆಗೆ ವರ್ಗಾವಣೆ ಆಗುತ್ತದೆ.

ಖಾತೆಗೆ ಜೋಡಣೆ ಆಗಿರುವ ಯುಪಿಐ ಗೋಪ್ಯ ಸಂಖ್ಯೆಯನ್ನು ಬಳಸಿ ಹಣ ಹಿಂಪಡೆಯುವ ವಹಿವಾಟು ಪೂರ್ಣಗೊಳಿಸಬಹುದು. ಹಣವು ಬ್ಯಾಂಕ್ ಖಾತೆಗೆ ವರ್ಗಾವಣೆ ಆದ ನಂತರದಲ್ಲಿ ಅದನ್ನು ಅವರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಬಳಸಬಹುದು.

ಹೊಸ ಸೌಲಭ್ಯವು ಏಳು ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿರುವ ಚಂದಾದಾರರಿಗೆ ಅನುಕೂಲ ಕಲ್ಪಿಸುವ ನಿರೀಕ್ಷೆ ಇದೆ. ಇದಕ್ಕೆ ಸಂಬಂಧಿಸಿದ ತಂತ್ರಾಂಶದಲ್ಲಿನ ಲೋಪಗಳನ್ನು ಸರಿಪಡಿಸಲು ಇಪಿಎಫ್‌ಒ ಯತ್ನಿಸುತ್ತಿದೆ.

ವಾಟ್ಸ್‌ಆ್ಯಪ್ ಮಾರ್ಗ: ಸದಸ್ಯರಿಗೆ ಸಿಗುವ ಸೇವೆಗಳ ಬಗ್ಗೆ ಮಾಹಿತಿ ನೀಡಲು ವಾಟ್ಸ್‌ಆ್ಯಪ್ ವೇದಿಕೆಯನ್ನು ಬಳಸಿಕೊಳ್ಳಲು ಇಪಿಎಫ್‌ಒ ಕೆಲವು ಕ್ರಮಗಳನ್ನು ಕೈಗೊಂಡಿದೆ ಎಂದು ಕೂಡ ಸಚಿವರು ತಿಳಿಸಿದ್ದಾರೆ.

ಇದರ ಅಡಿಯಲ್ಲಿ ಚಂದಾದಾರರು ಇಪಿಎಫ್‌ಒ ವಾಟ್ಸ್‌ಆ್ಯಪ್ ಸಂಖ್ಯೆಗೆ ‘ಹೆಲೊ’ (Hello) ಎಂದು ಸಂದೇಶ ಕಳುಹಿಸಬೇಕು. ವಾಟ್ಸ್‌ಆ್ಯಪ್ ಮೂಲಕ ಪ್ರಾದೇಶಿಕ ಭಾಷೆಗಳಲ್ಲಿಯೂ ಸಂವಹನ ನಡೆಸಬಹುದು. ಮತ್ತೆ ಮತ್ತೆ ಎದುರಾಗುವ ಪ್ರಶ್ನೆಗಳಿಗೆ ಸ್ವಯಂಚಾಲಿತ ವ್ಯವಸ್ಥೆಯೊಂದು ದಿನದ ಅಷ್ಟೂ ಗಂಟೆಗಳ ಕಾಲ ಉತ್ತರಿಸುತ್ತದೆ. ಈ ಸೌಲಭ್ಯವು ಇದೇ ತಿಂಗಳಲ್ಲಿ ಆರಂಭವಾಗುವ ನಿರೀಕ್ಷೆ ಇದೆ.

ಮುಂಬೈ ಧಾರಣೆ (ಶೇಂಗಾ)

19-05-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಛಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಛಾ	1530 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,200 (1,58,100)
ಬೆಳ್ಳಿ ಕೆ.ಜಿಗೆ	2,62,000 (2,72,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1200-1600
ಮಧ್ಯಮ	₹800-1200
ಸಣ್ಣ	₹200-600

‘ಅದಿತಿ’ ಯೋಜನೆಯಡಿ ನೌಕಾಪಡೆಗೆ ಅತ್ಯಾಧುನಿಕ ತಂತ್ರಜ್ಞಾನ

ಎಚ್‌ಪಿಎಂ: ಟಾನ್‌ಬೊ ಕಂಪನಿಗೆ ಗುತ್ತಿಗೆ

ಪ್ರಜಾವಾಣಿ ವಾರ್ತೆ

ಮುಂಬೈ: ಅತ್ಯಾಧುನಿಕ ತಂತ್ರಜ್ಞಾನ ಅಭಿವೃದ್ಧಿಪಡಿಸುವುದಕ್ಕೆ ಉತ್ತೇಜನ ನೀಡುವುದಕ್ಕಾಗಿ ಕೇಂದ್ರ ಸರ್ಕಾರ ರೂಪಿಸಿರುವ ‘ಅದಿತಿ 3.0’ ಯೋಜನೆಯಡಿ ನೌಕಾಪಡೆಯು, ಹೈ ಪವರ್ ಮೈಕ್ರೊವೇವ್(ಎಚ್‌ಪಿಎಂ) ಸಿಸ್ಟಮ್‌ಗಳನ್ನು ತಯಾರಿಸಿ, ಪೂರೈಸುವ ಗುತ್ತಿಗೆಯನ್ನು ಟಾನ್‌ಬೊ ಇಮೇಜಿಂಗ್ ಇಂಡಿಯಾ ಲಿಮಿಟೆಡ್ ಕಂಪನಿಗೆ ನೀಡಿದೆ.

ಈ ರಕ್ಷಣಾ ವ್ಯವಸ್ಥೆಗಳನ್ನು (ಎಚ್‌ಪಿಎಂ) ಅಭಿವೃದ್ಧಿಪಡಿಸುವುದಕ್ಕೆ ‘ಇನೋವೇಷನ್ಸ್ ಫಾರ್ ಡಿಫೆನ್ಸ್ ಎಕ್ಸ್‌ಲೆನ್ಸ್’(ಐಡಿಇಎಕ್ಸ್) ಹಾಗೂ ಡಿಫೆನ್ಸ್ ಇನೋವೇಷನ್ ಆರ್ಗನೈಜೇಷನ್(ಡಿಐಒ) ನೆರವು ನೀಡಲಿವೆ. ಈ ಎರಡು ಸಂಸ್ಥೆಗಳು ರಕ್ಷಣಾ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿವೆ.



ಸಮುದ್ರದಲ್ಲಿ ನಡೆಯುವ ದಾಳಿಗಳಿಗೆ ಪ್ರತಿರೋಧ ಒಡ್ಡಿ, ಶತ್ರುಗಳ ಸಾಧನಗಳನ್ನು ನಿಷ್ಕ್ರಿಯಗೊಳಿಸುವಲ್ಲಿ ಹೈ ಪವರ್ ಮೈಕ್ರೊವೇವ್ ಸಿಸ್ಟಮ್‌ಗಳು ಸದ್ಯ ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರಸ್ತುತ, ಕೆಲವೇ ರಾಷ್ಟ್ರಗಳು ಈ ಅತ್ಯಾಧುನಿಕ ಸಾಧನಗಳನ್ನು ಹೊಂದಿವೆ.

‘ಅಡ್ವಾನ್ಸ್ಡ್ ಡಿಫೆನ್ಸ್ ಟೆಕ್ನಾಲಜಿ ಇನ್‌ಕ್ಯುಬೇಷನ್’ನ ಸಂಕ್ಷಿಪ್ತ ರೂಪವೇ ‘ಅದಿತಿ’(ಎಡಿಐಟಿಐ).

‘ಪ್ರಸ್ತುತ ಯುದ್ಧತಂತ್ರ ಬದಲಾಗಿದೆ. ಅದರಲ್ಲೂ, ಎದುರಾಳಿಗಳು ನಡೆಸುವ ಡ್ರೋನ್/ಕ್ಷಿಪಣಿಗಳ ದಾಳಿ ಎದುರಿಸಲು ಅತ್ಯಾಧುನಿಕ ಹಾಗೂ ಪರಿಣಾಮಕಾರಿ ತಂತ್ರಜ್ಞಾನ ಅಗತ್ಯ. ಈ ಸಂದರ್ಭದಲ್ಲಿ ಎಲೆಕ್ಟ್ರಾನಿಕ್ ಹಾಗೂ ಮಾನವರಹಿತ ಶಸ್ತ್ರಾಸ್ತ್ರಗಳು ಮಹತ್ವದ ಪಾತ್ರ ವಹಿಸುತ್ತವೆ. ಎಚ್‌ಪಿಎಂ ಸಿಸ್ಟಮ್ ಅತ್ಯಂತ ಸೂಕ್ತ ತಂತ್ರಜ್ಞಾನವೆನಿಸಲಿದೆ’ ಎಂದು ರಕ್ಷಣಾ ತಜ್ಞರು ಹೇಳುತ್ತಾರೆ.

‘ಯುದ್ಧ ತಂತ್ರಜ್ಞಾನದ ವಿಚಾರವಾಗಿ ಈ ಗುತ್ತಿಗೆಯು ಮಹತ್ವದ ಜವಾಬ್ದಾರಿಯಾಗಿದೆ’ ಎಂದು ಟಾನ್‌ಬೊ ಇಮೇಜಿಂಗ್ ಇಂಡಿಯಾ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಅರವಿಂದ ಲಕ್ಷ್ಮೀಕುಮಾರ ಹೇಳಿದರು.

‘ಎಚ್‌ಪಿಎಂ ತಂತ್ರಜ್ಞಾನ ಅಭಿವೃದ್ಧಿಗಾಗಿ ಕಂಪನಿಯು ಕಳೆದ ಹಲವು ವರ್ಷಗಳಿಂದ ಭಾರಿ ಪ್ರಮಾಣದಲ್ಲಿ ಹೂಡಿಕೆ ಮಾಡಿದೆ’ ಎಂದರು.

ಎಚ್‌ಪಿಎಂ ತಂತ್ರಜ್ಞಾನ

ಹೆಸರೇ ಹೇಳುವಂತೆ, ಹೈಪವರ್ ಮೈಕ್ರೊವೇವ್ ತಂತ್ರಜ್ಞಾನದಡಿ ಅತ್ಯಂತ ಶಕ್ತಿಶಾಲಿ ವಿದ್ಯುತ್‌ಕಾಂತೀಯ ಕಿರಣಗಳನ್ನು ಹೊರಹೊಮ್ಮಿಸಲಾಗುತ್ತದೆ. ಸಾಮಾನ್ಯವಾಗಿ 100 ಮೆಗಾವಾಟ್‌ಗಿಂತಲೂ ಅಧಿಕ ಶಕ್ತಿ ಹೊಂದಿರುವ ವಿದ್ಯುತ್‌ಕಾಂತೀಯ ಕಿರಣಗಳು, ಶತ್ರು ಪಾಳಯದ ಸಾಧನಗಳಲ್ಲಿನ ಮೈಕ್ರೊಚಿಪ್‌ಗಳು, ಸೆನ್ಸರ್‌ಗಳು ಹಾಗೂ ಸಂವಹನ ಉಪಕರಣಗಳನ್ನು ನಿಷ್ಕ್ರಿಯಗೊಳಿಸುವ ಸಾಮರ್ಥ್ಯ ಹೊಂದಿರುತ್ತವೆ.

ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳಿಗಿಂತಲೂ ಇವು ಭಿನ್ನವಾಗಿರುತ್ತವೆ. ಎದುರಾಳಿಗಳ ಎಲೆಕ್ಟ್ರಾನಿಕ್ ಸಾಧನಗಳನ್ನು ಎಚ್‌ಪಿಎಂ ತಂತ್ರಜ್ಞಾನ ಬಳಸಿ ನಾಶ ಮಾಡುವ ಸಂದರ್ಭದಲ್ಲಿ, ಯಾವುದೇ ರೀತಿಯ ಸ್ಫೋಟ ಸಂಭವಿಸುವುದಿಲ್ಲ ಅಥವಾ ಶತ್ರು ದೇಶಗಳ ಉಪಕರಣ/ಸಾಧನಗಳ ರಚನೆಗೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ. ಇದು ಈ ತಂತ್ರಜ್ಞಾನದ ಅನುಕೂಲ.

‘ಇಂಧನ ಬೆಲೆ ಏರಿಕೆ ಅತ್ಯಂತ ಕಡಿಮೆ’

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ದರವನ್ನು ಲೀಟರ್‌ಗೆ 90 ಪೈಸೆ ಏರಿಕೆ ಮಾಡಿರುವುದನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಬಿಜೆಪಿ, ಕೊಲ್ಲಿ ರಾಷ್ಟ್ರಗಳ ಹೊರತಾಗಿ ಅತ್ಯಂತ ಕಡಿಮೆ ಬೆಲೆ ಏರಿಕೆ ಮಾಡಲಾಗಿದೆ ಎಂದಿದೆ.

ಕಳೆದ ಶುಕ್ರವಾರ ಪೆಟ್ರೋಲ್, ಡೀಸೆಲ್‌ಗೆ ಕ್ರಮವಾಗಿ ಲೀಟರ್‌ಗೆ ₹3 ಏರಿಕೆ ಮಾಡಲಾಗಿತ್ತು. ಮಂಗಳವಾರ ಮತ್ತೆ ದರ ಏರಿಕೆ ಮಾಡುವ ಮೂಲಕ ಒಂದು ವಾರಕ್ಕೂ ಮೊದಲೇ ಎರಡನೇ ಸಲ ಬೆಲೆ ಏರಿಕೆ ಮಾಡಲಾಗಿದೆ. ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಹಾಗೂ ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ತಡೆಯೊಡ್ಡಿದ ಕಾರಣ, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿಸಿದೆ.

‘ಇಂಧನ ಬೆಲೆ ತೀವ್ರ ಏರಿಕೆಯಿಂದ ಪ್ರಪಂಚದಾದ್ಯಂತ ಗ್ರಾಹಕರು ತೀವ್ರ ಬಿಕ್ಕಟ್ಟಿನ ಪರಿಸ್ಥಿತಿ ಎದುರಿಸುತ್ತಿದ್ದಾರೆ’ ಎಂದು ಬಿಜೆಪಿಯ ಐ.ಟಿ ವಿಭಾಗದ ಅಮಿತ್ ಮಾಳವೀಯ ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

‘ವಿಶ್ವದಾದ್ಯಂತ ಬೆಲೆ ಏರಿಕೆಯಾಗಿದೆ. ಕಚ್ಚಾತೈಲದ ದರವು ಪ್ರತಿ ಬ್ಯಾರಲ್‌ಗೆ 100 ಡಾಲರ್‌ಗೆ ಏರಿಕೆಯಾಗಿದೆ’ ಎಂದು ತಿಳಿಸಿದ್ದಾರೆ.

‘ಈಗ ಮತ್ತೆ 90 ಪೈಸೆ ಏರಿಕೆ ಮಾಡಿದ್ದರೂ ಒಟ್ಟಾರೆಯಾಗಿ ಇಂಧನ ದರವನ್ನು ಶೇಕಡ 4ರಷ್ಟು ಮಾತ್ರ ಏರಿಕೆ ಮಾಡಲಾಗಿದೆ. ಹೆಚ್ಚು ಸಬ್ಸಿಡಿ ಪಡೆಯುವ ಕೊಲ್ಲಿ ರಾಷ್ಟ್ರಗಳ ಹೊರತಾಗಿ, ಅತ್ಯಂತ ಕಡಿಮೆ ಏರಿಕೆಯಾಗಿದೆ. ಸಾರ್ವಜನಿಕ ವಲಯದ ಕಂಪನಿಗಳು ದೀರ್ಘಕಾಲದಿಂದ ನಷ್ಟವನ್ನು ಗ್ರಾಹಕರಿಗೆ ವರ್ಗಾಯಿಸಿರಲಿಲ್ಲ. ಬಿಕ್ಕಟ್ಟು ಆರಂಭಗೊಂಡು 76 ದಿನಗಳಾಗಿದ್ದು, ನಿತ್ಯವೂ ₹1 ಸಾವಿರ ಕೋಟಿಯಷ್ಟು ನಷ್ಟ ಅನುಭವಿಸಿವೆ. ಈಗಲೂ ಅಲ್ಪ ಪ್ರಮಾಣದಲ್ಲಿ ಮಾತ್ರ ಬೆಲೆ ಏರಿಕೆ ಮಾಡಲಾಗಿದೆ’ ಎಂದು ಅಮಿತ್ ಮಾಳವೀಯ ವಿವರಿಸಿದ್ದಾರೆ.

‘ಬೇರೆ ದೇಶಗಳಲ್ಲಿ ಏರಿಕೆಯಾದ ಇಂಧನ ಬೆಲೆಯು ಜೊತೆ ತುಲನೆ ಮಾಡಿರುವ ಅವರು, ಮ್ಯಾನ್ಮಾರ್‌ನಲ್ಲಿ ಪೆಟ್ರೋಲ್ ದರವನ್ನು ಶೇ 89.7ರಷ್ಟು, ಮಲೇಷ್ಯಾದಲ್ಲಿ ಶೇ 56.3ರಷ್ಟು, ಪಾಕಿಸ್ತಾನದಲ್ಲಿ ಶೇ 54.9ರಷ್ಟು ಹಾಗೂ ಯುಎಇನಲ್ಲಿ ಶೇ 52.4ರಷ್ಟು ಏರಿಕೆ ಮಾಡಲಾಗಿದೆ. ಫ್ರಾನ್ಸ್‌ನಲ್ಲಿ ಪೆಟ್ರೋಲ್ ದರವನ್ನು ಶೇ 20.9, ಡೀಸೆಲ್ ದರವನ್ನು ಶೇ 31, ಜರ್ಮನಿಯಲ್ಲಿ 13.7ರಷ್ಟು ಏರಿಕೆ ಮಾಡಲಾಗಿದೆ’ ಎಂದು ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಮತ್ತೆ ಹೆಚ್ಚಳ

ಒಂದನೇ ಪುಟದಿಂದ...

ಕ್ರಿಸಿಲ್ ಸಂಸ್ಥೆಯ ಅಂದಾಜಿನ ಪ್ರಕಾರ, ಶುಕ್ರವಾರದ ಬೆಲೆ ಹೆಚ್ಚಳದ ನಂತರ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಲೀಟರ್ ಪೆಟ್ರೋಲ್ ಮಾರಾಟದಿಂದ ಸರಿಸುಮಾರು ₹10ರಷ್ಟು ಹಾಗೂ ಡೀಸೆಲ್ ಮಾರಾಟದಿಂದ ₹13ರಷ್ಟು ನಷ್ಟ ಅನುಭವಿಸುತ್ತಿದ್ದವು.

ಈಗ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು 2022ರ ಮೇ ತಿಂಗಳ ನಂತರದ ಗರಿಷ್ಠ ಮಟ್ಟವನ್ನು ತಲುಪಿವೆ.

ದೇಶದ ಇಂಧನ ಆಮದು ವೆಚ್ಚವನ್ನು ತಗ್ಗಿಸಲು, ಇಂಧನ ಬಳಕೆಯನ್ನು ತಗ್ಗಿಸಲು ಸರ್ಕಾರ ಯತ್ನ ನಡೆಸಿರುವ ಹೊತ್ತಿನಲ್ಲಿ ಈ ಬೆಲೆ ಏರಿಕೆ ಆಗಿದೆ.

ಈಗಿನ ಹೆಚ್ಚಳವನ್ನು ಅಳೆದು-ತೂಗಿ ಮಾಡಲಾಗಿದೆ. ಕಂಪನಿಗಳ ಮೇಲಿನ ಹೊರೆಯನ್ನು ತುಸು ತಗ್ಗಿಸುವ ಹಾಗೂ ಹಣದುಬ್ಬರದ ಮೇಲೆ ಹೆಚ್ಚಿನ ಪರಿಣಾಮ ಉಂಟಾಗದಂತೆ ನೋಡಿಕೊಳ್ಳುವ ಉದ್ದೇಶವು ಇದರ ಹಿಂದಿದೆ ಎಂದು ತೈಲೋತ್ಪನ್ನಗಳ ಮಾರಾಟ ಉದ್ಯಮದ ಅಧಿಕಾರಿಗಳು ಹೇಳಿದ್ದಾರೆ. ಇಂಧನದ ಸಗಟು ಬೆಲೆಯಲ್ಲಿನ ಹೆಚ್ಚಳದ ಪರಿಣಾಮವಾಗಿ ಏಪ್ರಿಲ್‌ನಲ್ಲಿ 42 ತಿಂಗಳ ಗರಿಷ್ಠ ಮಟ್ಟವಾದ ಶೇ 8.3ಕ್ಕೆ ಜಿಗಿದಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರವಣ ಕುಮಾರ್, ಮೈಸೂರು

- **ಪ್ರಶ್ನೆ: ಚಿನ್ನ ಖರೀದಿ ಕಡಿಮೆ ಮಾಡುವ ಕುರಿತಾಗಿ ಪರ-ವಿರೋಧ ಚರ್ಚೆಯಾಗುತ್ತಿದೆ. ದೇಶದ ಪ್ರಧಾನಿಯವರು ಈ ಬಗ್ಗೆ ಮನವಿ ಮಾಡಿರುವುದು ತಿಳಿದ ವಿಚಾರ. ದೇಶದ ವಿದೇಶಿ ವಿನಿಮಯ ಸಂಗ್ರಹಕ್ಕೆ ತೊಂದರೆಯಾಗುವ ಕಾರಣಕ್ಕೆ ಈ ಮನವಿ ಎಂಬುದು ತಿಳಿದ ಮಾಹಿತಿ. ಆದರೆ ಇದರ ಪರಿಣಾಮವು ಭೌತಿಕ ಚಿನ್ನ, ಸ್ವರ್ಣಾಭರಣ ಖರೀದಿಗೆ ಮಾತ್ರ ಸೀಮಿತವೇ? ಚಿನ್ನಕ್ಕೆ ಬದಲಾಗಿ ಮುಂದಿನ ವರ್ಷಗಳಲ್ಲಾದರೂ ನಾವು ಹೂಡಿಕೆ ಉದ್ದೇಶದಿಂದ ಇಟಿಎಫ್ ಅಥವಾ ಇಜಿಆರ್ ಖರೀದಿಸಬಹುದೇ?**

ಉತ್ತರ: ವಿದೇಶಿ ವಿನಿಮಯ ಸಂಗ್ರಹವನ್ನು ಉಳಿತಾಯ ಮಾಡುವ ಉದ್ದೇಶದಿಂದ ಪ್ರಧಾನಿಯವರು ದೇಶದ ಜನ ಚಿನ್ನದ ಖರೀದಿಯನ್ನು ಒಂದು ವರ್ಷದ ಮಟ್ಟಿಗೆ ಮುಂದಕ್ಕೆ ಹಾಕಬೇಕು ಎಂದು ಮನವಿ ಮಾಡಿರುವುದರ ಕುರಿತು ಪರ-ವಿರೋಧ ಚರ್ಚೆಗಳು ನಡೆದಿವೆ. ನಾವು ಚಿನ್ನ ಖರೀದಿಗೆ ಮಾಡುವ ಪಾವತಿಯು ಮುಖ್ಯವಾಗಿ ಭಾರತದ ವಿದೇಶಿ ವಿನಿಮಯ ಸಂಗ್ರಹದ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ, ರೂಪಾಯಿಯ ಅಪಮೌಲ್ಯಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದೂ ಅವರ ಕೋರಿಕೆಯ ಹಿಂದಿರುವ ಕಾರಣ.

ಭಾರತವು ವಿಶ್ವದ ಅತಿ ದೊಡ್ಡ ಚಿನ್ನ ಬಳಕೆದಾರ ರಾಷ್ಟ್ರಗಳಲ್ಲಿ ಒಂದಾಗಿದ್ದರೂ, ದೇಶಿ ಉತ್ಪಾದನೆ ಅತಿ ಕಡಿಮೆ ಇರುವುದರಿಂದ ಬಹುಪಾಲು ಚಿನ್ನವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದರ ಪರಿಣಾಮ ವಾರ್ಷಿಕವಾಗಿ ಶೇ 10ರಷ್ಟು ನಮ್ಮ ವಿದೇಶಿ ವಿನಿಮಯ ಸಂಗ್ರಹದ ಮೇಲಾಗುತ್ತದೆ. ವಿಶೇಷವಾಗಿ ಮದುವೆ, ಆಭರಣ ಖರೀದಿ, ಸಂಗ್ರಹ ಮತ್ತು ಹೂಡಿಕೆ ಉದ್ದೇಶಕ್ಕಾಗಿ ಭೌತಿಕ ಚಿನ್ನದ ಬೇಡಿಕೆ ಹೆಚ್ಚಾದಾಗ, ಆಮದು ಒತ್ತಡವೂ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ಸರ್ಕಾರ ಮತ್ತು ಆರ್ಥಿಕ ತಜ್ಞರು ಮಾಡುವ ಮನವಿಗಳು ಭೌತಿಕ ಚಿನ್ನ ಹಾಗೂ ಸ್ವರ್ಣಾಭರಣಗಳ ಅತಿಯಾದ ಖರೀದಿಯನ್ನು ನಿಯಂತ್ರಿಸುವ ಉದ್ದೇಶಕ್ಕೆ ಸಂಬಂಧಿಸಿರುತ್ತವೆಯೇ ಹೊರತು, ಸಂಪೂರ್ಣವಾಗಿ ಚಿನ್ನದ ಹೂಡಿಕೆಯನ್ನು ನಿರ್ಬಂಧಿಸುವ ಉದ್ದೇಶ ಹೊಂದಿರುವುದಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ ‘ಗೋಲ್ಡ್ ಇಟಿಎಫ್ (ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್)’ ಮತ್ತು ‘ಎಲೆಕ್ಟ್ರಾನಿಕ್ ಗೋಲ್ಡ್ ರಿಸೀಪ್ಟ್’ (ಈಜಿಆರ್) ಎಂಬ ಪರ್ಯಾಯ ಹೂಡಿಕೆ ವ್ಯವಸ್ಥೆಗಳು ಹೆಚ್ಚು ಗಮನ ಸೆಳೆಯುತ್ತಿವೆ. ಗೋಲ್ಡ್ ಇಟಿಎಫ್‌ಗಳು ಮ್ಯೂಚುವಲ್ ಫಂಡ್ ಮಾದರಿಯಲ್ಲಿ ಕಾರ್ಯನಿರ್ವಹಿಸುವ ಚಿನ್ನ ಆಧಾರಿತ ಹೂಡಿಕೆ ಸಾಧನಗಳಾಗಿದ್ದು, ಇವು ಷೇರು ಮಾರುಕಟ್ಟೆಯಲ್ಲಿ ವಹಿವಾಟಾಗುತ್ತವೆ. ಹೂಡಿಕೆದಾರರು ಡಿಮ್ಯಾಟ್ ಮತ್ತು ಟ್ರೇಡಿಂಗ್ ಖಾತೆಯ ನೆರವಿನಿಂದ ಷೇರುಗಳನ್ನು ಖರೀದಿಸುವ ರೀತಿಯಲ್ಲೇ ಇವುಗಳನ್ನು ಖರೀದಿಸಬಹುದು ಮತ್ತು ಮಾರಾಟ ಮಾಡಬಹುದು. ಇದರ ಭಾಗವಾಗಿ ನಮ್ಮ ವಹಿವಾಟಿಗೆ ಸಂಬಂಧಿಸಿ, ನಾವು ಹೂಡಿಕೆ ಮಾಡಿದ ಫಂಡ್ ಕಂಪನಿಗಳು ಚಿನ್ನವನ್ನು ಆಯಾ ದಿನ ಭೌತಿಕವಾಗಿ ಖರೀದಿ-ಮಾರಾಟ ಮಾಡುತ್ತವೆ. ಮತ್ತೊಂದೆಡೆ, ಇಜಿಆರ್‌ಗಳು ‘ಸೆಬಿ’ ನಿಯಂತ್ರಣದ ಅಡಿ ಕಾರ್ಯನಿರ್ವಹಿಸುವ ಡಿಜಿಟಲ್ ಚಿನ್ನದ ರಸೀದಿಗಳಾಗಿವೆ. ಇವುಗಳ ಬೆಲೆ ಚಿನ್ನದ ಶುದ್ಧತೆಯನ್ನು ಪ್ರತಿನಿಧಿಸುತ್ತದೆ ಮತ್ತು ಇವು ಷೇರುಪೇಟೆಯಲ್ಲಿ ವಹಿವಾಟಾಗುತ್ತವೆ. ಇದನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ನಿರ್ದಿಷ್ಟ ಪ್ರಕ್ರಿಯೆಯ ಮೂಲಕ ಭೌತಿಕ ಚಿನ್ನವಾಗಿಯೂ ಪರಿವರ್ತಿಸಿಕೊಳ್ಳುವ ಅವಕಾಶ ಹೂಡಿಕೆದಾರರಿಗೆ ಇದೆ. ಹೀಗಾಗಿ ಹೂಡಿಕೆದಾರರ ಹೆಸರಲ್ಲಿ ಖರೀದಿಸಿರುವ ಚಿನ್ನವನ್ನು ಸಂಗ್ರಹಿಸಿಡಬೇಕಾಗುತ್ತದೆ ಮತ್ತು ಇದು ವಿದೇಶಿ ವಿನಿಮಯದ ಮೇಲೆ ಪರಿಣಾಮ ಬೀರುತ್ತದೆ. ಇದಲ್ಲದೆ ಗೋಲ್ಡ್ ಫಂಡ್‌ಗಳೂ ಇದೇ ರೀತಿಯ ಆಸ್ತಿಗಳ ಮೇಲೆ ಹೂಡಿಕೆ ಮಾಡುವ ಕಾರಣ ಅಲ್ಲೂ ಪರೋಕ್ಷವಾಗಿ ಕೊನೆಯ ಹಂತದಲ್ಲಿ ಚಿನ್ನದ ಖರೀದಿಯಾಗುತ್ತದೆ.

ನಿಮ್ಮ ಮುಂದಿನ ಹೂಡಿಕೆ ಉದ್ದೇಶಕ್ಕಾಗಿ ಹೇಳುವುದಾದರೆ, ಭೌತಿಕ ಚಿನ್ನದೊಂದಿಗೆ ಹೋಲಿಸಿದರೆ, ಇಟಿಎಫ್ ಮತ್ತು ಇಜಿಆರ್ ಎರಡರಲ್ಲೂ ಹಲವು ಪ್ರಯೋಜನಗಳಿವೆ. ಮನೆಗಳಲ್ಲಿ ಚಿನ್ನವನ್ನು ಸಂಗ್ರಹಿಸುವ ಅಗತ್ಯವಿಲ್ಲದ ಕಾರಣ ಸುರಕ್ಷತೆ ಮತ್ತು ಲಾಕರ್ ವೆಚ್ಚದ ಸಮಸ್ಯೆಗಳು ಕಡಿಮೆ. ಆಭರಣ ರೂಪದಲ್ಲಿ ಚಿನ್ನ ಖರೀದಿಸಿದಾಗ ಮೇಕಿಂಗ್ ವೆಚ್ಚ, ವೇಸ್ಟೇಜ್ ವೆಚ್ಚ, ಶುದ್ಧತೆ ಪರೀಕ್ಷೆ ಮತ್ತು ಮರುಮಾರಾಟದ ಕಡಿತದಂತಹ ಸಮಸ್ಯೆಗಳು ಎದುರಾಗುತ್ತವೆ. ಆದರೆ ಇಟಿಎಫ್ ಮತ್ತು ಇಜಿಆರ್‌ಗಳಲ್ಲಿ ಇವು ಬಹುತೇಕ ಇರುವುದಿಲ್ಲ. ಮಾರುಕಟ್ಟೆ ಆಧಾರಿತ ಪಾರದರ್ಶಕ ದರದಲ್ಲಿ ಖರೀದಿ ಮತ್ತು ಮಾರಾಟ ಸಾಧ್ಯವಾಗುವುದರಿಂದ ಹೂಡಿಕೆದಾರರಿಗೆ ಸ್ಪಷ್ಟ ಬೆಲೆ ಗೊತ್ತಾಗುತ್ತದೆ. ಹೊಸ ವ್ಯವಸ್ಥೆಯಲ್ಲಿ ‘ಒಂದು ದೇಶ – ಒಂದು ಬೆಲೆ’ ಮಾದರಿಯ ಏಕೀಕೃತ ದರ ವ್ಯವಸ್ಥೆ ರೂಪುಗೊಳ್ಳುತ್ತಿರುವುದು ಮತ್ತೊಂದು ವಿಶೇಷ. ನಗದೀಕರಣವು ಟಿ+1 ಆಧಾರದ ಮೇಲೆ ವೇಗವಾಗಿ ಆಗುತ್ತದೆ ಹಾಗೂ ಡಿಮ್ಯಾಟ್ ಖಾತೆಯಲ್ಲಿ ಸುರಕ್ಷಿತವಾಗಿ ಉಳಿಯುತ್ತದೆ.

ಇಟಿಎಫ್ ಮತ್ತು ಇಜಿಆರ್ ನಡುವೆಯೂ ಕೆಲವು ವ್ಯತ್ಯಾಸಗಳಿವೆ. ಗೋಲ್ಡ್ ಇಟಿಎಫ್‌ಗಳಲ್ಲಿ ಸಾಮಾನ್ಯವಾಗಿ ನಿಧಿ ನಿರ್ವಹಣಾ ವೆಚ್ಚ ಇರುತ್ತದೆ. ಏಕೆಂದರೆ ಅವು ಮ್ಯೂಚುವಲ್ ಫಂಡ್ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತವೆ ಮತ್ತು ಅವುಗಳ ಮೂಲಕ ಭೌತಿಕ ಚಿನ್ನ ಖರೀದಿ-ಮಾರಾಟ ಮಾಡುತ್ತವೆ. ಇಜಿಆರ್‌ಗಳಲ್ಲಿ ಅಗತ್ಯ ಎದುರಾದಾಗ ಹೂಡಿಕೆದಾರರಿಗೆ ಭೌತಿಕ ಚಿನ್ನಕ್ಕೆ ಪರಿವರ್ತನೆ ಮಾಡುವ ಆಯ್ಕೆಯೂ ಲಭ್ಯವಿರುತ್ತದೆ. ಜುವೆಲ್ಲರ್‌ಗಳು, ಬಂಗಾರದ ವ್ಯಾಪಾರಿಗಳು ಹಾಗೂ ದೊಡ್ಡ ಹೂಡಿಕೆದಾರರಿಗೆ ಇಜಿಆರ್ ವ್ಯವಸ್ಥೆ ಹೆಚ್ಚು ಅನುಕೂಲಕರವಾಗಬಹುದು. ಸಣ್ಣ ಹೂಡಿಕೆದಾರರೂ ಇದರಲ್ಲಿ ಕಡಿಮೆ ಪ್ರಮಾಣದಿಂದಲೇ ಹೂಡಿಕೆ ಆರಂಭಿಸಬಹುದು.

ಒಟ್ಟಾರೆ, ಈ ಎರಡೂ ಹೂಡಿಕೆ ವ್ಯವಸ್ಥೆಗಳು ನಮ್ಮ ಪಾರಂಪರಿಕ ಚಿನ್ನದ ಹೂಡಿಕೆಯನ್ನು ಆಧುನಿಕ ಮಾರುಕಟ್ಟೆ ವ್ಯವಸ್ಥೆಯೊಂದಿಗೆ ಸಂಯೋಜಿಸುವ ಪ್ರಯತ್ನವಾಗಿದ್ದು, ಭವಿಷ್ಯದಲ್ಲಿ ಚಿನ್ನದ ಹೂಡಿಕೆ ಕ್ಷೇತ್ರದಲ್ಲಿ ಮಹತ್ವದ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಾಗಿದೆ. ❖

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ದೇವಸ್ಥಾನದ ಚಿನ್ನ ನಗದೀಕರಣ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): ದೇವಸ್ಥಾನದ ಟ್ರಸ್ಟ್‌ಗಳು ಅಥವಾ ದೇಶದ ಯಾವುದೇ ಧಾರ್ಮಿಕ ಸಂಸ್ಥೆಗಳ ಬಳಿ ಇರುವ ಚಿನ್ನವನ್ನು ನಗದೀಕರಿಸುವ ಯೋಜನೆಯನ್ನು ಜಾರಿಗೆ ತರುವ ಆಲೋಚನೆ ತನಗಿಲ್ಲ ಎಂದು ಕೇಂದ್ರ ಸರ್ಕಾರವು ಮಂಗಳವಾರ ಸ್ಪಷ್ಟಪಡಿಸಿದೆ.

ಈ ರೀತಿಯ ಆಲೋಚನೆ ಇದೆ ಎಂಬ ಊಹಾಪೋಹಗಳನ್ನು ಅದು ತಳ್ಳಿಹಾಕಿದೆ. ‘ಇವು ಸಂಪೂರ್ಣವಾಗಿ ಸುಳ್ಳು, ತಪ್ಪುದಾರಿಗೆ ಎಳೆಯುವಂಥವು’ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸ್ಪಷ್ಟನೆ ನೀಡಿದೆ.

ದೇವಸ್ಥಾನಗಳ ಗೋಪುರದ ಮೇಲೆ, ಬಾಗಿಲುಗಳ ಮೇಲೆ ಅಥವಾ ದೇವಸ್ಥಾನದ ಇತರ ರಚನೆಗಳ ಮೇಲೆ ಇರುವ ಚಿನ್ನದ ಹೊದಿಕೆಯನ್ನು ‘ದೇಶದ ಮೀಸಲು ಚಿನ್ನ’ ಎಂದು ಪರಿಗಣಿಸಲಾಗುತ್ತದೆ ಎಂಬ ಪ್ರತಿಪಾದನೆಗಳು ಸುಳ್ಳು, ಸಂಪೂರ್ಣವಾಗಿ ಆಧಾರರಹಿತ ಎಂದು ಸ್ಪಷ್ಟನೆಯಲ್ಲಿ ಹೇಳಲಾಗಿದೆ.

ಇಂತಹ ಸುಳ್ಳುಗಳನ್ನು ಜನ ನಂಬಬಾರದು, ಇಂಥವುಗಳನ್ನು ಹಂಚಿಕೊಳ್ಳಬಾರದು ಎಂದು ಅದು ಹೇಳಿದೆ.

ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಇಂತಹ ಮಾಹಿತಿಗಳನ್ನು ಹಂಚಿಕೊಳ್ಳುವುದರಿಂದ ಜನರಲ್ಲಿ ಅನಗತ್ಯ ಗೊಂದಲ ಸೃಷ್ಟಿಯಾಗುತ್ತದೆ, ಇತರರನ್ನು ತಪ್ಪುದಾರಿಗೆ ಎಳೆದಂತಾಗುತ್ತದೆ ಎಂದು ಅದು ತಿಳಿಸಿದೆ.

ಸರ್ಕಾರದ ನೀತಿ ನಿರ್ಧಾರಗಳಿಗೆ ಸಂಬಂಧಿಸಿದ ವಿಚಾರಗಳನ್ನು ಅಧಿಕೃತ ಪತ್ರಿಕಾ ಪ್ರಕಟಣೆ ಮೂಲಕ, ಸರ್ಕಾರದ ಜಾಲತಾಣಗಳ ಮೂಲಕ ಹಾಗೂ ಅಧಿಕೃತ ಸಂವಹನ ವೇದಿಕೆಗಳ ಮೂಲಕವೇ ಹಂಚಿಕೊಳ್ಳಲಾಗುತ್ತದೆ ಎಂದು ಸಚಿವಾಲಯವು ಹೇಳಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1600 (1600)
ಸೋಯಾ (ರಿಫೈನ್ಡ್)	₹1490 (1490)
ಸೂರ್ಯಕಾಂತಿ (ರಿಫೈನ್ಡ್)	₹1630 (1630)
ಪಾಮೋಲಿನ್	₹1480 (1480)

ಏರ್‌ಟೆಲ್‌ನಿಂದ ಆದ್ಯತೆಯ ಪೋಸ್ಟ್‌ಪೇಯ್ಡ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರಸಂಪರ್ಕ ಸೇವಾ ವಲಯದಲ್ಲಿ ದೇಶದ ಎರಡನೆಯ ಅತಿದೊಡ್ಡ ಕಂಪನಿಯಾದ ಏರ್‌ಟೆಲ್ ತನ್ನ ಗ್ರಾಹಕರಿಗೆ ‘ಪ್ರಿಯಾರಿಟಿ ಪೋಸ್ಟ್‌ಪೇಯ್ಡ್ 5ಜಿ’ ಸೌಲಭ್ಯವನ್ನು ಆರಂಭಿಸಿದೆ.

ಇದನ್ನು ಬಳಸುವವರಿಗೆ ಹೆಚ್ಚು ವೇಗವಾದ ಹಾಗೂ ವಿಶ್ವಾಸಾರ್ಹವಾದ ದೂರಸಂಪರ್ಕ ಸೇವೆಗಳು ಸಂಪರ್ಕ ದಟ್ಟಣೆ ಹೆಚ್ಚಿರುವ ಹೊತ್ತಿನಲ್ಲಿಯೂ ಲಭ್ಯವಾಗಲಿವೆ ಎಂದು ಕಂಪನಿ ಹೇಳಿದೆ.

ಈ ಬಗೆಯಲ್ಲಿ ಸೇವೆ ಒದಗಿಸಲು ಏರ್‌ಟೆಲ್ ಕಂಪನಿಯು ತನ್ನ ದೂರಸಂಪರ್ಕ ಜಾಲದ 1 ಭಾಗವನ್ನು ಈ ಗ್ರಾಹಕರಿಗಾಗಿ ಮೀಸಲಿಡಲಿದೆ.

‘ಸಂಚಾರ ದಟ್ಟಣೆಯಲ್ಲಿ ಸಿಲುಕಿಕೊಂಡಾಗ ಗ್ರಾಹಕರಿಗೆ ಕರೆ ಮಾಡುವ ಸಂದರ್ಭ ಎದುರಾದಾಗ, ಜನದಟ್ಟಣೆ ಹೆಚ್ಚಿದ್ದ ಜಾಗದಲ್ಲಿ ವಿಡಿಯೊ ವೀಕ್ಷಿಸುವಾಗ ಅಥವಾ ಕ್ಯಾಬ್ ಕಾಯ್ದಿರಿಸಲು ಈ ಸೌಲಭ್ಯ ಹೆಚ್ಚು ಉತ್ತಮವಾದ, ವಿಶ್ವಾಸಾರ್ಹವಾದ ಅನುಭವ ಒದಗಿಸಲಿದೆ’ ಎಂದು ಏರ್‌ಟೆಲ್ ಸಿಇಒ ಶಾಶ್ವತ್ ಶರ್ಮಾ ಹೇಳಿದ್ದಾರೆ.

ಕರ್ಣಾಟಕ ಬ್ಯಾಂಕ್: ₹1,310 ಕೋಟಿ ಲಾಭ

ಮಂಗಳೂರು: 2025-26ನೇ ಆರ್ಥಿಕ ವರ್ಷದಲ್ಲಿ ಕರ್ಣಾಟಕ ಬ್ಯಾಂಕ್ ₹1,310.50 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಬ್ಯಾಂಕ್ ಆರ್ಥಿಕ ವರ್ಷವೊಂದರಲ್ಲಿ ದಾಖಲಿಸಿದ ಈವರೆಗಿನ ಗರಿಷ್ಠ ನಿವ್ವಳ ಲಾಭ ಇದಾಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 3ರಷ್ಟು ಏರಿಕೆಯಾಗಿದೆ.



ರಾಘವೇಂದ್ರ ಎಸ್. ಭಟ್

2025-26ನೇ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ಈವರೆಗಿನ ಗರಿಷ್ಠ ₹1,92,118.67 ಕೋಟಿ ವಹಿವಾಟು ನಡೆಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ (₹1,82,766.21 ಕೋಟಿ) ವಹಿವಾಟಿನಲ್ಲಿ ಶೇ 5.12ರಷ್ಟು ಏರಿಕೆ ದಾಖಲಾಗಿದೆ ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಠೇವಣಿ ಶೇ 3.79ರಷ್ಟು ಏರಿಕೆಯಾಗಿ ₹1,08,778.75 ಕೋಟಿಗೆ ಹಾಗೂ ಸಾಲ ನೀಡಿಕೆ ಶೇ 6.90ರಷ್ಟು ಏರಿಕೆಯಾಗಿ ₹83,339.92 ಕೋಟಿಗೆ ತಲುಪಿದೆ. ಸಾಲ ವಸೂಲಾತಿಯಲ್ಲೂ ಗಮನಾರ್ಹ ಏರಿಕೆಯಾಗಿದ್ದು, ಒಟ್ಟಾರೆ ಅನುತ್ಪಾದಕ ಆಸ್ತಿ ಪ್ರಮಾಣ ಹಿಂದಿನ ವರ್ಷದ ಶೇ 3.32ರಿಂದ ಶೇ 2.78ಕ್ಕೆ ಹಾಗೂ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣವು ಶೇ 0.98ಕ್ಕೆ (ಹಿಂದಿನ ವರ್ಷ ಶೇ 1.31) ಇಳಿಕೆಯಾಗಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಕೊನೆಯ ತ್ರೈಮಾಸಿಕದಲ್ಲಿ ಬ್ಯಾಂಕ್ ₹408.19 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕಕ್ಕೆ (₹252.37 ಕೋಟಿ) ಹೋಲಿಸಿದರೆ ಶೇ 61.74ರಷ್ಟು ಏರಿಕೆ ದಾಖಲಾಗಿದೆ ಎಂದಿದೆ.

ಕರ್ಣಾಟಕ ಬ್ಯಾಂಕ್‌ನ ಎಂ.ಡಿ ಮತ್ತು ಸಿಇಒ ರಾಘವೇಂದ್ರ ಎಸ್. ಭಟ್ ಅವರು, ‘ಅಭಿವೃದ್ಧಿ ಯೋಜನೆಗಳ ಮೇಲೆ ಗಮನ ಕೇಂದ್ರೀಕರಿಸಿ, ಸ್ಥಿರವಾದ ವ್ಯವಹಾರ ಮಾದರಿ ಮತ್ತು ದಕ್ಷ ಕಾರ್ಯಾಚರಣೆ ಮೂಲಕ ದಾಖಲೆ ಪ್ರಮಾಣದ ವಹಿವಾಟು ಮತ್ತು ನಿವ್ವಳ ಲಾಭ ದಾಖಲಿಸಲು ಸಾಧ್ಯವಾಗಿದೆ’ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ		ಶಿವಮೊಗ್ಗ			
ಆಪಿ	52439-52869	ಸರಕು/ಹಸ	56399-93729	ಕೆಂಪುಗೋಟು	33699-36699
ಬೆಟ್ಟೆ	37819-38359	ಬೆಟ್ಟೆ	53099-65300	ರಾಶಿ	46099-52299
ಕೆಂಪುಗೋಟು	32009-32410	ರಾಶಿಇಡಿ	40900-53899	ತಟ್ಟಿಬೆಟ್ಟೆ	38869-50469
ರಾಶಿ	51929-52399	ಗೊರಬಲು	20511-42511	**ಶಿರಸಿ**	
ಸಾಗರ		**ಸಿದ್ದಾಪುರ**		ಬೆಟ್ಟೆ	35168-51669
ಬಿಳಿಗೋಟು	30666-31830	ಬಿಳಿಗೋಟು	26109-34889	ಬಿಳಿಗೋಟು	25899-36900
ಚಾಲಿ	39599-40630	ಚಾಲಿ	38609-46839	ಚಾಲಿ	44599-48099
ರಾಶಿ	44189-50609	ಕೋಕ	21699-32389	ಕೆಂಪುಗೋಟು	26219-37499
ಸಿಪ್ಪೆಗೋಟು	18889-22089			ರಾಶಿ	52299-53699

ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಕುರಿತಂತೆ ಮಾತುಕತೆ

‘ನಾರ್ಡಿಕ್’ ಪ್ರಧಾನಿಗಳ ಜೊತೆ ಮೋದಿ ಚರ್ಚೆ

ಒಸ್ಲೊ(ನಾರ್ವೆ)(ಪಿಟಿಐ): ಯುರೋಪ್ ರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಐಸ್‌ಲ್ಯಾಂಡ್, ಫಿನ್ಲೆಂಡ್ ಹಾಗೂ ಡೆನ್ಮಾರ್ಕ್ ದೇಶಗಳ ಪ್ರಧಾನಿಯವರೊಂದಿಗೆ ಪ್ರತ್ಯೇಕ ಸಭೆ ನಡೆಸಿ, ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಚರ್ಚಿಸಿದರು.

ಭಾರತ-ನಾರ್ಡಿಕ್ 3ನೇ ಶೃಂಗಸಭೆ ಸಂದರ್ಭದಲ್ಲಿ ಈ ಸಭೆಗಳನ್ನು ನಡೆಸಿದ ಮೋದಿ, ಶುದ್ಧ ಇಂಧನ, ವ್ಯಾಪಾರ, ಸುಸ್ಥಿರತೆ ಹಾಗೂ ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಕುರಿತಂತೆ ಚರ್ಚೆ ನಡೆಸಿದರು.

‘ಐಸ್‌ಲ್ಯಾಂಡ್ ಪ್ರಧಾನಿ ಕ್ರಿಸ್ಟ್ರನ್ ಫ್ರೊಸ್ತದೊಟ್ಟಿರ್, ಫಿನ್ಲೆಂಡ್‌ನ ಪೆಟೇರಿ ಒರ್ಪೊ ಹಾಗೂ ಡೆನ್ಮಾರ್ಕ್‌ನ ಹಂಗಾಮಿ ಪ್ರಧಾನಿ ಮೆಟ್ಟೆ ಫ್ರೆಡೆರಿಕ್‌ಸನ್ ಅವರೊಂದಿಗೆ ನಡೆಸಿದ ಸಭೆಯಲ್ಲಿ, ಭಾರತ ಹಾಗೂ ನಾರ್ಡಿಕ್ ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಕುರಿತು ವ್ಯಾಪಕ ಚರ್ಚೆ ನಡೆಸಲಾಯಿತು’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಮೋದಿ ಪೋಸ್ಟ್ ಮಾಡಿದ್ದಾರೆ.

ಪತ್ರಕರ್ತೆ ಪ್ರಶ್ನೆಗೆ ಉತ್ತರಿಸದ ಮೋದಿ

ನವದೆಹಲಿ: ನಾರ್ವೆ ಪ್ರವಾಸದ ವೇಳೆ, ಕೆಲ ಪ್ರಶ್ನೆಗಳಿಗೆ ಉತ್ತರಿಸುವಂತೆ ಪತ್ರಕರ್ತೆಯೊಬ್ಬರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ. ಆದರೆ, ಮೋದಿ ಅವರು ಯಾವುದೇ ಪ್ರಶ್ನೆಗೆ ಉತ್ತರಿಸದೇ ಸಭಾಂಗಣದಿಂದ ನಿರ್ಗಮಿಸಿದ್ದಾರೆ. ಅವರ ಈ ನಡೆ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ.

ರಾಜಧಾನಿ ಒಸ್ಲೊದಲ್ಲಿ ನಾರ್ವೆ ಪ್ರಧಾನಿ ಜೋನಸ್ ಗರ್ ಸ್ಟೋರ್ ಅವರೊಂದಿಗೆ ಮೋದಿ ಮಾತುಕತೆ ನಡೆಸಿದ ಬಳಿಕ, ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದಾರೆ. ನಂತರ, ವೇದಿಕೆಯಿಂದ ಇಳಿಯುವ ವೇಳೆ, ಮೋದಿ ಅವರನ್ನು ಉದ್ದೇಶಿಸಿ ಪತ್ರಕರ್ತೆ ಹೆಲ್ ಲಿಂಗ್ ಅವರು, ‘ಪ್ರಧಾನಿ ಮೋದಿಯವರೇ, ವಿಶ್ವದ ಅತ್ಯಂತ ಮುಕ್ತ ಪತ್ರಿಕಾರಂಗ ನಮ್ಮದು. ನಾವು ಕೇಳುವ ಕೆಲ ಪ್ರಶ್ನೆಗಳಿಗೆ ಏಕೆ ನೀವು ಉತ್ತರಿಸುವುದಿಲ್ಲ’ ಎಂದು ಹೇಳುತ್ತಿರುವುದು ವಿಡಿಯೊದಲ್ಲಿದೆ.

ಇದಾದ ಬಳಿಕ ಅವರು, ‘ಭಾರತದ ಪ್ರಧಾನಿ ನರೇಂದ್ರ ಮೋದಿಯವರು ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಅವರಿಂದ ನಾನು ಇಂತಹ ನಡೆ ನಿರೀಕ್ಷಿಸಿರಲಿಲ್ಲ. ನಮ್ಮ ಕೆಲಸವೇ ಅಧಿಕಾರಸ್ಥರನ್ನು ಪ್ರಶ್ನೆ ಮಾಡುವುದು’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಮ್ಮ ಪ್ರಶ್ನೆಗಳಿಗೆ ಉತ್ತರಿಸುವಂತೆ ಅವರು ಮೋದಿಯವರಿಗೆ ಮನವಿ ಮಾಡುತ್ತಿದ್ದ ದೃಶ್ಯಗಳಿರುವ ವಿಡಿಯೊವನ್ನು ಕೂಡ ಲಿಂಗ್ ಹಂಚಿಕೊಂಡಿದ್ದಾರೆ.

‘ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕಕ್ಕೆ ಸಂಬಂಧಿಸಿ ನಾರ್ವೆ ಮೊದಲ ಸ್ಥಾನದಲ್ಲಿದ್ದರೆ, ಭಾರತ 157ನೇ ಸ್ಥಾನದಲ್ಲಿದೆ. ಈ ವಿಚಾರದಲ್ಲಿ ಭಾರತವು ಪ್ಯಾಲೆಸ್ಟೀನ್, ಯುಎಇ ಹಾಗೂ ಕ್ಯೂಬಾ ಜೊತೆ ಪೈಪೋಟಿ ಮಾಡುತ್ತಿದೆ’ ಎಂದೂ ಅವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

ಆಹ್ವಾನ: ಈ ಬೆಳವಣಿಗೆ ಬೆನ್ನಲ್ಲೇ, ಒಸ್ಲೊದಲ್ಲಿರುವ ಭಾರತದ ರಾಯಭಾರ ಕಚೇರಿಯು, ವಿದೇಶಾಂಗ ಸಚಿವಾಲಯ ಆಯೋಜಿಸಿದ್ದ ಸುದ್ದಿಗೋಷ್ಠಿಗೆ ಲಿಂಗ್ ಅವರನ್ನು ಆಹ್ವಾನಿಸಿತ್ತು.

‘ವಿದೇಶದ ನಾಯಕರೊಂದಿಗೆ ಸಭೆ ನಡೆಸುವುದಕ್ಕೂ ಮೊದಲು ಅಥವಾ ಸಭೆ ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುವ ವೇಳೆ ಪ್ರಧಾನಿ ಸಾಮಾನ್ಯವಾಗಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ’ ಎಂದು ಸಚಿವಾಲಯ ಹೇಳಿದೆ.


ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್ ದಾಂಪತ್ಯಕ್ಕೆ 40 ವರ್ಷ

ಶಿವರಾಜ್‌ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್ ದಾಂಪತ್ಯಕ್ಕೆ ಕಾಲಿಟ್ಟು 40 ವರ್ಷಗಳು ಕಳೆದಿವೆ. ಈ ಸಂಭ್ರಮದಲ್ಲಿರುವ ಶಿವರಾಜ್‌ಕುಮಾರ್ ತಮ್ಮ ದಾಂಪತ್ಯದ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದಾರೆ.

'ನಲವತ್ತು ಸಾಲದು, ನೂರು ಸಾಲದು, ಏಳು ಜನುಮವೂ ಸಾಲದು, ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು ಗೀತಾ' ಎಂದು ಅವರು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ಅಭಿಮಾನಿಗಳು, ನಟ–ನಟಿಯರು ಶಿವಣ್ಣ ದಂಪತಿಗೆ ಶುಭ ಕೋರಿದ್ದಾರೆ.

ಶಿವರಾಜ್‌ಕುಮಾರ್ 1986ರ ಮೇ 19ರಂದು ಗೀತಾ ಅವರನ್ನು ವಿವಾಹವಾಗಿದ್ದರು. ಇವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಶಿವಣ್ಣ ತಮ್ಮ ಪತ್ನಿ ಹೆಸರಿನಲ್ಲಿ 'ಗೀತಾ ಪಿಕ್ಚರ್ಸ್' ಪ್ರಾರಂಭಿಸಿದ್ದರು. 'ವೇದ' ಚಿತ್ರದ ಮೂಲಕ ನಿರ್ಮಾಪಕಿಯಾಗಿ ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಗೀತಾ ಶಿವರಾಜ್‌ಕುಮಾರ್, ಪುತ್ರಿ ನಿವೇದಿತಾ ಅವರನ್ನು ಚಿತ್ರರಂಗಕ್ಕೆ ಕರೆತಂದಿದ್ದಾರೆ.

ಈ ಜೋಡಿಯ 40 ವರ್ಷಗಳ ಖುಷಿಯ ಬೆನ್ನಲ್ಲೇ ಗೀತಾ ಪಿಕ್ಚರ್ಸ್‌ನಿಂದ ಮತ್ತೊಂದು ಸಿನಿಮಾ ನಿರ್ಮಾಣದ ಸುಳಿವು ಸಿಕ್ಕಿದೆ. ಈ ಹಿಂದೆ ಶಿವಣ್ಣಗೆ 'ಭಜರಂಗಿ', 'ವೇದ' ಸೇರಿದಂತೆ ಕೆಲ ಚಿತ್ರಗಳನ್ನು ನಿರ್ದೇಶಿಸಿದ್ದ ಎ.ಹರ್ಷ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ಈ ಕಥೆಗೆ ಅಂತಿಮ ರೂಪ ನೀಡಲಾಗುತ್ತಿದ್ದು, ಈ ವರ್ಷದಿಂದಲೇ ಚಿತ್ರೀಕರಣ ಪ್ರಾರಂಭವಾಗಲಿದೆ. ಸದ್ಯ ಪವನ್ ಒಡೆಯರ್ ನಿರ್ದೇಶನದ 'ಬೇಲ್' ಚಿತ್ರೀಕರಣ ಮುಗಿಸಿರುವ ಶಿವಣ್ಣ 'ಟೂರಿಸ್ಟ್ ಫ್ಯಾಮಿಲಿ' ತಮಿಳು ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಜೂನ್ 19ಕ್ಕೆ 'ಪ್ರಜಾವಾಣಿ ಸಿನಿ ಸಮ್ಮಾನ'



4ನೇ ಆವೃತ್ತಿ

ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಚಂದನವನದ ಪ್ರತಿಭೆಗಳನ್ನು ಗುರುತಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಸಮಾರಂಭ ಜೂನ್ 19ರಂದು ನಡೆಯಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿದ್ದು, ತೀರ್ಪುಗಾರರು ನಾಮನಿರ್ದೇಶನಗಳನ್ನು ಅಂತಿಮಗೊಳಿಸಿದ್ದಾರೆ. ಇವುಗಳಿಗೆ 'ಸಿನಿ ಸಮ್ಮಾನ'ದ ಮುಖ್ಯತೀರ್ಪುಗಾರರು ಅಂತಿಮ ಮುದ್ರೆ ಒತ್ತಲಿದ್ದಾರೆ. ಮಾಸಾಂತ್ಯದೊಳಗೆ ನಾಮನಿರ್ದೇಶನಗಳು ಪ್ರಕಟವಾಗಲಿವೆ.

ನಾಮನಿರ್ದೇಶನಗಳ ಪೈಕಿ ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ.

ಸಿನಿ ಸಮ್ಮಾನದಲ್ಲಿ 'ಪ್ರತಿಭಾನ್ವಿತ ಕಲಾವಿದರು' ವಿಭಾಗದಲ್ಲಿ 15 ಪ್ರಶಸ್ತಿಗಳು, 'ಜನಮೆಚ್ಚಿದ ವಿಭಾಗ'ದಲ್ಲಿ ನಾಲ್ಕು ಪ್ರಶಸ್ತಿಗಳು, 'ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು' ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ 'ಜೀವಮಾನ ಸಾಧನೆ' ಪುರಸ್ಕಾರ ಇರಲಿವೆ. ಜೊತೆಗೆ ಸಂಪಾದಕೀಯ ಆಯ್ಕೆ ವಿಭಾಗದಲ್ಲಿ 'ಸಿನಿ ಧ್ರುವತಾರೆ', 'ನವತಾರೆ (ನಟ–ನಟಿ)' ಹಾಗೂ 'ವರ್ಷದ ಅತ್ಯುತ್ತಮ ಸಾಧನೆ' ಎಂಬ ನಾಲ್ಕು ಪ್ರಶಸ್ತಿಗಳಿವೆ.

ಶೀಘ್ರದಲ್ಲೇ ನಾಮನಿರ್ದೇಶನ ಪ್ರಕಟ


2ನೇ ಆವೃತ್ತಿ
ಡಾಲಿ ಧನಂಜಯ


3ನೇ ಆವೃತ್ತಿ
ಧ್ರುವ ಸರ್ಜಾ

'ವರ್ಷದ ಅತ್ಯುತ್ತಮ ಸಾಧನೆ' ಪ್ರಶಸ್ತಿ ಪಡೆದವರು

ಜೂನ್ 5ಕ್ಕೆ ಮಿಥುನಂ

ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಗೂ ಲಕ್ಷ್ಮೀ ನಟನೆಯ 'ಮಿಥುನಂ' ಸಿನಿಮಾ ಜೂನ್ 5ರಂದು ಕನ್ನಡದಲ್ಲಿ ಬಿಡುಗಡೆಯಾಗಲಿದೆ.

ತನಿಕೆಳ್ಳ ಭರಣಿ ನಿರ್ದೇಶನದ ತೆಲುಗು ಸಿನಿಮಾದ ಕನ್ನಡ ಅವತರಣಿಕೆ ಇದಾಗಿದೆ. ಮಧುಸೂದನ್ ಹವಾಲ್ದಾರ್ ಹಾಗೂ ತ್ರಿವಿಕ್ರಮ ಜೋಶಿ ಅವರ ಸಾರಥ್ಯದಲ್ಲಿ ಈ ಚಿತ್ರದ ಕನ್ನಡದ ಅವತರಣಿಕೆ ಸಿದ್ಧವಾಗಿದೆ. ಶ್ರೀದೇವಿ ಶ್ರೀನಿವಾಸ್ ಈ ಚಿತ್ರವನ್ನು ಅರ್ಪಿಸುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಕನ್ನಡ ಅವತರಣಿಕೆಯ ಟೀಸರ್ ಬಿಡುಗಡೆಯಾಗಿದೆ. ವಿದೇಶದಲ್ಲಿರುವ ಮಕ್ಕಳು ತಂದೆ ತಾಯಿಯನ್ನು ವೃದ್ಧಾಪ್ಯದ ಸಮಯದಲ್ಲೂ ನೋಡಿಕೊಳ್ಳಲು ಬರದೇ ಇದ್ದಾಗ ಆ ತಂದೆ ತಾಯಿ ಪರಿಸ್ಥಿತಿ ಹೇಗಿರುತ್ತದೆ ಎನ್ನುವುದು ಈ ಚಿತ್ರದ ಕಥಾ ಸಾರಾಂಶವಾಗಿದೆ.


'ಈ ಚಿತ್ರ ಹದಿನೈದು ವರ್ಷಗಳ ಹಿಂದೆ ಬಿಡುಗಡೆಯಾಗಿತ್ತು. ತನಿಕೆಳ್ಳ ಭರಣಿ ಅವರ ಬಳಿ ಈ ಸಿನಿಮಾದ ಹಕ್ಕುಗಳನ್ನು ಕೇಳಿದಾಗ ನಿರ್ಮಾಪಕರನ್ನು ಕೇಳಲು ಸೂಚಿಸಿದರು. ನಿರ್ಮಾಪಕರು ಕನ್ನಡದಲ್ಲಿ ಬಿಡುಗಡೆ ಮಾಡುವುದಕ್ಕೆ ಖುಷಿಯಿಂದ ಹಕ್ಕು ನೀಡಿದರು. ಚಿತ್ರವನ್ನು ಆರು ತಿಂಗಳಲ್ಲಿ ಬಿಡುಗಡೆ ಮಾಡಬೇಕು ಮತ್ತು ಎಸ್‌ಪಿಬಿ ಅವರ ದನಿಗೆ ಧಕ್ಕೆ ಬಾರದಂತೆ ಡಬ್ಬಿಂಗ್ ಮಾಡಿಸಬೇಕು ಎಂಬ ಷರತ್ತು ಹಾಕಿದ್ದರು' ಎಂದು ಮಧುಸೂದನ್ ಹವಾಲ್ದಾರ್ ತಿಳಿಸಿದರು.


ಲಕ್ಷ್ಮೀ, ಎಸ್‌.ಪಿ.ಬಾಲಸುಬ್ರಹ್ಮಣ್ಯಂ

ನಾನಾವತಾರಗಳಲ್ಲಿ 'ಪೆದ್ದಿ' ರಾಮ್‌ಚರಣ್

ರಾಮ್‌ಚರಣ್, ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿರುವ ಪ್ಯಾನ್ ಇಂಡಿಯಾ ಸಿನಿಮಾ 'ಪೆದ್ದಿ' ಜೂನ್ 4ರಂದು ತೆರೆಕಾಣುತ್ತಿದೆ. ಸಿನಿಮಾದ ಟ್ರೇಲರ್ ಮುಂಬೈನಲ್ಲಿ ಇತ್ತೀಚೆಗೆ ಬಿಡುಗಡೆಯಾಗಿದ್ದು, 'ಪೆದ್ದಿ' ಎಂಬ ಪಾತ್ರದಲ್ಲಿ ನಾನಾವತಾರಗಳಲ್ಲಿ ರಾಮ್‌ಚರಣ್ ನಟಿಸಿದ್ದಾರೆ.

ಇದೊಂದು ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ಜಾನರ್‌ನ ಸಿನಿಮಾವಾಗಿದ್ದು, ನಾಯಕ 'ಪೆದ್ದಿ' ಬಹುಮುಖ ಪ್ರತಿಭೆಯ ಕ್ರೀಡಾಪಟು. ತನ್ನ ದೈಹಿಕ ಬಲದಿಂದಲೇ ಜೀವನೋಪಾಯ ಕಂಡುಕೊಂಡಿದ್ದಾನೆ. ಕ್ರಿಕೆಟ್ ಆಗಿರಲಿ, ಕುಸ್ತಿಯಾಗಿರಲಿ ಅಥವಾ ಓಟವಾಗಿರಲಿ ಎಲ್ಲೆಲ್ಲೂ 'ಪೆದ್ದಿ'ಯದ್ದೇ ಸಾಮ್ರಾಜ್ಯ. ಈತನ ಸುತ್ತಲೇ ಚಿತ್ರದ ಕಥೆ ಇದೆ. ರಾಮ್‌ಚರಣ್ ಅಥ್ಲೆಟಿಕ್ ಅವತಾರದಲ್ಲಿ ಮಿಂಚಿದ್ದಾರೆ. ಕ್ರಿಕೆಟ್ ಬ್ಯಾಟ್ ಬೀಸುವ ರೀತಿ, ಕುಸ್ತಿ ಅಖಾಡದಲ್ಲಿ ತೊಡೆ ತಟ್ಟುವ ರೀತಿ ಪ್ರೇಕ್ಷಕರನ್ನು ಸೆಳೆಯುವಂತಿದೆ. ನಾಯಕಿಯಾಗಿ ನಟಿಸಿರುವ ಜಾನ್ವಿ ಕಪೂರ್ ಗ್ಲಾಮರಸ್ ಆಗಿ ಕಾಣಿಸಿಕೊಂಡಿದ್ದಾರೆ. ಟ್ರೇಲರ್‌ನಲ್ಲಿ ಶಿವರಾಜ್‌ಕುಮಾರ್, ಜಗಪತಿ ಬಾಬು, ದಿವ್ಯೆಂದು ಮತ್ತು ಬೊಮನ್ ಇರಾನಿ ಪಾತ್ರಗಳನ್ನು ಪರಿಚಯಿಸಲಾಗಿದೆ. ಸಿನಿಮಾಗೆ ಅವಿನಾಶ್ ಕೊಲ್ಲಾ ನಿರ್ಮಾಣ ವಿನ್ಯಾಸವಿದ್ದು, ಆರ್. ರತ್ನವೇಲು ಛಾಯಾಚಿತ್ರಗ್ರಹಣವಿದೆ. ಎ.ಆರ್.ರೆಹಮಾನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ವೃದ್ಧಿ ಸಿನಿಮಾಸ್ ಬ್ಯಾನರ್‌ನಡಿ ವೆಂಕಟ ಸತೀಶ್ ಕಿಲಾರು ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ.


ರಾಮ್‌ಚರಣ್

ಚಾರಿತ್ರ್ಯ ವಧೆ: ಟ್ವಿಶಾ ಕುಟುಂಬಸ್ಥರ ಆರೋಪ

ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆ ಪ್ರಕರಣ

ಮುಖ್ಯಾಂಶಗಳು

- ವರದಕ್ಷಿಣೆ ಕಿರುಕುಳ; ನಟಿ ಟ್ವಿಶಾ ಆತ್ಮಹತ್ಯೆ
- ಸೊಸೆ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದಳು–ಅತ್ತೆ ಆರೋಪ
- ಮಗಳ ಚಾರಿತ್ರ್ಯಹನನ; ಹೆತ್ತವರ ತಿರುಗೇಟು

ಭೋಪಾಲ್ (ಪಿಟಿಐ): 'ಸೊಸೆಯು ಮಾದಕ ವಸ್ತುವಿನ ವ್ಯಸನಿಯಾಗಿದ್ದಳು ಮತ್ತು ಆಕೆ ಮನೋವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಳು' ಎಂದು ನಿವೃತ್ತ ನ್ಯಾಯಾಧೀಶರಾದ, ಟ್ವಿಶಾಳ ಅತ್ತೆ (ಪತಿಯ ತಾಯಿ) ಗಿರಿಬಾಲಾ ಸಿಂಗ್ ಮಾಡಿರುವ ಆರೋಪವನ್ನು ಟ್ವಿಶಾ ಶರ್ಮಾ ಕುಟುಂಬಸ್ಥರು ನಿರಾಕರಿಸಿದ್ದಾರೆ.

'ಗಿರಿಬಾಲಾ ಸಿಂಗ್ ಅವರು ನಮ್ಮ ಮಗಳ ಚಾರಿತ್ರ್ಯಹನನ ಮಾಡುತ್ತಿದ್ದು, ಮಗಳ ಸಾವಿನ ಕುರಿತು ಉತ್ತರ ಬೇಕಿದೆ' ಎಂದು ಆಗ್ರಹಿಸಿದ್ದಾರೆ.

2024ರಲ್ಲಿ ಡೇಟಿಂಗ್ ಆ್ಯಪ್‌ನಲ್ಲಿ ಭೋಪಾಲ್‌ನ ಸಮರ್ಥ್ ಸಿಂಗ್ ಹಾಗೂ ನೋಯ್ಡಾದ ಟ್ವಿಶಾ (34) ಪರಿಚಿತರಾಗಿದ್ದರು. 2025ರಲ್ಲಿ ವಿವಾಹವಾಗಿದ್ದರು. ಟ್ವಿಶಾ ತನ್ನ ಗಂಡನ ಮನೆಯಲ್ಲಿ ಮೇ 12ರಂದು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು.

'ನಮ್ಮ ಮಗಳಿಗೆ ವರದಕ್ಷಿಣೆ ಕಿರುಕುಳ ನೀಡಲಾಗುತ್ತಿತ್ತು. ಇದಕ್ಕಾಗಿಯೇ ಆಕೆಯನ್ನು ಕೊಲೆ ಮಾಡಲಾಗಿದೆ' ಎಂದು ಮೃತಳ ಪಾಲಕರು ಆರೋಪಿಸಿದ್ದಾರೆ.

ಟ್ವಿಶಾ ಅವರು 'ಮಿಸ್ ಪುಣೆ' ಕಿರೀಟ ಗಳಿಸಿದ್ದರು. ಜೊತೆಗೆ, ತೆಲುಗಿನ ಸಿನಿಮಾವೊಂದರಲ್ಲಿಯೂ ನಟಿಸಿದ್ದರು. ಸಮರ್ಥ್ ಸಿಂಗ್ ಬೆಂಗಳೂರಿನ ಕಾನೂನು ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ. 2018ರಿಂದಲೂ ವಕೀಲರಾಗಿ ಕೆಲಸ ಮಾಡುತ್ತಿದ್ದರು.

ನಿರೀಕ್ಷಣಾ ಜಾಮೀನು ಕೋರಿ ಸಮರ್ಥ್ ಸಿಂಗ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಸ್ಥಳೀಯ ನ್ಯಾಯಾಲಯವು ವಜಾಗೊಳಿಸಿತ್ತು. ಪ್ರಕರಣದ ಬಳಿಕ ಆರೋಪಿಯು ನಾಪತ್ತೆಯಾಗಿದ್ದು, ಮಾಹಿತಿ ನೀಡಿದವರಿಗೆ, ₹10 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದು ಭೋಪಾಲ್ ಪೊಲೀಸರು ಘೋಷಿಸಿದ್ದರು.

ನ್ಯಾಯಾಲಯ ಆದೇಶದ ಬೆನ್ನಲ್ಲೇ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಗಿರಿಬಾಲಾ ಸಿಂಗ್, 'ಟ್ವಿಶಾ ಆಪ್ತ ಸಮಾಲೋಚನೆ ಪಡೆಯುತ್ತಿದ್ದಳು, ಸ್ಕಿಜೋಫ್ರೇನಿಯಾ ರೋಗಿಗಳು ಸೇವಿಸುವ ಔಷಧ ಸೇವಿಸುತ್ತಿದ್ದಳು' ಎಂದು ತಿಳಿಸಿದ್ದರು.

ಆಕ್ರೋಶ: 'ಈಗ ಮಗಳು ಸತ್ತಿರುವುದರಿಂದ ಏನು ಬೇಕಾದರೂ ಹೇಳಬಹುದು. ಆರೋಪಗಳನ್ನು ತಿರುಚಬಹುದು ಎಂದು ಭಾವಿಸುತ್ತಾರೆ' ಎಂದು ಟ್ವಿಶಾ ಅವರ ತಂದೆ ನವನಿಧಿ ಶರ್ಮಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.


'ಆರೋಪಿಯು ತಾನು ಮಾಡಿದ ಆರೋಪಗಳನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕು. ಮೃತ ಮಹಿಳೆಯ ಕುರಿತು ಸಾರ್ವಜನಿಕವಾಗಿ ಚಾರಿತ್ರ್ಯಹನನ ಮಾಡುವುದು ಗಂಭೀರ ಅಪರಾಧವಾಗಿದೆ. ನ್ಯಾಯಾಂಗ ಅಧಿಕಾರಿಯಾಗಿದ್ದವರು ಇಂತಹ ಕೃತ್ಯವೆಸಗುವುದು ನಾಚಿಕೆಗೇಡಿನ ವಿಚಾರವಾಗಿದೆ' ಎಂದು ತಿಳಿಸಿದ್ದಾರೆ.

ಮಗಳು ಕ್ರಿಯಾಶೀಲಳಾಗಿದ್ದು, ವೃತ್ತಿಯಲ್ಲಿ ಉನ್ನತ ಸ್ಥಾನ ಪಡೆಯುವ ಇರಾದೆ ಹೊಂದಿದ್ದಳು. ಉತ್ತಮ ಶಿಕ್ಷಣ ಪಡೆದಿದ್ದ ಆಕೆಗೆ ಮಾನಸಿಕ ಸಮಸ್ಯೆ ಇರಲಿಲ್ಲ. ಅವಳಿಗೆ ಸ್ಕಿಜೋಫ್ರೇನಿಯಾ ಸಮಸ್ಯೆ ಇದ್ದಿದ್ದರೆ, ಆಕೆಯನ್ನು ಕೊಂದಿರುವವರು ಯಾರು ಎಂದು ಪ್ರಶ್ನಿಸಿದ್ದಾರೆ.

'ನನಗೆ ಮಗಳು ಕಳುಹಿಸಿದ ವಾಟ್ಸ್‌ಆ್ಯಪ್ ಸಂದೇಶಗಳಿಂದಲೇ ಅವಳು ಪಟ್ಟ ಯಾತನೆ ಸ್ಪಷ್ಟವಾಗುತ್ತದೆ. ಟಿಕೆಟ್ ಕಾಯ್ದಿರಿಸಿ, ಅವಳನ್ನು ನೋಯ್ಡಾದ ತವರಿಗೆ ಕರೆಸಿಕೊಳ್ಳುವಷ್ಟರಲ್ಲಿ ಅವಳೇ ಇಲ್ಲವಾದಳು. ಮಗಳ ಹಣದ ಮೇಲೆ ನಮ್ಮ ಕುಟುಂಬ ಅವಲಂಬಿತವಾಗಿರಲಿಲ್ಲ. ಆಕೆಯ ಅತ್ತೆ–ಮಾವನೇ ಆಕೆಯ ವೃತ್ತಿಯನ್ನು ಹಾಳುಮಾಡಲು ಯತ್ನಿಸಿದರು' ಎಂದು ಟ್ವಿಶಾ ತಾಯಿ ರೇಖಾ ಶರ್ಮಾ ದೂರಿದ್ದಾರೆ.

ಸ್ಥಳೀಯ ಪೊಲೀಸರ ತನಿಖೆ ಮೇಲೆ ಆರೋಪಿಯ ಕುಟುಂಬಸ್ಥರು ಪ್ರಭಾವ ಬೀರುವ ಸಾಧ್ಯತೆಯಿದ್ದು, ಪ್ರಕರಣವನ್ನು ಹೊರರಾಜ್ಯಕ್ಕೆ ವರ್ಗಾಯಿಸಬೇಕು ಎಂದು ಕೋರಿದ್ದಾರೆ.

ಎಸ್‌ಐಟಿ ರಚನೆ: ವರದಕ್ಷಿಣೆ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಕುರಿತಂತೆ ವಿಶೇಷ ತನಿಖಾ ತಂಡ ರಚಿಸಿರುವ ಮಧ್ಯಪ್ರದೇಶ ಪೊಲೀಸರು ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯ, ಕರೆಗಳ ಮಾಹಿತಿ, ಟ್ವಿಶಾ ಪತಿಯ ಮಾಹಿತಿಯನ್ನು ಕಲೆಹಾಕಿದ್ದಾರೆ.


ಸಮರ್ಥ್ ಸಿಂಗ್, ಟ್ವಿಶಾ ಶರ್ಮಾ


ಹೆಣ್ಣುಮಕ್ಕಳಿಗೆ ಮದುವೆಗೆ ಒತ್ತಡ ಹೇರುವ ಬದಲು ಅವರ ವೃತ್ತಿ ಹಾಗೂ ಆರ್ಥಿಕ ಸ್ವಾತಂತ್ರ್ಯಕ್ಕೆ ಒತ್ತು ನೀಡಬೇಕು
ಕಂಗನಾ ರನೌತ್, ನಟಿ ಮತ್ತು ಬಿಜೆಪಿ ಸಂಸದೆ

'2ನೇ ಸಲ ಮರಣೋತ್ತರ ಪರೀಕ್ಷೆ ನಡೆಸಿ'

'ಟ್ವಿಶಾಳ ಮೃತದೇಹವನ್ನು ಎರಡನೇ ಸಲ ಮರಣೋತ್ತರ ಪರೀಕ್ಷೆಗೆ ಒಳಪಡಿಸಬೇಕು ಎಂದು ಕೋರಿ ಅವರ ಕುಟುಂಬಸ್ಥರು ಸ್ಥಳೀಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ' ಎಂದು ಅವರ ಪರ ವಕೀಲರು ಹೇಳಿದ್ದಾರೆ.

'ಎರಡನೇ ಮರಣೋತ್ತರ ಪರೀಕ್ಷೆಗಾಗಿ ಭೋಪಾಲ್‌ನ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇವೆ' ಎಂದು ಅವರ ಕುಟುಂಬದ ವಕೀಲ ಅನುರಾಗ್ ಶ್ರೀವಾಸ್ತವ ತಿಳಿಸಿದ್ದಾರೆ.

'ಆಕೆಯ ಸಾವಿಗೂ ಮುನ್ನ ದೇಹದ ಮೇಲೆ ಹಲವು ಗಾಯಗಳಾಗಿವೆ' ಎಂದು ಮೃತಳ ಕುಟುಂಬಸ್ಥರು ಆರೋಪಿಸಿದ್ದಾರೆ.

ಜಾಮೀನು: ಖಾಲಿದ್ ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿಯ ಈಶಾನ್ಯ ಭಾಗದಲ್ಲಿ 2020ರಲ್ಲಿ ನಡೆದ ಗಲಭೆಗಳಿಗೆ ಸಂಬಂಧಿಸಿದ ಪ್ರಕರಣದ ಆರೋಪಿ ಹಾಗೂ ಸಾಮಾಜಿಕ ಕಾರ್ಯಕರ್ತ ಉಮರ್ ಖಾಲಿದ್, ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿಯ ನ್ಯಾಯಾಲಯವೊಂದು ಮಂಗಳವಾರ ವಜಾಗೊಳಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಮೀರ್ ಬಾಜಪೇಯಿ ಅವರು ಅರ್ಜಿ ವಿಚಾರಣೆ ನಡೆಸಿದರು.

'ಸೋದರ ಸಂಬಂಧಿ ಮೃತಪಟ್ಟಿದ್ದು, 40 ದಿನ ನಡೆಸುವ ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳಬೇಕು. ತಾಯಿಯು ಕೂಡ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದು, ಆಕೆಯ ಆರೈಕೆ ಮಾಡಬೇಕಾಗಿರುವ ಕಾರಣ 15 ದಿನಗಳ ಮಧ್ಯಂತರ ಜಾಮೀನು ನೀಡಬೇಕು' ಎಂದು ಖಾಲಿದ್ ಅರ್ಜಿ ಸಲ್ಲಿಸಿದ್ದರು.

ಸಿಎಎ ಹಾಗೂ ಎನ್‌ಆರ್‌ಸಿ ವಿರೋಧಿ ಪ್ರತಿಭಟನೆಗಳ ವೇಳೆ ಭುಗಿಲೆದ್ದಿದ್ದ ಹಿಂಸಾಚಾರ, ಗಲಭೆಗೆ ಸಂಬಂಧಿಸಿ ಖಾಲಿದ್ ಹಾಗೂ ಇತರರ ವಿರುದ್ಧ ಯುಎಪಿಎ, ಐಪಿಸಿ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ.

ಈ ಗಲಭೆಗಳಲ್ಲಿ 53 ಮಂದಿ ಮೃತಪಟ್ಟು, 700ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.

'ಕಾರಣ ಸಮರ್ಥನೀಯವಲ್ಲ': ವಿಚಾರಣೆ ವೇಳೆ, 'ಜಾಮೀನಿಗಾಗಿ ನೀಡಿರುವ ಕಾರಣಗಳು ಸಮರ್ಥನೀಯವಲ್ಲ' ಎಂದು ನ್ಯಾಯಾಲಯವು ಜಾಮೀನು ಅರ್ಜಿ ವಜಾಗೊಳಿಸಿ ನೀಡಿರುವ ಆದೇಶದಲ್ಲಿ ತಿಳಿಸಿದೆ.

'ಅರ್ಜಿದಾರನ ತೀರ ಹತ್ತಿರದ ಸಂಬಂಧಿ ನಿಧನದ ಹಿನ್ನೆಲೆಯಲ್ಲಿ ಧಾರ್ಮಿಕ ವಿಧಿ ನಡೆಯುತ್ತಿದ್ದಲ್ಲಿ, ಅರ್ಜಿಯನ್ನು ಪರಿಗಣಿಸಬಹುದಿತ್ತು. ಅಲ್ಲದೇ, ಮೃತವ್ಯಕ್ತಿ ಅಷ್ಟೊಂದು ಹತ್ತಿರದ ಸಂಬಂಧಿಯಾಗಿದ್ದಲ್ಲಿ ಅವರು ಸತ್ತ ಸಂದರ್ಭದಲ್ಲಿಯೇ ಅರ್ಜಿದಾರ ಜಾಮೀನು ಕೇಳುತ್ತಿದ್ದರು' ಎಂದೂ ನ್ಯಾಯಾಲಯ ಹೇಳಿದೆ.

ಇದಕ್ಕೂ ಮುನ್ನ, ಖಾಲಿದ್ ಜಾಮೀನು ಅರ್ಜಿ ವಿರೋಧಿಸಿದ ವಿಶೇಷ ಸರ್ಕಾರಿ ವಕೀಲ ಅನಿರುದ್ಧ ಮಿಶ್ರಾ, 'ಅರ್ಜಿದಾರನಿಗೆ ತಂದೆ ಹಾಗೂ ಐವರು ಸಹೋದರಿಯರು ಇದ್ದಾರೆ. ಶಸ್ತ್ರಚಿಕಿತ್ಸೆಗೂ ಮುನ್ನ ಹಾಗೂ ನಂತರ ಇವರೆಲ್ಲಾ ತಾಯಿಯ ಆರೈಕೆ ಮಾಡಬಲ್ಲರು' ಎಂದು ನ್ಯಾಯಾಲಯಕ್ಕೆ ತಿಳಿಸಿದರು.

'ಖಾಲಿದ್ ತಾಯಿಗೆ ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆ ನಡೆಸಲು ಉದ್ದೇಶಿಸಲಾಗಿದೆ. ಹೀಗಾಗಿ ತಾಯಿಯ ಆರೈಕೆಗಾಗಿ ಅರ್ಜಿದಾರ ಹೋಗುವ ಅವಶ್ಯಕತೆ ಇಲ್ಲ' ಎಂದೂ ಹೇಳಿದರು. ಈ ವಾದವನ್ನು ಪರಿಗಣಿಸಿದ ನ್ಯಾಯಾಲಯವು ಖಾಲಿದ್ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತು.


ಉಮರ್ ಖಾಲಿದ್


ಕಠಿಣ ಸಮಯ ಬರಲಿದೆ: ರಾಹುಲ್ ಗಾಂಧಿ

ರಾಯ್‌ಬರೇಲಿ (ಉತ್ತರಪ್ರದೇಶ) (ಪಿಟಿಐ): 'ಆರ್ಥಿಕ ಆಘಾತ' ಕಾದಿದೆ. ಆದರೆ, ಅದು ಅದಾನಿ, ಅಂಬಾನಿ ಅಥವಾ ಮೋದಿ ಅವರ ಮೇಲೆ ಪರಿಣಾಮ ಬೀರುವುದಿಲ್ಲ; ಯುವಕರು, ಕಾರ್ಮಿಕರು ಮತ್ತು ಸಣ್ಣ ವರ್ತಕರ ಮೇಲೆ ಬೀರಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಹೇಳಿದರು.

'ತುಂಬಾ ಕಠಿಣವಾದ ಸಂದರ್ಭ ಬರಲಿದೆ. ಹಲವು ವರ್ಷಗಳಿಂದ ನೋಡದ ಆರ್ಥಿಕ ಸಂಕಷ್ಟದ ಬಿರುಗಾಳಿ ಬೀಸಲಿದೆ' ಎಂದು ರಾಹುಲ್ ಗಾಂಧಿ ಸುದ್ದಿಗಾರರಿಗೆ ತಿಳಿಸಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ಕ್ರಮ ಕೈಗೊಳ್ಳುವ ಬದಲು, ದೇಶದ ಜನರಿಗೆ ವಿದೇಶ ಪ್ರವಾಸ ಮಾಡಬೇಡಿ ಎಂದು ಹೇಳುತ್ತಿದ್ದಾರೆ. ಆದರೆ, ಅವರು ವಿದೇಶಗಳನ್ನು ಸುತ್ತುತ್ತಿದ್ದಾರೆ. ಅವರು ತಮ್ಮದೇ ಮಾತನ್ನು ಪಾಲಿಸುತ್ತಿಲ್ಲ' ಎಂದು ಟೀಕಿಸಿದರು.

'ಅವರು ಅಂಬಾನಿ ಮತ್ತು ಅದಾನಿಗಾಗಿ ಮಾಡಿರುವ ವ್ಯವಸ್ಥೆ ಹಾಗೇ ಉಳಿಯುವುದಿಲ್ಲ, ಅದು ಕುಸಿಯುತ್ತದೆ. ದುರದೃಷ್ಟವೆಂದರೆ ಅದರ ಪರಿಣಾಮವನ್ನು ಸಾಮಾನ್ಯ ಜನರು ಅನುಭವಿಸುತ್ತಾರೆ. ಅವರು ತಮ್ಮ ಅರಮನೆಗಳಲ್ಲಿ ಸುರಕ್ಷಿತರಾಗಿರುತ್ತಾರೆ. ಆದರೆ, ಉತ್ತರಪ್ರದೇಶದ ಯುವಕರು ಮತ್ತು ಜನರು ಸಂಕಷ್ಟವನ್ನು ಅನುಭವಿಸುತ್ತಾರೆ' ಎಂದು ಹೇಳಿದರು.


ರಾಹುಲ್ ಗಾಂಧಿ

ನಕ್ಸಲ್–ಭದ್ರತಾ ಪಡೆ ನಡುವೆ ಗುಂಡಿನ ಚಕಮಕಿ



ಚಾಯಿಬಾಸಾ (ಜಾರ್ಖಂಡ್) (ಪಿಟಿಐ): ಜಾರ್ಖಂಡ್‌ನ ಪಶ್ಚಿಮ ಸಿಂಗಭೂಮ್ ಜಿಲ್ಲೆಯ ಕಾಡಿನಲ್ಲಿ ಮಂಗಳವಾರ ಬೆಳಿಗ್ಗೆ ಭದ್ರತಾ ಪಡೆಗಳು ಮತ್ತು ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೋನುವಾ ಪೊಲೀಸ್ ಠಾಣೆ ವ್ಯಾಪ್ತಿಯ ಕೆಡಾಬೀರ್ ಗ್ರಾಮದ ಬಳಿಯ ಪೋಡಾಹಾಟ್ ಅರಣ್ಯದಲ್ಲಿ ಭದ್ರತಾ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಈ ಘಟನೆ ನಡೆದಿದೆ. ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ರೇಣು ತಿಳಿಸಿದ್ದಾರೆ.

ತಮ್ಮನ್ನು ಸಮೀಪಿಸುತ್ತಿರುವ ಭದ್ರತಾ ಸಿಬ್ಬಂದಿಯನ್ನು ಗಮನಿಸಿ ನಕ್ಸಲರು ಅವರ ಮೇಲೆ ಗುಂಡು ಹಾರಿಸಿದರು. ಈ ವೇಳೆ ಪ್ರತಿದಾಳಿ ನಡೆಸಲಾಗಿದ್ದು, ಸ್ವಲ್ಪ ಸಮಯ ಗುಂಡಿನ ಚಕಮಕಿ ನಡೆದಿದೆ. ನಂತರ ನಕ್ಸಲರು ಕಾಡಿನೊಳಗೆ ಓಡಿಹೋಗಿ ಅಡಗಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಈ ಕುರಿತು ಮಾತನಾಡಿದ ಅಮಿತ್ ರೇಣು, 'ಕೆಲವು ನಕ್ಸಲರು ಜಿಲ್ಲೆಯಲ್ಲಿ ಇನ್ನೂ ಸಕ್ರಿಯರಾಗಿದ್ದಾರೆ. ಅವರಲ್ಲಿ ನಕ್ಸಲರ ಪ್ರಮುಖ ನಾಯಕ ಮಿಸಿರ್ ಬೆಸ್ರಾ ಕೂಡಾ ಇದ್ದಾರೆ. ಅವರನ್ನು ಪತ್ತೆ ಹಚ್ಚಿದವರಿಗೆ ₹1 ಕೋಟಿ ಬಹುಮಾನ ಘೋಷಿಸಲಾಗಿದೆ' ಎಂದು ಹೇಳಿದ್ದಾರೆ.

ಗಡುವಿಗೂ ಮುನ್ನವೇ ದೇಶ ನಕ್ಸಲ್‌ಮುಕ್ತ: ಅಮಿತ್ ಶಾ


ಜಗದಲಪುರ (ಪಿಟಿಐ): ಭದ್ರತಾ ಪಡೆಗಳ ಧೈರ್ಯ, ಶೌರ್ಯ ಮತ್ತು ತ್ಯಾಗದ ಫಲವಾಗಿ ಮಾರ್ಚ್ 31ರ ಗಡುವಿಗೂ ಮುನ್ನವೇ ದೇಶವು ನಕ್ಸಲ್ ಮುಕ್ತವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಕ್ಸಲ್ ಮುಕ್ತ ಅಭಿಯಾನದಲ್ಲಿ ಕೆಲವು ದಿನಾಂಕಗಳು ಐತಿಹಾಸಿಕ ಮಹತ್ವವನ್ನು ಹೊಂದಿವೆ. 2023ರ ಡಿ. 13ರಂದು ಛತ್ತೀಸಗಢದಲ್ಲಿ ಬಿಜೆಪಿ ಸರ್ಕಾರ ಸ್ಥಾಪನೆಯಾದಾಗ ನಕ್ಸಲ್‌ವಾದದ ನಿರ್ಮೂಲನೆಗೆ ಅಭಿಯಾನ ಆರಂಭಿಸಲಾಯಿತು' ಎಂದರು.

2024ರ ಆಗಸ್ಟ್ 24ರಂದು ಎಲ್ಲಾ ರಾಜ್ಯಗಳ ಪೊಲೀಸ್ ಮಹಾನಿರ್ದೇಶಕರ ಸಭೆ ಸೇರಿ 2026ರ ಮಾರ್ಚ್ 31ರ ಒಳಗಾಗಿ ದೇಶವನ್ನು ನಕ್ಸಲ್ ಮುಕ್ತ ಮಾಡಬೇಕು ಎಂಬ ನಿರ್ಣಯ ಕೈಗೊಳ್ಳಲಾಗಿತ್ತು ಎಂದರು.

'ಮಾರ್ಚ್ 31ರ ಗಡುವಿಗೂ ಮುನ್ನವೇ ಭದ್ರತಾ ಪಡೆಗಳ ಧೈರ್ಯ, ಶೌರ್ಯ, ತ್ಯಾಗದ ಪರಿಣಾಮವಾಗಿ ದೇಶದಲ್ಲಿ ನಕ್ಸಲ್‌ವಾದವು ಸಂಪೂರ್ಣವಾಗಿ ನಿರ್ನಾಮವಾಗಿದೆ' ಎಂದರು.

ಬಿಜೆಪಿ ಅಧಿಕಾರದಲ್ಲಿ ಇಲ್ಲದ ಹಲವು ರಾಜ್ಯಗಳ ಸರ್ಕಾರಗಳು ನಕ್ಸಲ್ ಮುಕ್ತ ಭಾರತಕ್ಕಾಗಿ ಬೆಂಬಲ ನೀಡಿದ್ದವು ಎಂದು ಯಾವುದೇ ಹಿಂಜರಿಕೆ ಇಲ್ಲದೆ ಹೇಳುತ್ತೇನೆ. ಆದರೆ ಈ ಹಿಂದಿನ ಛತ್ತೀಸಗಢ ಸರ್ಕಾರ ಮಾತ್ರ ಬೆಂಬಲ ನೀಡಿರಲಿಲ್ಲ ಎಂದು ಹೇಳಿದರು.


ಅಮಿತ್ ಶಾ

ಬಂಗಾಳದ ಫಾಲ್ಟಾ ಕ್ಷೇತ್ರ: ನಾಳೆ ಮರು ಮತದಾನ, 24ಕ್ಕೆ ಮತ ಎಣಿಕೆ

ಕಣದಿಂದ ಹಿಂದೆ ಸರಿದ ಟಿಎಂಸಿ ಅಭ್ಯರ್ಥಿ

ಫಾಲ್ಟಾ (ಪಶ್ಚಿಮ ಬಂಗಾಳ) (ಪಿಟಿಐ): ಪಶ್ಚಿಮ ಬಂಗಾಳದ ಫಾಲ್ಟಾ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಅವರು ಮರು ಮತದಾನಕ್ಕೆ ಎರಡೇ ದಿನ ಬಾಕಿ ಇರುವಾಗ ಸ್ಪರ್ಧಾಕಣದಿಂದ ಹಿಂದೆ ಸರಿದಿದ್ದಾರೆ.

'ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಫಾಲ್ಟಾ ವಿಧಾನಸಭಾ ಕ್ಷೇತ್ರಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಿರುವುದರಿಂದ ಈ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದು ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಮಂಗಳವಾರ ಘೋಷಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಫಾಲ್ಟಾ ಕ್ಷೇತ್ರದ ಜನರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದು ಹೇಳಿದರು.

'ನಾನು ಫಾಲ್ಟಾದ ಪುತ್ರ. ಈ ಪ್ರದೇಶವು ಶಾಂತಿಯಿಂದ ಇರಬೇಕು ಮತ್ತು ಅಭಿವೃದ್ಧಿ ಸಾಧಿಸಬೇಕೆಂದು ಬಯಸುತ್ತೇನೆ' ಎಂದರು.

'ಜಹಾಂಗೀರ್ ಖಾನ್ ಅವರು ಫಾಲ್ಟಾ ಕ್ಷೇತ್ರದಲ್ಲಿ ನಡೆಯಲಿರುವ ಮರು ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಅದರ ಹಿಂದಿನ ಕಾರಣ ತಿಳಿದುಬಂದಿಲ್ಲ' ಎಂದು ಟಿಎಂಸಿ ವಕ್ತಾರ ಅರೂಪ್ ಚಕ್ರವರ್ತಿ ತಿಳಿಸಿದರು.

ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಏಪ್ರಿಲ್ 29ರಂದು ಮತದಾನದ ವೇಳೆ ಹಲವಾರು ಅಕ್ರಮಗಳು ನಡೆದಿವೆ ಎಂಬ ಕಾರಣ ನೀಡಿ ಚುನಾವಣಾ ಆಯೋಗವು ಈ ಕ್ಷೇತ್ರದಲ್ಲಿ ಮೇ 21ರಂದು ಮರು ಮತದಾನಕ್ಕೆ ಆದೇಶಿಸಿದೆ. ಮೇ 24ಕ್ಕೆ ಫಲಿತಾಂಶ ಘೋಷಣೆಯಾಗಲಿದೆ.

> **ಕಣದಿಂದ ಹಿಂದೆ ಸರಿದಿರುವುದು ಜಹಾಂಗೀರ್ ಅವರ 'ವೈಯಕ್ತಿಕ ನಿರ್ಧಾರ'. ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ ಬೆದರಿಸುವ ವಾತಾವರಣ ಸೃಷ್ಟಿಯಾಗಿದೆ**
> **ಟಿಎಂಸಿ**

> **ಮತಗಟ್ಟೆ ಏಜೆಂಟ್ ಸಿಗದ ಕಾರಣ ಟಿಎಂಸಿ ಅಭ್ಯರ್ಥಿ ಪಲಾಯನಗೈದಿದ್ದಾರೆ. ಅವರಿಗೆ ಬೇರೆ ದಾರಿ ಇರಲಿಲ್ಲ**
> **ಸುವೇಂದು ಅಧಿಕಾರಿ,** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ


ಫಾಲ್ಟಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರವಾಗಿ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಪ್ರಚಾರ ಮಾಡಿದರು —ಪಿಟಿಐ ಚಿತ್ರ

'ಲಂಡನ್‌ನಿಂದ ವಾಗ್ದೇವಿ ವಿಗ್ರಹ ತಂದು ಮರುಸ್ಥಾಪಿಸಿ'

ಇಂದೋರ್ (ಪಿಟಿಐ): ಭೋಜಶಾಲಾ ಯನ್ನು ಹಿಂದೂ ದೇವಾಲಯ ಎಂದು ಮಧ್ಯಪ್ರದೇಶ ಹೈಕೋರ್ಟ್ ತೀರ್ಪು ನೀಡಿದ ನಂತರ, ಆ ದೇವಾಲಯದ ಮೂಲ ವಾಗ್ದೇವಿ (ಸರಸ್ವತಿ) ಪ್ರತಿಮೆಯನ್ನು ಲಂಡನ್ ಮ್ಯೂಸಿಯಂನಿಂದ ಭಾರತಕ್ಕೆ ತರಬೇಕು ಎಂಬ ಒತ್ತಾಯ ಕೇಳಿಬಂದಿದೆ.

ಲಂಡನ್‌ನ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿರುವ ವಾಗ್ದೇವಿ ವಿಗ್ರಹವು ಕೊಹಿನೂರು ವಜ್ರಕ್ಕಿಂತ ಮುಖ್ಯವಾದದು. ಆ ಮೂಲ ವಿಗ್ರಹವನ್ನು ತಂದು, ಭೋಜಶಾಲಾದಲ್ಲಿ ಮರುಸ್ಥಾಪಿಸುವಂತೆ ಹಿಂದೂ ಸಮುದಾಯದ ಅರ್ಜಿದಾರರು ಒತ್ತಾಯಿಸಿದ್ದಾರೆ.

ಅರ್ಜಿದಾರರಲ್ಲಿ ಒಬ್ಬರಾದ ಕುಲದೀಪ್ ತಿವಾರಿ, 'ಲಂಡನ್‌ನಿಂದ ವಿಗ್ರಹವನ್ನು ಹಿಂದಿರುಗಿಸುವಂತೆ ಕೋರಿ ಕೇಂದ್ರ, ಎಎಸ್‌ಐ ಮತ್ತು ಮಧ್ಯಪ್ರದೇಶ ಸರ್ಕಾರಕ್ಕೆ ಹೊಸ ಮನವಿಗಳನ್ನು ಸಲ್ಲಿಸಲಾಗಿದೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.


ಅರ್ಚಕರೊಬ್ಬರು ಭೋಜಶಾಲಾ ದೇಗುಲದಲ್ಲಿ ವಾಗ್ದೇವಿ ದೇವಿ ವಿಗ್ರಹಕ್ಕೆ ಪೂಜೆ ಸಲ್ಲಿಸಿದರು —ಪಿಟಿಐ ಚಿತ್ರ

ದೇವಸ್ಥಾನಗಳ ಆಡಳಿತ ನಿಯಂತ್ರಿಸುವ ಕಾಯ್ದೆ: ಸುಪ್ರೀಂ ಕೋರ್ಟ್ ಪರಿಶೀಲನೆ

ನವದೆಹಲಿ: ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಪುದುಚೆರಿಯಲ್ಲಿ ಹಿಂದೂ ದೇವಸ್ಥಾನಗಳ ಆಡಳಿತವನ್ನು ನಿಯಂತ್ರಿಸುವ ಕಾನೂನುಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ 2012ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಲಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು ಸೋಮವಾರ ಮರು ಪರಿಶೀಲನಾ ಅರ್ಜಿಗಳನ್ನು ಅನುಮತಿಸುವ ಮೂಲಕ 2025ರ ಏಪ್ರಿಲ್‌ನಲ್ಲಿ ನೀಡಿದ್ದ ಆದೇಶವನ್ನು ಹಿಂಪಡೆದಿದೆ. ಹಿಂದಿನ ಆದೇಶದಲ್ಲಿ, ಅರ್ಜಿದಾರರಿಗೆ ರಿಟ್ ಅರ್ಜಿಗಳನ್ನು ಸಲ್ಲಿಸುವ ಬದಲು ಆಯಾ ಹೈಕೋರ್ಟ್‌ಗಳನ್ನು ಸಂಪರ್ಕಿಸಲು ಸೂಚಿಸಲಾಗಿತ್ತು.

ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆ 1959, ಆಂಧ್ರ ಪ್ರದೇಶ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆ 1987, ಪುದುಚೆರಿ ಹಿಂದೂ ಧಾರ್ಮಿಕ ಸಂಸ್ಥೆಗಳ ಕಾಯ್ದೆ 1972 ಮತ್ತು 1987ರ ತೆಲಂಗಾಣ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆಯಲ್ಲಿನ ನಿಬಂಧನೆಗಳನ್ನು 2012ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.

ಈ ಮೂರೂ ಕಾಯ್ದೆಯಲ್ಲಿನ ನಿಬಂಧನೆಗಳು ಸಂವಿಧಾನದ 14 (ಸಮಾನತೆಯ ಹಕ್ಕು), 19 (ವೃತ್ತಿ ಸ್ವಾತಂತ್ರ್ಯ), 25, 26 ಮತ್ತು 31ಎ ವಿಧಿಗಳನ್ನು ಉಲ್ಲಂಘಿಸುತ್ತವೆ ಎಂದು ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು.



'ಮಣಿಪುರ: ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಿ'

ಪ್ರಜಾವಾಣಿ ವಾರ್ತೆ

ಗುವಾಹಟಿ: ಬೇಷರತ್ತಾಗಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವಂತೆ ಹಲವಾರು ಚರ್ಚ್‌ನ ವಿವಿಧ ಸಂಸ್ಥೆಗಳ ನಾಯಕರು ಮಂಗಳವಾರ ನಾಗ ಮತ್ತು ಕುಕಿ ಬುಡಕಟ್ಟು ಸಮುದಾಯದ ಸಂಸ್ಥೆಗಳಿಗೆ ಮನವಿ ಮಾಡಿದ್ದಾರೆ.

ಸಂಘರ್ಷವನ್ನು ತಣಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನಾಗ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿರುವ ಸೇನಾಪತಿ ಜಿಲ್ಲೆಯಲ್ಲಿ ಚರ್ಚ್‌ನ ವಿವಿಧ ಸಂಸ್ಥೆಗಳು ಚರ್ಚೆ ನಡೆಸಿದವು. ಎರಡೂ ಸಮುದಾಯಗಳ ಒಟ್ಟು 20 ಜನರನ್ನು ಮೇ 13ರಿಂದ ಒತ್ತೆಯಾಳುಗಳಾಗಿ ಇರಿಸಿಕೊಳ್ಳಲಾಗಿದೆ. ಈ ಪೈಕಿ ಇಬ್ಬರು ಪಾದ್ರಿಗಳೂ ಇದ್ದಾರೆ.



ರಾಜಸ್ಥಾನಕ್ಕೆ ಗೆಲುವಿನ ‘ವೈಭವ’

ರಾಯಲ್ಸ್‌ನ ಪ್ಲೇ ಆಫ್ ಕನಸು ಜೀವಂತ
• ಮಿಚೆಲ್ ಮಾರ್ಷ್ ಆಟಕ್ಕೆ ಸಿಗದ ಫಲ

ಜೈಪುರ (ಪಿಟಿಐ): ಎಡಗೈ ಬ್ಯಾಟರ್ ವೈಭವ್ ಸೂರ್ಯವಂಶಿ (93;38ಎ) ಅಲ್ಪ ಅಂತರದಲ್ಲಿ ಶತಕ ತಪ್ಪಿಸಿಕೊಂಡರು. ಆದರೆ, ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ರಾಜಸ್ಥಾನ ರಾಯಲ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತು. ಇದರೊಂದಿಗೆ ಪ್ಲೇ ಆಫ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ‘ಹ್ಯಾಟ್ರಿಕ್’ ಸೋಲು ಅನುಭವಿಸಿದ್ದ ಆತಿಥೇಯ ತಂಡವು ಕೊನೆಗೂ ಜಯ ದಾಖಲಿಸಿತು. 14 ಅಂಕ ಗಳಿಸಿರುವ ರಾಜಸ್ಥಾನ ತಂಡಕ್ಕೆ ಲೀಗ್ ಹಂತದಲ್ಲಿ ಕೊನೆಯ ಪಂದ್ಯ (ಮೇ 24ರಂದು ಮುಂಬೈ ವಿರುದ್ಧ) ಬಾಕಿ ಉಳಿದಿದ್ದು, ಅದನ್ನು ಗೆದ್ದರೆ ಪ್ಲೇ ಆಫ್ ಹಾದಿ ಸುಗಮವಾಗಲಿದೆ. ಲಖನೌ ತಂಡವು ಈ ಮೊದಲೇ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿದೆ.

ರಿಯಾನ್ ಪರಾಗ್ ಗೈರುಹಾಜರಿಯಲ್ಲಿ ಯಶಸ್ವಿ ಜೈಸ್ವಾಲ್ ಅವರು ರಾಜಸ್ಥಾನ ತಂಡವನ್ನು ಮುನ್ನಡೆಸಿದರು. ಟಾಸ್ ಗೆದ್ದ ಜೈಸ್ವಾಲ್ ಫೀಲ್ಡಿಂಗ್ ಆಯ್ದುಕೊಂಡರು. ಮೊದಲು ಬ್ಯಾಟ್ ಮಾಡಿದ ಲಖನೌ ತಂಡದ ಆರಂಭಿಕ ಆಟಗಾರ ಮಿಚೆಲ್ ಮಾರ್ಷ್ (96;57ಎ) ಅವರೂ ಶತಕದ ಹೊಸ್ತಿಲಲ್ಲಿ ಎಡವಿದರು. ಮಾರ್ಷ್ ಮತ್ತು ಜೋಶ್ ಇಂಗ್ಲಿಸ್ (60; 29ಎ) ಅವರ ಬ್ಯಾಟಿಂಗ್ ಬಲದಿಂದ ಲಖನೌ ತಂಡವು 5 ವಿಕೆಟ್‌ಗಳಿಗೆ 220 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು 15ರ ಪೋರ ಸೂರ್ಯವಂಶಿ ಮತ್ತು ಧ್ರುವ್ ಜುರೇಲ್ (ಔಟಾಗದೇ 53;28ಎ) ಅವರ ಉಪಯುಕ್ತ ಆಟದಿಂದಾಗಿ ಐದು ಎಸೆತಗಳು ಬಾಕಿ ಇರುವಂತೆ 3 ವಿಕೆಟ್‌ಗೆ 225 ರನ್ ಗಳಿಸಿ ಸಂಭ್ರಮಿಸಿತು.

ಎಡಗೈ ಜೋಡಿ ಯಶಸ್ವಿ ಜೈಸ್ವಾಲ್ (43;23ಎ) ಮತ್ತು ಸೂರ್ಯವಂಶಿ ಅವರು ಮೊದಲ ವಿಕೆಟ್‌ಗೆ 75 (39ಎ) ರನ್ ಸೇರಿಸಿ ಭದ್ರ ಅಡಿಪಾಯ ಹಾಕಿದರು. ಮೊದಲ ಓವರ್‌ನಲ್ಲಿ 23 ರನ್ ನೀಡಿದ್ದ ಆಕಾಶ್ ಸಿಂಗ್ ಅವರು ಈ ಜೊತೆಯಾಟವನ್ನು ಮುರಿದರು. ಅರ್ಧಶತಕದತ್ತ ಸಾಗುತ್ತಿದ್ದ ಜೈಸ್ವಾಲ್ ಅವರ ವಿಕೆಟ್ ಪಡೆದರು.

ಆರಂಭದಲ್ಲಿ ತಾಳ್ಮೆಯಿಂದ ಆಡಿದ್ದ ಸೂರ್ಯವಂಶಿ ನಂತರ ಪರಾಕ್ರಮ ಮೆರೆದರು. ಧ್ರುವ್ ಜುರೇಲ್ ಅವರೊಂದಿಗೆ ಎರಡನೇ ವಿಕೆಟ್‌ಗೆ ಬಿರುಸಿನ 105 (45ಎ) ರನ್ ಸೇರಿಸಿದರು. ಈ ಜೋಡಿ ಮಯಂಕ್ ಯಾದವ್ ಹಾಕಿದ 12ನೇ ಓವರ್‌ನಲ್ಲಿ ನಾಲ್ಕು ಸಿಕ್ಸರ್ ಸೇರಿದಂತೆ 29 ರನ್ ಬಾಚಿತು. 10 ಭರ್ಜರಿ ಸಿಕ್ಸರ್ ಮತ್ತು ಏಳು ಬೌಂಡರಿ ಬಾರಿಸಿದ ಸೂರ್ಯವಂಶಿ ತವರಿನ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು. ಹಾಲಿ ಆವೃತ್ತಿಯಲ್ಲಿ ಎರಡನೇ ಶತಕದತ್ತ ಮುನ್ನುಗ್ಗುತ್ತಿದ್ದ ಅವರು ಮೊಹಸಿನ್ ಖಾನ್ ಅವರಿಗೆ ವಿಕೆಟ್ ಒಪ್ಪಿಸಿದರು.





ಧ್ರುವ್ ಜುರೇಲ್

ಎಎಫ್‌ಪಿ ಚಿತ್ರಗಳು

ನಂತರ ಬಂದ ಲ್ಹುವಾನ್-ಡ್ರೆ ಪ್ರಿಟೋರಿಯಸ್ (7) ಬೇಗನೇ ರನೌಟ್‌ಗೆ ಬಲಿಯಾದರು. ಜುರೇಲ್ ಮತ್ತು ಡೊನೊವನ್ ಫೆರೀರಾ (ಔಟಾಗದೇ 16) ತಂಡವನ್ನು ಗೆಲುವಿನ ದಡ ಸೇರಿಸಿದರು.

ಮಾರ್ಷ್ ಅಬ್ಬರ: ಇದಕ್ಕೂ ಮೊದಲು ಲಖನೌ ತಂಡವು ಮಾರ್ಷ್ ಮತ್ತು ಇಂಗ್ಲಿಸ್ ಅವರ ಬೀಸಾಟದಿಂದಾಗಿ ಪವರ್‌ಪ್ಲೇ ಓವರ್‌ಗಳಲ್ಲಿ 83 ರನ್ ಗಳಿಸಿತು. ಆಸ್ಟ್ರೇಲಿಯಾದ ಈ ಜೋಡಿ ಮೊದಲ ವಿಕೆಟ್ ಜೊತೆಯಾಟದಲ್ಲಿ 109 ರನ್ ಸೇರಿಸಿತು. 9ನೇ ಓವರ್‌ನಲ್ಲಿ ಕರ್ನಾಟಕದ ಯಶ್ ರಾಜ್ ಪೂಂಜ ಈ ಜೊತೆಯಾಟವನ್ನು ಮುರಿದರು. ಇಂಗ್ಲಿಸ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು.

ಈ ಹಂತದಲ್ಲಿ ಮಾರ್ಷ್ ತಮ್ಮ ಆಟದ ವೇಗ ಹೆಚ್ಚಿಸಿದರು. ಪ್ರಸಕ್ತ ಟೂರ್ನಿಯಲ್ಲಿ ಅವರು 90ಕ್ಕಿಂತ ಹೆಚ್ಚು ರನ್ ಗಳಿಸಿದ್ದು ಮೂರನೇ ಬಾರಿ. ಇನ್ನೊಂದು ಬದಿಯಲ್ಲಿ ನಿಕೊಲಸ್ ಪೂರನ್ (16; 11ಎ) ಮತ್ತು ನಾಯಕ ರಿಷಭ್ ಪಂತ್ (35; 23ಎ) ತಮ್ಮ ಕಾಣಿಕೆ ನೀಡಿದರು. ಮಾರ್ಷ್ ಮತ್ತು ಪಂತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು.

ವೇಗಿ ಜೋಫ್ರಾ ಆರ್ಚರ್ (39ಕ್ಕೆ1) ಹಾಗೂ ಲೆಗ್‌ಸ್ಪಿನ್ನರ್ ಯಶ್ ರಾಜ್ (35ಕ್ಕೆ2) ಯಶಸ್ವಿ ಬೌಲರ್ ಎನಿಸಿದರು. ಅದರಲ್ಲೂ ಜೋಫ್ರಾ ಅವರು ಕೊನೆಯ ಓವರ್‌ನಲ್ಲಿ ನಾಲ್ಕು ಡಾಟ್ ಬಾಲ್ ಪ್ರಯೋಗಿಸಿದರು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 5ಕ್ಕೆ220 (ಮಿಚೆಲ್ ಮಾರ್ಷ್ 96, ಜೋಶ್ ಇಂಗ್ಲಿಸ್ 60, ರಿಷಭ್ ಪಂತ್ 35; ಯಶ್ ರಾಜ್ ಪೂಂಜ 35ಕ್ಕೆ2). ರಾಜಸ್ಥಾನ ರಾಯಲ್ಸ್: 19.1 ಓವರ್‌ಗಳಲ್ಲಿ 3 ವಿಕೆಟ್‌ಗೆ 225 (ಯಶಸ್ವಿ ಜೈಸ್ವಾಲ್ 43, ವೈಭವ್ ಸೂರ್ಯವಂಶಿ 93, ಧ್ರುವ್ ಜುರೇಲ್ ಔಟಾಗದೇ 53; ಮೊಹಸಿನ್ ಖಾನ್ 31ಕ್ಕೆ1, ಆಕಾಶ್ ಸಿಂಗ್ 54ಕ್ಕೆ1).

ಪಂದ್ಯದ ಆಟಗಾರ: ವೈಭವ್ ಸೂರ್ಯವಂಶಿ

ಮುಂಬೈ ಇಂಡಿಯನ್ಸ್ ವಿರುದ್ಧ ಪಂದ್ಯ ಇಂದು

ಗೆದ್ದರಷ್ಟೇ ಕೆಕೆಆರ್ ಆಸೆಗೆ ಬಲ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ ಐಪಿಎಲ್ ಪ್ಲೇಆಫ್ ಬಾಗಿಲು ಸಂಪೂರ್ಣವಾಗಿ ಮುಚ್ಚಿಲ್ಲ. ಆದರೆ ಕ್ಷೀಣ ಅವಕಾಶಕ್ಕೆ ಬಲ ನೀಡಬೇಕಾದರೆ ಅಜಿಂಕ್ಯ ರಹಾನೆ ಬಳಗವು, ಬುಧವಾರ ಮುಂಬೈ ಇಂಡಿಯನ್ಸ್ ವಿರುದ್ಧ ನಡೆಯಲಿರುವ ನಿರ್ಣಾಯಕ ಪಂದ್ಯದಲ್ಲಿ ಭಾರಿ ಗೆಲುವಿಗೆ ಪ್ರಯತ್ನಿಸದೇ ವಿಧಿಯಿಲ್ಲ.

ಕೋಲ್ಕತ್ತದ ತಂಡವು ಒಂದೊಮ್ಮೆ ಸೋತರೆ ಹೊರಬಿದ್ದಂತೆ. ಗೆದ್ದರೂ ಅವಕಾಶ ಖಚಿತವೇನೂ ಅಲ್ಲ. ಶನಿವಾರ ಪಂಜಾಬ್ ಕಿಂಗ್ಸ್– ಎಲ್‌ಎಸ್‌ಜಿ ನಡುವಣ ಪಂದ್ಯದ ಫಲಿತಾಂಶಕ್ಕೆ ಕಾಯಬೇಕಾಗುತ್ತದೆ. ಪಂಜಾಬ್ ಗೆದ್ದಲ್ಲಿ, ಭಾನುವಾರ ಇದೇ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಅದರ ಕೊನೆಯ ಪಂದ್ಯ ಔಪಚಾರಿಕವಾಗಲಿದೆ.

2024ರಲ್ಲಿ ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಚಾಂಪಿಯನ್ ಆಗಿದ್ದ ಕೋಲ್ಕತ್ತ ನೈಟ್‌ರೈಡರ್ಸ್ ತಂಡವು 2025ರಲ್ಲಿ ನಿರಾಶೆ ಅನುಭವಿಸಿ ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕೆ ಸರಿದಿತ್ತು.

ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್, ಗುಜರಾತ್ ಟೈಟನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಈಗಾಗಲೇ ಪ್ಲೇಆಫ್ ಸ್ಥಾನ ಕಾದಿರಿಸಿವೆ. ಲಖನೌ ಸೂಪರ್ ಜೈಂಟ್ಸ್, ಮುಂಬೈ ಇಂಡಿಯನ್ಸ್ ಹೊರಬಿದ್ದಿವೆ.

ಹೀಗಾಗಿ ಪಂಜಾಬ್ ಕಿಂಗ್ಸ್ (13), ರಾಜಸ್ಥಾನ ರಾಯಲ್ಸ್ (12), ಚೆನ್ನೈ ಸೂಪರ್ ಕಿಂಗ್ಸ್ (12), ಡೆಲ್ಲಿ ಕ್ಯಾಪಿಟಲ್ಸ್ (12), ಕೋಲ್ಕತ್ತ ನೈಟ್‌ರೈಡರ್ಸ್ (11) ತಂಡಗಳು ಒಂದು ಸ್ಥಾನಕ್ಕೆ ಸೆಣಸಾಡಬೇಕಿದೆ.

ಕೋಲ್ಕತ್ತ ಈ ಸ್ಥಿತಿಗೆ ತನ್ನನ್ನೇ ಹಳಿದುಕೊಳ್ಳಬೇಕು. ಲೀಗ್‌ನ ಮೊದಲಾರ್ಧದಲ್ಲಿ ಸತತ ಆರು ಪಂದ್ಯಗಳನ್ನು ಸೋತಿತ್ತು. ಆದರೆ ಕೊನೆಯ ಆರು ಪಂದ್ಯಗಳಲ್ಲಿ ಐದನ್ನು ಗೆದ್ದು ಗಮನಾರ್ಹವಾಗಿ ಚೇತರಿಸಿದೆ.

ಆರಂಭ ಆಟಗಾರ ಫಿನ್ ಅಲೆನ್ ಲಯ ಕಂಡುಕೊಂಡಿದ್ದಾರೆ. ಕೀಪರ್–ಬ್ಯಾಟರ್ ಅಂಗ್‌ಕ್ರಿಷ್ ರಘುವಂಶಿ ಸಹ ಉಪಯುಕ್ತ ಆಟವಾಡುತ್ತಿದ್ದಾರೆ. ಭಾರಿ ಮೌಲ್ಯ ಪಡೆದಿರುವ ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮೆರಾನ್ ಗ್ರೀನ್ ಕೆಲವು ಪಂದ್ಯಗಳಿಂದ ವಿಶ್ವಾಸದಿಂದ ಆಡುತ್ತಿದ್ದಾರೆ. ಉಪನಾಯಕ ರಿಂಕು ಸಿಂಗ್ ‘ಫಿನಿಷರ್’ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಸುನಿಲ್ ನಾರಾಯಣ್ ಈಗಲೂ ಪ್ರಮುಖ ಅಸ್ತ್ರವಾಗಿದ್ದಾರೆ. ಆದರೆ ಮಥೀಶ ಪಥಿರಾಣ ಮತ್ತು ವರುಣ್ ಚಕ್ರವರ್ತಿ ಗಾಯದ ಸಮಸ್ಯೆ ಎದುರಿಸುತ್ತಿದ್ದಾರೆ. ಎಡಗಾಲಿಗೆ ನೋವಿದ್ದರೂ ವರುಣ್ ಬೌಲಿಂಗ್ ಮಾಡುತ್ತಿರುವುದು ಬಿಸಿಸಿಐಗೆ ರುಚಿಸಿಲ್ಲ.

ಅಡ್ಡಗಾಲು ಹಾಕುತ್ತ ಎಂಐ?: ನಿರಾಶಾದಾಯಕ ಋತುವನ್ನು ಗೆಲುವಿನೊಡನೆ ಮುಗಿಸುವ ಗುರಿಹೊಂದಿರುವ ಮುಂಬೈ ಇಂಡಿಯನ್ಸ್ ತಂಡಕ್ಕೆ ಕೋಲ್ಕತ್ತದ ಪ್ಲೇಆಫ್ ಅವಕಾಶ ಹಾಳುಮಾಡುವ ಅವಕಾಶವಂತೂ ಇದೆ.

ಡಿ ಕಾಕ್, ಬಾವಾ ಅಲಭ್ಯ: ಮುಂಬೈ ತಂಡದ ವಿಕೆಟ್ ಕೀಪರ್– ಬ್ಯಾಟರ್ ಕ್ವಿಂಟನ್ ಡಿ ಕಾಕ್ ಹಾಗೂ ಆಲ್‌ರೌಂಡರ್ ರಾಜ್ ಅಂಗದ್ ಬಾವಾ ಅವರು ಗಾಯದಿಂದಾಗಿ ಐಪಿಎಲ್‌ನಿಂದ ಹೊರಬಿದ್ದಿದ್ದಾರೆ. ಈ ಬಗ್ಗೆ ಫ್ರ್ಯಾಂಚೈಸಿಯು ‘ಎಕ್ಸ್’ನಲ್ಲಿ ಮಂಗಳವಾರ ತಿಳಿಸಿದೆ. ತಂಡಕ್ಕೆ ಎರಡು ಪಂದ್ಯಗಳು ಬಾಕಿ ಉಳಿದಿವೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	13	9	4	0	18	1.065
ಜಿ ಟಿ	13	8	5	0	16	0.400
ಎಸ್‌ಆರ್‌ಎಚ್	13	8	5	0	16	0.350
ಆರ್ ಆರ್	13	7	6	0	14	0.083
ಪಿಬಿಕೆಎಸ್	13	6	6	1	13	0.227
ಸಿಎಸ್‌ಕೆ	13	6	7	0	12	- 0.016
ಡಿ ಸಿ	13	6	7	0	12	- 0.871
ಕೆಕೆಆರ್	12	5	6	1	11	- 0.038
ಎಂ ಐ	12	4	8	0	8	- 0.504
ಎಲ್‌ಎಸ್‌ಜಿ	13	4	9	0	8	- 0.702

ಆರೆಂಜ್ ಕ್ಯಾಪ್: ವೈಭವ್ ಸೂರ್ಯವಂಶಿ, ಆರ್‌ಆರ್ (579 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)



ರೋಹಿತ್ ಶರ್ಮಾ



ಸುನಿಲ್ ನಾರಾಯಣ್

ಇಂದಿನ ಪಂದ್ಯ

ಕೋಲ್ಕತ್ತ ನೈಟ್ ರೈಡರ್ಸ್ V/s ಮುಂಬೈ ಇಂಡಿಯನ್ಸ್

ತಾಣ: ಕೋಲ್ಕತ್ತ,
ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಚೆಸ್: ಪ್ರಜ್ಞಾನಂದ–ಸೊ ಪಂದ್ಯ ಡ್ರಾ

ಬುಕಾರೆಸ್ಟ್ (ರೊಮೇನಿಯಾ), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಸೂಪರ್ ಚೆಸ್ ಕ್ಲಾಸಿಕ್‌ನಲ್ಲಿ ನಾಲ್ಕನೇ ಬಾರಿ ಡ್ರಾ ಮಾಡಿದರು. ಸೋಮವಾರ ರಾತ್ರಿ ನಡೆದ ಐದನೇ ಸುತ್ತಿನ ಪಂದ್ಯದಲ್ಲಿ ಅವರು ಅಮೆರಿಕದ ವೆಸ್ಲಿ ಸೊ ಜೊತೆ 45 ನಡೆಗಳಲ್ಲಿ ಡ್ರಾ ಮಾಡಿಕೊಂಡರು.

ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಈ ಟೂರ್ನಿಯ ಐದನೇ ಸುತ್ತಿನಲ್ಲಿ ಐದೂ ಪಂದ್ಯಗಳು ಡ್ರಾ ಆದವು. ಜರ್ಮನಿಯ ವಿನ್ಸೆಂಟ್ ಕೀಮರ್ 3.5 ಪಾಯಿಂಟ್ಸ್ ಗಳಿಸಿದ್ದು, ಅರ್ಧ ಪಾಯಿಂಟ್ ಅಂತರದಿಂದ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಅವರು ಐದನೇ ಸುತ್ತಿನಲ್ಲಿ ನೆದರ್ಲೆಂಡ್ಸ್‌ನ ಅನಿಶ್ ಗಿರಿ (3) ಜೊತೆ 32 ನಡೆಗಳ ನಂತರ ಪಾಯಿಂಟ್ ಹಂಚಿಕೊಂಡರು. ಪ್ರಜ್ಞಾನಂದ ಅವರು ಡಚ್ ಗ್ರ್ಯಾಂಡ್‌ಮಾಸ್ಟರ್‌ಗಳಾದ ಅನಿಶ್ ಗಿರಿ ಮತ್ತು ಜೋರ್ಡನ್ ವಾನ್ ಫೊರೀಸ್ಟ್ ಅವರೊಂದಿಗೆ ತಲಾ ಮೂರು ಪಾಯಿಂಟ್ಸ್ ಕಲೆಹಾಕಿದ್ದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಅಫ್ಗಾನಿಸ್ತಾನ ಎದುರಿನ ಸರಣಿಗೆ ತಂಡಗಳ ಪ್ರಕಟ: ಪಡಿಕ್ಕಲ್, ಪ್ರಸಿದ್ಧಗೆ ಸ್ಥಾನ

ಭಾರತ ಟೆಸ್ಟ್ ತಂಡಕ್ಕೆ ರಾಹುಲ್ ಉಪನಾಯಕ

ಗುವಾಹಟಿ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಅಫ್ಗಾನಿಸ್ತಾನ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಆಡಲಿರುವ ಭಾರತ ತಂಡಕ್ಕೆ ಉಪನಾಯಕರನ್ನಾಗಿ ಮಾಡಲಾಗಿದೆ. ರಿಷಭ್ ಪಂತ್ ಅವರನ್ನು ಉಪನಾಯಕತ್ವದಿಂದ ಕೆಳಗಿಸಲಾಗಿದ್ದು ವಿಕೆಟ್‌ಕೀಪರ್–ಬ್ಯಾಟರ್ ಆಗಿ ಕಣಕ್ಕಿಳಿಯುವರು.



ರಿಷಭ್ ಪಂತ್

ಮಂಗಳವಾರ ಬಿಸಿಸಿಐ ಆಯ್ಕೆ ಸಮಿತಿಯು ಟೆಸ್ಟ್ ಹಾಗೂ ಏಕದಿನ ತಂಡಗಳನ್ನು ಪ್ರಕಟಿಸಿದೆ. ಉಭಯ ತಂಡಗಳಿಗೂ ಶುಭಮನ್ ಗಿಲ್ ನಾಯಕರಾಗಿದ್ದಾರೆ. ಏಕದಿನ ತಂಡಕ್ಕೆ ಶ್ರೇಯಸ್ ಅಯ್ಯರ್ ಉಪನಾಯಕರಾಗಿದ್ದಾರೆ. ಕರ್ನಾಟಕದ ಪ್ರಸಿದ್ಧಕೃಷ್ಣ ಅವರು ಎರಡೂ ತಂಡಗಳಲ್ಲಿ ಸ್ಥಾನ ಪಡೆದಿದ್ದಾರೆ. ದೇವದತ್ತ ಪಡಿಕ್ಕಲ್ ಅವರಿಗೆ ಟೆಸ್ಟ್‌ನಲ್ಲಿ ಮಾತ್ರ ಅವಕಾಶ ಲಭಿಸಿದೆ.

ವೇಗಿ ಜಸ್‌ಪ್ರೀತ್ ಬೂಮ್ರಾ ಹಾಗೂ ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಟೆಸ್ಟ್ ಪಂದ್ಯವು ಮುಲ್ಲನಪುರದಲ್ಲಿ ಜೂನ್ 6ರಂದು ಆರಂಭವಾಗಲಿದೆ. ಮೂರು ಏಕದಿನ ಪಂದ್ಯಗಳ ಸರಣಿಯು ಜೂನ್ 14ರಿಂದ ಆರಂಭವಾಗಲಿವೆ. ಧರ್ಮಶಾಲಾ, ಲಖನೌ ಮತ್ತು ಚೆನ್ನೈನಲ್ಲಿ ಪಂದ್ಯಗಳು ನಡೆಯಲಿವೆ.



ಕೆ.ಎಲ್. ರಾಹುಲ್, ಶುಭಮನ್ ಗಿಲ್

‘ಬೂಮ್ರಾ ಅವರು ಕಾರ್ಯಭಾರ ಒತ್ತಡ ನಿರ್ವಹಣೆ ಪ್ರಕ್ರಿಯೆಯಲ್ಲಿ ವಿಶ್ರಾಂತಿ ಪಡೆದಿದ್ದಾರೆ. ಮುಂಬರುವ ಇಂಗ್ಲೆಂಡ್ ಪ್ರವಾಸದ ಸಂದರ್ಭದಲ್ಲಿ ತಂಡಕ್ಕೆ ಮರಳುವರು’ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ತಿಳಿಸಿದ್ದಾರೆ.

ಸ್ಪಿನ್ನರ್ ಮಾನವ್ ಸುತಾರ್ ಮತ್ತು ವೇಗಿ ಗುರ್ನೂರ್ ಬ್ರಾರ್ ಅವರು ಟೆಸ್ಟ್ ತಂಡದಲ್ಲಿ ಮೊದಲ ಸಲ ಸ್ಥಾನ ಪಡೆದಿದ್ದಾರೆ. ಇವರಿಬ್ಬರೂ ಐಪಿಎಲ್‌ನಲ್ಲಿ ಶುಭಮನ್ ಗಿಲ್ ನಾಯಕತ್ವದ ಗುಜರಾತ್ ಟೈಟನ್ಸ್ ತಂಡದಲ್ಲಿ ಆಡುತ್ತಿದ್ದಾರೆ. ಏಕದಿನ ತಂಡದಲ್ಲಿ ಪ್ರಿನ್ಸ್ ಯಾದವ್ ಸ್ಥಾನ ಪಡೆದಿದ್ದಾರೆ.

ತಂಡಗಳು: ಟೆಸ್ಟ್: ಶುಭಮನ್ ಗಿಲ್ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ರಿಷಭ್ ಪಂತ್ , ದೇವದತ್ತ ಪಡಿಕ್ಕಲ್, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಪ್ರಸಿದ್ಧಕೃಷ್ಣ, ಮಾನವ್ ಸುತಾರ್, ಗುರ್ನೂರ್ ಬ್ರಾರ್, ಹರ್ಷ ದುಬೆ, ಧ್ರುವ್ ಜುರೇಲ್.

ಏಕದಿನ: ಶುಭಮನ್ ಗಿಲ್ (ನಾಯಕ), ಶ್ರೇಯಸ್ ಅಯ್ಯರ್ (ಉಪನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಪ್ರಸಿದ್ಧಕೃಷ್ಣ, ಪ್ರಿನ್ಸ್ ಯಾದವ್, ಗುರ್ನೂರ್ ಬ್ರಾರ್.

ಪೋರ್ಚುಗಲ್ ಫುಟ್‌ಬಾಲ್ ತಂಡಕ್ಕೆ ರೊನಾಲ್ಡೊ ಸಾರಥ್ಯ

ಲಿಸ್ಬನ್ (ಎಎಫ್‌ಪಿ): ತಾರಾ ವರ್ಚಸ್ಸಿನ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಜೂನ್‌ನಲ್ಲಿ ಆರಂಭವಾಗುವ ಫಿಫಾ ಫುಟ್‌ಬಾಲ್ ವಿಶ್ವಕಪ್‌ನಲ್ಲಿ ಪೋರ್ಚುಗಲ್ ತಂಡವನ್ನು ಮುನ್ನಡೆಸಲಿದ್ದಾರೆ. 41 ವರ್ಷ ವಯಸ್ಸಿನ ಅವರು ವಿಶ್ವಕಪ್‌ನಲ್ಲಿ ದಾಖಲೆಯ ಆರನೇ ಬಾರಿಗೆ ಕಣಕ್ಕಿಳಿಯಲು ಸಜ್ಜಾಗಿದ್ದಾರೆ.

ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಅತ್ಯಧಿಕ ಗೋಲು (143) ಹೊಡೆದ ದಾಖಲೆ ರೊನಾಲ್ಡೊ ಅವರ ಹೆಸರಿನಲ್ಲಿದೆ. ಆದರೂ, ಪೋರ್ಚುಗಲ್ ತಂಡಕ್ಕೆ ವಿಶ್ವಕಪ್ ಗೆದ್ದುಕೊಡುವ ಅವರ ಕನಸು ಈಡೇರಿಲ್ಲ.

ವಿಂಬಲ್ಡನ್: ಹಿಂದೆಸರಿದ ಅಲ್ಕರಾಜ್



ಮ್ಯಾಡ್ರಿಡ್ (ಎಎಫ್‌ಪಿ): ಮಣಿಕಟ್ಟಿನ ಗಾಯದಿಂದ ಇನ್ನೂ ಚೇತರಿಸಿಕೊಳ್ಳುತ್ತಿರುವ ಕಾರಣ ಈ ವರ್ಷದ ವಿಂಬಲ್ಡನ್ ಚಾಂಪಿಯನ್‌ಷಿಪ್ಸ್‌ನಿಂದ ಹಿಂದೆಸರಿಯುವುದಾಗಿ ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಕಾರ್ಲೋಸ್ ಅಲ್ಕರಾಜ್ ಮಂಗಳವಾರ ಪ್ರಕಟಿಸಿದ್ದಾರೆ.

ಸ್ಪೇನ್‌ನ ಟೆನಿಸ್ ತಾರೆ ಎರಡು ಬಾರಿ ಹುಲ್ಲಿನಂಕಣದ ಈ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ. ‘ನನ್ನ ಚೇತರಿಕೆ ಉತ್ತಮವಾಗಿದೆ. ಮೊದಲಿಗಿಂತ ಆರಾಮವೆನಿಸುತ್ತಿದೆ. ದುರದೃಷ್ಟವಶಾತ್ ನಾನು ಈಗಲೇ ಕಣಕ್ಕಿಳಿಯುವ ಸ್ಥಿತಿಯಲ್ಲಿಲ್ಲ. ಹೀಗಾಗಿ ಕ್ವೀನ್ಸ್ ಕ್ಲಬ್ ಮತ್ತು ವಿಂಬಲ್ಡನ್‌ನಿಂದ ಹಿಂದೆ ಸರಿಯುತ್ತಿದ್ದೇನೆ’ ಎಂದು ಅವರು ತಿಳಿಸಿದ್ದಾರೆ.

ಬಾರ್ಸಿಲೋನಾ ಓಪನ್ ಟೂರ್ನಿಯ ಪಂದ್ಯದ ವೇಳೆ ಅವರಿಗೆ ಮಣಿಕಟ್ಟಿನ ನೋವು ಕಾಣಿಸಿಕೊಂಡಿತ್ತು. ಫ್ರೆಂಚ್ ಓಪನ್ ಟೂರ್ನಿಯಲ್ಲೂ ಅಲ್ಕರಾಜ್ ಆಡದಿರಲು ನಿರ್ಧರಿಸಿದ್ದಾರೆ.

ಲೈಂಗಿಕ ಕಿರುಕುಳ: ತುರ್ತು ಸಭೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಕೆಲ ತಿಂಗಳಿಂದ ಕ್ರೀಡೆಗೆ ಕಳಂಕ ತಂದಿರುವ ಲೈಂಗಿಕ ಕಿರುಕುಳ, ದುರ್ನಡತೆ ಮತ್ತು ಅಶಿಸ್ತಿನ ಪ್ರಕರಣಗಳ ಕುರಿತು ಸಮಾಲೋಚಿಸಲು ‘ಹಾಕಿ ಇಂಡಿಯಾ’ ತುರ್ತು ಕಾರ್ಯಕಾರಿ ಮಂಡಳಿ ಸಭೆ ಕರೆಯಲು ಸಜ್ಜಾಗಿದೆ. ತಪ್ಪಿತಸ್ಥರಿಗೆ ಆಜೀವ ನಿಷೇಧ ಸೇರಿ ಕಠಿಣ ಕ್ರಮ ಕುರಿತು ಚರ್ಚೆಯಾಗಲಿದೆ.

ಹಾಕಿ ಇಂಡಿಯಾ ಅಧ್ಯಕ್ಷ ದಿಲೀಪ್ ಟಿರ್ಕಿ ಅವರು ಕಾರ್ಯಕಾರಿ ಮಂಡಳಿ ಸದಸ್ಯರಿಗೆ ಇ–ಮೇಲ್ ಕಳುಹಿಸಿದ್ದಾರೆ. ಅದರಲ್ಲಿ ಲೈಂಗಿಕ ಕಿರುಕುಳ, ಅಧಿಕಾರದ ದುರುಪಯೋಗ ಮತ್ತು ನೈತಿಕ ದುಷ್ಕೃತ್ಯದ ಬಗ್ಗೆ ‘ಶೂನ್ಯ ಸಹಿಷ್ಣುತೆ’ಯ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

ವರದಿಯಾದ ಪ್ರಕರಣಗಳ ಪರಿಶೀಲನೆ, ಉದ್ಯೋಗ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ತಡೆ ಕಾಯ್ದೆ–2013’ (ಪಾಷ್ ಕಾಯ್ದೆ) ಅಡಿ ವರದಿ ಮಾಡುವ ಕಾರ್ಯವಿಧಾನ ಬಲಪಡಿಸುವಿಕೆ, ದೂರುದಾರರಿಗೆ ರಕ್ಷಣೆ ಖಚಿತಪಡಿಸುವುದು, ಕೃತ್ಯದಲ್ಲಿ ಭಾಗಿಯಾಗಿರುವ ವ್ಯಕ್ತಿಗಳಿಗೆ ಅಥವಾ ಸಂಸ್ಥೆಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸುವ ವಿಷಯಗಳು ಸಭೆಯಲ್ಲಿ ಚರ್ಚೆಯಾಗುವ ನಿರೀಕ್ಷೆಯಿದೆ.

ಯುವ ಕ್ರಿಕೆಟಿಗರಿಗೆ ವಿರಾಟ್ ಕೊಹ್ಲಿ ಕಿವಿಮಾತು

ಟೆಸ್ಟ್ ಕ್ರಿಕೆಟ್‌ನಿಂದಲೇ ಗೌರವಾದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಅಟಗಾರರು ಐಪಿಎಲ್ ಟೂರ್ನಿಯ ಥಳಕು, ಬಳುಕಿಗೆ ಮೈಮರೆಯಬಾರದು. ಕ್ರಿಕೆಟ್ ಕ್ಷೇತ್ರದಲ್ಲಿ ಗೌರವಾದರ ಗಳಿಸಿಕೊಳ್ಳಬೇಕಾದರೆ ಟೆಸ್ಟ್ ಕ್ರಿಕೆಟ್‌ನಲ್ಲಿ ಯಶಸ್ವಿಯಾಗಬೇಕು ಎಂದು ‘ಚೇಸಿಂಗ್ ಮಾಸ್ಟರ್’ ವಿರಾಟ್ ಕೊಹ್ಲಿ ಹೇಳಿದರು.

‘ಹಣದ ಆಕರ್ಷಣೆ ದೊಡ್ಡದು. ಆದರೆ ಹಣಗಳಿಕೆಯೊಂದೇ ಮುಖ್ಯವಲ್ಲ. ಐಪಿಎಲ್‌ನಲ್ಲಿ ಬಹಳಷ್ಟು ಹಣ ಸಿಗುತ್ತದೆ. ಅಲ್ಪ ಸಮಯದಲ್ಲಿಯೇ ಖ್ಯಾತಿಯೂ ಲಭಿಸುತ್ತದೆ. ಐಪಿಎಲ್‌ನಲ್ಲಿ ಗಳಿಸುವ ಹಣವು ಜೀವನವನ್ನು ಸುಸ್ಥಿರಗೊಳಿಸಲು ಸಾಕಾಗುತ್ತದೆ. ದೀರ್ಘ ಸಮಯದವರೆಗೆ ಒತ್ತಡವನ್ನು ನಿರ್ವಹಿಸುತ್ತ ಇರುವುದಕ್ಕಿಂತ ಚುಟುಕು ಮಾದರಿಯಲ್ಲಿ ಆಡಿಹೋಗುವುದು ಒಳ್ಳೆಯದು ಎಂಬ ಭಾವ ಬೆಳೆಯುವುದು ಸಹಜ. ಆದರೆ 15–20 ವರ್ಷಗಳಷ್ಟು ದೀರ್ಘ ಕಾಲ ಆಡಿ ಕ್ರಿಕೆಟ್ ಲೋಕದಲ್ಲಿ ಗೌರವ ಮತ್ತು ಮಾನ್ಯತೆ ಗಳಿಸಬೇಕು. ಆ ಮೂಲಕ ನಮಗೆ ಪ್ರೇರಣೆಯಾದ ಹೀರೊಗಳಿಗೆ ಕೃತಜ್ಞತೆ ಸಲ್ಲಿಸಬೇಕು. ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಅದೊಂದು ವಿಭಿನ್ನ ಅನುಭೂತಿ. ಅದನ್ನು ಈಡೇರಿಸಲು ಸದಾ ಕ್ರಿಯಾಶೀಲರಾಗಿರಬೇಕು. ದೀರ್ಘ ಕಾಲದ ಪಯಣಕ್ಕಾಗಿ ಬದ್ಧವಾಗಿರುವುದು ಬಹಳ ಕಷ್ಟದ ಕೆಲಸ’ ಎಂದರು.

‘ಸೆಂಟರ್ ಆಫ್ ಸ್ಪೋರ್ಟ್ಸ್ ಎಕ್ಸಲೆನ್ಸ್’ನಲ್ಲಿ ಆಯೋಜಿಸಲಾಗಿದ್ದ ಆರ್‌ಸಿಬಿ ಇನೊವೇಷನ್ ಲ್ಯಾಬ್ ಇಂಡಿಯನ್ ಸ್ಪೋರ್ಟ್ಸ್ ಕಮ್ಮಟದಲ್ಲಿ ಅವರು ಭಾಗವಹಿಸಿದ್ದರು. ‘ಎಲ್ಲಕ್ಕಿಂತ ಮನಸ್ಸೇ ಮಿಗಿಲು; ಸಾಧನೆಯ ಉತ್ತುಂಗದಲ್ಲಿ ವಿರಾಟ್ ಕೊಹ್ಲಿ’ ಎಂಬ ವಿಷಯದ ಕುರಿತು ಕ್ರಿಕೆಟ್ ನಿರೂಪಕಿ ಮಯಾಂತಿ ಲ್ಯಾಂಗರ್ ಅವರೊಂದಿಗೆ ಸಂವಾದ ನಡೆಸಿದರು.

‘ಕೆಲವು ವರ್ಷಗಳ ಹಿಂದೆ ನಾನು ಭಾರತ ತಂಡದ ನಾಯಕತ್ವವನ್ನು ಬಿಟ್ಟೆ. ಹಲವು ವರ್ಷಗಳಿಂದ ಅಪಾರ ಒತ್ತಡವನ್ನು ಹೊತ್ತುಕೊಂಡು ಕಾರ್ಯನಿರ್ವಹಿಸಿದ್ದೆ. ಜನರ ನಿರೀಕ್ಷೆಗಳ ಭಾರ ಅದು. ನಾಯಕತ್ವದ ತ್ಯಜಿಸಿದಾಗ ನಿರುಮ್ಮಳತೆ ಮನೆ ಮಾಡಿತು. ಹೆಚ್ಚು ಮುಕ್ತನಾಗಿ ಮಾತನಾಡತೊಡಗಿದೆ. ಆ ಸಂದರ್ಭದಲ್ಲಿ ತಂಡದ ಮುಖ್ಯ ಕೋಚ್ ಆಗಿದ್ದ ರಾಹುಲ್ (ದ್ರಾವಿಡ್) ಭಾಯ್ ಮತ್ತು ವಿಕ್ರಮ್ ರಾಥೋಡ್ ಅವರೊಂದಿಗೆ ಹೆಚ್ಚು ನಿಕಟವಾದೆ. ಅವರು ತೋರಿದ ಕಾಳಜಿಗೆ ನಾನು ಸದಾ ಆಭಾರಿ. ಅದರ ಫಲವಾಗಿ 2023ರಲ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ ಶ್ರೇಷ್ಠ ಸಾಧನೆ ಮಾಡಿದೆ. ಭೇಟಿಯಾದಾಗಲೆಲ್ಲ ಅವರಿಗೆ ಕೃತಜ್ಞತೆ ಅರ್ಪಿಸುತ್ತೇನೆ’ ಎಂದು 37 ವರ್ಷದ ಕೊಹ್ಲಿ ಹೇಳಿದರು.



ರಾಹುಲ್ ದ್ರಾವಿಡ್ ಅವರೊಂದಿಗೆ ವಿರಾಟ್ ಕೊಹ್ಲಿ

ಎಎಫ್‌ಪಿ ಚಿತ್ರ

2022ರಲ್ಲಿ ದಕ್ಷಿಣ ಆಫ್ರಿಕಾ ಎದುರು 2–1ರಿಂದ ಭಾರತವು ಟೆಸ್ಟ್ ಸರಣಿ ಸೋತಿತ್ತು. ಆಗ ನಾಯಕರಾಗಿದ್ದ ಕೊಹ್ಲಿ ಅವರು ಬ್ಯಾಟಿಂಗ್‌ನಲ್ಲಿಯೂ ವೈಫಲ್ಯ ಅನುಭವಿಸಿದ್ದರು. 11 ಇನಿಂಗ್ಸ್‌ಗಳಲ್ಲಿ 26.50ರ ಸರಾಸರಿಯಲ್ಲಿ ರನ್ ಗಳಿಸಿದ್ದರು. ಆದರೆ 2023ರಲ್ಲಿ ಅಮೋಘ ಆಟವಾಡಿದರು. 12 ಇನಿಂಗ್ಸ್‌ಗಳಲ್ಲಿ 55.91ರ ಸರಾಸರಿಯಲ್ಲಿ ರನ್ ಗಳಿಸಿದರು.

ಈ ಕಮ್ಮಟದಲ್ಲಿ ಆರ್‌ಸಿಬಿ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಮೆನನ್ ಮತ್ತಿತರರು ಭಾಗವಹಿಸಿದ್ದರು.

ಐಪಿಎಲ್: ವಿರಾಟ್‌ಗೆ ಅಧಿಕ ಆದಾಯ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಹದಿನೆಂಟು ವರ್ಷಗಳ ಇತಿಹಾಸದಲ್ಲಿ ವಿರಾಟ್ ಕೊಹ್ಲಿ ಅವರು ಒಟ್ಟು ₹230 ಕೋಟಿ ಗಳಿಸಿದ್ದಾರೆ.

ಮೊದಲ ಆವೃತ್ತಿಯಿಂದಲೂ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಐಪಿಎಲ್‌ನಲ್ಲಿ ಅತಿ ಹೆಚ್ಚು ಆದಾಯ ಪಡೆದ ಆಟಗಾರನೆಂಬ ಹೆಗ್ಗಳಿಕೆ ಅವರದ್ದಾಗಿದೆ.

‘ಫೆನೆಟಿಕ್ ಸ್ಪೋರ್ಟ್ಸ್ ಮತ್ತು ಹುರುನ್’ ನಡೆಸಿದ ಸಮೀಕ್ಷೆಯ ವರದಿಯಲ್ಲಿ ಐಪಿಎಲ್ ತಂಡಗಳು ಮತ್ತು ಆಟಗಾರರ ಮೌಲ್ಯಗಳನ್ನು ಪ್ರಕಟಿಸಿದೆ.

ಇದರ ಪ್ರಕಾರ; ಐಪಿಎಲ್‌ನ 10 ಫ್ರ್ಯಾಂಚೈಸಿಗಳ ಒಟ್ಟು ಮೌಲ್ಯ ₹1.63 ಲಕ್ಷ ಕೋಟಿಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಾಲಿವುಡ್ ತಾರೆ ಶಾರೂಕ್ ಖಾನ್ ಒಡೆತನದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಅತ್ಯಂತ ಮೌಲ್ಯಯುತ (₹19,200 ಕೋಟಿ) ತಂಡವೆಂದೂ ವರದಿ ಮಾಡಲಾಗಿದೆ. ಮುಂಬೈ ಇಂಡಿಯನ್ಸ್ (₹18,400 ಕೋಟಿ) ಮತ್ತು ಚೆನ್ನೈ ಸೂಪರ್ ಕಿಂಗ್ಸ್ (₹18,400 ಕೋಟಿ) ನಂತರದ ಎರಡು ಸ್ಥಾನಗಳಲ್ಲಿವೆ.

ರೋಹಿತ್ ಶರ್ಮಾ (₹227.2 ಕೋಟಿ) ಮತ್ತು ಮಹೇಂದ್ರಸಿಂಗ್ ಧೋನಿ (₹200 ಕೋಟಿ) ಅವರು ಹೆಚ್ಚು ಆದಾಯ ಪಡೆದ ಆಟಗಾರರಲ್ಲಿ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿದ್ದಾರೆ.

ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ವಿಭಾಗದಲ್ಲಿ ಸ್ಮೃತಿ ಮಂದಾನ (₹13.7 ಕೋಟಿ) ಅವರು ಅತಿ ಹೆಚ್ಚು ಆದಾಯ ಗಳಿಸಿರುವ ಆಟಗಾರ್ತಿಯಾಗಿದ್ದಾರೆ. ಟೂರ್ನಿಯ ಅಗ್ರ 10 ಆಟಗಾರ್ತಿಯರು ಒಟ್ಟು ₹90 ಕೋಟಿ ಮಾತ್ರ ಗಳಿಸಿದ್ದಾರೆ.

ಭಾರತದ ರಾಷ್ಟ್ರೀಯ ಕ್ರೀಡೆ ಹಾಕಿ ಆಟಗಾರರು ಗಳಿಸುತ್ತಿರುವ ಆದಾಯವು ಕ್ರಿಕೆಟಿಗರಿಗಿಂತ ಬಹಳ ಕಡಿಮೆ ಇದೆ.

ಹಾಕಿ ಇಂಡಿಯಾ ಲೀಗ್ (ಎಚ್‌ಐಎಲ್) ನಲ್ಲಿ ಡಿಫೆಂಡರ್ ಹರ್ಮನ್‌ಪ್ರೀತ್ ಸಿಂಗ್ (₹78 ಲಕ್ಷ), ಫಾರ್ವರ್ಡ್ ಆಟಗಾರ ಅಭಿಷೇಕ್ ನೈನ್ (₹72 ಲಕ್ಷ) ಮತ್ತು ಮಿಡ್‌ಫೀಲ್ಡರ್ ಹಾರ್ದಿಕ್ ಸಿಂಗ್ (₹70 ಲಕ್ಷ) ಪಡೆದಿದ್ದಾರೆಂದು ವರದಿಯಲ್ಲಿ ತಿಳಿಸಲಾಗಿದೆ.

ವಿಶ್ವದ 504 ನಗರಗಳು, 181 ರಾಜ್ಯಗಳು ಮತ್ತು 53 ದೇಶಗಳಲ್ಲಿ ಆರು ಲೀಗ್‌ಗಳ 59 ತಂಡಗಳು ಹಾಗೂ 1323 ಉನ್ನತ ಅಥ್ಲೀಟ್‌ಗಳ ಪಟ್ಟಿಯನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಟೆನಿಸ್: ಕೀಗನ್‌ಗೆ ಮನೀಶ್ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಲ್ಡ್‌ಕಾರ್ಡ್ ಪ್ರವೇಶ ಪಡೆದ ಮನೀಶ್ ಸುರೇಶ್ ಕುಮಾರ್ ಅವರು ಇಲ್ಲಿ ನಡೆಯುತ್ತಿರುವ ಎಸ್.ಎಂ.ಕೃಷ್ಣ ಸ್ಮರಣಾರ್ಥ ಓಪನ್ ಎಟಿಪಿ ಚಾಲೆಂಜರ್‌ನಲ್ಲಿ ಅಗ್ರ ಶ್ರೇಯಾಂಕದ ಕೀಗನ್ ಸ್ಮಿತ್ ಅವರಿಗೆ ಆಘಾತ ನೀಡಿದರು.



ಮನೀಶ್

ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಸಿಂಗಲ್ಸ್‌ನ 32ರ ಘಟ್ಟದ ಪಂದ್ಯದಲ್ಲಿ ತಮಿಳುನಾಡಿನ ಮನೀಶ್ 6-4, 2-6, 6-2ರ ಮೂರು ಸೆಟ್‌ಗಳ ಹೋರಾಟದಲ್ಲಿ ಅಮೆರಿಕದ ಆಟಗಾರನನ್ನು ಹಿಮ್ಮೆಟ್ಟಿಸಿದರು.

ವಿಶ್ವ ಕ್ರಮಾಂಕದಲ್ಲಿ 245ನೇ ಸ್ಥಾನದಲ್ಲಿರುವ ಕೀಗನ್ ಅವರು ಇದೇ ಕ್ರೀಡಾಂಗಣದಲ್ಲಿ ಮೂರು ದಿನಗಳ ಹಿಂದೆಯಷ್ಟೇ ಕರ್ನಾಟಕ ಓಪನ್ ಎಟಿಪಿ 50 ಚಾಲೆಂಜರ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. 737ನೇ ಕ್ರಮಾಂಕದ ಮನೀಶ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದಿದ್ದರು.

‘ಕಳೆದ ವಾರ ಚಾಲೆಂಜರ್‌ನಲ್ಲಿ ಮೊದಲ ಬಾರಿ ಕ್ವಾರ್ಟರ್ ಫೈನಲ್ ತಲುಪಿದ್ದೆ. ಆಟದ ಮಟ್ಟಕ್ಕೆ ಈಗ ಒಗ್ಗಿಕೊಳ್ಳುತ್ತಿದ್ದೇನೆ’ ಎಂದು ಗೆಲುವಿನ ನಂತರ ಮನೀಶ್ ಪ್ರತಿಕ್ರಿಯಿಸಿದರು.

ಇತರ ಪಂದ್ಯಗಳಲ್ಲಿ ಸಿದ್ಧಾರ್ಥ್ ರಾವತ್ 7-6(4), 6-3ರಿಂದ ಆಸ್ಟ್ರೇಲಿಯಾದ ಒಮರ್ ಜಸಿಕಾ ವಿರುದ್ಧ; ಮುಕುಂದ್ ಶಶಿಕುಮಾರ್ 7-6 (5), 7-6 (5)ರಿಂದ ಥಾಯ್ಲೆಂಡ್‌ನ ಮ್ಯಾಕ್ಸಿಮಸ್ ಜೋನ್ಸ್ ವಿರುದ್ಧ; ಕ್ರಿಶ್ ತ್ಯಾಗಿ 7-6 (8), 7-6 (4)ರಿಂದ ತೈವಾನ್‌ನ ಕುವಾನ್-ಯಿ ಲೀ ವಿರುದ್ಧ; ಆದಿತ್ಯ ವಿಶಾಲ್ 6-4, 6-7 (2), 6-4ರಿಂದ ಮೂರನೇ ಶ್ರೇಯಾಂಕದ ಹಮೀಶ್ ಸ್ಟೀವರ್ಟ್ (ಬ್ರಿಟನ್) ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಆರಾಧ್ಯ ಕ್ಷಿತಿಜ್ 6-1, 6-2ರಿಂದ ಬ್ರಿಟನ್‌ನ ಎರಡನೇ ಶ್ರೇಯಾಂಕದ ಅಲೆಸ್ಟರ್ ಗ್ರೇ ವಿರುದ್ಧ ಸೋತರು. ಉಳಿದಂತೆ ಕರಣ್ ಸಿಂಗ್, ಪ್ರಜ್ವಲ್ ದೇವ್, ದಿಗ್ವಿಜಯ್ ಪ್ರತಾಪ್ ಸಿಂಗ್ ಮತ್ತು ನಿತಿನ್ ಕುಮಾರ್ ಸಿನ್ಹಾ ತಮ್ಮ ತಮ್ಮ ಪಂದ್ಯಗಳಲ್ಲಿ ಸೋತು ಟೂರ್ನಿಯಿಂದ ಹೊರಬಿದ್ದರು.

ಉದ್ಯೋಗ ವಾಣಿ